
೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ಕೊಪ್ಪಳ ಜಿಲ್ಲೆ

ಸೊಲ್ಲೊಸಿರ

ಕನ್ನಡ ಸಂಶೋಧನೆ

ಬಸವರಾಜ ಸಿ. ಮಸೂತಿ



ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು- ೫೬೦ ೦೧೮.

೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ಕೊಪ್ಪಳ ಜಿಲ್ಲೆ

ಸೊಲ್ಲಾಪುರ ಕನ್ನಡ ಸಂಶೋಧನೆ

ಬಸವರಾಜ ಸಿ. ಮಸೂತಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

SOLLAPURA - KANNADA SAMSHODANE
by : **Sri Basavraja C. Masuti**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 125 + vi   Price : **Rs.50=00 ;   2011**

ಮೊದಲನೇ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಬೆಲೆ : ಐವತ್ತು ರೂಪಾಯಿಗಳು

ಪ್ರಕಟಣಾ ಸಮಿತಿ

ಮುಖಪುಟ ವಿನ್ಯಾಸ : ಶ್ರೀ ವಿ.ಎಂ. ಮಂಜುನಾಥ

ಮುದ್ರಣ : ಶ್ರೀರಂಗ ಪ್ರಿಂಟರ್ಸ್, ಸಂ.೩೪, ೨೮ನೇ ಕ್ರಾಸ್, ೯ನೇ ಮೇನ್,
ಬನಶಂಕರಿ ಇಂಡಸ್ಟ್ರಿಯಲ್ ಏರಿಯಾ, ಬನಶಂಕರಿ,
ಬೆಂಗಳೂರು – ೫೬೦ ೦೭೦.

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮೂರು ವರ್ಷಗಳ ಆಡಳಿತಾವಧಿಯಲ್ಲಿ ನಾಲ್ಕು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಅದೃಷ್ಟ ಕೆಲವು ಅಧ್ಯಕ್ಷರಿಗೆ ಮಾತ್ರ ಬರುತ್ತದೆ. ಅಂಥ ಸುಯೋಗ ನನ್ನ ಪಾಲಿಗೆ ಬಂದಿರುವುದರಿಂದ ಚಿತ್ರದುರ್ಗ, ಗದಗ, ಬೆಂಗಳೂರುಗಳ ನಂತರ ಇದೀಗ ೨೦೧೧ರ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ಅಖಿಲ ಭಾರತ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭರದ ಸಿದ್ಧತೆಗಳು ನಡೆಯುವ ಕ್ಷಣಗಣನೆ ಆರಂಭವಾಗಿದೆ. ಎಂದಿನಂತೆ ಈ ಸಮ್ಮೇಳನದ ಹೊತ್ತಿಗೂ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ಪರಿಷತ್ತಿನ ಪ್ರಕಟಣಾ ಘನತೆಗೆ ಯೋಗ್ಯವೆಂದು ಪ್ರಕಟಣ ಸಮಿತಿ ಆಯ್ಕೆ ಮಾಡಿರುವ ಕೃತಿಗಳನ್ನು ಹೊರತರಲಾಗುತ್ತಿದೆ.

ನಾನು ಅಧ್ಯಕ್ಷನಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರವೇಶ ಮಾಡಿದಾಗಿನಿಂದ ಸಾಹಿತ್ಯ ಪರಿಷತ್ತಿನಲ್ಲಿ ಹಲವು ಸಕಾಲಿಕವೆನಿಸುವಂಥ ಸುಧಾರಣೆಗಳನ್ನು ಮಾಡುತ್ತಾ ಬಂದಿದ್ದೇನೆ. ಇವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುವ ಪುಸ್ತಕಗಳು ಒಳಗೆ ಮೌಲಿಕವಾಗಿರುವಂತೆ ಹೊರಗೆ ಆಕರ್ಷಕವಾಗಿರಬೇಕೆನ್ನುವುದೂ ಒಂದು. ಪುಸ್ತಕಗಳ ಮೂಲಕ ಓದುಗ ವರ್ಗದಲ್ಲಿ ಸದಭಿರುಚಿಯನ್ನು ನಿರ್ಮಾಣ ಮಾಡುವುದರಲ್ಲಿ ಪರಿಷತ್ತಿಗೆ ಒಂದು ವಿಶೇಷ ಜವಾಬ್ದಾರಿಯಿದೆ ಎಂಬುದನ್ನು ನಾನು ಮನಗಂಡೇ ಇಂಥ ಸುಧಾರಣೆಗೆ ಕೈ ಹಚ್ಚಿದ್ದೇನೆ. ಪರಿಷತ್ತಿನ ಪುಸ್ತಕಗಳು ಆತ್ಮಾಭಿಮಾನದಿಂದ ತಲೆಯೆತ್ತಿ ನಿಲ್ಲುವುದಕ್ಕೆ ಏನೇನು ಸಾಧ್ಯವಿತ್ತೋ ಆ ಎಲ್ಲ ಪ್ರಯೋಗಗಳನ್ನು ಮಾಡಲಾಗಿ ಇವತ್ತು ನಮ್ಮ ಪ್ರಕಟಣೆಗಳು ಯಾರಿಗೂ ಕಡಿಮೆಯಿಲ್ಲದಂತೆ ಭರಾಟೆಯಿಂದ ಖರ್ಚಾಗುತ್ತಿವೆ. ಹೊಸ ಬಣ್ಣಗಳಲ್ಲಿ, ಹೊಸ ವಿನ್ಯಾಸಗಳಲ್ಲಿ ಕಂಗೊಳಿಸುತ್ತಿವೆ. ಓದುಗರ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ಬಹುಬೇಗ ಖರ್ಚಾಗುತ್ತಿವೆ, ಮರುಮುದ್ರಣಗೊಳ್ಳುತ್ತಿವೆ. ಈ ಬಾರಿಯ ಅಕ್ಷರಜಾತ್ರೆಯಲ್ಲಿ ಅರ್ಥಪೂರ್ಣ ಪುಸ್ತಕಗಳು ಇರಬೇಕೆನ್ನುವ ಎಚ್ಚರದೊಂದಿಗೆ ಈ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ೨೦೧೧ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೋಕಾರ್ಪಣೆಗೊಳ್ಳಲಿರುವ ಈ ಪುಸ್ತಕಗಳು ಸಹೃದಯರ ಜ್ಞಾನಭಂಡಾರವನ್ನು ವಿಸ್ತರಿಸಿ, ಅವರು ಬಯಸುವ ಸಂತೋಷವನ್ನು ಕೊಡಲೆಂದು ಆಶಿಸುತ್ತೇವೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇನೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಲೇಖಕರ ನುಡಿ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದ ಡಾ. ವಿಠಲರಾವ ಗಾಯಕ್ವಾಡ ಅವರ ಯು.ಜಿ.ಸಿ.ಯ "ಮಧ್ಯಕಾಲೀನ ಕರ್ನಾಟಕ-ಮಹಾರಾಷ್ಟ್ರದಲ್ಲಿಯ ವಿಠಲ ಪಂಥ" ಯೋಜನೆಯ ಸಹಾಯಕನಾಗಿ ಸೇವೆ ಸಲ್ಲಿಸುತ್ತಾ ಸಂಶೋಧನ ಕ್ಷೇತ್ರಕ್ಕೆ ಒಲವು ಬೆಳೆಯಿತು. ಮಹಾಜನ ವರದಿಯಂತೆ ಸೊಲ್ಲಾಪುರ, ಅಕ್ಕಲಕೋಟೆ ಹಾಗೂ ಜತ್ತ ತಾಲ್ಲೂಕುಗಳ ಅಪ್ಪಟ ಕನ್ನಡದ ಹಲವು ಪ್ರದೇಶಗಳು ಕರ್ನಾಟಕ ರಾಜ್ಯಕ್ಕೆ ಸೇರಬೇಕು. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿರುವಾಗ "ಮಹಾರಾಷ್ಟ್ರದ ಕನ್ನಡ ಶಾಸನ ಸಂಪುಟ", "ಕರ್ನಾಟಕ ದೇವಾಲಯ ಕೋಶ", "ಮಹಾಜನ ವರದಿಯ ಅವಲೋಕನ" ಹಲವು ಸಂಶೋಧನಾತ್ಮಕ ಕೃತಿಗಳ ಅಧ್ಯಯನ ಮಾಡಿದೆ. "ಸೊಲ್ಲಾಪುರ ಕನ್ನಡ ಶಾಸನಗಳಲ್ಲಿ ದೇವಾಲಯ", ಅಕ್ಕಲಕೋಟೆ ಶಿಲಾಹಾರರು, ಮೈಂದರ್ಗಿ ಕುರುಂದವಾಡ ಸಂಸ್ಥಾನಗಳ ಕುರಿತು ಬರೆಯಲು ಪ್ರಾರಂಭಿಸಿದೆ.

ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ ಹಾಗೂ ಜತ್ತ ತಾಲ್ಲೂಕುಗಳು ಅಪ್ಪಟ ಕನ್ನಡ ಪ್ರದೇಶಗಳು. ಕರ್ನಾಟಕ ಏಕೀಕರಣ ಸಮಿತಿಯ ಅಲಕ್ಷ್ಯದಿಂದ ಹಾಗೂ ಅಂದಿನ ಕೇಂದ್ರ ಸರಕಾರದ ತಪ್ಪು ನಿರ್ಣಯದಿಂದ ಈ ಪ್ರದೇಶಗಳು ಮಹಾರಾಷ್ಟ್ರದಲ್ಲಿ ಉಳಿದು ಗಡಿ ವಿವಾದಕ್ಕೆ ಕಾರಣಗಳಾಗಿವೆ. ಈ ಕನ್ನಡ ಪ್ರದೇಶಗಳಲ್ಲಿ ಕನ್ನಡ ಶಿಲಾಶಾಸನ, ವೀರಗಲ್ಲು, ದೇಗುಲ, ಬಸದಿ, ಕನ್ನಡ ಸಾಹಿತ್ಯ, ಹಸ್ತಪ್ರತಿ ಹಾಗೂ ಜಾನಪದ ಕಲೆ ಜೀವಂತವಾಗಿ ಉಳಿದು ವೈಭವದಿಂದ ಮೆರೆಯುತ್ತಿದೆ. "ಸೊಲ್ಲಾಪುರ ಕನ್ನಡ ಸಂಶೋಧನೆ" ಹಲವು ವಿಷಯಗಳನ್ನು ಒಳಗೊಂಡಿದ್ದು, ಇದರಲ್ಲಿ ಯಾವುದೇ ಒಂದು ವಿಷಯ ಸೀಮಿತವಾದುದಲ್ಲ. ಸಂಶೋಧನೆಯ ವ್ಯಾಪ್ತಿ ಸೊಲ್ಲಾಪುರ ಜಿಲ್ಲೆಯಾಗಿದೆ. ಸಂಶೋಧಕನಾಗುವ ಕನಸು ನನಸಾಗಲಿಲ್ಲವಾದರೂ, ಸಂಶೋಧನೆಯ ಪ್ರಥಮ ಕೃತಿ ಪ್ರಕಟಿಸಿ ತೃಪ್ತಿ ತಂದಿದೆ.

ಸೊಲ್ಲಾಪುರ ಜಿಲ್ಲೆಯ ಮೈಂದರ್ಗಿ, ದುಧನಿ ಪದವಿಪೂರ್ವ ಮಹಾವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಾ, ಈ ಭಾಗದಲ್ಲಿ ಶ್ರೀ ಸಿದ್ಧರಾಮೇಶ್ವರ ಕನ್ನಡ ಬಳಗ ಕಟ್ಟಿ ಅದರ ಅಧ್ಯಕ್ಷನಾಗಿ ಗಡಿನಾಡಿನ ಕನ್ನಡ ಸಾಹಿತ್ಯ, ಕಲೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನನ್ನನ್ನು ತೊಡಗುವಂತೆ ಮಾಡಿದವರು ಅಕ್ಕಲಕೋಟೆ ಕನ್ನಡ ವಿಭಾಗದ ಡಾ. ಶಕುಂತಲಾ ಹೆಗಡೆ, ಡಾ. ಗುರಲಿಂಗಪ್ಪ ಧಬಾಲೆ, ಡಾ. ಬಿ.ಬಿ.ಪೂಜಾರಿ ಇವರಿಗೆ ಹೃತ್ಪೂರ್ವಕವಾಗಿ ಸ್ಮರಿಸುತ್ತೇನೆ. ಅದರಂತೆ ಮೈಂದರ್ಗಿಯ ಸಂಸ್ಥಾನ ಹಿರೇಮಠದ ಶ್ರೀ ಷ.ಬ್ರ. ನೀಲಕಂಠ ಶಿವಾಚಾರ್ಯ, ಮೈಂದರ್ಗಿಯ ಶ್ರೀ ಮ.ನಿ.ಪ್ರ. ಮಹಾಂತ ಮಹಾಸ್ವಾಮಿಗಳು, ಅಕ್ಕಲಕೋಟದ ಶ್ರೀ ಮ.ನಿ.ಪ್ರ. ಬಸವಲಿಂಗ ಮಹಾಸ್ವಾಮಿಗಳು, ದುಧನಿ ಡಾ. ಶ್ರೀ ಮ.ನಿ.ಪ್ರ. ಶಾಂತಲಿಂಗೇಶ್ವರ ಮಹಾಸ್ವಾಮಿಗಳಿಗೆ ಅನಂತ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ನಲ್ಲೂರು ಪ್ರಸಾದ್ ಆರ್.ಕೆ. ಗೌರವ ಕಾರ್ಯದರ್ಶಿಗಳಾದ ಪ್ರೊ. ಎಚ್.ಕೆ.ಮಳಲಿಗೌಡ ಅವರಿಗೂ ಅಂದವಾಗಿ ಡಿ.ಟಿ.ಪಿ ಮಾಡಿದ ಎನ್.ಎಲ್.ಉಮಾಶಂಕರ್ ಅವರಿಗೆ ಹಾಗೂ ಪ್ರಕಟಣೆಗೆ ಸಹಕರಿಸಿದ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನನಗೆ ಜನ್ಮಕೊಟ್ಟು, ಬದುಕುವುದನ್ನು ಕಲಿಸಿದ ನನ್ನ ತಂದೆ ಸಿದ್ಧರಾಮ ಮಸೂತಿ, ತಾಯಿ ಬಸಮ್ಮ, ಚಿಕ್ಕಪ್ಪ ಸುಭಾಷ್, ರಾಚಪ್ಪಾ, ಚಿಕ್ಕಮ್ಮ ಶಶಿಕಲಾ, ಶೋಭಾ ಹಾಗೂ ನನ್ನ ಶ್ರೀಮತಿ ರಾಜಶ್ರೀ ಅವರ ಸಹಕಾರಕ್ಕೆ ನನ್ನ ಕೃತಜ್ಞತೆಗಳು.

ಬಸವರಾಜ ಸಿ. ಮಸೂತಿ

ಪರಿವಿಡಿ

ಸೊಲ್ಲಾಪುರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ ದೇವಾಲಯ

ಸೊಲ್ಲಾಪುರ ಜಿಲ್ಲೆ ಆಳಿದ ಅನೇಕ ಅರಸು ಮನೆತನಗಳು ತಮ್ಮ ತಮ್ಮ ಆಡಳಿತಾವಧಿಯಲ್ಲಿ ವಿಭಿನ್ನ ಶೈಲಿಯ ದೇವಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಮಹತ್ವ ನೀಡಿದವು. ಅರಸರಾದಿಯಾಗಿ, ಮಹಾಮಂಡಳೇಶ್ವರರು, ಅಧಿಕಾರಿಗಳು ಹಾಗೂ ಸಾಮಾನ್ಯ ಜನರು ಅವುಗಳಿಗೆ ಹೇರಳವಾಗಿ ದಾನ, ದತ್ತಿಗಳನ್ನು ಬಿಡುವ ಮೂಲಕ ಜೀರ್ಣೋದ್ಧಾರ, ಪೂಜೆ, ಧರ್ಮದಾಚಾರಗಳು ನಿರಂತರವಾಗಿ ನಡೆದುಬರುವಂತೆ ಪೋಷಿಸಿದರು. ಸೊಲ್ಲಾಪುರ ಜಿಲ್ಲೆಯ ಗ್ರಾಮಗಳ ಕ್ಷೇತ್ರಕಾರ್ಯದಲ್ಲಿ ದೇವಾಲಯ, ಶಾಸನ, ವೀರಗಲ್ಲು ಹಾಗೂ ಅವಶೇಷಗಳ ಕುರಿತು ವಿವಿಧ ಬಗೆಯ ದಾಖಲೆ ಲಭ್ಯವಾಗಿವೆ. ಸೊಲ್ಲಾಪುರ ಜಿಲ್ಲೆಯ ಕನ್ನಡ ಮತ್ತು ಕನ್ನಡ ಶಾಸನಗಳ ಸಂಗ್ರಹಾಲಯ ನಿರ್ಮಿಸಿ ಅವುಗಳ ಸಂರಕ್ಷಣೆ ಮಾಡಬೇಕಾಗಿದೆ. ಈ ವಿಷಯ ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಇವರೆಲ್ಲರ ಗಮನಕ್ಕೆ ತರಲಾಗಿದೆ. ಇಲ್ಲಿನ ಕನ್ನಡ ಶಾಸನಗಳಲ್ಲಿ ದಾಖಲಾದ ದೇವಾಲಯ ಹಾಗೂ ಗ್ರಾಮಗಳ ಹೆಸರುಗಳೆಲ್ಲ ಕನ್ನಡಮಯವಾಗಿವೆ. ಇವು ಸುವ್ಯವಸ್ಥಿತ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಸೊಲ್ಲಾಪುರ ಜಿಲ್ಲೆಯಲ್ಲಿ ಲಭ್ಯವಾದ ಶಾಸನ, ವೀರಗಲ್ಲು, ದೇವಾಲಯ, ಅವಶೇಷಗಳ ಪರಿಸರದಲ್ಲಿ ಇಂದು ಸಹ ಕನ್ನಡ ಭಾಷೆ, ಕಲೆ, ಸಾಹಿತ್ಯ ಜೀವಂತವಾಗಿ ಉಳಿದಿವೆ. ಸೊಲ್ಲಾಪುರ ಜಿಲ್ಲೆಯ ಗ್ರಾಮಗಳ ಕನ್ನಡ ಶಾಸನಗಳಲ್ಲಿ ದೇವಾಲಯಗಳನ್ನು ದಾಖಲಿಸುವ ಬಹುದಿನಗಳ ಕನಸು ಇಂದು ನನಸಾಯಿತಾದರೂ, "ಮಹಾರಾಷ್ಟ್ರ ಕನ್ನಡ ಶಾಸನಗಳಲ್ಲಿ ದೇವಾಲಯ ಕೋಶ" ಕುರಿತು ಸಂಶೋಧನೆ, ಅಧ್ಯಯನ ಮಾಡುವ ಗುರಿ ಉದ್ದೇಶವಿದೆ.

ಅಕ್ಕಲಕೋಟೆ ತಾಲ್ಲೂಕು

೧. ಸಿದ್ಧಗಜ್ಜೇಶ್ವರ ದೇವಾಲಯ, ಕರಜಗಿ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ಅಂತರದಲ್ಲಿ ನೀಲಗಾರ ಕರಜಗಿ ಗ್ರಾಮವಿದೆ. ಕರಜಗಿಯ ಸಿದ್ಧಗಜ್ಜೇಶ್ವರ ಐತಿಹಾಸಿಕ ದೇವಾಲಯವಿದೆ. ಕ್ರಿ.ಶ. ೧೧೧೪ರ ಅಕ್ಕಲಕೋಟೆಯ ಶಿಲಾಶಾಸನದಲ್ಲಿ ಕರಂಜಿಗೆಯ ಶ್ರೀ ಸಿದ್ಧಗಜ್ಜೇಶ್ವರ ದೇವರ ರಂಗಬೋಗಕ್ಕಂ ನಿವೇದ್ಯಕ್ಕಂ ನಂದಾದೀವಿಗೆಗಂ ಖಂಡಸ್ಫುಟಿತ ಜೀರ್ಣೋದ್ಧಾರಕ್ಕವಾ ದೇವರ ಮಠದಾಚಾರ್ಯರು ಯಮನಿಯಮಾಸನ ಪ್ರಾಣಾಯಾಮ ಪತ್ಯಾಹರ ಧ್ಯಾನ ಧಾರಣ ಲೋಕಾನುಷ್ಠಾನ ಗುಣಸಂಪನ್ನರು ಅನ್ನದಾನ ವಿನೋದರುಮಪ್ಪ ಶ್ರೀಜ್ಞಾನಸಿದ್ಧ ದೇವರ ಕಾಲಂ ಕರ್ಚಿ ಧಾರಪೂರ್ವಕ ಸರ್ವಸುಮಸ್ಯಯಾಗಿ ಆಣಂದೂರು ಮಾನೂರರ ಬಳಿಯಂಕುಲಗೆಯ್ವತ್ತರೊಳಗಣ ಚಿಟ್ಟೆಯನಕರಂಜಿಗೆಯನ್ನು ದತ್ತಿ ಬಿಟ್ಟ ವಿವರವಿದೆ.[೧]

ಸಿದ್ಧಗಜ್ಜೇಶ್ವರ ದೇವಾಲಯ ಪೂರ್ವಮುಖವಾಗಿದೆ. ಗರ್ಭಗೃಹ, ಶಿಖರ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಮಹಾಶಿವಲಿಂಗವಿದೆ. ಶ್ರೀ ಶಿವಸಿದ್ಧೇಶ್ವರ, ಶರಣ ಗಜೇಶ ಮಸಣಯ್ಯನ ಆರಾಧ್ಯ ದೇವನಾಗಿದ್ದ. ಗಜೇಶ ಮಸಣಯ್ಯನ ವಚನಾಂಕಿತ 'ಮಹಾಲಿಂಗಗಜೇಶ್ವರ' ಎಂಬುದು ಈ ಮಹಾಶಿವಲಿಂಗನಿಗೆ ಹೋಲುತ್ತದೆ.[೨]

ಒಲಿದವರ ಕೊಲುವಡೆ ಮಸೆದ ಕೂರಲಗೇಕವ್ವ
ಅವರನೊಲ್ಲೆರೆಂದ ಸಾಲದೆ ?
ಆಲಿಕಲ್ಲು ಕರಗಿದಂತೆ ಅವರ ನೋಡಕರಡದೆ ಸಾಲದೆ ?
....
....
....
ಮಹಾಲಿಂಗಗಜ್ಜೇಶ್ವರನಗಲಿದಡೆ
ತುಪ್ಪದಲ್ಲಿ ಕಿಚ್ಚ ನಂದಿಸಿದ ನೋಡವ್ವಾ

ಈ ದೇವಾಲಯದ ಸಭಾಮಂಟಪದ ದ್ವಾರಬಾಗಿಲು ಉತ್ತರ ಮುಖವಾಗಿದೆ. ದ್ವಾರಬಾಗಿಲು ಬಲಬದಿಯಲ್ಲಿ ವೀರಗಲ್ಲು, ಶಿವಲಿಂಗವಿದೆ. ಸಭಾಮಂಟಪ ನೆಲಸಮವಾಗಿದ್ದು, ನಾಲ್ಕು ನಂದಿ ವಿಗ್ರಹಗಳಿವೆ. ವೀರಭದ್ರ, ಶಿವನಾಗೇಶ, ಗಣೇಶ ದೇವರ ಭಗ್ನಾವಶೇಷಗಳಿವೆ. ಇಂಥ ಐತಿಹಾಸಿಕ ದೇವಾಲಯಗಳ ರಕ್ಷಣೆ ಮಾಡಲು ಪುರಾತತ್ವ ಇಲಾಖೆ, ಬಸವಕಲ್ಯಾಣ ಅಭಿವೃದ್ಧಿ ಸಮಿತಿ, ಕರ್ನಾಟಕ ಸರ್ಕಾರ ಗಮನ ಹರಿಸಿ ಮುಂದಾಗಬೇಕಾಗಿದೆ.

೨. ಬೊಮ್ಮಲಿಂಗೇಶ್ವರ ದೇವಾಲಯ, ಕಾಶಿಲಿಂಗ ಜೇವೂರ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ಅಂತರದಲ್ಲಿ ಕಾಶಿಲಿಂಗ ಜೇವೂರ ಗ್ರಾಮವಿದೆ. ಐತಿಹಾಸಿಕ ಬೊಮ್ಮಲಿಂಗೇಶ್ವರ ದೇವಾಲಯವಿದೆ. ಸೊಲ್ಲಾಪುರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ 'ಬ್ರಹ್ಮೇಶ್ವರ ಜಾವೂರ' ಎಂದು ಉಲ್ಲೇಖವಿದೆ.[೩] ಆಳಂದದಲ್ಲಿಯ ಜಾನಿ ಪಟೇಲರ ಕುಟುಂಬದವರ ವಶದಲ್ಲಿ ಬಮ್ಮಲಿಂಗ ಪುರಾಣ ಬರೆದಿರುವ ತಾಮ್ರಪಟಗಳಿವೆ. ಶರಣ ಬೊಮ್ಮಲಿಂಗನನ್ನು ಕುರಿತಂತೆ ಭಾಮಿನಿ ಷಟ್ಪದಿಯಲ್ಲಿರುವ 'ಬೊಮ್ಮಲಿಂಗದೇವರ ಕಾವ್ಯ' ಗ್ರಂಥದ ಎರಡು ಕಾಗದ ಪ್ರತಿಗಳು ಲಭಿಸಿದ್ದು, ಸುಮಾರು ೧೦೦ ವರ್ಷಗಳ ಹಿಂದೆ ಜೀವಿಸಿದ್ದ ತಳೇವಾಡದ ರೇವಣಯ್ಯ ಸ್ವಾಮಿ ವಿರಚಿತ 'ಬೊಮ್ಮಲಿಂಗ ಪುರಾಣ'ವು ಲಭಿಸಿದೆ.[೪]

ಕಾಶಿಲಿಂಗ ಜೇವೂರ ಬೊಮ್ಮಲಿಂಗೇಶ್ವರ ದೇವಾಲಯಕ್ಕೆ ಪೂರ್ವ ಹಾಗು ದಕ್ಷಿಣ ಮುಖವಾಗಿ ಎರಡು ದ್ವಾರಬಾಗಿಲುಗಳಿವೆ. ಪೂರ್ವದ ಪ್ರವೇಶದ್ವಾರದ ಎಡಬದಿಯಲ್ಲಿ ದೀಪಸ್ತಂಭವಿದೆ. ಗರ್ಭಗೃಹ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದ ದ್ವಾರಬಾಗಿಲು ಉತ್ತರಮುಖವಾಗಿದೆ. ನಂದಿ, ಗಣೇಶನ ಭಗ್ನಾವಶೇಷಗಳಿವೆ. ಸಂಪೂರ್ಣವಾಗಿ ದೇವಾಲಯ ಜೀರ್ಣೋದ್ಧಾರ ಮಾಡಿದ್ದಾರೆ.

೩. ಕಾಶಿವಿಶ್ವೇಶ್ವರ ದೇವಾಲಯ, ಕಾಶಿಲಿಂಗ ಜೇವೂರ

ಅಕ್ಕಲಕೋಟೆ ತಾಲ್ಲೂಕಿನ ಕಾಶಿಲಿಂಗ ಜೇವೂರ ಕಾಶಿವಿಶ್ವೇಶ್ವರ ಐತಿಹಾಸಿಕ ದೇವಾಲಯವಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಂಖಮಂಟಪ, ಪ್ರದಕ್ಷಿಣಾಪಥ ಹಾಗೂ ಮಹಾದ್ವಾರಗಳಿಂದ ಕೂಡಿದೆ. ಪೂರ್ವಮುಖವಾದ

ಗರ್ಭಗೃಹದೊಳಗೆ ಶಿವಲಿಂಗವಿದೆ. ಶಿವಲಿಂಗದ ಮಧ್ಯದ ಪಿಂಡದೊಳಗೆ ಬಾವಿ ಇದೆ. ಈ ಬಾವಿಯಲ್ಲಿ ನೀರು ಕಾಶಿಯಿಂದ ಬರುತ್ತವೆ. ಸಭಾಮಂಟಪದಲ್ಲಿ ಉತ್ತರಮುಖ ದೇವಕೋಷ್ಠಕದಲ್ಲಿ ಕಾಮೇಶ್ವರ, ದಕ್ಷಿಣಮುಖ ದೇವಕೋಷ್ಠಕದಲ್ಲಿ ಅನ್ನಪೂರ್ಣೇಶ್ವರ, ಮುಖಮಂಟಪದ ಉತ್ತರ ಮುಖ ದೇವಕೋಷ್ಠಕದಲ್ಲಿ ಗಣೇಶ, ದಕ್ಷಿಣಮುಖ ದೇವಕೋಷ್ಠಕದಲ್ಲಿ ಶಿವಪಾರ್ವತಿ, ಗರ್ಭಗೃಹದ ಮುಂದೆ ಎರಡು ನಂದಿ ವಿಗ್ರಹಗಳಿವೆ.

ಕಾಶಿವಿಶ್ವೇಶ್ವರ ದೇವಾಲಯದ ಎಡಬದಿಯಲ್ಲಿ ವಿಷ್ಣುವಿನ ದೇವಾಲಯವಿದೆ. ಗರ್ಭಗೃಹ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ, ಇಕ್ಕೆಲಗಳಲ್ಲಿ ದ್ವಾರಪಾಲಕರು, ಗರ್ಭಗೃಹದಲ್ಲಿ ವಿಷ್ಣುವಿನ ವಿಗ್ರಹವಿದೆ. ಅದರ ಮುಂದಿನ ಆವರಣದಲ್ಲಿ ಕನ್ನಡ ಶಾಸನವಿದೆ. ಅದರ ಹತ್ತಿರ ನಾಗೇಶ, ಗಣೇಶ, ಶಿವಲಿಂಗ ಹಾಗೂ ಹಲವು ದೇವರ ಭಗ್ನಾವಶೇಷಗಳಿವೆ. ಅದರ ಮುಂದೆ ವಿಶಾಲವಾದ ಬಾವಿ ಇದೆ. ಪಶ್ಚಿಮ-ಉತ್ತರ ಮುಖವಾಗಿ ಬಾವಿಯ ಪ್ರವೇಶ ಮಾಡುವ ಪಾವಟಿಗೆಗಳಿವೆ. ಬಾವಿಯ ಒಳಗೆ ಪೂರ್ವಮುಖವಾಗಿ ಎರಡು ಶಿವಲಿಂಗ, ಪಶ್ಚಿಮ ಮುಖವಾಗಿ ಎರಡು ಶಿವಲಿಂಗ, ಉತ್ತರ ಮುಖವಾಗಿ ಒಂದು ಶಿವಲಿಂಗವಿದೆ. ಉತ್ತರ ಮುಖ ಬಾವಿಯ ಪ್ರವೇಶ ಮಾಡಿದ ಬಳಿಕ ಒಂದು ಶಿವಲಿಂಗ, ಎರಡು ಪಿಂಡಗಳಿರುವ ಶಿವನ ದರ್ಶನವಾಗುತ್ತದೆ. ಹಾಗೆಯೇ ಪಾವಟಿಗೆಳು ಇಳಿಯುತ್ತ ಹೋದಂತೆ ಪೂರ್ವ ಮುಖವಾಗಿರುವ ವಿಷ್ಣುವಿನ ದರ್ಶನವಾಗುತ್ತದೆ. ಗರ್ಭಗೃಹದ ಮುಂದೆ ಎರಡು ದೀಪಸ್ತಂಭಗಳಿವೆ. ಪ್ರತಿವರ್ಷದ ಶ್ರಾವಣ ಮಾಸದ ಕೊನೆಯ ಸೋಮವಾರ ಜಾತ್ರೆ ವೈಭವದಿಂದ ಆಚರಿಸುತ್ತಾರೆಂದು ಗುರುಸಿದ್ಧಯ್ಯ ಸ್ವಾಮಿ ಹೇಳಿದ್ದಾರೆ.

೪. ಪಂಚಮುಖಿ ಹನುಮಾನ ದೇವಾಲಯ, ಕಾಶಿಲಿಂಗ ಜೇವೂರ

ಬಸ್ಟಾಂಡ್ ಹತ್ತಿರ ಪಂಚಮುಖಿ ಹನುಮಾನ ದೇವಾಲಯ ಪಶ್ಚಿಮ ಮುಖವಾಗಿದೆ. ಅಗ್ನಿಶಿಲೆಯಲ್ಲಿ ನಿರ್ಮಿಸಿದ ಐತಿಹಾಸಿಕ ದೇವಾಲಯವಿದೆ. ದೇವಾಲಯದ ದ್ವಾರಬಾಗಿಲುಗಳ ಇಕ್ಕೆಲಗಳಲ್ಲಿ ಭವ್ಯವಾದ ಕಲ್ಲಿನ ಗಣೇಶ ವಿಗ್ರಹಗಳಿವೆ. ಅದರ ಹತ್ತಿರ ಮಹಾಸತಿಗಲ್ಲು ಇದೆ. ಪರಿಸರದಲ್ಲಿ ಹಲವು ದೇಗುಲದ ಭಗ್ನಾವಶೇಷಗಳಿವೆ.

೫. ಸಂಗಮೇಶ್ವರ ದೇವಾಲಯ, ಕೇಗಾವ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ಅಂತರದಲ್ಲಿ ಕೇಗಾವ ಗ್ರಾಮವಿದೆ. ಕೇಗಾವ ಅಂಕುಲಗಿಗೆ ೮೦ರ ವ್ಯಾಪ್ತಿಯಲ್ಲಿದೆ. ಕೇಗಾವ ಸಂಗಮೇಶ್ವರ ದೇವಾಲಯ ಜೀರ್ಣೋದ್ಧಾರಕ್ಕೆ ಹಾಗೂ ಅದರ ಸಮಸ್ತ ಖರ್ಚು ವೆಚ್ಚಕ್ಕೂ ದಾನ ನೀಡಿದ ವಿವರವೂ ಶಾಸನದಲ್ಲಿದೆ.[೫] ಇಂದು ಕೇಗಾವ ಸಂಗಮೇಶ್ವರ ದೇವಾಲಯ ನೆಲಸಮವಾಗಿದೆ. ಶಿವಲಿಂಗ, ನಂದಿ, ವೀರಭದ್ರ, ಎರಡು ಚೌಕುಗಳು, ಐದು ವೀರಗಲ್ಲು ಹಾಗೂ ಹಲವು ಭಗ್ನಾವಶೇಷಗಳಿವೆ. ಈ ದೇಗುಲಕ್ಕೆ ಕೇಗಾವ ಭಕ್ತರು ಬಸವೇಶ್ವರ ದೇವಾಲಯ ಎಂದು ಕರೆಯುತ್ತಾರೆ.

೬. ಮಲ್ಲಿಕಾರ್ಜುನ ದೇವಾಲಯ, ಚಪ್ಪಳಗಾಂವ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ಅಂತರದಲ್ಲಿ ಚಪ್ಪಳಗಾಂವ ಮಲ್ಲಿಕಾರ್ಜುನ ದೇವಾಲಯವಿದೆ. ಐತಿಹಾಸಿಕ ಮಲ್ಲಿಕಾರ್ಜುನ ದೇವಾಲಯ ಪೂರ್ವ

ಮುಖವಾಗಿದೆ. ಸೊಲ್ಲಾಪುರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ 'ಮಲ್ಲೇಶ್ವರ ಚಟ್ಟಣಪಾವ' ಎಂದು ಉಲ್ಲೇಖವಿದೆ.[೬] ಅಗ್ನಿಶಿಲೆಯಲ್ಲಿ ನಿರ್ಮಾಣವಾದ ತ್ರಿಕೂಟಾಚಲ ದೇವಾಲಯ, ಮೂರು ಗರ್ಭಗೃಹ, ಸಭಾಮಂದಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಮೂರು ಗರ್ಭಗೃಹದಲ್ಲಿ ಶಿವಲಿಂಗಗಳಿವೆ. ಅವುಗಳ ಮುಂದೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಮೂರು ಗರ್ಭಗೃಹಗಳ ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ತ್ರಿಶೂಲ, ಡಮರು, ಗದೆ ಹಿಡಿದು ನಿಂತಿರುವ ವಿವಿಧ ಭಂಗಿಯ ಶಿಲ್ಪಗಳಿವೆ. ಸಭಾಮಂಟಪದ ಮಧ್ಯೆ ನಾಲ್ಕು ಕಂಬಗಳು, ಕೆಳಗೆ–ಮೇಲೆ, ಚೌಕ, ಮಧ್ಯೆ ೧೬–೦೮–೧೬ ಭಾಗದ ಪಟ್ಟಿಕೆ, ವೃತ್ತಾಕಾರದ ಮುಚ್ಚಳ, ಚೌಕಾಕಾರದ ಫಲಕ ಬೋದಿಗೆಗಳಿಂದ ಕೂಡಿವೆ. ದೇವಾಲಯದ ದ್ವಾರಬಾಗಿಲ ಇಕ್ಕೆಲಗಳಲ್ಲಿ ರಕ್ಷಾಸನ, ಅದರ ಕೆಳಗೆ ವಿವಿಧ ಭಂಗಿಯಲ್ಲಿ ೧೦ ಶಿಲಾಬಾಲಿಕೆಯರ ಶಿಲ್ಪಗಳಿವೆ. ದ್ವಾರಬಾಗಿಲ ಇಕ್ಕೆಲಗಳಲ್ಲಿ ದೀಪಸ್ತಂಭಗಳಿವೆ. ದೇಗುಲದ ಪರಿಸರದಲ್ಲಿ ನಂದಿ, ಗಣೇಶ, ವೀರಭದ್ರ ಮತ್ತಿತರ ಭಗ್ನಾವಶೇಷಗಳಿವೆ. ಅಲ್ಲಿಯೇ ಬಾವಿ ಇದೆ. ದೇವಾಲಯದ ಶಿಖರ ಜೀರ್ಣೋದ್ಧಾರ ಮಾಡಿದ್ದಾರೆ. ದೇವಾಲಯದ ಸುತ್ತಲೂ ಚಿಕ್ಕ ಚಿಕ್ಕ ಶಿಲಾಬಾಲಿಕೆಯರಿದ್ದಾರೆ. ಪ್ರತಿ ವರ್ಷದ ಯುಗಾದಿ ಹಬ್ಬದ ೧೧ ದಿನಗಳ ನಂತರ ಜಾತ್ರೆ ನಡೆಯುತ್ತದೆ. ಐತಿಹಾಸಿಕ ದೇವಾಲಯಗಳಲ್ಲಿ ಚಪ್ಪಳಗಾಂವ ಮಲ್ಲಿಕಾರ್ಜುನ ದೇವಾಲಯ ಒಂದಾಗಿದೆ.

೭. ಮಲ್ಲಿಕಾರ್ಜುನ ದೇವಾಲಯ, ತಡವಳ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ಅಂತರದಲ್ಲಿ ತಡವಳ ಗ್ರಾಮವಿದೆ. ತಡವಳ ಮಲ್ಲಿಕಾರ್ಜುನ ದೇವಾಲಯ ಸಭಾಮಂಟಪದ ದ್ವಾರಬಾಗಿಲು ಉತ್ತರಮುಖವಾಗಿದೆ. ಮಲ್ಲಿಕಾರ್ಜುನ ದೇವಾಲಯದಲ್ಲಿ ಕನ್ನಡ ಶಾಸನವಿದೆ. ತುಂಡು ಶಾಸನ ಕಾಲದ ಉಲ್ಲೇಖವಿಲ್ಲ. ಈ ಶಾಸನದ ಕೊನೆಯ ಭಾಗ ಬಹಳಷ್ಟು ಶಿಥಿಲಗೊಂಡಿದೆ. ಇದು ಸೇವುಣ ದೊರೆ ಕನ್ನರ ದೇವನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಸಿದ್ಧರಾಮನ ಒಂದು ವಚನದಿಂದ ಈ ಶಾಸನ ಆರಂಭವಾಗುತ್ತದೆ. ದಾನ ನೀಡಿದ ಭಾಗ ನಾಶವಾಗಿದೆ.[೭]

ಮಲ್ಲಿಕಾರ್ಜುನ ದೇವಾಲಯ ಗರ್ಭಗೃಹ, ಅಂತರಾಳ, ಸಭಾಮಂಟಪ, ಶಿಖರ, ಪ್ರದಕ್ಷಿಣಾಪಥ ಹಾಗೂ ಮುಖಮಂಟಪದ ದ್ವಾರಗಳಿಂದ ಕೂಡಿದೆ. ಪಶ್ಚಿಮ ಮುಖವಾಗಿ ಗರ್ಭಗೃಹದ ಇಕ್ಕೆಲಗಳಲ್ಲಿ ದ್ವಾರಪಾಲಕರು, ಲಲಾಟ ಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಮುಂದೆ ನಂದಿ ವಿಗ್ರಹವಿದೆ. ಪೂರ್ವಮುಖವಾಗಿ ಇನ್ನೊಂದು ಗರ್ಭಗೃಹವಿದೆ. ಅದರಲ್ಲಿ ಶಿವಲಿಂಗವಿದೆಯಾದರೂ ಇದಕ್ಕೆ ಬ್ರಮರಾಂಬದೇವಿ ಎಂದು ಕರೆಯುತ್ತಾರೆ. ದೇಗುಲದ ಆವರಣದಲ್ಲಿ ಮೂರು ವೀರಗಲ್ಲು, ಮೂರು ಸಪ್ತಮಾತೃಕೆಯರ ಶಿಲ್ಪಗಳಿವೆ. ದೇಗುಲದ ಹತ್ತಿರ ಪೂರ್ವ ಮುಖವಾಗಿ ಮಹಾದೇವ ದೇವಾಲಯವಿದೆ. ಅದರ ಮುಂದೆ ದೀಪಸ್ತಂಭವಿದೆ.

ಪ್ರತಿವರ್ಷದ ಶ್ರಾವಣಮಾಸದ ಕೊನೆಯ ಸೋಮವಾರ ಜಾತ್ರೆ ನಡೆಯುತ್ತದೆ ಎಂದು ಗುರುತಾಯಿ ಸುವರ್ಣ ದಯಾನಂದಸ್ವಾಮಿ ಅವರು ಹೇಳಿದರು. ಐತಿಹಾಸಿಕ ದೇವಾಲಯಗಳಲ್ಲಿ ತಡವಳ ಮಲ್ಲಿಕಾರ್ಜುನ ದೇವಾಲಯ ಒಂದಾಗಿದೆ. ಅಕ್ಕಲಕೋಟದ ಶಾಸಕರಾದ ಸಿದ್ರಾಮಪ್ಪ ಪಾಟೀಲರು 'ಮಹಾರಾಷ್ಟ್ರದ ತೀರ್ಥಕ್ಷೇತ್ರ' ನಿಧಿಯಿಂದ ಈ ಐತಿಹಾಸಿ ದೇವಾಲಯ ಅಭಿವೃದ್ಧಿಗೊಳಿಸಲು ಗಮನಹರಿಸಬೇಕಾಗಿದೆ.

೮. ಮಹಾದೇವ ದೇವಾಲಯ, ದೈಹಿತಣ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ಅಂತರದಲ್ಲಿ ದೈಹಿತಣ ಗ್ರಾಮವಿದೆ. ಈ ಗ್ರಾಮದ ಹತ್ತಿರ ಶ್ರೀಸ್ವಾಮಿ ಸಮರ್ಥ ಸಕ್ಕರೆ ಕಾರ್ಖಾನೆಯಿದೆ. ಅಕ್ಕಲಕೋಟೆ ಅರಮನೆಯ ನಾಲ್ಕನೆಯ ಶಾಸನದಲ್ಲಿ ಇಂದರಸನ ದಂಡನಾಯಕ ಮಾಧವಭಟ್ಟ ದೈತಾಣದಲ್ಲಿ ಮಾಡಿಸಿದ ಕಂದರ್ಪೇಶ್ವರ ಹಾಗೂ ಶ್ರೀ ಕೇಶವದೇವರಿಗೆ ಮಹಾಮಂಡಳೇಶ್ವರ ಇಂದರಸ ಹಾಗೂ ಅವನ ಮಕ್ಕಳಾದ ಡಾಕರಸ, ಕವಿಲಾಸರಸ, ಮಲ್ಲಿದೇವರಸ, ಅಜ್ಜರಸ ಅಲ್ಲದೇ ಇಂದರಸ, ಡಾಕರಸನ ಮಗ ಇಂದರಸ ಮೊದಲಾದವರು ಸೇರಿ ಅನೇಕ ರೀತಿಯ ದಾನಗಳನ್ನು ನೀಡಿದ ವಿವರಣೆ ಬಂದಿದೆ. ದಂಡನಾಯಕ ಮಾದಿರಾಜನ ವಂಶಾವಳಿಯೂ ವಿಸ್ತಾರವಿಲ್ಲಿ ಬಂದಿದೆ. ಮಾದಿರಾಜ ಆರನೆಯ ವಿಕ್ರಮರ ಸಾಮ್ರಾಜ್ಯ ವಿಸ್ತರಣೆಯಲ್ಲಿ ಮಹತ್ವ ಪಾತ್ರವನ್ನು ವಹಿಸಿದ್ದ ದೈತಾಣದಲ್ಲಿ ಈ ಕಂದರ್ಪೇಶ್ವರ ಹಾಗೂ ಕೇಶವ ದೇವಾಲಯವನ್ನು ಕಟ್ಟಿಸಿದ್ದಲ್ಲದೇ, ಅನೇಕ ರೀತಿಯ ದಾನಗಳನ್ನು ನೀಡಿದ ಅಂಶವು ಉಲ್ಲೇಖಗೊಂಡಿದೆ.[೯]

ಅಗ್ನಿಶಿಲೆಯಲ್ಲಿ ನಿರ್ಮಾಣವಾದ ದೈಹಿತಣದ ಮಹಾದೇವ ದೇವಾಲಯ ಪೂರ್ವಮುಖವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖ ಮಂಟಪಗಳಿಂದ ಕೂಡಿದೆ. ಸರಳ ಶೈಲಿಯ ಪ್ರವೇಶದ್ವಾರವನ್ನು ಹೊಂದಿರುವ ಗರ್ಭಗೃಹದಲ್ಲಿ ಶಿವಲಿಂಗವಿದೆ. ಸಭಾಮಂಟಪದ ಮಧ್ಯದಲ್ಲಿ ಪಶ್ಚಿಮ ಮುಖವಾಗಿ ನಂದಿ, ಅವನ ಮುಂದೆ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ತ್ರಿಕೂಟ ದೇವಾಲಯ ವಾಗಿರುವುದರಿಂದ ಮೂರು ಗರ್ಭಗೃಹಗಳಿವೆ. ಮೂರು ಗರ್ಭಗೃಹಗಳ ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ಸಭಾಮಂಪಟದ ಪ್ರವೇಶದ್ವಾರಕ್ಕೆ ಅರ್ಧಗಂಬಗಳಿವೆ. ಮಧ್ಯದ ನಾಲ್ಕು ಕಂಬಗಳು ಕೆಳಗೆ ಮೇಲೆ ಚೌಕ, ಮಧ್ಯ ೧೬-೧೮-೧೬ ಭಾಗದ ಪಟ್ಟಿಕೆ, ವೃತ್ತಾಕಾರದ ಮುಚ್ಚಳ, ಚೌಕಾಕಾರದ ಫಲಕ ಮಧ್ಯ ನಾಲ್ಕು ಕಂಬಗಳು ಇವೆ. ಹಂಪೆಯ ಶ್ರೀ ವಿಜಯವಿಠಲನ ದೇವಾಲಯ ಕಂಬಗಳಿಂದ 'ಸಂಗೀತ ಸ್ವರಗಳು' ಕೇಳಿಸುತ್ತವೆ. ಅದರಂತೆ ದೈಹಿತಣದ ದೇವಾಲಯದಲ್ಲಿರುವ ನಾಲ್ಕು ಕಂಬಗಳಿಂದ 'ಪಂಚಧಾತುವಿನ ಸ್ವರಗಳು' ಕೇಳಿಸುತ್ತವೆ. ಸುತ್ತಲೂ ಅರ್ಧಮುಚ್ಚಿದ ಗೋಡೆಗೆ ರಕ್ಷಾಸನ, ಅದರ ಮೇಲೆ ಕಂಬಗಳಿವೆ. ಪೂರ್ವ, ದಕ್ಷಿಣ ಹಾಗೂ ಉತ್ತರ ಭಾಗಗಳಲ್ಲಿ ಮುಖಮಂಟಪಗಳಿವೆ. ದೇವಾಲಯದ ಹೊರಗೋಡೆಯ ಅಧಿಷ್ಠಾನ, ಉಪಾನ, ಜಗತಿ, ಕಂಠ, ಕಮುದ, ಪದ್ಮ, ಸೋಪಾನಗಳಿಂದ ಕೂಡಿದೆ. ಭಿತ್ತಿಯಲ್ಲಿ ಅರ್ಧಕಂಬಗಳು ಮತ್ತು ರಕ್ಷಾಸನವಿರುವ ಮುಖಮಂಟಪದ ಹೊರಗೋಡೆಗೆ ಪದ್ಮಸಾಲುಗಳಿವೆ. ಗರ್ಭಗೃಹದ ಮೇಲಿನ ಶಿಖರ ಹಾಳಾಗಿದೆ.

ದೇವಾಲಯದ ಪೂರ್ವ ದ್ವಾರಬಾಗಿಲ ಇಕ್ಕೆಲಗಳಲ್ಲಿ ದೀಪಸ್ತಂಭಗಳಿವೆ. ಕನ್ನಡ ಶಾಸನದ ಉಲ್ಲೇಖದಂತೆ ಕಂದರ್ಪೇಶ್ವರ ಗರ್ಭಗೃಹದಲ್ಲಿ, ಕೇಶವದೇವ ಸಭಾಮಂಟಪದಲ್ಲಿ ಪ್ರತಿಷ್ಠಾಪಿಸಲಾಗಿದೆ. ದೈಹಿತಣದ ಭಕ್ತರು ಈ ದೇಗುಲಕ್ಕೆ ಮಹಾದೇವ ದೇವಾಲಯ ಎಂದು ಕರೆಯುತ್ತಾರೆ. ದೈಹಿತಣದ ಗ್ರಾಮಕ್ಕೆ ಕ್ಷೇತ್ರಕಾರ್ಯ ಮಾಡಲು ಹೋದಾಗ, ದೇವಾಲಯದಲ್ಲಿ ಗ್ರಾಮಸ್ಥರಾದ ವಿಜಯಬಸನೆ, ಮಹಾದೇವ ಮ್ಹೇತ್ರೆ,

ಸುರೇಶ ಬಬಲಾದರಿದ್ದರು.[೯] ದೈಹಿತಣದ ದಂತಕತೆಯ ಪ್ರಕಾರ ಗರ್ಭಗೃಹದ ಇಕ್ಕೆಲಗಳಲ್ಲಿರುವ ಎರಡು ಗರ್ಭಗೃಹಗಳ ಮೂಲಕ ಭೂಗತ ಮಾರ್ಗಗಳಿವೆ. ಒಂದು ಭೂಗತ ಮಾರ್ಗ ಹೊನ್ನಾಳಿ ದೇವನಿಗೆ, ಇನ್ನೊಂದು ಭೂಗತ ಮಾರ್ಗ ಖಂಡೆರಾಯ ದೇವನಿಗೆ ಹೋಗುತ್ತದೆ. ದೇವಾಲಯದಲ್ಲಿರುವ ಇತಿಹಾಸ ಕಥೆ ಹೇಳುವ ಕನ್ನಡ ಶಾಸನ ಅಕ್ಕಲಕೋಟೆಯ ಭೋಸಲೆ ಮಹಾರಾಜರು ತೆಗದುಕೊಂಡು ಹೋಗಿದ್ದಾರೆ ಎಂದು ವಿಜಯಬಸನೆ, ಮಹಾದೇವ ಮ್ಹೇತ್ರೆ ಅವರು ಹೇಳಿದರು. ಐತಿಹಾಸಿಕ ದೇವಾಲಯಗಳಲ್ಲಿ ದೈಹಿತಣದ ಮಹಾದೇವ ದೇವಾಲಯ ಒಂದಾಗಿದೆ.

೯. ಮಲ್ಲಿಕಾರ್ಜುನ ದೇವಾಲಯ, ನಾಗಣಸೂರ

ಅಕ್ಕಲಕೋಟೆ ತಾಲ್ಲೂಕಿನ ನಾಗಣಸೂರ ಗ್ರಾಮದ ಮಲ್ಲಿಕಾರ್ಜುನ ತ್ರಿಕೂಟ ದೇವಾಲಯವಾಗಿದೆ. ಉತ್ತರಮುಖ ಹೊಂದಿರುವ ದೇವಾಲಯ ಗರ್ಭಗೃಹ, ಅಂತರಾಳ, ಸಭಾಮಂಟಪ, ಶಿಖರ ಹಾಗೂ ಪ್ರದಕ್ಷಿಣಾಪಥವಿದೆ. ಗರ್ಭಗೃಹದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಮೂರು ಗರ್ಭಗೃಹದ ಲಲಾಟ ಬಿಂಬದಲ್ಲಿ ಗಣೇಶ, ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ಅಂತರಾಳದ ದ್ವಾರಬಾಗಿಲುಗಳ ಲಲಾಟ ಬಿಂಬದಲ್ಲಿ ಇಂದ್ರನ ಸಭೆ ನಡೆಯುತ್ತಿರುವ ಉಬ್ಬುಶಿಲ್ಪವಿದೆ. ಇಕ್ಕೆಲಗಳಲ್ಲಿ ನರ್ತಕಿಯರಿದ್ದಾರೆ. ಪೂರ್ವಮುಖ ಗರ್ಭಗೃಹದಲ್ಲಿ ಮಹಾದೇವ, ಪಶ್ಚಿಮಮುಖ ಗರ್ಭಗೃಹದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದಲ್ಲಿ ೧೬ ಕಂಬಗಳಿವೆ. ಮಧ್ಯದಲ್ಲಿ ನಂದಿ, ಸಂಗೀತಗಾರರ ಉಬ್ಬುಶಿಲ್ಪಗಳಿವೆ. ಸಭಾಮಂಟಪದ ಸುತ್ತಲೂ ಸಾಲು ಸಾಲಾಗಿ ನಿಂತಿರುವ ಆನೆ, ಕುದುರೆ, ನಂದಿ ಶಿಲ್ಪಗಳಿವೆ.

ಮಲ್ಲಿಕಾರ್ಜುನ ದೇವಾಲಯದಲ್ಲಿಯ ಕನ್ನಡ ಶಾಸನ ಅಕ್ಕಲಕೋಟೆಯ ಭೋಸಲೆ ಸಂಸ್ಥಾನಿಕರು ತೆಗೆದುಕೊಂಡು ಹೋಗಿದ್ದಾರೆ ಎಂದು ಕಲ್ಲಪ್ಪ ಈರಪ್ಪ ಕಣಗಿ ಹೇಳಿದರು.[೧೦] ಅಕ್ಕಲಕೋಟ ಅರಮನೆಯಲ್ಲಿ ಹಲವು ಕನ್ನಡ ಶಾಸನಗಳುವೆ.[೧೧] ಐಯಾಳೆ ರವಿಕೀರ್ತಿ ಶಾಸನದಂತೆ, ನಾಗಣಸೂರ ದೇವಾಲಯದ ಒಳಗೆ ಹಾಗೂ ಹೊರಗೆ ಹಲವು ಕೋಷ್ಠಕಗಳಿವೆ. ಒಳಗಿನ ಕೋಷ್ಠಕದಲ್ಲಿ ಗಣೇಶ, ಹೊರಗಿನ ಕೋಷ್ಠಕದಲ್ಲಿ ನಾಗೇಶ ಶಿಲ್ಪಗಳಿವೆ. ದೇವಾಲಯದ ಪರಿಸರದಲ್ಲಿ ಎರಡು ನಂದಿ ಶಿಲ್ಪಗಳಿವೆ. ಐತಿಹಾಸಿಕ ದೇವಾಲಯಗಳಲ್ಲಿ ನಾಗಣಸೂರಿನ ಮಲ್ಲಿಕಾರ್ಜುನ ದೇವಾಲಯವೂ ಒಂದು.

೧೦. ಭಾವೈಕ್ಯತೆಯ ದರ್ಗಾ, ಪಾನ ಮಂಗರೊಲ್

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ಅಂತರದಲ್ಲಿ ಪಾನ ಮಂಗರೊಲ್ ಗ್ರಾಮವಿದೆ. ಹಜರತ್ ಸೈಯದ್ ದಾಉದ ಜಲಾಲಬುಖಾರಿ ಖಾದರಿ ಅಥವಾ ಶೇಖಬಾಬಾ ದರ್ಗಾ ಮಂಗರೊಲ್ ಗ್ರಾಮದಲ್ಲಿದೆ. ಮಂಗರೊಲ್ ಮಸೀದಿಯ ಆವರಣದಲ್ಲಿ ದೊರೆತ ಕನ್ನಡ ಶಾಸನ ಕ್ರಿ.ಶ. ೧೨೧೮ರ ಸೇವುಣ ವಂಶದ ದೊರೆಗಳಿಗೆ ಸಂಬಂಧಿಸಿದ್ದಾಗಿದೆ. ದೊರೆಯ ಹಾಗೂ ಅವನ ಕೈಕೆಳಗಿನ ಅಧಿಕಾರಿಯ ಹೆಸರು ನಾಶವಾಗಿದೆ. ರಾಮಯ್ಯ, ಕರಜಗಿಯ ಪ್ರಭು ಮೊದಲಾದವರು ಸೇರಿ ದಾನಕಾರ್ಯದಲ್ಲಿ ಪಾಲ್ಗೊಂಡಿದ್ದನ್ನು ಈ ಶಾಸನ ಹೇಳುತ್ತದೆ. ಈ ಶಾಸನವನ್ನು ಬರೆದವನು ವಾಮಯ್ಯನೆಂಬ ಅಂಶ ತಿಳಿದುಬರುತ್ತದೆ.[೧೨] ಮಹಾರಾಷ್ಟ್ರದ ಸಾಧು–ಸಂತರ ಇತಿಹಾಸದಲ್ಲಿ ಎರಡು

ಗುರುಸಂಪ್ರದಾಯಗಳ ಪರಂಪರೆ ಕಂಡುಬರುತ್ತದೆ. ಮೊದಲನೆಯದು ನಾಥ ಸಂಪ್ರದಾಯ, ಇನ್ನೊಂದು ಮಹತ್ವ ಸಂಪ್ರದಾಯವೆಂದರೆ ಚೈತನ್ಯ ಸಂಪ್ರದಾಯ. ಕೇಶವ ಚೈತನ್ಯ, ರಾಘವ ಚೈತನ್ಯ, ಬಾಬಾ ಚೈತನ್ಯ, ಅನಂತ ಚೈತನ್ಯ ಇವರೆಲ್ಲರು ಚೈತನ್ಯ ಸಂಪ್ರದಾಯದವರು. ಈ ಸಂಪ್ರದಾಯದ ಸ್ಥಳಗಳನ್ನು ಮುಸ್ಲಿಂ ಮತ್ತು ಹಿಂದು ಸಾಧುಗಳ ಹೆಸರುಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಕೊಡಲಾಗಿದೆ. ಕಲ್ಬುರ್ಗಿ ಬಂದೇನವಾಜ–ಕೇಶವ ಚೈತನ್ಯ, ಆಲ್ದ ದಾಡ್ಲಮಷಾಕ–ರಾಘವ ಚೈತನ್ಯ, ಮಾಹಿನಾಳ ಷಹಾಬುದ್ದೀನ–ಬಾಬಾ ಚೈತನ್ಯ, ಬುರಾಹಾರಣಪುರ ಅಲ್ಲಾಹುದ್ದೀನ–ಅನಂತ ಚೈತನ್ಯ.

ಶೇಖ್ ನಾಸಿರುದ್ದೀನ್ ಚಿರಾಘ ದಿಲ್ಲಿಯ ವಿಷಯದಲ್ಲಿ ಮಸಲ್ಮಾನಿ ಇತಿಹಾಸದಿಂದ ತಿಳಿದುಬರುವ ಸಂಗತಿಗಳಿಂದ ಈತನು ೧೪ನೇ ಶತಮಾನದ ಕೊನೆಯಲ್ಲಿ ಮೊಹಮ್ಮದ್ ತೊಗಲಕನ ಕಾಲದಲ್ಲಿದ್ದವನು. ಆ ಕಾಲದಲ್ಲಿ ಇವನು ಬಲು ದೊಡ್ಡ ಪಕೀರ ಸಾಧುವೆಂದು ಮುಸಲ್ಮಾನರು ನಂಬಿದ್ದರು. ಇವನ ಶಿಷ್ಯ ಶಾಖೆಯು ಉತ್ತರ, ದಕ್ಷಿಣ ಹಿಂದೂಸ್ಥಾನದಲ್ಲೆಲ್ಲ ಹರಡಿತು.[೧೩] ಕೊಡೇಕಲ್ ಬಸವಣ್ಣ, ತಿಂಥಣಿ ಮೋನಪ್ಪಯ್ಯ, ಸಾವಳಗಿ ಶಿವಲಿಂಗ, ಶಿರಹಟ್ಟಿ ಫಕೀರೇಶ ಇವರೆಲ್ಲರು ಸೂಫಿ ಹಾಗೂ ಲಿಂಗಾಯತ ಸಂಬಂಧಗಳು ದೊರೆತಿವೆ. ಸಾವಣಗಿಯ ಶಿವಲಿಂಗನು ಮುಂದೆ ೩೬೦ ಮಠಗಳನ್ನು ಸ್ಥಾಪಿಸಿದನೆಂದು ಜಾತ್ರೆಯ ಕರಪತ್ರದಲ್ಲಿ ಉಲ್ಲೇಖವಿದೆ. ಸಾವಳಗಿ ಸುತ್ತಮುತ್ತ ಕಾಡಸಿದ್ದೇಶ್ವರ, ಭೀಮಾಶಂಕರ, ದತ್ತಾತ್ರೇಯ ಗುಡಿ–ಮಠಗಳು ತುಂಬಿಕೊಂಡಿವೆ. ಇವೆಲ್ಲ ಸಾಧು ಹಾಗೂ ಸೂಫಿ ಪರಂಪರೆಗಳ ಕೂಡಿಕೆಯ ಕುರುಹುಗಳನ್ನು ಧರಿಸಿರುವುವು ಎಂಬುದನ್ನು ನೋಡಲು ದೊರೆಯುತ್ತವೆ.[೧೪]

ಮಣ್ಣೆತ್ತಿನ ಅಮವಾಸ್ಯೆಯಂದು ಪಾನಮಂಗರೊಲ್ ಶೇಖಬಾಬಾ ದರ್ಗಾಕ್ಕೆ ನಾನು ಹೋಗಿ ಸಂದರ್ಶನ ಪಡೆದುಕೊಂಡು ಅಲ್ಲಿರುವ ಮುಸ್ಲಿಮರ ಭಾವೈಕ್ಯತೆಯ ಪ್ರಸಿದ್ಧ ತಾಣವಾಗಿರುವ ಶೇಖ್ ಬಾಬಾ ದರ್ಗಾಕ್ಕೆ ಭಕ್ತರು ದರ್ಶನಕ್ಕೆ ಧಾವಿಸಿಬರುತ್ತಾರೆ. ಪ್ರತಿ ಅಮವಾಸ್ಯೆಯಂದು ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿ ದರ್ಶನ ಪಡೆಯಲು ಬರುತ್ತಾರೆ. ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆ ತಾಲ್ಲೂಕಿನ ಹೈದ್ರಾ, ಬುರಾಣಪುರ, ಪಾನ ಮಂಗರೊಲ್ ದೇಗುಲ ಮಸೀದಿಗಳಲ್ಲಿ ಸೂಫಿ ಹಾಗೂ ಲಿಂಗಾಯತ ಸಂಬಂಧಗಳಿವೆ. ಮಾಹಿನಾಳ ಷಹಾಬುದ್ದೀನ ಬಾಬಾ ಚೈತನ್ಯ ಶಾಖೆಗೆ ಪಾನ ಮಂಗರೊಲ್ ಹಜರತ್ ಸೈಯದ್ ದಾವುದ ಉಲಾಲ–ಬುಕಾರಿ–ಖಾದರಿ ಅಥವಾ ಶೇಖಬಾಬಾ ದರ್ಗಾದ ಸಂಬಂಧವಿದೆಯೇ ? ಸಾವಳಗಿಯ ಶಿವಲಿಂಗದ ೩೬೦ ಶಾಖಾ ಮಠಗಳಲ್ಲಿ ಪಾನ ಮಂಗರೊಲ್ ಶಾಖಾಮಠ ಒಂದಾಗಿದಯೇ ? ಶೇಖ್ ನಸರುದ್ದೀನ್ ಚಿರಾಫ್ ದಿಲ್ಲಿಯ ದೊಡ್ಡ ಫಕೀರನ ಹಲವು ಶಿಷ್ಯರಲ್ಲಿ ಮಂಗರೊಲ್ ಶೇಖ್ ಬಾಬಾ ಇದ್ದಿರಬಹುದೇ ? ಮುಂತಾದ ಅಧ್ಯಯನ, ಸಂಶೋಧನೆ ಹಾಗೂ ವಿಮರ್ಶೆಗಳ ಮೂಲಕ ಉತ್ತರ ಕಂಡುಹಿಡಿಯಬೇಕಾಗಿದೆ. ಅದು ಏನೇ ಇದ್ದರೂ ನಾಥ, ಸೂಫಿ ಹಾಗೂ ಲಿಂಗಾಯತ ಪರಂಪರೆಗಳ ಕೂಡಿಕೆಯ ಕುರುಹುಗಳು ಸೊಲ್ಲಾಪುರ ಜಿಲ್ಲೆಯ ದೇಗುಲ ಮಸೀದಿಗಳಲ್ಲಿ ಕಾಣುತ್ತವೆ.

ಪಾನ ಮಂಗರೊಲ್ ಗ್ರಾಮದ ಎತ್ತರ ಜಗಲಿಯ ಮೇಲೆ ಪೂರ್ವಮುಖವಾಗಿ ಮಸೀದಿಯ ಗುಂಬಜ್ ನಿರ್ಮಿಸಲಾಗಿದೆ. ಮೊಹರಂ ಹಬ್ಬದ ಮೂರು ದಿನವಾದ

ಬಳಿಕ ಗಂಧವಾಗುತ್ತದೆ. ನಂತರ ಐದು ದಿವಸದ ಬಳಿಕ ಮೊದಲನೆಯ ದೀಪದ ಉತ್ಸವ ನಡೆಯುತ್ತದೆ. ಮೊದಲನೆಯ ದೀಪ ಮುಂಜಾನೆ ಕೋಳಿ ಸಮಾಜದಿಂದ ನಡೆದರೆ, ಸಾಯಂಕಾಲ ಪೋಲಿಸ್ ಪಾಟೀಲರಿಂದ ನಡೆಯುತ್ತದೆ. ಎರಡನೆಯ ದೀಪ ಗ್ರಾಮದ ಎಲ್ಲ ಹಿಂದೂಗಳಿಂದ ನಡೆಯುತ್ತದೆ. ನಂತರ ಮುಸ್ಲಿಮರು ಉರುಸ್ ಆಚರಿಸುತ್ತಾರೆ. ಅಕ್ಕಲಕೋಟೆಯ ತಹಶೀಲ್ದಾರರಿಂದ ದೀಪಕ್ಕೆ ಎಣ್ಣೆಹಾಕಿ ಉರುಸ್ ಪ್ರಾರಂಭಿಸುತ್ತಾರೆಂದು ಸೈಪನ್ ಜೈನುದ್ದಿನ್ ಮುಜಾವರ ಅವರು ಹೇಳಿದರು.[೧೫] ಶೇಖ್ ಬಾಬಾ ದರ್ಗಾಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂಗಳು ಪೂಜೆ ಸಲ್ಲಿಸುತ್ತಾರೆ. ದರ್ಗಾದ ಪೂಜೆ-ಪುನಸ್ಕಾರ ಮೌಲ್ವಿಗಳು ಮಾಡುತ್ತಾರೆ. ದರ್ಗಾದಲ್ಲಿ ಒಂದು ನಿಗೂಢವಾದ ವಿಷಯವಿದೆ. ದರ್ಗಾದ ಎರಡು ಬದಿಯಲ್ಲಿ ಭವ್ಯವಾದ ಎರಡು ಮಿನಾರುಗಳಿವೆ. ಮಿನಾರುಗಳನ್ನು ಕೈಯಿಂದ ಅಲುಗಾಡಿಸಿದರೆ ತಳಪಾಯದಿಂದ ಮಿನಾರುಗಳು ಅಲುಗಾಡುತ್ತವೆ. ಉರುಸ್ ಉತ್ಸವದ ದಿನ ಕನ್ನಡ ಗೀಗಿ ಪದಗಳನ್ನು ಹಾಡುತ್ತಾರೆ. ಹಿಂದು-ಮುಸ್ಲಿಮರ ಭಾವೈಕ್ಯತೆಯ ಪ್ರಸಿದ್ಧ ತಾಣಗಳಲ್ಲಿ ಪಾನ ಮಂಗರೊಲ್ ಶೇಖಬಾಬಾ ದರ್ಗಾ ಒಂದಾಗಿದೆ.

೧೧. ಮಲ್ಲಿಕಾರ್ಜುನ ದೇವಾಲಯ, ಪಾನ ದುಧನಿ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೨೭ ಕಿ.ಮೀ. ಅಂತರದಲ್ಲಿ ಪಾನ ದುಧನಿ ನಗರವಿದೆ. ಐತಿಹಾಸಿಕ ಮಲ್ಲಿಕಾರ್ಜುನ ದೇವಾಲಯ ಉತ್ತರ ಮುಖವಾಗಿದೆ. ನೆಲಸಮವಾದ ದೇವಾಲಯದ ಭಗ್ನಾವಶೇಷಗಳು ನಗರದ ಹಲವೆಡೆಗಳಲ್ಲಿ ರಾರಾಜಿಸುತ್ತವೆ. ಸಂಪೂರ್ಣ ದೇವಾಲಯ ನವೀಕರಣಗೊಳಿಸಲಾಗಿದೆ. ಇದರ ಹತ್ತಿರ ಪ್ರಸಿದ್ಧ ಶ್ರೀ ಶಾಂತಲಿಂಗೇಶ್ವರ ವಿರಕ್ತ ಮಠವಿದೆ. ಇದರ ಮುಂದೆ ಮಾರುತಿ ದೇವಾಲಯವಿದೆ. ಮಾರುತಿ ದೇಗುಲದೊಳಗೆ ಶಿವಲಿಂಗ, ನಾಗೇಶ ಹಾಗೂ ವೀರಗಲ್ಲುಗಳಿವೆ.

೧೨. ಮಹಾದೇವ ದೇವಾಲಯ, ಬಸವನ ಸಂಗೊಳಗಿ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ಅಂತರದಲ್ಲಿ ಬಸವನ ಸಂಗೊಳಗಿ ಗ್ರಾಮವಿದೆ. ಮಹಾದೇವ ದೇವಾಲಯ ಪೂರ್ವಮುಖವಾಗಿದೆ. ಗರ್ಭಗೃಹ ನೆಲಸಮವಾದ ಸಭಾಮಂಟಪವಿದೆ. ಪ್ರಾಚೀನ ದೇಗುಲ ಗರ್ಭಗೃಹದ ಶಿವಲಿಂಗದ ಕೆಳಗೆ ಬೆಳ್ಳಿ-ಬಂಗಾರ ಮುಂತಾದ ನಿಧಿಯನ್ನಿಡಲಾಗಿದೆ ಎಂದು ಗಾಳಿಸುದ್ದಿ ಹರಡಿತು. ಕೆಲ ಅವಿವೇಕಿಗಳ ಗುಂಪು ದಿನಾಂಕ ೦೮-೦೫-೨೦೦೩ರಂದು ದೇವಾಲಯಕ್ಕೆ ಮಧ್ಯರಾತ್ರಿ ಆಗಮಿಸಿ, ಶಿವಲಿಂಗವನ್ನು ಒಡೆದು, ಅದರ ಕೆಳಗಿರುವ ನಿಧಿಯನ್ನು ಅಪಹರಿಸಿದರೆಂದು ಹೇಳಿದರು. ಇಂದು ದೇವಾಲಯ ಶಿಥಿಲಾವಸ್ಥೆಯಲ್ಲಿದೆ.

೧೩. ಮಾಣಿಕೇಶ್ವರ ದೇವಾಲಯ, ಬಾಗೇಹಳ್ಳಿ

ಅಕ್ಕಲಕೋಟದಿಂದ ೪ ಕಿ.ಮೀ ಅಂತರದಲ್ಲಿ ಬಾಗೇಹಳ್ಳಿ ಎಂಬ ಚಿಕ್ಕ ಗ್ರಾಮವಿದೆ. ಬಾಗೇಹಳ್ಳಿ ಹನುಮಾನ ದೇವಾಲಯದಲ್ಲಿ ಕನ್ನಡ ಶಾಸನವಿದೆ. ಬಾಗೇಹಳ್ಳಿ ಶಾಸನದಲ್ಲಿ ಬಾದಾಮಿಯ ಸಂಗೆಯ ಸಹಣಿಯರು ಅಂಕುಲಗೆ ಕೋಟೆ ಬಳಿಯ ಬಾವುಗೆ ಹಳ್ಳಿಯಲ್ಲಿ ಶ್ರೀ ಮಾಣಿಕೇಶ್ವರ ದೇವರಿಗೆ ದಾನ ನೀಡಿದ ವಿವರವಿಲ್ಲಿ ಬಂದಿದೆ. ಸಂಗಣನ

ಅಧಿಕಾರಿಗಳಾದ ಮಹಾಮಂಡಳೇಶ್ವರ ಕುಪ್ಪದೇವರಸ ಮೊದಲಾದವರ ಹೆಸರು ದಾಖಲಾಗಿದ್ದು, ಇವರೆಲ್ಲ ದಾನಕಾರ್ಯದಲ್ಲಿ ಪಾಲ್ಗೊಂಡಿದ್ದರೆಂದು ತಿಳಿಯುತ್ತದೆ.[೧೬] ಐತಿಹಾಸಿಕ ಮಾಣಿಕೇಶ್ವರ ದೇವಾಲಯ ನೆಲಸಮವಾಗಿದೆ ಎಂದು ಚನ್ನಯ್ಯ ಮಠಸರ ಅವರು ಹೇಳಿದರು.[೧೭] ದೇವಾಲಯದ ಆವರಣದಲ್ಲಿ ಶಿಲಾಶಾಸನ, ವೀರಗಲ್ಲು, ಹಲವು ದೇವರ ಭಗ್ನಾವಶೇಷಗಳಿವೆ. ಈ ದೇಗುಲಕ್ಕೆ ಬಾಗೇಹಳ್ಳಿ ಭಕ್ತರು ಮಹಾದೇವನೆಂದು ಕರೆಯುತ್ತಾರೆ. ಸಂಪೂರ್ಣವಾಗಿ ದೇವಾಲಯ ಜೀರ್ಣೋದ್ಧಾರ ಮಾಡಲಾಗಿದೆ.

೧೪. ಸಿದ್ದಪ್ಪಯ್ಯ ದೇಗುಲ–ಮಸೀದಿ, ಬುರಹಾಣಪುರ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ಅಂತರದಲ್ಲಿ ಬುರಹಾಣಪುರ ಗ್ರಾಮವಿದೆ. ಸಿದ್ದಪ್ಪಯ್ಯನ ದೇಗುಲ–ಮಸೀದಿ ಐತಿಹಾಸಿಕ ಹಿಂದು–ಮುಸ್ಲಿಮರ ಭಾವೈಕ್ಯತೆಯ ಪ್ರಸಿದ್ಧ ತಾಣವಾಗಿದೆ. ಕಳೆದ ೬೦ ವರ್ಷಗಳಿಂದ ದೇಗುಲ–ಮಸೀದಿ ದಾಖಲೆಗಳೆಲ್ಲವೂ ಮಹಾರಾಷ್ಟ್ರ ಸರಕಾರದ ವಶದಲ್ಲಿದೆ. ಮಹಾರಾಷ್ಟ್ರ ಸಾಧು ಸಂತರ ಇತಿಹಾಸದಲ್ಲಿ ಎರಡು ಗುರುಸಂಪ್ರದಾಯಗಳ ಪರಂಪರೆಯು ಕಂಡುಬರುತ್ತದೆ. ಮೊದಲನೆಯದು ನಾಥ ಸಂಪ್ರದಾಯ, ಅಂದರೆ ಮತ್ಸ್ಯೇಂದ್ರನಾಥ, ಗೋರಖನಾಥರಿಂದ ಬಂದದ್ದು. ಈ ಸಂಪ್ರದಾಯಗಳಲ್ಲಿ ಜ್ಞಾನೇಶ್ವರ ಮುಂತಾದವರು ಉದಯಿಸಿದರು. ಇನ್ನೊಂದು ಮಹತ್ವದ ಸಂಪ್ರದಾಯವೆಂದರೆ ಚೈತನ್ಯ ಸಂಪ್ರದಾಯ. ಮಹಾರಾಷ್ಟ್ರದ ಸಾಧು–ಸಂತರುಗಳಲ್ಲಿ ಕೇಶವ ಚೈತನ್ಯ, ರಾಘವ ಚೈತನ್ಯ, ಬಾಬಾ ಚೈತನ್ಯ, ಅನಂತ ಚೈತನ್ಯ ಎಂದು ನಾಲ್ವರ ಪ್ರಾಚೀನ ಹೆಸರುಗಳನ್ನು ಉಲ್ಲೇಖಿಸಲಾಗುತ್ತದೆ.

ಅಕ್ಕಲಕೋಟೆ ಸಂಸ್ಥಾನದಲ್ಲಿ ಬುರಹಾಣಪೂರ ಎಂಬ ಊರು. ಅದು ಸಿದ್ದಪ್ಪಯ್ಯ ಷೇಖ ಅಲ್ಲಾವುದ್ದೀನನ ದರ್ಗಾ ಎಂದು ನಡೆದುಕೊಂಡರೆ, ಹಿಂದೂಗಳು ಸಿದ್ದಪ್ಪಯ್ಯನ ಸಮಾಧಿ ಅಥವಾ ಚೈತನ್ಯನ ಸ್ಥಳವೆಂದು ನಡೆದುಕೊಳ್ಳುವರು. ಈ ಗೋರಿಯ ಒಂದು ಕಡೆ ಮುಸ್ಲಿಮರು ಮತ್ತೊಂದು ಕಡೆ ಹಿಂದೂಗಳು ನಡೆದುಕೊಳ್ಳುವ ರೂಢಿಯಿದೆ.[೧೮]

ಸಿದ್ದಪ್ಪಯ್ಯನ ದೇಗುಲ–ಮಸೀದಿ ಮಹಾದ್ವಾರ ಪೂರ್ವಮುಖವಾಗಿದೆ. ಉತ್ತರ, ದಕ್ಷಿಣ ಮುಖವಾಗಿ ಚಿಕ್ಕದ್ವಾರಗಳಿವೆ. ಗರ್ಭಗೃಹದ ಪೂರ್ವದ ದ್ವಾರಬಾಗಿಲಿಗೆ ಹಿಂದುಗಳು ಪೂಜೆ ಮಾಡುತ್ತಾರೆ. ದಕ್ಷಿಣದ ದ್ವಾರಬಾಗಿಲಿಗೆ ಮುಸ್ಲಿಮರು ಪೂಜೆ ಮಾಡುತ್ತಾರೆ.

ಅಕ್ಕಲಕೋಟೆ ತಹಶೀಲ್ದಾರ್ ಕಛೇರಿಯ ದಾಖಲೆಯಂತೆ ಶ್ರೀ ಅನಂತ ಚೈತನ್ಯ ಸಿದ್ದಪ್ಪಯ್ಯ ಹೆಸರಿನ ೧೭೦೦ ಎಕರೆ ಭೂಮಿ ಇದೆ. ಬುರಹಾಣಪುರ ಗ್ರಾಮದ ಎಲ್ಲ ಜನರು ಈ ಜಮೀನು ಉಪಯೋಗಿಸುತ್ತಾರೆ. ಹಿಂದು–ಮುಸ್ಲಿಮರ ಭಾವೈಕ್ಯತೆಯ ದೇಗುಲ–ಮಸೀದಿ ವಿಷಯ ಸರ್ವೋಚ್ಚ ನ್ಯಾಯಾಲಯದಲ್ಲಿದೆ.

ಅಕ್ಕಲಕೋಟೆ ತಾಲ್ಲೂಕಿನ ನನ್ನೆಗಾಂವ ಗ್ರಾಮದ ಭಕ್ತರು ಅಕ್ಷಯ ತೃತೀಯ ಚೈತ್ರ ಶುದ್ಧ ತೃತೀಯ ದಿವಸ ಎಣ್ಣೆ ಸಂಗ್ರಹಿಸಿ ಸಿದ್ದಪ್ಪಯ್ಯನ ದೀಪೋತ್ಸವ ಪ್ರಾರಂಭವಾಗುತ್ತದೆ. ಸಂಪೂರ್ಣ ವೈಶಾಖ ತಿಂಗಳ ಬುರಹಾಣಪುರ ಕುರುಬರು ಪೂಜೆ ಸಲ್ಲಿಸುತ್ತಾರೆ. ಆಳಂದ ತಾಲ್ಲೂಕಿನ ಖಜೂರಗಿ ಗ್ರಾಮದಿಂದ ಪಲ್ಲಕ್ಕಿ, ಯಳಸಂಗಿ

ಗ್ರಾಮದಿಂದ ನಂದೀಧ್ವಜ ವೈಶಾಖ ವೈದ್ಯ ತೃತೀಯಾ ದಿವಸ ಆಗಮಿಸಿ, ಚತುರ್ಥಿ ಪೂಜೆ, ಗಂಧಲೇಪನ, ಪಂಚಮಿ ಪಲ್ಲಕ್ಕಿ ಉತ್ಸವ ಆಚರಿಸುತ್ತಾರೆ. ಬುರಹಾಣಪೂರ ಸಿದ್ಧಪ್ಪಯ್ಯನ ಜಾತ್ರೆ ಹಿಂದು-ಮುಸ್ಲಿಮರು ಭಾವೈಕ್ಯತೆಯಿಂದ ವೈಭವದಿಂದ ಆಚರಿಸುತ್ತಾರೆ ಎಂದು ಸಂಗಯ್ಯ ನಾಗಯ್ಯ ಹಿರೇಮಠ ಅವರು ಹೇಳಿದರು.

೧೫. ಮಹಾಲಕ್ಷ್ಮಿ ದೇವಾಲಯ, ಬೂರಿ ಉಬರರ್ಗಿ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ಅಂತರದಲ್ಲಿ ಮಿರಜಗಿ ಪಾಟಾ ದೊರೆಯುತ್ತದೆ. ಮಿರಜಗಿ ಪಾಟಾದಿಂದ ಸಲಗರದ ರಸ್ತೆಯ ಹತ್ತಿರ ಬೂರಿ ಉಬರರ್ಗಿ ಅಕ್ಕ ಮಹಾಲಕ್ಷ್ಮಿ ದೇವಾಲಯವಿದೆ. ಅಕ್ಕಲಕೋಟೆ ತಾಲ್ಲೂಕಿನ ಕೊನ್ನಳ್ಳಿ, ಗೌಡಗಾಂವ, ಬೂರಿ ಉಬರರ್ಗಿ ಗ್ರಾಮಗಳಲ್ಲಿ ಐತಿಹಾಸಿಕ ಮಹಾಲಕ್ಷ್ಮಿ ದೇವಾಲಯಗಳಿವೆ. ಅಂದು ಅಕ್ಕಲಕೋಟೆಯ ಹಲವು ಪ್ರದೇಶ ಶಿಲಾಹಾರರು ಆಳ್ವಿಕೆ ಮಾಡಿದರು. ಶಿಲಾಹಾರರು ಸುವರ್ಣ ಗರುಡಧ್ವಜರು, ಶ್ರೀಮನ್ ಮಹಾಲಕ್ಷ್ಮಿಲಬ್ಧ ವರಪ್ರಸಾದರೆಂಬ ಬಿರುದಾಂಕಿತರು, ಮಹಾಲಕ್ಷ್ಮಿ ಅವರ ಕುಲದೇವತೆ.[೧೯] ಮಹಾಲಕ್ಷ್ಮಿ ಗೌಡಗಾಂವ, ತಂಗಿ ಮಹಾಲಕ್ಷ್ಮಿ ಬೂರಿ ಉಗರರ್ಗಿ, ಅಕ್ಕ ಮಹಾಲಕ್ಷ್ಮಿ ಬೂರಿ ಉಗರರ್ಗಿ ಈ ಮಹಾಲಕ್ಷ್ಮಿಯರು ಅಕ್ಕಲಕೋಟೆ ಶಿಲಾಹಾರರ ಕುಲದೇವತೆ. ಕೊಲ್ಲಾಪುರದ ಮಹಾಲಕ್ಷ್ಮಿ ಕೊಲ್ಲಾಪುರದ ಶಿಲಾಹಾರರ ಕುಲದೇವತೆ.[೨೦]

ಮಿರಜಗಿ-ಸಲಗರ ರಸ್ತೆಯ ಹತ್ತಿರವಿರುವ ಪರಿಟ ಬಾಂದವರ ಹೊಲದಲ್ಲಿ ನಿಧಿ ತೆಗೆಯಲು ಮಧ್ಯಾರಾತ್ರಿಯಲ್ಲಿ ಕೆಲವರು ಧಾವಿಸಿ, ಪೊಲೀಸರಿಂದ ಬಂಧನಗೊಂಡು ಬಿಡುಗಡೆಯಾದರು. "ಸೊಲ್ಲಾಪುರ ಕನ್ನಡ ಸಂಶೋಧನೆ" ಕೃತಿ ಪ್ರಕಟಿಸುವ ಅಂತಿಮ ಘಟ್ಟದಲ್ಲಿ ಇರುವಾಗ ಪ್ರಕಾಶ ಇಸಾಪುರೆ, ಮಲ್ಲಿನಾಥ ವಚ್ಚೆ ಅವರು ದಿನಾಂಕ ೧೬-೦೮-೨೦೧೧ರಂದು ನಾವೆಲ್ಲರೂ ನಿಧಿ ಇರುವ ಪರಿಟ ಬಾಂಧವರ ಹೊಲಕ್ಕೆ ಹೋದೆವು. ಅಲ್ಲಿ ಕನ್ನಡ ಶಾಸನ ಅನಾಥವಾಗಿ ಬಿದ್ದಿತ್ತು. ಶಾಸನದ ಹತ್ತಿರ ಅಕ್ಕ ಮಹಾಲಕ್ಷ್ಮಿ ದೇವಾಲಯವಿದೆ. ಮಹಾಲಕ್ಷ್ಮಿಯ ದರ್ಶನ ಪಡೆಯುವಷ್ಟರಲ್ಲಿ ದನ ಕಾಯುವ ಹುಡುಗರೆಲ್ಲರು ಆಗಮಿಸಿ ಆ ಕಲ್ಲಿನ ಮೇಲೆ ಏನು ಬರೆಯಲಾಗಿದೆ ? ಎಂದು ಕೇಳಿದರು. ಇದು ಮಹಾಲಕ್ಷ್ಮಿ ದೇವತೆಯ ಕಲ್ಲು ಎಂದು ಉತ್ತರಿಸಿದೆ. ಬಳಿಕ ಇಂಥ ಕಲ್ಲುಗಳು ಎಷ್ಟಿವೆ ? ಎಂದು ಪ್ರಶ್ನಿಸಿದೆ. ಇಂಥ ಹಲವು ಕಲ್ಲುಗಳಿವೆ ಎಂದು ದನಕಾಯುವ ಹುಡುಗರು ಹೇಳಿದರು. ಅಕ್ಕ ಮಹಾಲಕ್ಷ್ಮಿ ದೇವಾಲಯದ ಪರಿಸರದಲ್ಲಿ ನಾಲ್ಕು-ಐದು ಕನ್ನಡ ಶಾಸನಗಳಿವೆ. ಜನರಿಗೆ ಶಾಸನಗಳ ಪ್ರಜ್ಞೆಯ ಕೊರತೆಯಿಂದ ಇತಿಹಾಸದ ಗತವೈಭವ ಹೇಳುವ ಶಾಸನಗಳು ನಾಶವಾಗುತ್ತಿವೆ. ಈ ಭಾಗದ ಕನ್ನಡ ಶಾಸನಗಳ ಅಧ್ಯಯನ, ಸಂಶೋಧನೆ ನಡೆಯಬೇಕಾಗಿದೆ.

೧೬. ಕಾಶಿವಿಶ್ವೇಶ್ವರ ದೇವಾಲಯ, ಬೂರೊಟಿ

ಅಕ್ಕಲಕೋಟೆ ತಾಲ್ಲೂಕಿನ ಬೂರೊಟಿ (ಖು) ಕಾಶಿವಿಶ್ವೇಶ್ವರ ಐತಿಹಾಸಿಕ ದೇವಾಲಯ ನೆಲಸಮವಾಗಿದೆ. ಗರ್ಭಗೃಹ, ಅಂತರಾಳ, ಮಹಾದ್ವಾರಗಳಿಂದ ಕೂಡಿದೆ. ಪೂರ್ವಮುಖವಾದ ಐತಿಹಾಸಿಕ ಮಹಾದ್ವಾರ ಮಾತ್ರ ಇದೆ. ಮಹಾದ್ವಾರದ ಲಲಾಟ ಬಿಂಬದಲ್ಲಿ ಗಣೇಶ, ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ಗರ್ಭಗೃಹದಲ್ಲಿ ಪೂರ್ವ

ಮುಖವಾದ ಶಿವಲಿಂಗ, ಅಂತರಾಳದಲ್ಲಿ ಉತ್ತರ ಮುಖವಾದ ಶಿವಲಿಂಗವಿದೆ. ಆವರಣದಲ್ಲಿ ಪ್ರಾಚೀನ ಕಾಲದ ಗಣೇಶ, ನಾಗೇಶ ಹಲವು ದೇವರ ಭಗ್ನಾವಶೇಷಗಳಿವೆ.

೧೭. ಮಹಾದೇವ ದೇವಾಲಯ, ಮೈಂದರ್ಗಿ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ಅಂತರದಲ್ಲಿ ಮೈಂದರ್ಗಿ ನಗರವಿದೆ. ಮೈಂದರ್ಗಿಯ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ಗರ್ಭಗೃಹ, ಶಿಖರ, ಸಭಾಮಂಟಪ ಹಾಗೂ ಪ್ರದಕ್ಷಿಣಾಪಥವಿದೆ. ಗರ್ಭಗೃಹದೊಳಗೆ ಎರಡು ಶಿವಲಿಂಗಗಳಿವೆ. ಗರ್ಭಗೃಹದ ಮಧ್ಯಭಾಗದಲ್ಲಿ ಒಂದು ಶಿವಲಿಂಗ, ವಾಯುವ್ಯದಲ್ಲಿ ಇನ್ನೊಂದು ಶಿವಲಿಂಗವಿದೆ. ಶಿವಲಿಂಗದ ಮುಂದೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ದ್ವಾರಬಾಗಿಲು ಎಡಬದಿಯಲ್ಲಿ ವೀರಗಲ್ಲು ಇದೆ. ರಜಾಕರ ಹಾವಳಿಯ ಸಂದರ್ಭದಲ್ಲಿ ಹಲವು ಹೋರಾಟಗಾರರು ಈ ದೇಗುಲದಲ್ಲಿ ಭೂಗತರಾಗಿ ಉಳಿದುಕೊಂಡರು.

ಮೈಂದರ್ಗಿಯ ಮಹಾದೇವ ದೇವಾಲಯ ಒಂದು ಕಾಲದಲ್ಲಿ ಭೂಗರ್ಭದಲ್ಲಿ ಭೂಗತವಾಗಿತ್ತು. ಶರಣ ದಾನಪ್ಪ ಗೊಬ್ಬುರ ಅವರು ಭೂಮಿ ಅಗೆದು ದೇವಾಲಯ ಹೊರಗೆ ತೆಗೆದರು.[21] ಮೈಂದರ್ಗಿಯ ಜನರು ಕಳ್ಳಿ ಮಹಾದೇವ ಎಂದು ಕರೆಯುತ್ತಾರೆ.[22] ಗ್ರಾಮದೇವರಾದ ಮಹಾದೇವ ದೇವಾಲಯದೊಳಗೆ ಕನ್ನಡ ಶಾಸನಗಳಿದ್ದವು ಎಂದು ಪ್ರತ್ಯಕ್ಷದರ್ಶಿಗಳಾದ ಸೋಮಶೇಖರ ಸಾಲಿಮಠ ಅವರು ಹೇಳಿದರು.[23] ದೇಗುಲದಲ್ಲಿ ಕನ್ನಡ ಶಾಸನ ಲಭ್ಯವಾಗಲಿಲ್ಲ. ಜನರಿಗೆ ಶಾಸನಗಳ ಪ್ರಜ್ಞೆಯ ಕೊರತೆಯಿಂದ ಅನೇಕ ಐತಿಹಾಸಿಕ ಶಾಸನಗಳು ನಾಶವಾಗಿವೆ. ದೇವಾಲಯದ ಭೂತಗವಾದ ಇನ್ನೊಂದು ದೇವಾಲಯವಿದೆ ಎಂದು ಚನ್ನಮಲ್ಲಪ್ಪ ಗೊಬ್ಬುರ ಅವರು ಹೇಳಿದರು.[24] ಪ್ರತಿ ವರ್ಷದ ಶ್ರಾವಣಮಾಸದ ಅಂತಿಮ ಅಮಾವಾಸ್ಯೆಯಂದು ಹಟಗಾರ ಜನರು, ಉತ್ತರಿ ಮಳೆಯಾದ ಮೊದಲನೆಯ ಸೋಮವಾರ ಲಿಂಗಾಯತರು ಮಹಾದೇವನ ಜಾತ್ರೆ ಮಾಡುತ್ತಾರೆ. ಐತಿಹಾಸಿಕ ದೇವಾಲಯಗಳಲ್ಲಿ ಮೈಂದರ್ಗಿ ಮಹಾದೇವ ದೇವಾಲಯ ಒಂದಾಗಿದೆ.

೧೮. ಮಿಟ್ಟೇಶ್ವರ ದೇವಾಲಯ, ಶಿರವಳ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ಅಂತರದಲ್ಲಿ ಶಿರವಳ ಗ್ರಾಮವಿದೆ. ಸೊಲ್ಲಾಪುರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ "ಮಿಟ್ಟೇಶ್ವರ ಸಿರಿವೊಳಲ"ವೆಂದು ಉಲ್ಲೇಖವಿದೆ.[25] ಶಿರವಳ ಮಿಟ್ಟೇಶ್ವರ ದೇವಾಲಯ ನೆಲಸಮವಾಗಿದೆ. ಶಿವಲಿಂಗ, ಲಕ್ಷ್ಮಿ, ಮೂರು ವೀರಗಲ್ಲುಗಳು, ಮಿಟ್ಟೇಶ್ವರ ದೇವಾಲಯದ ಹಲವು ಭಗ್ನಾವಶೇಷಗಳಿವೆ. ಪಶ್ಚಿಮ ಮುಖ ಹನುಮಾನ ದೇವಾಲಯದಲ್ಲಿ ಭಗ್ನಾವಶೇಷಗಳಿವೆ. ಜನರಲ್ಲಿ ಐತಿಹಾಸಿಕ ಪ್ರಜ್ಞೆಯ ಕೊರತೆಯಿಂದ ಇಂಥ ಅನೇಕ ಸ್ಮಾರಕಗಳು ನಾಶವಾಗುತ್ತ ಮಾಯವಾಗುತ್ತಿವೆ.

೧೯. ಮಲ್ಲಿಕಾರ್ಜುನ ದೇವಾಲಯ, ಸಾತನ ದುಧನಿ

ಅಕ್ಕಲಕೋಟೆ ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ಅಂತರದಲ್ಲಿ ಸಾತನ ದುಧನಿ ಎಂಬ ಚಿಕ್ಕ ಗ್ರಾಮವಿದೆ. ಮಣ್ಣಿನ ದಿಬ್ಬದ ಮೇಲೆ ಶಿಥಿಲಾವಸ್ಥೆಯ ಮಲ್ಲಿಕಾರ್ಜುನ ದೇವಾಲಯವಿದೆ. ಸಾತನ ದುಧನಿ ಕನ್ನಡ ಶಾಸನ ಅಕ್ಕಲಕೋಟೆಯ ಹಳೆ ಅರಮನೆಯ

ಆವರಣದಲ್ಲಿದೆ. ಶಾಸನಗಳಲ್ಲಿ ಗ್ರಾಮವನ್ನು ಸಾಮಂತನ ದುಧನಿ ಎಂದು ಕರೆದು ಕ್ರಿ.ಶ. ೧೨೦೪ರಲ್ಲಿ ಸಿಂಗಣದೇವನ ಅಧಿಕಾರಿ ಮಹಾಪ್ರಧಾನ ಮಗರ ಮುರಾರಿ ಸಂಗಮದೇವ, ಈತನ ಭಾವ ಸೋಯಿದೇವನಾಯಕ, ಹಿರಿಯಕ್ಕಪ್ಪರಸ, ಇಂದಯರ ನಾಯಕ, ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ ಉಲ್ಲೇಖವಿದೆ.[೨೬]

ಸಾತನ ದುಧನಿಯ ಮಲ್ಲಿಕಾರ್ಜುನ ದೇವಾಲಯ ಪೂರ್ವಮುಖವಾಗಿದೆ. ದೇವಾಲಯ ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ. ದ್ವಿಕೂಟ ಹೊಂದಿರುವ ದೇವಾಲಯದ ಗರ್ಭಗೃಹದಲ್ಲಿ ಭವ್ಯವಾದ ಶಿವಲಿಂಗವಿದೆ. ಗರ್ಭಗೃಹದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಗದೆ ಹಿಡಿದಿರುವ ದ್ವಾರಪಾಲಕರು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ, ಸುತ್ತಲೂ ಪದ್ಮಜಾಲಂದ್ರಗಳಿವೆ. ಸಭಾಮಂಟಪದಲ್ಲಿ ಹಲವು ಕೋಷ್ಠಗಳಿವೆ ಯಾದರೂ ಅದರಲ್ಲಿ ಶಿಲ್ಪಗಳಿಲ್ಲ. ದೇವಾಲಯದ ಬಲಭಾಗದ ಗೋಡೆ ನೆಲಸಮವಾಗಿದೆ. ಸಾಲು ಸಾಲಾಗಿ ನಿಂತಿರುವ ಗಜ, ನಂದಿ, ಗಣಪತಿ ಮತ್ತಿತರ ಭಗ್ನಾವಶೇಷಗಳಿವೆ. ದೇವಾಲಯ ಚಾಲುಕ್ಯ ಶೈಲಿಯಿಂದ ನಿರ್ಮಿಸಲಾಗಿದೆ. ದೇವಾಲಯದ ಮೇಲೆ ಬೇವಿನ ಮರ ಬೆಳೆದಿದೆ. ಭಾರತ ಸರಕಾರದ ಪುರಾತತ್ವ ಇಲಾಖೆ ಇಂಥ ಐತಿಹಾಸಿಕ ದೇವಾಲಯಗಳ ರಕ್ಷಣೆ ಮಾಡಲು ಮುಂದಾಗಬೇಕಿದೆ.

೨೦. ಬೊಮ್ಮಲಿಂಗೇಶ್ವರ ದೇವಾಲಯ, ಹಂಜಗಿ

ಅಕ್ಕಲಕೋಟೆ ತಾಲ್ಲೂಕಿನಿಂದ ೧೨ ಕಿ.ಮೀ. ಅಂತರದಲ್ಲಿ ಹಂಜಗಿ ದೇವಾಲಯವಿದೆ.[೨೭] ಗರ್ಭಗೃಹ ಪೂರ್ವ ಮುಖವಾಗಿದೆ. ಐತಿಹಾಸಿಕ ಗರ್ಭಗೃಹ ಮಾತ್ರ ಉಳಿದುಕೊಂಡಿದೆ. ಐತಿಹಾಸಿಕ ಸಭಾಮಂಟಪ ನೆಲಸಮವಾಗಿದೆ. ಗರ್ಭಗೃಹದೊಳಗೆ ಶಿವಲಿಂಗ, ಮುಂದೆ ನಂದಿ, ಗರ್ಭಗೃಹದ ದ್ವಾರಬಾಗಿಲು ಬಲಬದಿಯಲ್ಲಿ ಶಿವಲಿಂಗವಿದೆ. ಭವ್ಯವಾದ ಸಭಾಮಂಟಪ, ಶಿಖರ ನವೀಕರಿಸಲಾಗಿದೆ. ಎಡಬದಿಯಲ್ಲಿ ಭವ್ಯವಾದ ಬಾವಿ ಇದೆ. ಮುಂದೆ ದೀಪಸ್ತಂಭವಿದೆ, ದೇಗುಲದ ಪರಿಸರದಲ್ಲಿ ವೀರಗಲ್ಲು, ಹಲವು ಅವಶೇಷಗಳಿವೆ. ಆಳಂದದಲ್ಲಿಯ ಜಾನಿ ಪಟೇಲರ ಕುಟುಂಬದವರ ವಶದಲ್ಲಿ ಬಮ್ಮಲಿಂಗ ಪುರಾಣ ಬರೆದಿರುವ ತಾಮ್ರಪಟಗಳಿವೆ. ಶರಣ ಬೊಮ್ಮಲಿಂಗನನ್ನು ಕುರಿತಂತೆ ಭಾಮಿನಿ ಷಟ್ಪದಿಯಲ್ಲಿರುವ "ಬೊಮ್ಮಲಿಂಗದೇವರ ಕಾವ್ಯ' ಗ್ರಂಥದ ಎರಡು ಕಾಗದ ಪ್ರತಿಗಳು ಲಭಿಸಿದ್ದು. ಸುಮಾರು ೧೦೦ ವರ್ಷಗಳ ಹಿಂದೆ ಜೀವಿಸಿದ್ದ ತಳೇವಾಡದ ರೇವಣಯ್ಯ ಸ್ವಾಮಿ ವಿರಚಿತ "ಬೊಮ್ಮಲಿಂಗ ಪುರಾಣ"ವು ಲಭಿಸಿದೆ.[೨೮] ಹಂಜಗಿ ಬೊಮ್ಮಲಿಂಗೇಶ್ವರ ಐತಿಹಾಸಿಕ ದೇವಾಲಯಗಳಲ್ಲಿ ಒಂದಾಗಿದೆ.

೨೧. ಬಸವೇಶ್ವರ ದೇವಾಲಯ, ಹಂದ್ರಾಳ

ಅಕ್ಕಲಕೋಟೆ ತಾಲ್ಲೂಕಿನ ಹಂದ್ರಾಳ ಗ್ರಾಮದ ಬಸವೇಶ್ವರ ದೇವಾಲಯವಿದೆ. ಹಂದ್ರಾಳ ಗ್ರಾಮದ ಹೆಸರು ಶಾಸನಗಳಲ್ಲಿ ಹಂದಕ್ಕಾಡಿಯೆಂದು ಉಲ್ಲೇಖವಾಗಿದೆ. ಮಹಾಮಂಡಳೇಶ್ವರ, ಜೋಗಮರಸ ಹಾಗೂ ಶಿಲಾಹಾರ ವಂಶದ ಮಹಾಮಂಡಳೇಶ್ವರ ಕವಿಲಾಸರಸ ಮತ್ತು ಹಂದೆಕ್ಕಾಡಿಯ ಪ್ರಭು ಚಂದ್ರಾದಿತ್ಯ ಮತ್ತು ಅವನ ಮಗ ಮಲ್ಲರಸ ಮೊದಲಾದವರು ಸೇರಿ ಹಂದಕ್ಕಾಡಿಯ ಚಂದ್ರೇಶ್ವರ ದೇವರಿಗೆ ದಾನ

ನೀಡಿದ ವಿವರ ಉಲ್ಲೇಖವಾಗಿದೆ.[೨೯] ಇಂದಿನ ಹಂದ್ರಾಳ ಗ್ರಾಮದಲ್ಲಿ ಚಂದ್ರೇಶ್ವರ ದೇವರ ದೇವಾಲಯ ನೆಲಸಮವಾಗಿದೆ.

ಹಂದ್ರಾಳ ಗ್ರಾಮದ ಜನರು ನೆಲಸಮವಾದ ಚಂದ್ರೇಶ್ವರ ದೇವಾಲಯದಲ್ಲಿಯೇ ಬಸವೇಶ್ವರ ದೇವಾಲಯ ನಿರ್ಮಿಸಿರಬಹುದು. ಬಸವೇಶ್ವರ ದೇವಾಲಯ ಪೂರ್ವ ಮುಖವಾಗಿದೆ. ದೇವಾಲಯದ ಹತ್ತಿರ ರಾಜಮಹಾರಾಜರು ದಾನ ನೀಡಿದ ೫ ಎಕರೆ ಭೂಮಿ ಇದೆ. ಬಸವೇಶ್ವರ ದೇವಾಲಯದ ಪೂಜಾರಿಗಳು ಈ ಭೂಮಿ ಉಪಯೋಗಿಸುತ್ತಾರೆ. ಪ್ರತಿವರ್ಷದ ಶ್ರಾವಣಮಾಸದ ಕೊನೆಯ ಸೋಮವಾರ ಬಸವೇಶ್ವರ ಜಾತ್ರೆ ನಡೆಯುತ್ತದೆ.

ಉತ್ತರ ಸೊಲ್ಲಾಪುರ ತಾಲ್ಲೂಕು

೨೨. ಮಹಾದೇವ ದೇವಾಲಯ, ಧಾರಫಲ

ಉತ್ತರ ಸೊಲ್ಲಾಪುರ ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ಅಂತರದಲ್ಲಿ ಧಾರಫಲ ಗ್ರಾಮವಿದೆ. ಇದಕ್ಕೆ ಬಿ.ಬಿ.ಧಾರಫಲ ಎಂದು ಕರೆಯುತ್ತಾರೆ. ಧಾರಫಲ ಗ್ರಾಮದಲ್ಲಿ ಐತಿಹಾಸಿಕ ಮೂರು ಮಹಾದೇವ ದೇವಾಲಯಗಳಿವೆ. ಗ್ರಾಮದ ದ್ವಾರಬಾಗಿಲ ಸಮೀಪ ಪೂರ್ವ ಮುಖವಾಗಿ ಮಹಾದೇವ ದೇವಾಲಯವಿದೆ. ಇಲ್ಲಿಯ ಕ್ರಿ.ಶ. ೧೨೧೮ರ ಶಾಸನವಿದೆ. ಇದು ಸೇವುಣ ದೊರೆ ಸಿಂಗಣದೇವನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಈತನ ಅಧಿಕಾರಿ ಗೋಪಣದೇವನ ಉಲ್ಲೇಖವು ಈ ಶಾಸನದಲ್ಲಿ ಬಂದಿದೆ.

ಗೋಪಣದೇವನ ಪತ್ನಿ ಪೈತಲ್ಲದೇವಿ ಚಾಲುಕ್ಯ ವಂಶದವಳು. ಗೋಪಣದೇವ ಮಾರುಡಿಗೆಯ ಪ್ರಭುವಾಗಿದ್ದ. ಆತ ಮಾರುಡಿಗೆ ೮೦ರ ಪ್ರತಿ ಬಧಂಗೇರಿ ಚಾಳಿಸದೊಳಗಣ ಧಾರಫಲದಲ್ಲಿ ಗೋಪಣೇಶ್ವರ, ವಿಜಯಪಾಳೇಶ್ವರ, ಕೆಂಚಪಾಳೇಶ್ವರ ಎಂಬ ಮೂರು ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ ಅನೇಕ ರೀತಿಯ ದತ್ತಿದಾನಗಳನ್ನು ನೀಡಿದ್ದಾನೆ. ಸಿಂಗಣನ ಅಧಿಕಾರಿಗಳಾದ ವಿಕ್ಕಮಪಾಲ, ಹರಿಪಾಲದೇವ, ಗಂಗಿದೇವ, ತಾಯ್ಯನಾಯಕ, ಪಾಣೆಯನಾಯಕ, ದಯ್ಯನಾಯಕ ಮೊದಲಾದವರು ಈ ದೇವಾಲಯಕ್ಕೆ ದಾನ ನೀಡಿದ ವಿವರಣೆಯೂ ಉಲ್ಲೇಖವಾಗಿದೆ.[೩೦]

ಶಾಸನಗಳಲ್ಲಿ ಗೋಪಣೇಶ್ವರ, ವಿಜಯಪಾಳೇಶ್ವರ, ಕೆಂಚಪಾಳೇಶ್ವರ ದೇವರ ಹೆಸರುಗಳ ಉಲ್ಲೇಖವಿದೆ. ಆದರೆ ಧಾರಫಲದ ಜನರು ಈ ದೇವಾಲಯಗಳಿಗೆ ಪ್ರತಿ ವರ್ಷದ ಮಹಾಶಿವರಾತ್ರಿ ಉತ್ಸವ ಆಚರಿಸುತ್ತಾರೆ. ಗ್ರಾಮದ ದ್ವಾರದ ಹತ್ತಿರವಿರುವ ಮಹಾದೇವ ದೇವಾಲಯ ಅಗ್ನಿಶಿಲೆಯಲ್ಲಿ ನಿರ್ಮಾಣವಾಗಿದೆ. ಇದು ತ್ರಿಕೂಟಾಚಲ ದೇವಾಲಯ. ಮೂರು ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ. ಪೂರ್ವದ ಗರ್ಭಗೃಹದ ಲಲಾಟ ಬಿಂಬದಲ್ಲಿ ಗಣೇಶ, ಇಕ್ಕೆಲಗಳಲ್ಲಿ ದ್ವಾರಪಾಲಕರು, ಮುಂದೆ ನಂದಿಯ ವಿಗ್ರಹವಿದೆ. ಮೂರು ಗರ್ಭಗೃಹದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದ ಮಧ್ಯ ನಾಲ್ಕು ಕಂಬಗಳು, ಕೆಳಗೆ ಮೇಲೆ ಚೌಕ, ಮಧ್ಯ ಅಷ್ಟಭಾಗ ಮತ್ತು ವೃತ್ತಾಕಾರದ ಪಟ್ಟಿಕೆ, ವೃತ್ತಾಕಾರದ ಮುಚ್ಚಳ, ಚೌಕಾಕಾರದ ಫಲಕಗಳಿಂದ ಕೂಡಿದೆ. ಸಭಾಮಂಟಪದಲ್ಲಿ ಹಲವು ಕೋಷ್ಠಕಗಳಿವೆ. ದೇಗುಲದ ಮಹಾದ್ವಾರ ಬಾಗಿಲ

ಬಲಬದಿಯಲ್ಲಿ ಶಾಸನ, ವೀರಗಲ್ಲು, ಸಪ್ತಮಾತೃಕೆಯರು ಹಾಗೂ ಹಲವು ಭಗ್ನಾವಶೇಷಗಳಿವೆ. ದೇಗುಲದ ಶಿಖರ ಹೊಸದಾಗಿ ನಿರ್ಮಿಸಿದ್ದಾರೆ.

ಗ್ರಾಮದ ವಾರಾ ಪಾಟೀಲ ವಾಡಾ ಹತ್ತಿರ ಪೂರ್ವ ಮುಖವಾಗಿ ಮಹಾದೇವ ದೇವಾಲಯವಿದೆ. ಗರ್ಭಗೃಹದಲ್ಲಿ ಮಹಾನ್ ಭವ್ಯವಾದ ಶಿವಲಿಂಗ, ಗಣೇಶ, ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ದೇಗುಲದಲ್ಲಿ ವೀರಗಲ್ಲು, ಗಣೇಶ ಹಾಗೂ ದೇವರ ಭಗ್ನಾವಶೇಷಗಳಿವೆ. ಐತಿಹಾಸಿಕ ಮಹಾದೇವ ದೇವಾಲಯ ನೆಲಸಮವಾಗಿದೆ.

ಗ್ರಾಮದ ಹೊರಗೆ ಮಾಳಿಮಾಳಾ ಗದ್ದೆಯಲ್ಲಿ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಗಣೇಶ, ವೀರಭದ್ರ ಹಾಗೂ ವೀರಗಲ್ಲುಗಳಿವೆ. ಪ್ರಾಚೀನ ದೇವಾಲಯ ನೆಲಸಮವಾಗಿದೆ. ದೇವಾಲಯದ ಹೆಸರಿನಲ್ಲಿ ೯ ಎಕರೆ ಭೂಮಿ ಇದೆ. ಧಾರಫಲದಲ್ಲಿ ಐತಿಹಾಸಿಕ ಮೂರು ಮಹಾದೇವ ದೇವಾಲಯ ಬಹಳ ಮಹತ್ವ ಪಡೆದಿದೆ.

೨೩. ಶ್ರೀ ಪರ್ವತದ ಮಲ್ಲಿಕಾರ್ಜುನ ದೇವಾಲಯ, ಶಿಂಗೋನಿ

ಸೊಲ್ಲಾಪುರದಿಂದ ೧೫ ಕಿ.ಮೀ. ಅಂತರದಲ್ಲಿ ಶಿಂಗೋನಿ ಗ್ರಾಮವಿದೆ. ಸೋವಿದೇವನ ಪಟ್ಟಮಹಾದೇವಿ ಹಾಲರದೇವಿ ಮಹಾಪ್ರಧಾನ ಮಾಂಡಳಿಕ ಸೋಯಿದೇವರಸ ಮೊದಲಾದವರು ಸೇರಿ ಶ್ರೀ ಪರ್ವತದ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ ವಿವರ ಬಂದಿದೆ.[೩೧] ಶಿಂಗೋನಿ ಜನರು ಐತಿಹಾಸಿಕ ದೇವಾಲಯ ನೆಲಸಮ ಮಾಡಿ ನಾಶಮಾಡಿದ್ದಾರೆ.

ದಕ್ಷಿಣ ಸೊಲ್ಲಾಪುರ ತಾಲ್ಲೂಕು

೨೪. ಪಂಚಲಿಂಗೇಶ್ವರ ದೇವಾಲಯ, ಆಹೇರವಾಡಿ

ದಕ್ಷಿಣ ಸೊಲ್ಲಾಪುರ ತಾಲ್ಲೂಕಿನಿಂದ ೨೦ ಕಿ.ಮೀ. ಅಂತರದಲ್ಲಿ ಆಹೇರವಾಡಿ ಐತಿಹಾಸಿಕ ಪಂಚಲಿಂಗೇಶ್ವರ ದೇವಾಲಯವಿದೆ.[೩೨] ಕಲಚುರಿ ಬಿಜ್ಜಳನ ದಂಡನಾಯಕ ವೈಜರಸ ಆವರವಾಡಿಯಲ್ಲಿ ವೈಜೇಶ್ವರ ತ್ರಿಕೂಟ ದೇವಾಲಯವನ್ನು ಕಟ್ಟಿಸಿ ದಾನ ನೀಡಿದ ಕನ್ನಡ ಶಾಸನ ಔರಾದ ಗ್ರಾಮದಲ್ಲಿ ದೊರೆತಿದೆ.[೩೩] ಆಹೇರವಾಡಿಯ ಪಂಚಲಿಂಗೇಶ್ವರ ದೇವಾಲಯ ಪೂರ್ವ ಮುಖವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮಹಾಮಂಟಪಗಳಿಂದ ಕೂಡಿದೆ. ಪಂಚಲಿಂಗೇಶ್ವರ ಗರ್ಭಗೃಹ ದಕ್ಷಿಣ ಮುಖವಾಗಿದೆ. ಗರ್ಭಗೃಹದೊಳಗೆ ಐದು ಪಿಂಡಗಳ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಲಲಾಟ ಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ. ಮುಂದೆ ನಂದಿ ವಿಗ್ರಹವಿದೆ. ಸಭಾ ಮಂಟಪದಲ್ಲಿರುವ ಕನ್ನಡ ಶಾಸನ ಅಧ್ಯಯನ ಮಾಡಬೇಕಾಗಿದೆ. ಸಭಾಮಂಟಪದಲ್ಲಿ ಹಲವು ಕೋಷ್ಟಕಗಳಿವೆ. ಅದರಲ್ಲಿ ಗಣೇಶನ ಉಬ್ಬುಶಿಲ್ಪಗಳಿವೆ. ಮಹಾಮಂಟಪ, ಶಿಖರ ಜೀರ್ಣೋದ್ಧಾರ ಮಾಡಿದ್ದಾರೆ. ಶಾಸನಗಳಲ್ಲಿ ವೈಜೇಶ್ವರ ಎಂದು ಉಲ್ಲೇಖವಿದೆ. ಆದರೆ ಇಂದಿನ ಆಹೇರವಾಡಿ ಜನರು ಪಂಚಲಿಂಗೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಐತಿಹಾಸಿಕ ದೇವಾಲಯಗಳಲ್ಲಿ ಪಂಚಲಿಂಗೇಶ್ವರ ದೇವಾಲಯವೂ ಒಂದಾಗಿದೆ.

೨೫. ಮಹಾದೇವ ದೇವಾಲಯ, ಔರಾದ

ಸೊಲ್ಲಾಪುರ–ಬಿಜಾಪುರ ರಾಷ್ಟ್ರೀಯ ಹೆದ್ದಾರಿಯ ತೇರಾಮೈಲದಿಂದ ೭ ಕಿ.ಮೀ. ಅಂತರದಲ್ಲಿ ಔರಾದ ಗ್ರಾಮವಿದೆ. ಐತಿಹಾಸಿಕ ಔರಾದ ಮಹಾದೇವ ದೇವಾಲಯವಿದೆ.[೩೪] ಮಹಾದೇವ ದೇವಾಲಯದ ಗರ್ಭಗೃಹ ಪೂರ್ವ ಮುಖವಾಗಿದೆ. ಗರ್ಭಗೃಹದೊಳಗೆ ಶಿವಲಿಂಗ ಮುಂದೆ ನಂದಿ, ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ಐತಿಹಾಸಿಕ ದೇಗುಲದ ಗರ್ಭಗೃಹದ ದ್ವಾರಬಾಗಿಲು ಮಾತ್ರ ಸುರಕ್ಷಿತವಾಗಿದೆ. ಉಳಿದ ದೇಗುಲದ ಭಾಗ ನೆಲಸಮವಾಗಿದೆ. ದೇವಾಲಯದ ದ್ವಾರಬಾಗಿಲ ಮೇಲಿನ ಭಾಗದಲ್ಲಿ ವಿವಿಧ ಭಂಗಿಯ ಶಿಲಾಬಾಲಿಕೆಯರಿದ್ದಾರೆ. ಕನ್ನಡ ಶಾಸನ, ದೇಗುಲದ ಅವಶೇಷಗಳಿವೆ. ಐತಿಹಾಸಿಕ ದೇವಾಲಯಗಳಲ್ಲಿ ಔರಾದ ಮಹಾದೇವ ದೇವಾಲಯ ಒಂದಾಗಿದೆ.

೨೬. ಕೇದಾರೇಶ್ವರ ದೇವಾಲಯ, ಕಂದಲಗಾಂವ

ದಕ್ಷಿಣ ಸೊಲ್ಲಾಪುರ ತಾಲ್ಲೂಕಿನ ಕಂದಲಗಾಂವ ಗ್ರಾಮದ ಕೇದಾರೇಶ್ವರ ಐತಿಹಾಸಿಕ ದೇವಾಲಯವಿದೆ. ಸೇವುಣರ ರಾಜ ಜೈತುಂಗಿ, ತೈತವಾಲ ಇವರು ೧೧ನೇ ಶತಮಾನದ ಉತ್ತರಾರ್ಧದಲ್ಲಿ ದೇವಾಲಯ ನಿರ್ಮಿಸಿದರು.[೩೫] ದೇವಾಲಯದ ಬಲಬದಿಯಲ್ಲಿ ಶಾಸನವಿದೆ. ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿದೆ. ಸೇವುಣರು ದೇಗಿರಿಯಿಂದ ಆಡಳಿತ ಮಾಡುವಾಗ ಅಣದೂರು ನಗರದಿಂದ ಆಳ್ವಿಕೆ ಮಾಡಿದರು. ಶಾಸನದಲ್ಲಿ ಮಂದ್ರೂಪ, ಅಂಕಲಗಿ, ನಾವಿದಗಿ, ಅಂಬದಗಿ, ತೆಲಗಾಂವ ಗ್ರಾಮದ ಹೆಸರುಗಳ ಉಲ್ಲೇಖವಿದೆ. ದೇವಾಲಯದ ನಂದಿ ವಿಗ್ರಹದ ಮುಂದೆ ಕೇದಾರೇಶ್ವರ, ಕಮಲೇಶ್ವರ, ಬತಲೇಶ್ವರ ಹಲವು ಹೆಸರುಗಳಿವೆ. ಕಂದಲಗಾಂವ ಜನರು ಇದಕ್ಕೆ ಕೇದಾರೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಕೇದಾರೇಶ್ವರ, ಬಲ್ಕೇಶ್ವರ, ಕಮಲೇಶ್ವರ, ಕಂದಲೇಶ್ವರ, ಪಂಚಲಿಂಗೇಶ್ವರ, ಜೈಮೇಶ್ವರ, ಬತಲೇಶ್ವರ ಹೀಗೆ ಏಳು ಗರ್ಭಗೃಹಗಳಿವೆ. ದೇವಾಲಯದ ಹಲವು ಶಾಸನಗಳು, ದೇಗುಲದ ಅವಶೇಷಗಳು ಗ್ರಾಮದಲ್ಲಿ ಹರಡಿವೆ. ಶಾಸನ ಸಂಶೋಧಕರಾದ ಆನಂದಕುಂಬಾರ ಕಂದಲಗಾಂವ ಶಾಸನಗಳ ಅಧ್ಯಯನ ಮಾಡಿದ್ದಾರೆ. ಕಂದಲಗಾಂವ ಕೇದಾರೇಶ್ವರ ದೇವಾಲಯ ಐತಿಹಾಸಿಕ ದೇವಾಲಯಗಳಲ್ಲಿ ಒಂದಾಗಿದೆ.

೨೭. ಬೆಳ್ಳೇಶ್ವರ ದೇವಾಲಯ, ಕುಂಭಾರಿ

ದಕ್ಷಿಣ ಸೊಲ್ಲಾಪುರ ತಾಲ್ಲೂಕಿನ ಕುಂಭಾರಿ ಒಂದು ಚಿಕ್ಕ ಗ್ರಾಮವಾಗಿದೆ. ಸೊಲ್ಲಾಪುರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ 'ಬೆಳ್ಳೇಶ್ವರ ಕುಂಬರಗಾವ' ಎಂದು ಉಲ್ಲೇಖವಿದೆ.[೩೬] ಕುಂಭಾರಿಯ ಕುರುಬರ ಕೇರಿಯಲ್ಲಿ ಬೆಳ್ಳೇಶ್ವರನ ನೆಲಸಮವಾದ ದೇವಾಲಯವಿದೆ. ಪೂರ್ವ ಮುಖವಾಗಿ ೬ ಶಿವಲಿಂಗ, ದೇಗುಲದ ಭಗ್ನಾವಶೇಷಗಳಿವೆ. ಶಿವಲಿಂಗದ ಎಡಬದಿಯಲ್ಲಿ ಕನ್ನಡ ಶಿಲಾಶಾಸನಗಳಿವೆ.

೨೮. ಗೇನಸಿದ್ಧ ದೇವಾಲಯ, ಕುಂಭಾರಿ

ಭವ್ಯವಾದ ಕುಂಭಾರಿಯ ಗೇನಸಿದ್ದ ಸರಳ ಶೈಲಿಯ ಭವ್ಯವಾದ ಆವರಣ ಗೋಡೆ ಹೊಂದಿದೆ. ಉತ್ತರ ಮುಖವಾಗಿ ಮಹಾದ್ವಾರ, ಪೂರ್ವ, ಪಶ್ಚಿಮ ಮುಖ ದ್ವಾರಬಾಗಿಲುಗಳಿವೆ. ಗರ್ಭಗೃಹ ಪೂರ್ವ ಮುಖವಾಗಿದ್ದು, ಹೊಸದಾಗಿ ನವೀಕರಿಸುವ

ಕೆಲಸ ನಡೆಯುತ್ತಿದೆ. ಪಶ್ಚಿಮ ದ್ವಾರಬಾಗಿಲ ಮುಂದೆ ಎರಡು ದೀಪಸ್ತಂಭಗಳಿವೆ. ಅದರ ಬಳಿ ಕನ್ನಡ ಶಾಸನವಿದೆ. ದೇವಾಲಯದ ಒಳಗೆ ಐತಿಹಾಸಿಕ ದೇಗುಲದ ಭಗ್ನಾವಶೇಷಗಳಿವೆ. ಮಹಾರಾಷ್ಟ್ರ ಸರಕಾರದ ತೀರ್ಥಕ್ಷೇತ್ರ ಅಭಿವೃದ್ಧಿ ಯೋಜನೆ ಅಡಿಯಲ್ಲಿ ೨೦೦೯–೧೦ನೇ ಸಾಲಿನಲ್ಲಿ ಸಭಾಮಂಟಪ ನಿರ್ಮಿಸಲಾಗಿದೆ. ಕುಂಭಾರಿ ಗ್ರಾಮದ ಹಲವು ಕಡೆ ಕನ್ನಡ ಶಾಸನ, ವೀರಗಲ್ಲು ಹಾಗೂ ದೇಗುಲದ ಭಗ್ನಾವಶೇಷಗಳು ಹರಡಿವೆ.

೧೯. ಸಂಗಮೇಶ್ವರ ದೇವಾಲಯ, ಕೂಡಲ

ಹಿಂದೂ ಧರ್ಮ ಪರಂಪರೆಯನುಸಾರವಾಗಿ ಎರಡು ನದಿಗಳ ಸಂಗಮ ಸ್ಥಾನದಲ್ಲಿ ಎರಡು ನದಿಗಳು ಇಂಗ್ಲೀಷಿನ V ಅಕ್ಷರದಂತೆ ಒಂದಕ್ಕೊಂದು ಕೂಡುತ್ತವೆ. ಇಲ್ಲಿ ದಕ್ಷಿಣೋತ್ತರವಾಗಿ ಹರಿಯುವ ಶೀನಾ ನದಿಯನ್ನು ಕಾಟಕೋನದಲ್ಲಿ ಬಂದು ಸೇರುತ್ತದೆ. ಈ ನದಿ ದಂಡೆಯ ಮೇಲೆ ಅಗ್ನಿಶಿಲೆಯಲ್ಲಿ ನಿರ್ಮಾಣಗೊಂಡ ಚತುಷ್ಕೂಟ ಗರ್ಭಗೃಹಗಳನ್ನು ಹೊಂದಿರುವ ಸಂಗಮೇಶ್ವರ ಐತಿಹಾಸಿಕ ದೇವಾಲಯವಿದೆ. ರಾಷ್ಟ್ರೀಯ ಹೆದ್ದಾರಿ ಸೊಲ್ಲಾಪುರದಿಂದ ಬಿಜಾಪುರಕ್ಕೆ ಹೋಗುವ ದಾರಿಯಲ್ಲಿ ಟಾಕಳಿ ದೊರೆಯುತ್ತದೆ. ಟಾಕಳಿಯಿಂದ ೮ ಕಿ.ಮೀ. ಅಂತರದಲ್ಲಿ ಕೂಡಲ ಗ್ರಾಮವಿದೆ.

ಕೂಡಲ ಗ್ರಾಮದಲ್ಲಿ ನಾಲ್ಕು ಶಾಸನಗಳು ಲಭ್ಯವಾಗಿವೆ. ಸೊಲ್ಲಾಪುರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ ಸಂಗಮೇಶ್ವರ ಕೂಡಲ ಎಂದು ಉಲ್ಲೇಖವಿದೆ.[೩೭] ಮೈಸೂರಿನ ಭಾರತೀಯ ಪುರಾತತ್ವ ಸರ್ವೇಕ್ಷಣ ವಿಭಾಗದ ವತಿಯಿಂದ ಅಧ್ಯಯನ ಮಾಡಿಲಾಗಿದೆ. ಕಲ್ಯಾಣಿಯ ಚಾಲುಕ್ಯ, ಅಕ್ಕಲಕೋಟೆಯ ಶಿಲಾಹಾರ ಮತ್ತು ಯಾದವ ರಾಜ ಸಿಂಘಣನು ಶ್ರೀ ಸಂಗಮೇಶ್ವರ ದೇವರಿಗೆ ಅಕ್ಕಲಕೋಟೆಯ ಶಿಲಾಹಾರರು ದಾನ ನೀಡಿದ ಉಲ್ಲೇಖವಾಗಿದೆ.[೩೮] ಸಂಗಮೇಶ್ವರ ದೇವರಿಗೆ ಅಕ್ಕಲಕೋಟೆಯ ಶಿಲಾಹಾರರು ದಾನ ನೀಡಿದ ಶಾಸನಗಳು ಅಕ್ಕಲಕೋಟೆಯ ಅರಮನೆಯಲ್ಲಿವೆ.[೩೯] ಮೊದಲನೆಯ ಮರಾಠಿ ಶಾಸನ ಕೂಡಲ ಸಂಗಮೇಶ್ವರ ದೇವರ ಸಭಾಮಂಟಪದ ತೊಲೆಯ ಮೇಲಿದೆ.[೪೦] "ಸೊಲ್ಲಾಪುರ ಜಿಲ್ಲೆಯಲ್ಲಿ ಪ್ರಬಲವಾಗಿ ಕನ್ನಡ ರಾಜಮಹಾರಾಜರ ಆಡಳಿತವಿತ್ತಲು. ಇಲ್ಲಿಯ ರಾಜರ ಶಾಸನಗಳಲ್ಲಿ ಸುಮಾರು ೯೦% ಕನ್ನಡ, ೧೦% ಮರಾಠಿ ಅಥವಾ ಸಂಸ್ಕೃತ ಶಾಸನಗಳಿವೆ" ಎಂದು ಗನಾನನ ಭಿಡೆ ಅವರು ಅಭಿಪ್ರಾಯಪಟ್ಟಿದ್ದಾರೆ.

ಐತಿಹಾಸಿಕ ಸಂಗಮೇಶ್ವರ ದೇವಾಲಯ ಚತುಷ್ಕೂಟ ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ, ಪ್ರದಕ್ಷಿಣಾಪಥ, ಜಗಲಿ ಹಾಗೂ ಮಹಾದ್ವಾರಗಳಿಂದ ಕೂಡಿದೆ. ಪೂರ್ವಮುಖ ಗರ್ಭಗೃಹದೊಳಗೆ ಭವ್ಯವಾದ ಸಂಗಮೇಶ್ವರ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಲಲಾಟ ಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ. ದ್ವಾರಬಾಗಿಲು ಬಲಬದಿಯಲ್ಲಿ ಭವ್ಯವಾದ ಶಿವಲಿಂಗದ ಅವಶೇಷ, ಅದರ ಮೇಲೆ ಸಪ್ತಮಾತೃಕೆಯರಿದ್ದಾರೆ. ದಕ್ಷಿಣ ಗರ್ಭಗೃಹದಲ್ಲಿ ಕಾಶೀವಿಶ್ವೇಶ್ವರ, ಉತ್ತರ ಗರ್ಭಗೃಹದಲ್ಲಿ ರಾಮೇಶ್ವರ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಅಂತರಾಳದಲ್ಲಿ ನಂದಿ ವಿಗ್ರಹವಿದೆ, ಅಂತರಾಳದ ಇಕ್ಕೆಲಗಳಲ್ಲಿ ಜಗಲಿಗಳಿವೆ.

ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಬೃಹತ್ ಕಂಬಗಳು, ಕೆಳಗೆ ಮೇಲೆ ಚೌಕ, ಮಧ್ಯ ೧೬–೮–೧೬ ಭಾಗದ ಪಟ್ಟಿಕೆ, ವೃತ್ತಾಕಾರದ ಮುಚ್ಚಳ, ಚೌಕಾಕಾರದ ಫಲಕ, ಬೋದಿಗೆಗಳಿಂದ ಕೂಡಿವೆ. ಉತ್ತರಮುಖ ಹಾಗೂ ಪೂರ್ವ ಮುಖವಾಗಿ ಸಭಾಮಂಟಪದ ಪ್ರವೇಶದ್ವಾರಗಳಿವೆ. ಸಭಾಮಂಟಪದಲ್ಲಿ ಭವ್ಯವಾದ ನಂದಿ ವಿಗ್ರಹವಿದೆ. ಸಭಾಮಂಟಪದ ಇಕ್ಕೆಲಗಳಲ್ಲಿ ಜಗಲಿಗಳಿವೆ. ಸಭಾಮಂಟಪ ಪದ್ಮದ ಸಾಲುಗಳಿಂದ ಕೂಡಿದೆ. ಪ್ರದಕ್ಷಿಣೆ ಹಾಕಲು ಭವ್ಯವಾದ ಪ್ರದಕ್ಷಿಣಾ ಪಥವಿದೆ. ಪ್ರದಕ್ಷಿಣೆ ಹಾಕುವ ದಾರಿಯಲ್ಲಿ ಹಲವು ಶಿವಲಿಂಗಗಳ ಅವಶೇಷ, ಶಿವನ ತೊಡೆಯ ಮೇಲೆ ಪಾರ್ವತಿ ಅಲಂಕರಿಸಿದ ಉಬ್ಬುಶಿಲ್ಪ, ಅನ್ನಪೂರ್ಣೇಶ್ವರಿ, ಪಂಚಲಿಂಗೇಶ್ವರ ದರ್ಶನ ದೊರೆಯುತ್ತದೆ. ಅದರ ಮುಂದೆ ೧.೧/೨ ಮೀಟರ್ ಅಗಲ ಮತ್ತು ೩ ಮೀಟರ್ ಉದ್ದದ ಭವ್ಯವಾದ ಕನ್ನಡ ಶಿಲಾಶಾಸನವಿದೆ. ಈ ಶಾಸನ ಸಂಶೋಧಕರು ಇನ್ನೊಮ್ಮೆ ಅಧ್ಯಯನ ಮಾಡಿದರೆ ಹೊಸ ವಿಷಯಗಳು ದೊರೆಯುತ್ತವೆ.

ಐತಿಹಾಸಿಕ ಸಂಗಮೇಶ್ವರ ದೇವಾಲಯ ಮಹಾದ್ವಾರ ಉತ್ತರ ಮುಖವಾಗಿದೆ. ಪೂರ್ವ ಪಶ್ಚಿಮ ಮುಖ ಚಿಕ್ಕದ್ವಾರದ ಸೋಪಾನಗಳಿವೆ. ಪೂರ್ವದ ದ್ವಾರಗಳಿಂದ ಹೊರಗೆ ಆಗಮಿಸಿ ಸೋಪಾನಗಳು ಇಳಿದರೆ ಉತ್ಖನನದ ಶ್ರೀ ಹರಿಹರೇಶ್ವರ ದೇವಾಲಯಕ್ಕೆ ಹೋಗುತ್ತದೆ. ಪಶ್ಚಿಮ ಮುಖ ಚಿಕ್ಕದ್ವಾರದ ಸೋಪಾನಗಳಿಂದ ಇಳಿದರೆ ಭೀಮಾನದಿ ಹಾಗೂ ಸೀನಾ ನದಿಯ ಸಂಗಮಸ್ಥಾನದ ದರ್ಶನ ದೊರೆಯುತ್ತದೆ. ಮಹಾದ್ವಾರದ ಎಡಬದಿಯಲ್ಲಿ 'ವಿಶ್ವರೂಪ ಶಿವದರ್ಶನ'ವಾಗುತ್ತದೆ. ಕರ್ನಾಟಕ ಚರಿತ್ರೆಯಲ್ಲಿ ಕಲಚೂರಿಗಳು ಅಲ್ಪಕಾಲ ರಾಜ್ಯವಾಳಿದರು. ಇಂದಿನ ಸೊಲ್ಲಾಪುರ ಜಿಲ್ಲೆಯ ಮಂಗಳವೇಡ ಕಲಚೂರಿಗಳ ರಾಜಧಾನಿಯಾಗಿತ್ತು. ಎರಡನೆಯ ಬಿಜ್ಜಳನು ಕ್ರಿಶ. ೧೧೩೦–೧೧೬೭ರವರೆಗೆ ಕಲಚೂರಿಗೆ ಶ್ರೇಷ್ಠ ಅರಸನಾಗಿದ್ದ. ಈತನ ಮಹಾಮಂತ್ರಿ ಬಸವಣ್ಣನವರು ಮಂಗಳವೇಡೆಯಲ್ಲಿ ಕ್ರಿಶ. ೧೧೩೦–೧೧೫೧ರವರೆಗೆ ಕಲ್ಯಾಣಕ್ಕೆ ಹೋಗುವ ಪೂರ್ವದಲ್ಲಿ ವಾಸಿಸಿದ್ದರು.[೪೧] ಬಸವೇಶ್ವರರು ಮಂಗಳವೇಡೆಯಲ್ಲಿ ೨೧ ವರ್ಷ ನೆಲೆಸಿದ್ದರು.[೪೨] ಸೊಲ್ಲಾಪುರ ಜಿಲ್ಲೆಯ ಸಂಗಮೇಶ್ವರ ಬಸವಣ್ಣನ ಆರಾಧ್ಯ ದೇವರು. ಬಸವೇಶ್ವರ ವಚನಗಳ ಅಂಕಿತನಾಮ ಕೂಡಲ ಸಂಗಮೇಶ್ವರ. ಪ್ರತಿವರ್ಷ ಕೂಡಲ ಸಂಗಮೇಶ್ವರ ದೇವಾಲಯದಲ್ಲಿ ಮಕರ ಸಂಕ್ರಮಣ, ಶಿವರಾತ್ರಿ, ಯುಗಾದಿ, ಬಸವಜಯಂತಿ, ಶ್ರಾವಣಮಾಸ, ವಿಜಯದಶಮಿ, ಹಲವು ಜಾತ್ರೆ–ಉತ್ಸವಗಳನ್ನು ಭಕ್ತರು ವೈಭವದಿಂದ ಆಚರಿಸುತ್ತಾರೆ.

೩೦. ಹರಿಹರೇಶ್ವರ ದೇವಾಲಯ, ಕೂಡಲ

ಕೂಡಲ ಸಂಗಮೇಶ್ವರ ದೇವರ ದರ್ಶನ ಪಡೆದುಕೊಂಡು ಪೂರ್ವಮುಖ ದ್ವಾರಬಾಗಿಲುಗಳಿಂದ ಹೊರಗೆ ಆಗಮಿಸಿ ಪಾವಟಿಗೆಳಿಂದ ಇಳಿದರೆ ಉತ್ಖನದ ಹರಿಹರೇಶ್ವರ ದೇವಾಲಯ ದೊರೆಯುತ್ತದೆ. ಜ್ಞಾನಪೀಠ ಪ್ರಶಸ್ತಿ ಪಡೆದ ದ.ರಾ.ಬೇಂದ್ರೆ ಅವರು ಸೊಲ್ಲಾಪುರ ದಯಾನಂದ ಮಹಾವಿದ್ಯಾಲಯದ ಗಜಾನನ ಲಕ್ಷ್ಮಣ ಭಿಡೆ ಅವರು ಉತ್ಖನನದ ಪರಿಶ್ರಮದಿಂದ ಮಣ್ಣಿನಲ್ಲಿ ಹುದುಗಿಕೊಂಡ ದೇವಾಲಯ ಹೊರಗೆ ತೆಗೆಯಲಾಯಿತು.[೪೩]

ಹರಿಹರೇಶ್ವರ ದ್ವಿಕೂಟ ದೇವಾಲಯ ಪಶ್ಚಿಮ ಮುಖವಾಗಿದೆ. ಇದು ಗರ್ಭಗೃಹ, ಅಂತರಾಳ, ರಂಗಮಂಟಪ, ಸಭಾಮಂಟಪ ಹಾಗೂ ಮುಖಮಂಟಪಗಳಿಂದ ಕೂಡಿದೆ. ಎರಡು ಗರ್ಭಗೃಹಗಳಲ್ಲಿ ಭವ್ಯವಾದ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಎರಡು ಗರ್ಭಗೃಹಗಳ ದ್ವಾರಬಾಗಿಲುಗಳ ನಡುವೆ ಭವ್ಯವಾದ ಗಣೇಶನ ನಡುವೆ ಭವ್ಯವಾದ ಶಿವನ ಉಬ್ಬುಶಿಲ್ಪವಿದೆ. ರಂಗಮಂಟಪದಲ್ಲಿಯ ಭವ್ಯವಾದ ಉಬ್ಬುಶಿಲ್ಪವಿದ್ದು, ಅದನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಪ್ರತಿಯೊಂದು ಗರ್ಭಗೃಹಗಳ ಮುಂದೆ ಮೂರು ದ್ವಾರಬಾಗಿಲುಗಳಿವೆ. ಲಲಾಟ ಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ.

ರಂಗಮಂಟಪದ ಮೇಲ್ಛಾವಣಿ ಕುಸಿದು ಬಿದ್ದಿದೆ. ಬೇಲೂರಿನ ಚನ್ನಕೇಶವನ ದೇಗುಲದ ಶಿಲಾಬಾಲಿಕೆಯರಂತೆ, ಇಲ್ಲಿಯ ರಂಗಮಂಟಪದ ವಿವಿಧ ಭಂಗಿಯ ಶಿಲಾಬಾಲಿಕೆಯರಿದ್ದಾರೆ. ಸಂಗೀತ, ವಾದ್ಯ ಬಾರಿಸುವ ಶಿಲಾಬಾಲಿಕೆಯರು, ನೃತ್ಯ ಮಾಡುವ ಶಿಲಾಬಾಲಿಕೆಯರು, ತ್ರಿಭಂಗಿ ಶಿಲಾಬಾಲಿಕೆಯರು, ತೊಡೆ, ಕಾಲಿನ ಚೈನು, ಸೊಂಟಪಟ್ಟಿ, ಬಾಹುಪಟ್ಟಿ, ಕಂಠಮಾಲೆ, ಕರ್ಣಭೂಷಣ, ಬಳೆಗಳು, ಹಣೆಯ ಬೊಟ್ಟು ಇತ್ಯಾದಿ ಅಳಂಕಾರ ಮಾಡಿಕೊಂಡ ಶಿಲಾಬಾಲಿಕೆಯರ ಉಬ್ಬುಶಿಲ್ಪಗಳಿವೆ. ಹಲವು ಶಿಲಾಬಾಲಿಕೆಯರು ವಿವಿಧ ಭಂಗಿಯ ಸ್ವಾಗತ ಮಾಡುತ್ತಾರೆ.

ಮುಖಮಂಟಪ ಒಂದು ಅಖಂಡ ಶಿಲೆಯಲ್ಲಿ ಎರಡೂ ಬದಿಯಲ್ಲಿ ಉಬ್ಬಿದ ಮೂರ್ತಿಯನ್ನು ಕೆತ್ತಲಾಗಿದೆ. ಹೊರಗೆ ಲಕ್ಷ್ಮಿ ಹಾಗೂ ಒಳಗೆ ಭೈರವಿಯ ಉಬ್ಬಿದ ಮೂರ್ತಿಗಳಿವೆ. ದೇವಾಲಯದ ಸುತ್ತಲೂ ಹಲವು ಅವಶೇಷಗಳು ಗತವೈಭವದ ಇತಿಹಾಸ ಹೇಳುತ್ತವೆ. ಉತ್ಖನನದಲ್ಲಿ ಶ್ರೀ ಕೃಷ್ಣಮೂರ್ತಿ, ೩೬೫ ಶಿವಮೂರ್ತಿಗಳ ಏಕೈಕ ಶಿಲ್ಪ, ಒಂದು ಮುಖ ಐದು ಶರೀರದ ಸ್ತ್ರೀ, ಶಿವ ಮತ್ತು ಗಣ ಹಲವು ಇತಿಹಾಸದ ಕಥೆ ಹೇಳುವ ಶಿಲ್ಪಮೂರ್ತಿಗಳು ಲಭ್ಯವಾಗಿವೆ. ಭಾರತ ಪುರಾತತ್ವ ಇಲಾಖೆ, ಕರ್ನಾಟಕ ಸರಕಾರದ ಪುರಾತತ್ವ ಇಲಾಖೆ, ಮಹಾರಾಷ್ಟ್ರ ಸರಕಾರದ ಪುರಾತತ್ವ ಇಲಾಖೆ ಹಾಗೂ ವಿಶ್ವವಿದ್ಯಾಲಯಗಳು ಈ ದೇಗುಲದ ಅಧ್ಯಯನ ಮಾಡಿದರೆ, ಪ್ರತಿಯೊಂದು ಅವಶೇಷದಿಂದ ಗತವೈಭವದ ಇತಿಹಾಸ ದೊರೆಯುತ್ತದೆ.

೩.೧. ರಾಮಲಿಂಗೇಶ್ವರ ದೇವಾಲಯ, ತೀರ್ಥ

ಸೊಲ್ಲಾಪುರ ಜಿಲ್ಲೆಯ ದಕ್ಷಿಣ ಸೊಲ್ಲಾಪುರ ತಾಲ್ಲೂಕಿನ ತೀರ್ಥ ಎಂಬ ಚಿಕ್ಕ ಗ್ರಾಮವಿದೆ. ತೀರ್ಥದ ರಾಮಲಿಂಗೇಶ್ವರ ಐತಿಹಾಸಿಕ ಪ್ರಸಿದ್ಧ ದೇವಾಲಯವಿದೆ. ಈ ದೇವಾಲಯಕ್ಕೆ ಸಂಬಂಧಿಸಿದ ಹಲವು ಕನ್ನಡ ಶಾಸನಗಳಿವೆ. ಕ್ರಿ.ಶ. ೧೦೮೨ ದಕ್ಷಿಣ ಸೊಲ್ಲಾಪುರ ತಾಲ್ಲೂಕಿನ ತೀರ್ಥದ ಶಾಸನ (I.S.P. No. ೧)ದಲ್ಲಿ ಕಲಚೂರಿ ದೊರೆ ಚೋಗಮರಸನ ಉಲ್ಲೇಖವಿದೆ. ಆತ ಕಾಳಾಮುಖ ಗುರು ವಿದುಳ ಶಕ್ತಿ ಪಂಡಿತ ದೇವರಿಗೆ ದಾನಧರ್ಮ ಮಾಡಿದ ವಿವರ ದಾಖಲಾಗಿದೆ. ರಾಮೇಶ್ವರ ದೇವಾಲಯದ ಆಚಾರ್ಯರಾಗಿ ವಿದುಳಶಕ್ತಿ ಪಂಡಿತನಿದ್ದನೆಂಬುದು ಈ ಶಾಸನದಿಂದ ತಿಳಿದುಬರುತ್ತದೆ. ಆತನ ವ್ಯಕ್ತಿತ್ವವನ್ನು ಈ ಶಾಸನ ನಾನಾ ರೀತಿಯಲ್ಲಿ ಕೊಂಡಾಡಿದೆ.[೪೪] ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಉಮ್ರಾಣಿ ಶಾಸನ (ಅದೇ ನಂ. ೧೪)ದಲ್ಲಿ "ಪಂಡಿತ ಚೂಡಾಮಣಿ ಶಿಷ್ಟಜನ ಚಿಂತಾಮಣಿ ಶ್ರೀ ಮಲ್ಲೋಕಾಭರಣ ಪಂಡಿತದೇವ

ಪಾದಾರಾಧನಾಲಬ್ಧವರಪ್ರಸಾದಂ ಪರೋಪಕಾರ ವಿನೋದಂ ಇತ್ಯಾದಿ ನಾಮಾವಳೀ ವಿರಾಜಮಾನರಪ್ಪ ತೀರ್ಥದ ಸ್ವಯಂಭು ರಾಮೇಶ್ವರ ದೇವರ ಸ್ಥಾನಾಚಾರ್ಯ ಚಂದ್ರಾಭರಣ ಪಂಡಿತ ದೇವರ್ಗೆ" ದಾನ ನೀಡಿದ ಉಲ್ಲೇಖವಿದೆ.[೪೫]

ಸೊಲ್ಲಾಪುರ ಜಿಲ್ಲೆಯ ತೀರ್ಥ ಪ್ರಮುಖ ಕಾಳಾಮುಖ ಕೇಂದ್ರವಾಗಿತ್ತು. ಅಲ್ಲಿಯ ರಾಮೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಉಪಲಬ್ಧವಾಗಿವೆ. ವಿಮಲಶಕ್ತಿ ಪಂಡಿತ, ಆನಸ್ತಶಕ್ತಿ ಪಂಡಿತ, ಲೋಕಾಭರಣ, ಚಂದ್ರಾಭರಣ ಪಂಡಿತ ಮೊದಲಾದ ಕಾಳಾಮುಖ ಗುರುಗಳ ಉಲ್ಲೇಖ ಅನೇಕ ಶಾಸನಗಳಲ್ಲಿ ಬಂದಿದ್ದು, ಇಲ್ಲಿ ಬಹುದೊಡ್ಡ ಕಾಳಾಮುಖ ಗುರುಪರಂಪರೆ ಇದ್ದಂತೆ ಕಾಣುತ್ತದೆ. ಲೋಕಾಭರಣದ ಶಿಷ್ಯ ಚಂದ್ರಾಭರಣ ಪಂಡಿತ ಎಂಬುದು ಉಮ್ರಾಣಿಯ ಶಾಸನದಿಂದ ಸ್ಪಷ್ಟವಾಗುತ್ತದೆ. ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದರೆಂಬುದಕ್ಕೆ ಇಲ್ಲಿ ಕನ್ನಡ ಶಾಸನಗಳೇ ಸಾಕ್ಷಿಯಾಗಿವೆ.[೪೬]

ತೀರ್ಥದ ರಾಮೇಶ್ವರ ದೇವಾಲಯಕ್ಕೆ ಕ್ರಿ.ಶ. ೧೬೬೧ರಲ್ಲಿ ವಿಕ್ಟೋರಿಯಾ ರಾಣಿ ೨ ಎಕರೆ ಭೂಮಿ ಸಂಸ್ಥಾನದ ವತಿಯಿಂದ ದಾನಪತ್ರ ನೀಡಿದ್ದಾಳೆ. ತುಕ್ಕಪ್ಪಾಗೇನಪ್ಪಾ ಗುರವ ಹತ್ತಿರ ದಾನ ಪತ್ರವಿದೆ.[೪೭] ತೀರ್ಥದ ರಾಮಲಿಂಗೇಶ್ವರ ದೇವಾಲಯ ಗರ್ಭಗೃಹದ ಲಲಾಟ ಬಿಂಬದಲ್ಲಿ ಗಣೇಶ, ದ್ವಾರಬಾಗಿಲ ಇಕ್ಕೆಲಗಳಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ರಾಮಲಿಂಗೇಶ್ವರ ದೇವಾಲಯ ದಕ್ಷಿಣ ಮುಖವಾಗಿದೆ. ಲಕ್ಷ್ಮಣ, ಸೀತೆಯ ದೇವಾಲಯ ಪೂರ್ವ ಮುಖವಾಗಿದೆ. ರಾಮ, ಲಕ್ಷ್ಮಣ, ಸೀತೆ ಮೂರು ದೇವಾಲಯಗಳಲ್ಲಿ ಶಿವಲಿಂಗಗಳಿವೆ. ದೇವಾಲಯದ ಆವರಣದಲ್ಲಿ ಕನ್ನಡ ಶಾಸನ ವೀರಗಲ್ಲುಗಳಿವೆ. ರಾಮಾಯಣದಲ್ಲಿ ದೇಗುಲಕ್ಕೆ ಸಂಬಂಧಿಸಿದ ಹಲವು ದಂಥಕತೆಗಳಿವೆ. ಎಡಬದಿಯಲ್ಲಿ ಬಾವಿ ಇದೆ. ದೇವಾಲಯದ ಸಭಾಮಂಟಪ ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಿದ್ದಾರೆ. ಪ್ರತಿ ವರ್ಷದ ಯುಗಾದಿ ಹಬ್ಬದ ನಂತರ ಬರುವ ಮೂರನೆಯ ಸೋಮವಾರದಂದು ಜಾತ್ರೆ ನಡೆಯುತ್ತದೆ. ಐತಿಹಾಸಿಕ ದೇವಾಲಯಗಳಲ್ಲಿ ತೀರ್ಥದ ರಾಮಲಿಂಗೇಶ್ವರ ದೇವಾಲಯ ಒಂದಾಗಿದೆ.

೩.೨. ನಾಗನಾಥ ದೇವಾಲಯ, ತಾಂದೂಲವಾಡಿ

ಸೊಲ್ಲಾಪುರ–ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿಯ ಪೂರ್ವಕ್ಕೆ ೨೪ ಕಿ.ಮೀ. ಅಂತರದಲ್ಲಿ ಹರಣಾ ನದಿಯ ದಂಡೆಯ ಮೇಲೆ ತಾಂದೂಲವಾಡಿ ಗ್ರಾಮವಿದೆ. ಐತಿಹಾಸಿಕ ನಾಗನಾಥ ದೇವಾಲಯ ಗರ್ಭಗೃಹ, ಸಭಾಮಂಟಪಗಳಿಂದ ಕೂಡಿದೆ. ಪೂರ್ವಮುಖ ಗರ್ಭಗೃಹದಲ್ಲಿ ಶಿವಲಿಂಗ, ನಾಗೇಶನ ಮೂರ್ತಿಗಳಿವೆ.

೩.೩. ಮಹಾದೇವ ದೇವಾಲಯ, ನಿಂಬರಗಿ

ಸೊಲ್ಲಾಪುರ–ಬಿಜಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲೆ ತೇರಾಮ್ಮೈಲದಿಂದ ೧೪ ಕಿ.ಮೀ. ಅಂತರದಲ್ಲಿ ನಿಂಬರಗಿ ಗ್ರಾಮವಿದೆ. ನಿಂಬರಗಿ ಐತಿಹಾಸಿಕ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ದೇವಾಲಯದಲ್ಲಿ ಎರಡು ಕನ್ನಡ ಶಾಸನಗಳಿವೆ. ಕ್ರಿ.ಶ. ೧೨ನೆಯ ಶತಮಾನದ ಈ ಶಾಸನ ಶಿಥಿಲವಾಗಿದೆ. ಈ ಶಾಸನವು ಚಾಲುಕ್ಯ

ದೊರೆ ಅಹವಮಲ್ಲಿದೇವನಿಗೆ ಸಂಬಂಧಿಸಿದ್ದಾಗಿದೆ. ಕಲಚುರಿ ದೊರೆಯ ಪ್ರಸ್ತಾಪ ಬಂದಿದ್ದರೂ ಅವನ ಹೆಸರಿರುವ ಭಾಗ ನಾಶವಾಗಿದೆ. ಆತ ಮಂಗಳವೇಡದಲ್ಲಿ ರಾಜ್ಯಭಾರ ಮಾಡುತ್ತಿದ್ದನೆಂದು ಶಾಸನ ಹೇಳುತ್ತದೆ.[೪೮] ಕ್ರಿ.ಶ. ೧೦೮೦ರ ಈ ಶಾಸನವು ಕಲಚುರಿ ವಂಶದ ದೊರೆ ಅಮ್ಮರಸ ಅಥವಾ ಅಮ್ಮುಗಿದೇವನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಎಳ್ಳ ನಿಂಬರಗಿಯ ಮಾಲಿಗ ನಾಗಗಾವುಂಡನ ಉಲ್ಲೇಖ ಬಂದಿದೆ. ಇದಲ್ಲದೆ ಭೋಗಗಾವುಂಡ ನಿಂಬರಗಿಯಲ್ಲಿ ನೇಮಿನಾಥ ಬಸದಿಯನ್ನು ಕಟ್ಟಿಸಿದನು. ಈ ಶಾಸನದಲ್ಲಿ ಕೊಂಡಕುಂದಾಚಾರ್ಯ ಮೂಲಸಂಘದೇಶಿಗಣ ಪುಸ್ತಕಾನ್ವಯದ ಗುರು ಪರಂಪರೆಯ ಮುನಿಗಳ ಹೆಸರು ಉಲ್ಲೇಖವಾಗಿದೆ. ಮಹಾಮಂಡಳೇಶ್ವರ ಅಮ್ಮರಸ ನೇಮಿನಾಥ ದೇವರ ಬಸದಿಗೆ ದಾನ ನೀಡಿದ ಅಂಶವೂ ಬಂದಿದೆ.[೪೯] ಈಗ ಬಸದಿ ಕಾಣಸಿಗುವುದಿಲ್ಲ.

ಮಹಾದೇವ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪ ಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಭವ್ಯವಾದ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಮುಂದೆ ನಂದಿ, ಲಲಾಟ ಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ. ತ್ರಿಕೂಟವಾದ ಸಭಾಮಂಟಪ ಪೂರ್ವ, ದಕ್ಷಿಣ, ಉತ್ತರ ಮುಖ ಪ್ರವೇಶ ದ್ವಾರಗಳಿವೆ. ಮಹಾದ್ವಾರ ಸಭಾಮಂಟಪದಲ್ಲಿ ಜಗಲಿಗಳಿವೆ. ಸಭಾಮಂಟಪದಲ್ಲಿ ಹಲವು ಕೋಷ್ಠಕಗಳಿವೆ. ಕೋಷ್ಠಕಗಳಲ್ಲಿ ನಾಗೇಶ, ಗಣೇಶ, ವೀರಭದ್ರ ಶಿಲ್ಪಗಳಿವೆ. ಸಭಾಮಂಟಪದಲ್ಲಿ ಭವ್ಯವಾದ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಅವಶೇಷಗಳು ಗ್ರಾಮದ ಹಲವೆಡೆ ಹರಡಿಕೊಂಡಿವೆ.

೩೪. ಕಲ್ಮೇಶ್ವರ ದೇವಾಲಯ, ಭಂಡಾರಕವಟೆ

ಸೊಲ್ಲಾಪುರ–ಬಿಜಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲೆ ತೇರಾಮೈಲದಿಂದ ೨೦ ಕಿ.ಮೀ. ಅಂತರದಲ್ಲಿ ಭಂಡಾರಕವಟೆ ಗ್ರಾಮವಿದೆ. ಭಂಡಾರಕವಟೆ ಹೈಸ್ಕೂಲ್ ಬಳಿಯಲ್ಲಿ ಕನ್ನಡ ಶಾಸನವಿದೆ. ಈ ಶಾಸನವು ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಮೂಲಸ್ಥಾನದ ಕಲಿದೇವರಿಗೆ ದಾನ ನೀಡಿದ ವಿವರವೂ ಇಲ್ಲಿ ಬಂದಿದೆ.[೫೦] ಶಾಸನಗಳಲ್ಲಿ ಕಲಿದೇವರು ಎಂದು ಉಲ್ಲೇಖವಿದೆ. ಭಂಡಾರಕವಟೆ ಜನರು ಕಲ್ಮೇಶ್ವರ ದೇವರು ಎಂದು ಕರೆಯುತ್ತಾರೆ.

ಕಲ್ಮೇಶ್ವರ ದೇವಾಲಯ ಪೂರ್ವ ಮುಖವಾಗಿದೆ. ಗರ್ಭಗೃಹದಲ್ಲಿ ಕಲಿಲಿಂಗ ಪ್ರತಿಷ್ಠಾಪಿಸಲಾಗಿದೆ. ಐತಿಹಾಸಿಕ ಕಲಿಲಿಂಗ ದೇವಾಲಯ ನೆಲಸಮವಾಗಿದೆ. ಸೊಲ್ಲಾಪುರದ ಎಂ.ಪಿ.ಗಳಾದ ಶ್ರೀ ಸುಭಾಷ್ ದೇಶಮುಖ ಅವರ ನಿಧಿಯಿಂದ ೨೦೦೪–೦೫ರಲ್ಲಿ ಹೊಸ ಸಭಾಮಂಟಪ ನಿರ್ಮಿಸಿದ್ದಾರೆ.

೩೫. ಮಹಾದೇವ ದೇವಾಲಯ, ಭಂಡಾರಕವಟೆ

ಕಲ್ಮೇಶ್ವರ ದೇವಾಲಯದ ಹತ್ತಿರ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ಈ ದೇಗುಲ ಶಾಸನದ ಬಹುಭಾಗ ನಾಶವಾಗಿ ಹೋಗಿದೆ. ಕ್ರಿ.ಶ. ೧೨ನೇ ಶತಮಾನದ ಶಾಸನದಲ್ಲಿ ದಾನ ನೀಡಿದ ವಿವರ ಮಾತ್ರ ದಾಖಲಾಗಿದೆ. ರಾಚೇಶ್ವರದೇವ, ಕೇಶವದೇವ ಹಾಗೂ ಭೊಟ್ಟೇಶ್ವರ ದೇವರಿಗೆ ದಾನ ನೀಡಿದ್ದನ್ನು ಈ ಶಾಸನ ಹೇಳುತ್ತದೆ.[೫೧] ಈ ದೇಗುಲಕ್ಕೆ ಮಹಾದೇವ ದೇವಾಲಯ ಎಂದು ಕರೆಯುತ್ತಾರೆ.

ಮಹಾದೇವ ದೇಗುಲದೊಳಗೆ ಮೂರು ಶಿವಲಿಂಗಗಳಿವೆ. ಶಾಸನಗಳಲ್ಲಿ ಮೂರು ಶಿವಲಿಂಗಗಳ ಹೆಸರು ಉಲ್ಲೇಖವಿದೆ. ಗರ್ಭಗೃಹದಲ್ಲಿ ಒಂದು ಶಿವಲಿಂಗ, ಸಭಾಮಂಟಪದಲ್ಲಿ ಹಲವು ಕೋಷ್ಟಕಗಳಿವೆ. ಮಧ್ಯದ ನಾಲ್ಕು ಕಂಬಗಳು ಕೆಳಗೆ ಮೇಲೆ ಚೌಕ, ಮಧ್ಯ ೧೬–೮–೧೬ ಭಾಗದ ಪಟ್ಟಿಗೆ, ವೃತ್ತಾಕಾರದ ಮುಚ್ಚಳ, ಚೌಕಾಕಾರದ ಫಲಕ ಮತ್ತು ಬೋವಿಗೆಗಳಿಂದ ಕೂಡಿವೆ. ಸುತ್ತಲೂ ಆವರಣಗೋಡೆ ಇದೆ.

೩೬. ರವಳಸಿದ್ಧ ದೇವಾಲಯ, ಮದ್ರೆ

ದಕ್ಷಿಣ ಸೊಲ್ಲಾಪುರ ತಾಲ್ಲೂಕಿನಿಂದ ೧೬ ಕಿ.ಮೀ. ಅಂತರದಲ್ಲಿ ಮದ್ರೆ ಗ್ರಾಮವಿದೆ. ಸೇವುಣ ದೊರೆ ಅಧಿಕಾರಿ ಮಾಯಿದೇವನು ಮಾದ್ರೆ ದೇವಾಲಯಕ್ಕೆ ದಾನ ನೀಡಿದ ಉಲ್ಲೇಖವಿದೆ.[೫೨] ಎತ್ತರದ ಮಣ್ಣಿನ ದಿಬ್ಬದ ಮೇಲೆ ಇರುವ ರವಳಸಿದ್ಧರ ಐತಿಹಾಸಿಕ ದೇವಾಲಯ ನೆಲಸಮವಾಗಿದೆ. ದೇವಾಲಯದ ಹತ್ತಿರ ಐತಿಹಾಸಿಕ ಅವಶೇಷಗಳಿವೆ.

೩೭. ಮಳಸಿದ್ಧೇಶ್ವರ ದೇವಾಲಯ, ಮಂದ್ರೂಪ.

ಸೊಲ್ಲಾಪುರ–ಬಿಜಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲೆ ತೇರಾಮೈಲದಿಂದ ೯ ಕಿ.ಮೀ. ಅಂತರದಲ್ಲಿ ಮಂದ್ರೂಪ ಗ್ರಾಮವಿದೆ. ಮಳಸಿದ್ಧೇಶ್ವರ ದೇವಾಲಯ ಮಹಾದ್ವಾರ, ಗರ್ಭಗೃಹ, ಪ್ರದಕ್ಷಿಣಾ ಪಥ ಹಾಗೂ ಶಿಖರಗಳಿಂದ ಕೂಡಿದೆ. ದೇವಾಲಯದ ಮಹಾದ್ವಾತರ ಉತ್ತರ ಮುಖವಾಗಿದೆ. ಗರ್ಭಗೃಹದೊಳಗೆ ಶಿವಲಿಂಗ, ಲಲಾಟ ಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ. ಮಳಸಿದ್ಧೇಶ್ವರ ಗರ್ಭಗೃಹದ ಮುಂದೆ ಮೂರು ದೀಪಸ್ತಂಭಗಳಿವೆ.

ಮಳಸಿದ್ಧೇಶ್ವರ ಗುರು ಸೋಮಲಿಂಗೇಶ್ವರ ಗರ್ಭಗೃಹ ಉತ್ತರ ಮುಖವಾಗಿದೆ. ಗರ್ಭಗೃಹದೊಳಗೆ ಶಿವಲಿಂಗ, ಲಲಾಟ ಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ. ಗರ್ಭಗೃಹದ ಬಲಬದಿಯಲ್ಲಿ ಕನ್ನಡ ಶಾಸನ, ನಂದಿ, ನಾಗೇಶ ಮತ್ತಿತರ ಭಗ್ನಾವಶೇಷಗಳಿವೆ.

ಮಂದ್ರೋಪದ ಹನುಮನ ದೇವಾಲಯದ ಹತ್ತಿರ ಕನ್ನಡ ಶಾಸನವಿದೆ. ಈ ಶಾಸನದ ಸಾರಾಂಶ ಹೀಗಿದೆ, ಸೇವುಣ ದೊರೆ ಐದನೇ ಬಿಲ್ಲಮ ಎಳಮೇಲದಿಂದ ರಾಜ್ಯಭಾರ ಮಾಡುತ್ತಿದ್ದನೆಂದು ಈ ಶಾಸನ ಹೇಳುತ್ತದೆ. ಆಣಂದೂರು ೩೦೦ರ ಬಳಿಯ ಬಾಡ ಮೆಂದುಬ್ಬೆಯ ಸಿದ್ಧನಾಥ ದೇವರಿಗೆ ದಾನ ನೀಡಿದ ಸಂಗತಿ ಶಾಸನದಲ್ಲಿ ದಾಖಲಾಗಿದೆ.[೫೩] ಸೊಲ್ಲಾಪುರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ ಸಿದ್ಧೇಶ್ವರ ಮಂದ್ರೂಪ ಎಂದು ಉಲ್ಲೇಖವಿದೆ.[೫೪] ದೇವಾಲಯದಲ್ಲಿರುವ ಕನ್ನಡ ಶಾಸನ ಅಧ್ಯಯನ ಮಾಡಬೇಕಾಗಿದೆ. ಶಾಸನಗಳಲ್ಲಿ ಸಿದ್ಧೇಶ್ವರ, ಸಿದ್ಧನಾಥ ಹೆಸರುಗಳ ಉಲ್ಲೇಖ ದೊರೆಯುತ್ತದೆ. ಇಂದು ಮಂದ್ರೂಪ ಭಕ್ತರು ಮಳಸಿದ್ಧೇಶ್ವರ ಎಂದು ಕರೆಯುತ್ತಾರೆ. ಮಕರ ಸಂಕ್ರಮಣದ ಐದು ದಿವಸ ಮಳಸಿದ್ಧೇಶ್ವರ ಜಾತ್ರೆ ನಡೆಯುತ್ತದೆ. ದೇವಾಲಯದಿಂದ ಮಹಾದ್ವಾರದ ಎಡ–ಬಲ ಬದಿಯಲ್ಲಿ ದೀಪಸ್ತಂಭಗಳಿವೆ. ಐತಿಹಾಸಿಕ ದೇವಾಲಯಗಳಲ್ಲಿ ಮಂದ್ರೂಪದ ಮಳಸಿದ್ಧೇಶ್ವರ ದೇವಾಲಯ ಒಂದಾಗಿದೆ.

೩೮. ಸಿದ್ಧಯ್ಯಪ್ಪ ದೇವಾಲಯ, ಮುಸ್ತಿ

ಭೂಮಿ ಅಗೆಯುವಾಗ ಮುಸ್ತಿ ಗ್ರಾಮದಲ್ಲಿ ಒಂದು ಶಿವಲಿಂಗ ದೊರೆಯಿತು.[೫೫] ಶಿವಲಿಂದ ದರ್ಶನ ಪಡೆಯಲು ಭಕ್ತರು ಧಾವಿಸಿ ಆಗಮಿಸಿದರು. ಈ ವಿಷಯ ತಿಳಿದುಕೊಂದು ಸೊಲ್ಲಾಪುರ ವಿಶ್ವವಿದ್ಯಾಲಯದ ಪುರಾತತ್ವ ವಿಭಾಗದ ಪ್ರಮುಖರಾದ ಮಾಯಾಪಾಟೀಲ ಆಗಮಿಸಿ, ೧೫ನೇ ಶತಮಾನದ ಪೂರ್ವದಲ್ಲಿ ಯಾದವ ಕಾಲಾವಧಿಯ ಐತಿಹಾಸಿಕ ದೇವಾಲಯವಿದೆ ಎಂದು ಮಾಯಾ ಪಾಟೀಲ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ದಕ್ಷಿಣ ಮುಖವಾದ ದೇವಾಲಯದ ಉತ್ಖನನದಿಂದ ಅನೇಕ ದೇವರ ಭಗ್ನಾವಶೇಷಗಳು ದೊರೆತಿವೆ.

೩೯. ಮಹಾದೇವ ದೇವಾಲಯ, ಮಾಲಕವಟೆ

ಸೊಲ್ಲಾಪುರ–ಬಿಜಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲಿನ ತೇರಾಮೈಲಾದಿಂದ ೨೦ ಕಿ.ಮೀ. ಅಂತರದಲ್ಲಿ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ಮಾಳವಿಟಗೆಯ ಕ್ರಿ.ಶ. ೧೧೬೬ರ ಶಾಸನ ಇದು ಕಲಚುರಿ ದೊರೆ ಬಿಜ್ಜಳದೇವನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಆತ ಮಂಗಳವೇಡದಿಂದ ರಾಜ್ಯಭಾರ ಮಾಡುತ್ತಿದ್ದನೆಂದು ಹೇಳುತ್ತದೆ. ಖ್ಯಾತ ಕರ್ನಾಟಕ ವೃತ್ತಗಳಿಂದ ಕೂಡಿರುವ ಈ ಸುಧೀರ್ಘ ಶಾಸನದ ಕೆಲವು ಭಾಗ ನಾಶವಾಗಿದೆ. ಮಾಳವಿಟಗೆಯ ಮೂಲಿಗ ಭೋಗಗಾವುಂಡ, ಅವನ ಮಗ ಸೋಮಗಾವುಂಡ, ಲಕ್ಷ್ಮಗಾವುಂಡ, ದುಗ್ಗಗಾವುಂಡ ಮೊದಲಾದವರು ಸೇರಿ ದಾನ ನೀಡಿದ ಉಲ್ಲೇಖ ಬಂದಿದೆ. ಬಿಜ್ಜಳನ ಹೆಂಡತಿ ರಂಭಾದೇವಿಯು ಬಸದಿಯೊಂದಕ್ಕೆ ದಾನ ನೀಡಿದ ಉಲ್ಲೇಖವಿದೆ.[೫೬] ಈಗ ಬಸದಿಯು ಕಾಣಸಿಗುವುದಿಲ್ಲ.

ಮಹಾದೇವ ದೇವಾಲಯದ ಗರ್ಭಗೃಹ ಮಾತ್ರ ಉಳಿದಿದೆ. ಸಭಾಮಂಟಪ ನೆಲಸಮವಾಗಿದೆ. ಮೂರು ವೀರಗಲ್ಲುಗಳಿವೆ. ಮೂರು ಮಹಾಸತಿಗಲ್ಲುಗಳಿವೆ. ಇವುಗಳ ಮೇಲೆ ಲಿಪಿಗಳಿವೆ. ಗರ್ಭಗೃಹದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ.

೪೦. ಮಹಾದೇವ ದೇವಾಲಯ, ಲಂಪಗಿ

ಸೊಲ್ಲಾಪುರ–ಬಿಜಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲಿನ ತೇರಾಮೈಲದಿಂದ ೨೪ ಕಿ.ಮೀ. ಅಂತರದಲ್ಲಿ ಲಂಪಗಿ ಗ್ರಾಮವಿದೆ. ಲಂಪಗಿಯ ಐತಿಹಾಸಿಕ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ದೇಗುಲ ನೆಲಸಮವಾಗಿದೆ. ಇದರ ಅವಶೇಷಗಳನ್ನು ಗ್ರಾಮದ ಪ್ರತಿ ಕುಟುಂಬದ ಸದಸ್ಯರು ತಮ್ಮ ಮನೆಯ ಕಟ್ಟಡದ ಸಲುವಾಗಿ ಉಳಿಸಿಕೊಂಡಿದ್ದಾರೆ. ಲಂಪಗಿ ಮಾರುತಿ ದೇವಾಲಯದಲ್ಲಿನ ಶಾಸನ ಕ್ರಿ.ಶ. ೧೨ನೆಯ ಶತಮಾನಕ್ಕೆ ಸೇರಿಸಬಹುದಾಗಿದೆ. ಈ ಶಾಸನವು ಕಲಚುರಿ ದೊರೆ ಕಾಯಮುರಾರಿ ಸೋಯಿದೇವನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಆದಿತ್ಯರಸ ಲಂಪಗಿಯ ಅಗ್ರಹಾರ ಹಾಗೂ ಅಲ್ಲಿನ ಬ್ರಾಹ್ಮಣರಿಗೆ ದಾನಧರ್ಮ ನೀಡಿದ ಉಲ್ಲೇಖ ಈ ಶಾಸನದಲ್ಲಿ ಬಂದಿದೆ.[೫೭] ಈ ಶಾಸನ ಮಣ್ಣಿನೊಳಗೆ ಸಿಲುಕಿದೆ ದೇಗುಲದ ಭಗ್ನಾವಶೇಷಗಳು ಹಲವು ಕಡೆ ಹರಡಿಕೊಂಡಿವೆ.

೪೧. ಮಹಾದೇವ ದೇವಾಲಯ, ವಾಂಗಿ

ಸೊಲ್ಲಾಪುರ-ಬಿಜಾಪುರ ರಾಷ್ಟ್ರೀಯ ಹೆದ್ದಾರಿಯ ಹತ್ತಿರ ಒಡಕವಾಳ ಗ್ರಾಮವಿದೆ. ಒಡಕವಾಳ ಗ್ರಾಮದಿಂದ ೫ ಕಿ.ಮೀ. ಅಂತರದಲ್ಲಿ ವಾಂಗಿ ಗ್ರಾಮವಿದೆ. ಗ್ರಾಮದ ದಿಬ್ಬದ ಮೇಲೆ ಐತಿಹಾಸಿಕ ಮಹಾದೇವ ದೇವಾಲಯವಿದೆ. ಆಣಂದೂರು-೩೦೦ ಬಳಿಯ ಕಂಪಣ, ಮಂದುರ್ವ-೩೦, ಅದರ ಬಳಿಯ ಬಾಡವಾದ ವಾಂಗಿ ಹಾಗೂ ಅಲ್ಲಿಯ ಪ್ರಭು ಮಹಾಪ್ರಧಾನ ರೇಯಿಮಯ್ಯ ದಂಡನಾಯಕ ಮತ್ತು ಅಲ್ಲಿಯ ನಾಡ ಅಧಿಕಾರಿ ಸೋಮರಸ ಮೊದಲಾದವರು ಸೇರಿ ಮೂಲಸ್ಥಾನದ ಭೀಮೇಶ್ವರ ದೇವರಿಗೆ ದತ್ತಿ ನೀಡಿದ ವಿವರ ದಾಖಲಾಗಿದೆ. ಮತ್ತೊಬ್ಬ ಅಧಿಕಾರಿ ಸೋಮಯ್ಯಸಾಹಣಿ ಸಹ ಈ ದಾನಕಾರ್ಯಗಳಲ್ಲಿ ಪಾಲ್ಗೊಂಡಿದ್ದನ್ನು ಈ ಶಾಸನ ಹೇಳುತ್ತದೆ. ಅಯ್ಯವೊಳೆ ಐನೂರು ಸ್ವಾಮಿಗಳೂ ಈ ದೇವಾಲಯಕ್ಕೆ ದಾನ ನೀಡಿದ ಉಲ್ಲೇಖವಿದೆ.[೫೮]

ವಾಂಗಿ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ದೇವಾಲಯ ಗರ್ಭಗೃಹ ಅಂತರಾಳ, ಪ್ರದಕ್ಷಿಣಾಪಥಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಸುತ್ತಲು ಗೋಡೆಯಲ್ಲಿ ನಾಲ್ಕು ಗಣೇಶ, ಎರಡು ವೀರಭದ್ರ, ಎರಡು ಶಿವಪಾರ್ವತಿ ಉಬ್ಬುಶಿಲ್ಪಗಳಿವೆ. ಮುಂದೆ ನಂದಿ ವಿಗ್ರಹವಿದೆ. ಗರ್ಭಗೃಹದ ಎಡಬದಿಯಲ್ಲಿ ಕನ್ನಡ ಶಾಸನವಿದೆ. ಬಲಬದಿಯಲ್ಲಿ ಪದ್ಮವಿದೆ. ಐತಿಹಾಸಿಕ ದೇವಾಲಯ ನೆಲಸಮವಾಗಿದೆ. ದಿನಾಂಕ ೨೯-೦೮-೨೦೦೦ರಲ್ಲಿ ದೇಗುಲ ಜೀರ್ಣೋದ್ಧಾರ ಮಾಡಲಾಗಿದೆ.

ವಾಂಗಿ ಗ್ರಾಮದ ೨ ಕಿ.ಮೀ. ಅಂತರದ ಗದ್ದೆಯಲ್ಲಿ ಪೀರಸಾಹೇಬ ದರ್ಗಾ ಇದೆ. ಐತಿಹಾಸಿಕ ದರ್ಗಾ ನೆಲಸಮವಾಗಿದೆ. ಹೊಸ ಕಟ್ಟಡ ಪ್ರಾರಂಭವಾಗಿದೆ. ದರ್ಗಾದ ಮುಂದೆ ಮೂರು ದೀಪಸ್ತಂಭಗಳಿವೆ. ಪ್ರತಿವರ್ಷದ ಮೇ ತಿಂಗಳ ಮೊದಲನೆಯ ವಾರ ಮಹಾದೇವ-ಪೀರಸಾಹೇಬ ಇಬ್ಬರ ಜಾತ್ರೆ-ಉರುಸ್ ಏಕಕಾಲದಲ್ಲಿ ಹಿಂದು-ಮುಸ್ಲಿಂ ಬಾಂಧವರು ಭಾವೈಕ್ಯತೆಯಿಂದ ಆಚರಿಸುತ್ತಾರೆ ಎಂದು ರೇವಣಸಿದ್ಧ ಮಹಾದೇವ ಜವಳಕೋಟಿ ಅವರು ಹೇಳಿದರು.[೫೯] ಕನ್ನಡ ಶಾಸನಗಳಲ್ಲಿ ಭೀಮೇಶ್ವರ ದೇವರು ಎಂದು ಉಲ್ಲೇಖವಿದೆ. ಆದರೆ ಇಂದಿನ ವಾಂಗಿ ಭಕ್ತರು ಮಹಾದೇವ ದೇವರು ಎಂದು ಕರೆಯುತ್ತಾರೆ. ವಾಂಗಿ ಗ್ರಾಮದ ಹನುಮಾನ ದೇವಾಲಯ, ಮಸೀದಿ, ಆಗಸಿ ಪರಿಸರದಲ್ಲಿ ಹಲವು ದೇಗುಲದ ಅವಶೇಷಗಳಿವೆ. ಐತಿಹಾಸಿಕ ದೇವಾಲಯಗಳಲ್ಲಿ ವಾಂಗಿ ಮಹಾದೇವ ದೇವಾಲಯ ಒಂದಾಗಿದೆ.

೪೨. ಮಹಾದೇವ ದೇವಾಲಯ, ಹೊಟಗಿ

ಸೊಲ್ಲಾಪುರ ಜಿಲ್ಲೆಯ ದಕ್ಷಿಣ ಸೊಲ್ಲಾಪುರ ತಾಲ್ಲೂಕಿನಲ್ಲಿ ಹೊಟಗಿ ಎಂಬ ಚಿಕ್ಕ ಗ್ರಾಮವಿದೆ. ಹೊಟಗಿ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ಐತಿಹಾಸಿಕ ಮಹಾದೇವ ದೇವಾಲಯ ನೆಲಸಮವಾಗಿದೆ. ನೆಲಸಮವಾಗಿರುವ ಮಹಾದೇವ ದೇವಾಲಯದ ಪೂಜೆ ಸಮಗಾರ ಸಮಾಜ ಜನರು ಮಾಡುತ್ತಿದ್ದರು. ದೇವಾಲಯದಲ್ಲಿಯ ಶಿವಲಿಂಗ ಭಿನ್ನವಾಯಿತು, ಲಿಂಗಾಯತ ಸಮಾಜದ ಜನರು ಭಿನ್ನವಾದ ಶಿವಲಿಂಗ ತೆಗೆದುಕೊಂಡು ನೂತನ ಶಿವಲಿಂಗ ತೆಗೆದುಕೊಂಡು ನೂತನ

ದೇವಾಲಯ ನಿರ್ಮಾಣ ಮಾಡಿದರು.[೬೦] ೧೯೯೫ರಲ್ಲಿ ಪಂಚಪೀಠದ ಜಗದ್ಗುರುಗಳ ಅಮೃತ ಹಸ್ತದಿಂದ ಶಿವಲಿಂಗ ಪ್ರತಿಷ್ಠಾಪಿಸಲಾಯಿತು.[೬೧] ಸೊಲ್ಲಾಪುರ ಜಿಲ್ಲೆಯ ಕನ್ನಡ ಶಾಸನಗಳಲ್ಲಿ ಭೋಗಲಿಂಗ ಹೂಟಿಗೆ ಎಂದು ಉಲ್ಲೇಖವಿದೆ.[೬೨] ದೇವಾಲಯದ ಪರಿಸರದಲ್ಲಿ ಹಲವು ಭಗ್ನಾವಶೇಷಗಳಿವೆ. ಇದೇ ಐತಿಹಾಸಿಕ ಭೊಗಲಿಂಗ ದೇವಾಲಯವಾಗಿರಬಹುದು. ದೇವಾಲಯದ ಪರಿಸರದಲ್ಲಿ ಮಹಿಷಾಸುರ ಮರ್ದಿನಿ, ವೀರಭದ್ರ, ನಟರಾಜ, ಗಣೇಶ, ನಂದಿ ಶಿಲ್ಪಗಳಿವೆ. ನಾಲ್ಕು ವೀರಗಲ್ಲುಗಳು ಲಭ್ಯವಾಗಿವೆ. ಅಮದು ಭಯಾನಕವಾದ ಯುದ್ಧ ನಡೆದು ಹಲವು ಜನರು ಸಾವನ್ನಪಿದರೆಂದು ವೀರಗಲ್ಲುಗಳಿಂದ ತಿಳಿಯುತ್ತದೆ. ಈ ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರಗೊಳಿಸಲಾಗಿದೆ. ಹೂಟಗಿ ಚನ್ನವೀರ ಶಿವಾಚಾರ್ಯ ಸಂಸ್ಥಾನ ಹಿರೇಮಠದ ಅಧಿನದಲ್ಲಿ ಈ ದೇವಾಲಯವಿದೆ.

ಪಂಡರಪೂರ ತಾಲ್ಲೂಕು

೪೩. ಶಿವ ದೇವಾಲಯ, ತಾರಾಪುರ

ಸೊಲ್ಲಾಪುರ–ಪಂಡರಪುರ ರಾಷ್ಟ್ರೀಯ ಹೆದ್ದಾರಿಯ ಮೇಲೆ ತಾರಾಪುರ ಗ್ರಾಮವಿದೆ. ಚಾಲುಕ್ಯರ ಐತಿಹಾಸಿಕ ತಾರಾಪುರ ದೇವಾಲಯವಿದೆ.[೬೩] ಭೀಮಾ ನದಿಯ ದಂಡೆಯ ಮೇಲೆ ತ್ರಿಕೂಟ ಶಿವದೇವಾಲಯ ಪೂರ್ವ ಮುಖವಾಗಿದೆ. ಮೂರು ಗರ್ಭಗೃಹಗಳಿವೆ. ಬ್ರಹ್ಮ, ವಿಷ್ಣು ಮತ್ತು ಮಹೇಶ ಮೂರು ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪ ನೆಲಸಮವಾಗಿದೆ. ಮುಖಮಂಟಪ ಪೂರ್ವ ಮುಖವಾಗಿದೆ. ದೇಗುಲದ ಕೋಷ್ಟಕಗಳಲ್ಲಿ ಮಹಾಲಕ್ಷ್ಮಿ, ಚಾಮುಂಡಿ, ಸಪ್ತಮಾತೃಕೆ, ಬ್ರಹ್ಮದೇವ, ಸೂರ್ಯ, ಭೈರವ, ವಿಷ್ಣು ಹಲವು ಉಬ್ಬು ಶಿಲ್ಪಗಳಿವೆ. ವಿದೇಶಿ ರಾಜರ ಆಕ್ರಮಣದಿಂದ ದೇವಾಲಯದ ಕೆಲಭಾಗ ನಾಶವಾಗಿದೆ. ಚಾಲುಕ್ಯರು ನಿರ್ಮಿಸಿದ ಹಲವು ಶಿವ ದೇವಾಲಯ ಸೊಲ್ಲಾಪುರ ಜಿಲ್ಲೆಯಲ್ಲಿವೆ ಎಂದು ಸೊಲ್ಲಾಪುರ ವಿಶ್ವವಿದ್ಯಾಲಯದ ಪುರಾತತ್ವ ವಿಭಾಗದ ಲತಾ ಆಕಲೂಜಕರ ಅವರು ಹೇಳಿದರು. ಐತಿಹಾಸಿಕ ದೇವಾಲಯಗಳಲ್ಲಿ ತಾರಾಪುರ ಶಿವದೇವಾಲಯ ಒಂದಾಗಿದೆ.

೪೪. ದುಧೇಶ್ವರ ದೇವಾಲಯ, ಮಂಠಾಪೂರ

ಪಂಡರಪುರ ತಾಲ್ಲೂಕಿನ ಮಂಠಾಪೂರ ಗ್ರಾಮದಲ್ಲಿ ಐತಿಹಾಸಿಕ ದುಧೇಶ್ವರ ದೇವಾಲಯವಿದೆ.[೬೪] ಹರಿಕಥೆಯ ಪ್ರಕಾರ ಗ್ರಾಮದ ಗವಳಿ ಪ್ರತಿವರ್ಷ ಶ್ರೀಖರ ಶಿಂಗಣಾಪುರ ಮಹಾದೇವ ದರ್ಶನ ಪಡೆಯಲು ಹೋಗುತ್ತಿದ್ದನು. ಗವಳಿಗೆ ೮೦ ವರ್ಷವಾಗಿದ್ದರಿಂದ ಅವನಿಗೆ ಶಿಂಗಣಾಪುರ ಮಹಾದೇವ ದರ್ಶನ ಪಡೆಯಲು ಅಸಾಧ್ಯವಾಯಿತು. ದಾರಿಯಲ್ಲಿ ಶಿವನು ಬೆಟ್ಟಿಯಾಗಿ ನಿನ್ನ ಮನೆಯ ಆಕಳು ರೂಪದಲ್ಲಿ ದರ್ಶನ ನೀಡುತ್ತೇನೆಂದು ಹೇಳಿ ಮಾಯವಾದನು. ಗವಳಿಯ ಮನೆಯಲ್ಲಿ ಆಕಳು ರೂಪದಲ್ಲಿ ದರ್ಶನ ನೀಡಿದ್ದರಿಂದ ಅದನ್ನು ದುಧೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಹಾಲಿಗೆ ಮರಾಠಿಯಲ್ಲಿ ಧೂದ ಎಂದು ಕರೆಯುತ್ತಾರೆ. ಐತಿಹಾಸಿಕ ದೇವಾಲಯಗಳಲ್ಲಿ ದುಧೇಶ್ವರ ದೇವಾಲಯ ಒಂದಾಗಿದೆ.

ಬಾರ್ಶಿ ತಾಲ್ಲೂಕು

೪೫. ಉತ್ತರೇಶ್ವರ ದೇವಾಲಯ, ಬಾರ್ಶಿ

ಬಾರ್ಶಿಯ ಮಂಗಳವಾಡ ಪೇಟೆಯ ಉತ್ತರೇಶ್ವರ ಐತಿಹಾಸಿಕ ಶಿವ ದೇವಾಲಯವಿದೆ.[೬೫] ಪ್ರತಿವರ್ಷದ ಶ್ರಾವಣಮಾಸದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದರ್ಶನ ಪಡೆಯಲು ಆಗಮಿಸುತ್ತಾರೆ. ಸೇವುಣರ ಕಾಲಾವಧಿಯಲ್ಲಿ ಉತ್ತರೇಶ್ವರ ದೇವಾಲಯ ನಿರ್ಮಾಣವಾಗಿದೆ. ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಉತ್ತರೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖ ದೊರೆಯುತ್ತದೆ. ಬಾರ್ಶಿಯ ಉತ್ತರೇಶ್ವರ ಐತಿಹಾಸಿಕ ದೇವಾಲಯಗಳಲ್ಲಿ ಒಂದಾಗಿದೆ.

೪೬. ಶಿವತೀರ್ಥ ಮಹಾಂಕಾಳೇಶ್ವರ, ಸಾಸುರೆ

ದಕ್ಷಿಣ ಕಾಶಿ ಎಂದು ಪ್ರಸಿದ್ಧವಾದ ಬಾರ್ಶಿ ತಾಲ್ಲೂಕಿನ ಸಾಸುರೆ ಗ್ರಾಮದಲ್ಲಿ ಮಹಾಂಕಾಳೇಶ್ವರ ಐತಿಹಾಸಿಕ ದೇವಾಲಯವಿದೆ.[೬೬] ನಾಗಝುರಿ ನದಿಯ ದಂಡೆಯ ಮೇಲೆ ಸುಂದರ ಕಲಾಕುಸುರಿಯಿಂದ ಹೆಮಾಡಪಂಥಿ ದೇವಾಲಯವಿದೆ. ದೇವಾಲಯದ ಆವರಣದಲ್ಲಿ ಶಾಸನವಿದೆ. ೧೨ ಜ್ಯೋತಿರ್ಲಿಂಗಗಳೊಂದಿಗೆ ೨೯ ಶಿವಲಿಂಗಗಳಿವೆ. ಐತಿಹಾಸಿಕ ದೇವಾಲಯಗಳಲ್ಲಿ ಸಾಸುರೆ ಶಿವತೀರ್ಥ ಮಹಾಂಕಾಳೇಶ್ವರ ದೇವಾಲಯ ಒಂದಾಗಿದೆ.

ಮಂಗಳವೇಡಾ ತಾಲ್ಲೂಕು

೪೭. ಮಹಾದೇವ ದೇವಾಲಯ. ಮಂಗಳವೇಡೆ

ಸೊಲ್ಲಾಪುರ ಜಿಲ್ಲೆಯ ಮಂಗಳವೇಡೆ ತಾಲ್ಲೂಕು ಕೇಂದ್ರವಾಗಿದೆ. ಅಂದು ಕಲಚುರಿ ದೊರೆ ಜೋಗಮ ಚಾಲುಕ್ಯರ ಸಾಮಂತನಾಗಿ ಮಂಗಳವೇಡೆದಿಂದ ರಾಜ್ಯಭಾರ ಮಾಡುತ್ತಿದ್ದ ಕಲಚೂರಿಗಳ ಮೊದಲ ರಾಜಧಾನಿ ಮಂಗಳವೇಡೆಯಾಗಿತ್ತು.[೬೭] ಮಂಗಲವೇಡೆಯ ಮಹಾದೇವ ದೇವಾಲಯ ಪೂರ್ವ ಮುಖವಾಗಿದೆ. ಇದಕ್ಕೆ ಸಂಬಂಧಪಟ್ಟ ಕನ್ನಡ–ಮರಾಠಿ ಶಾಸನಗಳು ಲಭ್ಯವಾಗಿವೆ.

ಕನ್ನಡ ಶಾಸನ ಮಂಗಳವೇಡೆಯ ಕೋಟೆಯೊಳಗೆ ಇದೆ. ಕನ್ನಡ ಶಾಸನಗಳಲ್ಲಿ ಕೇಶವದೇವ ನಾಯಕನ ಹೇಳಿಕೆಯಂತೆ ಮಲ್ಲಿಕಾರ್ಜುನ ದೇವರ ಪೂಜಾರಿ, ರೇವಣದೇವ ಇತರರೊಂದಿಗೆ ಸೇರಿಕೊಂಡು ನೀಡಿದ ಉಲ್ಲೇಖವಿದೆ.[೬೮] ದೇಗುಲದ ಸಭಾಮಂಟಪದ ಕಂಬ ಒಂದರಲ್ಲಿ ಮರಾಠಿ ಶಾಸನವಿದೆ. ದೇಗುಲದ ಸಭಾಮಂಟಪದ ಶಾಸನದಲ್ಲಿ ಶಕ ೧೪೯೪ ಕ್ರಿ.ಶ. ೧೫೭೨ರಂದು ಹಿಪ್ಪರಗಿಯ ಬಾಹಯಾನಿ ಧನಾಜಿ ಕುಲಕರ್ಣಿ ದೇಗುಲದ ಜೀರ್ಣೋದ್ಧಾರ ಮಾಡಿದ ಉಲ್ಲೇಖವಿದೆ.

ದೇವಾಲಯ ಗರ್ಭಗೃಹ, ಅಂತರಾಳ, ಶಿಖರ, ಸಭಾಮಂಟಪ, ಪ್ರದಕ್ಷಿಣಾ ಪಥ ಮತ್ತು ಮಹಾದ್ವಾರಗಳಿಂದ ಕೂಡಿದೆ. ಗರ್ಭಗೃಹದ ಮಧ್ಯದಲ್ಲಿ ಶಿವಲಿಂಗ, ವಾಯುವ್ಯದಲ್ಲಿ ಗಣೇಶ ಪ್ರತಿಷ್ಠಾಪಿಸಲಾಗಿದೆ. ಶಿವಲಿಂಗದ ಮುಂದೆ ನಂದಿ ವಿಗ್ರಹವಿದೆ. ಅಂತರಾಳದ ಉತ್ತರಮುಖವಾಗಿ ಗಣೇಶನ ಶಿಲ್ಪವಿದೆ. ಸಭಾಮಂಟಪದಲ್ಲಿ ೩೨ ಕಂಬ,

ಮಧ್ಯದಲ್ಲಿ ಶಿವಲಿಂಗವಿದೆ. ಇಕ್ಕೆಲಗಳಲ್ಲಿ ವಿಶ್ರಾಂತಿ ಪಡೆಯುವ ಜಗಲಿಗಳಿವೆ. ಗರ್ಭಗೃಹದ ಶಿವಲಿಂಗದ ಬಳಿ ಶಾಸನವಿದೆ. ಶಾಸನ ಸಂಶೋಧಕರು ಈ ಶಾಸನ ಅಧ್ಯಯನ ಮಾಡಬೇಕಾಗಿದೆ.

ಮಂಗಳವೇಡೆಯ ಜನರು ಮಲ್ಲಿಕಾರ್ಜುನ, ಶಿವ, ಮಹಾದೇವ ಮತ್ತು ಕಾಶಿವಿಶ್ವೇಶ್ವರ ಹಲವು ಹೆಸರಿನಿಂದ ಕರೆಯುತ್ತಾರೆ. ಕನ್ನಡ ಶಾಸನಗಳಲ್ಲಿ ಉತ್ತರೇಶ್ವರ, ಸಾಮಂತಕೇಶ್ವರ, ಬೋಗೇಶ್ವರ ದೇವರು ಎಂದು ಉಲ್ಲೇಖವಿದೆ.[೪೯] ಪ್ರತಿವರ್ಷದ ಮಹಾಶಿವರಾತ್ರಿಯಂದು ಜಾತ್ರೆ ನಡೆಯುತ್ತದೆ. ದೇವಾಲಯದ ಮುಂದೆ ಪ್ರಾಚೀನ ಕಾಲದ ಬಾವಿ ಇದೆ. ಅದರಲ್ಲಿ ಕೆಲವು ದೇಗುಲದ ಭಗ್ನಾವಶೇಷಗಳಿವೆ. ಇದು ಐತಿಹಾಸಿಕ ದೇವಾಲಯಗಳಲ್ಲಿ ಒಂದಾಗಿದೆ.

ಮಾಡಾ ತಾಲ್ಲೂಕು

೪೮. ಮಹಾದೇವ ದೇವಾಲಯ, ಚಿಂಚಗಾಂವ

ಕುರ್ಡವಾಡಿ–ಬಾರ್ಶಿ ರಸ್ತೆಯ ಹತ್ತಿರ ಐತಿಹಾಸಿಕ ಮಹಾದೇವ ದೇವಾಲಯವಿದೆ.[೨೦] ಗರ್ಭಗೃಹ, ಶಿಖರ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದೊಳಗೆ ಮಹಾಶಿವಲಿಂಗ, ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ಮುಂದೆ ನಂದಿ ವಿಗ್ರಹವಿದೆ. ದೇವಾಲಯದಲ್ಲಿ ವಿವಿಧ ದೇವರ ಶಿಲ್ಪಗಳಿವೆ. ದೇವಾಲಯದ ಸಭಾಮಂಟಪದ ಸುತ್ತಲೂ ವಿವಿಧ ಭಂಗಿಯ ಶಿಲಾಬಾಲಿಕೆಯರಿದ್ದಾರೆ. ಪ್ರತಿವರ್ಷ ಶ್ರಾವಣ ಸೋಮವಾರ ಭಕ್ತರು ದರ್ಶನ ಪಡೆಯಲು ಧಾವಿಸಿಬರುತ್ತಾರೆ. ಐತಿಹಾಸಿಕ ದೇವಾಲಯಗಳಲ್ಲಿ ಚಿಂಚಗಾಂವ ಮಹಾದೇವ ದೇವಾಲಯ ಒಂದಾಗಿದೆ.

ಮಾಳಶಿರಸ ತಾಲ್ಲೂಕು

೪೯, ಸೋಮೇಶ್ವರ ದೇವಾಲಯ, ಮಾಳಶಿರಸ

ಪಂಡರಪುರ–ಪುಣೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮೇಶ್ವರ ದೇವಾಲಯವಿದೆ.[೨೧] ಗರ್ಭಗೃಹ, ಅಂತರಾಳ, ಸಭಾಮಂಟಪ, ಮಹಾದ್ವಾರಗಳಿವೆ. ಗರ್ಭಗೃಹದಲ್ಲಿ ಶಿವಲಿಂಗ, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಅಲಂಕರಿಸಿದ್ದಾಳೆ. ಮುಂದೆ ೩x೪ ಅಡಿಯ ನಂದಿ ವಿಗ್ರಹವಿದೆ. ದೇವಾಲಯದ ಆವರಣದಲ್ಲಿ ಸಪ್ತಮಾತೃಕೆಯರ, ವಿಷ್ಣು, ದ್ವಾರಪಾಲಕರು ಹಲವು ಅವಶೇಷಗಳಿವೆ. ವಿಭಿನ್ನ ಭಂಗಿಯ ಶಿಲಾಬಾಲಿಕೆಯರ ಉಬ್ಬುಶಿಲ್ಪಗಳಿಗೆ. ೧೬೫೯ರ ಮುಸ್ಲಿಂ ಆಕ್ರಮಣದಲ್ಲಿ ಈ ದೇವಾಲಯದ ಮೇಲೆ ದಾಳಿಯಾಗಿರಬಹುದು. ಐತಿಹಾಸಿಕ ದೇವಾಲಯಗಳಲ್ಲಿ ಸೋಮೇಶ್ವರ ದೇವಾಲಯ ಒಂದಾಗಿದೆ.

ಮೋಹಳ ತಾಲ್ಲೂಕು

೫೦. ಹನ್ನೆರಡು ಜ್ಯೋತಿರ್ಲಿಂಗ, ಕುರೂಲ

ಮೋಹಳ ತಾಲ್ಲೂಕಿನ ಕುರೂಲ ಗ್ರಾಮದಲ್ಲಿ ಹನ್ನೆರಡು ಜ್ಯೋತಿರ್ಲಿಂಗಗಳಿವೆ. ಗ್ರಾಮದ ವಿವಿಧ ಪ್ರದೇಶದಲ್ಲಿ ಶಿವಲಿಂಗಗಳಿವೆ. ೧೨ನೇ ಶತಮಾನದಲ್ಲಿ ಈ ಗ್ರಾಮ

ಯಾದವರ ಸಂಘಣ ರಾಜರ ಆಳ್ವಿಕೆಗೆ ಒಳಪಟ್ಟಿತ್ತು. ಅವರ ಎಲ್ಲ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದರು. ಕುರುವಲಿಗೆ ಗ್ರಾಮ ಸಿಂಘಣ ದೊರೆ ಅಮೋಘಸಿದ್ಧನಿಗೆ ದಾನ ನೀಡಿದ ಉಲ್ಲೇಖ ಪುಳೂಜ ಲಿಂಗೇಶ್ವರ ದೇವಾಲಯದ ಶಾಸನದಲ್ಲಿದೆ.[೨೨] ಕುರೂಲ ದೇವಾಲಯದ ಉಲ್ಲೇಖ ಸ್ಕಂದ ಪುರಾಣದಲ್ಲಿದೆ. ಈ ಗ್ರಾಮ ಶಾತವಾಹನ, ಚಾಲುಕ್ಯ ಹಾಗೂ ಯಾದವರ ಆಡಳಿತದಲ್ಲಿತ್ತೆಂದು ಸಂಜಯ ಮೊರೆ ಹೇಳಿದರು.

ಕುರೂಲ–ಪಂಡರಾಪುರ ರಸ್ತೆಯ ಮೇಲೆ ಸೋಮನಾಥ ದೇವಾಲಯವಿದೆ. ಸಿದ್ರಾಮ ಮಳಾ (ಹೊಲ)ದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಇಲ್ಲಿ ಸೊನ್ನಲಿಗೆ ಸಿದ್ಧರಾಮ ಹಾಗೂ ಅಮೋಘಸಿದ್ಧರ ಬೆಟ್ಟಿಯಾಗಿದೆ. ಕಾತೆವಾಡ ರಸ್ತೆಯ ಮೇಲೆ ಮಹಾಲಾಲೇಶ್ವರ ಗ್ರಾಮದ ಒಳಗೆ ಓಂಕಾರೇಶ್ವರ, ವೈದ್ಯನಾಥ, ತ್ರಯಂಬಕೇಶ್ವರ. ಕೇದಾರನಾಥ, ಪಂಡರಪುರ ರಸ್ತೆಯ ಮೇಲೆ ರಾಮೇಶ್ವರ, ಮೋಹಳ ರಸ್ತೆಯ ಹತ್ತಿರ ಕಾಶಿವಿಶ್ವೇಶ್ವರ, ಗ್ರಾಮದ ಪೂರ್ವಕ್ಕೆ ಘೃಣೇಶ್ವರ ದೇವಾಲಯಗಳಿವೆ. ಶ್ರಾವಣಮಾಸ, ಮಹಾಶಿವರಾತ್ರಿ ದಿವಸ ಭಕ್ತರು ಹನ್ನೆರಡು ಶಿವಲಿಂಗಗಳ ದರ್ಶನ ಪಡೆಯಲು ಬರುತ್ತಾರೆ. ದೇವಾಲಯಗಳ ಪರಿಸರದಲ್ಲಿ ಐತಿಹಾಸಿಕ ಅವಶೇಷಗಳಿವೆ.

೫೧. ಶಿವ ದೇವಾಲಯ, ಕೊರವಲಿ

ಸೊಲ್ಲಾಪುರ–ಕಾಮತಿ–ವಿಜಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲೆ ಕೊರವಲಿ ಗ್ರಾಮವಿದೆ. ಪ್ರಾಚೀನ ಚಾಲುಕ್ಯರ ಶಿವ ದೇವಾಲಯ ಪೂರ್ವಮುಖವಾಗಿದೆ.[೨೩] ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮಹಾದ್ವಾರಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಭವ್ಯವಾದ ಶಿವಲಿಂಗ, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಅಲಂಕರಿಸಿದ್ದಾಳೆ. ದೇವಾಲಯದ ಸುತ್ತಲೂ ವಿವಿಧ ಭಂಗಿಯ ೧೭ ಜನ ಶಿಲಾಬಾಲಿಕೆಯರಿದ್ದಾರೆ. ವಾದ್ಯ ಬಾರಿಸುವ, ನೃತ್ಯಮಾಡುವ, ಮೇನಕೆ, ಶತ್ರಮರ್ದಿನಿ, ಪುತ್ರವಲಭ, ಸ್ತ್ರೀ ಹೀಗೆ ವಿವಿಧ ಭಂಗಿಯ ಶಿಲಾಬಾಲಿಕೆಯರ ಸುಂದರ ಉಬ್ಬುಶಿಲ್ಪಗಳಿವೆ. ಐತಿಹಾಸಿಕ ದೇವಾಲಯಗಳಲ್ಲಿ ಕೊರವಲಿಯ ಶಿವ ದೇವಾಲಯ ಒಂದಾಗಿದೆ.

೫೨. ಶಿವ ದೇವಾಲಯ, ಗೊಟೇವಾಡಿ

ಸೊಲ್ಲಾಪುರ–ಪುಣೆ ರಾಷ್ಟ್ರೀಯ ಹೆದ್ದಾರಿಯ ವಡವಳದಿಂದ ೫ ಕಿ.ಮೀ. ಅಂತರದಲ್ಲಿ ಗೊಟೆವಾಡಿ ಗ್ರಾಮವಿದೆ. ಐತಿಹಾಸಿಕ ಚಾಲುಕ್ಯರ ಶಿವ ದೇವಾಲಯವಿದೆ.[೨೪] ಗರ್ಭಗೃಹ, ಸಭಾಮಂಟಪ ನೆಲಸಮವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ದೇಗುಲದ ಪರಿಸರದಲ್ಲಿ ಸಪ್ತಮಾತೃಕೆ, ಗಣೇಶ, ಶಿವನ ತೊಡೆಯ ಮೇಲೆ ಪಾರ್ವತಿ, ಹಲವು ಉಬ್ಬು ಶಿಲ್ಪಗಳಿವೆ. ಸೊಲ್ಲಾಪುರ ಜಿಲ್ಲೆಯಲ್ಲಿ ಐತಿಹಾಸಿಕ ಹಲವು ಶಿವ ದೇವಾಲಯಗಳಿರುವುದರಿಂದ ಪ್ರಾಚೀನ ಕಾಲದಲ್ಲಿ ಶೈವ ಪಂಥದ ಪ್ರಭಾವವಿತ್ತೆಂದು ಲತಾ ಅಕಲೂಜಕರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೫೩. ಬಾಣೇಶ್ವರ ದೇವಾಲಯ, ಮೋಹಳ

ಸೊಲ್ಲಾಪುರ–ಪುಣೆ ರಾಷ್ಟ್ರೀಯ ಹೆದ್ದಾರಿಯ ಮೇಲೆ ಮೋಹಳ ತಾಲ್ಲೂಕಿನ ಐತಿಹಾಸಿಕ ಮಹಾದೇವ ದೇವಾಲಯವಿದೆ. ಈ ದೇಗುಲ ಬಾಣೇಶ್ವರ ಹೆಸರಿನಿಂದ

ಪ್ರಸಿದ್ಧವಾಗಿದೆ. ನಾಗನಾಥ ಮತ್ತು ನಾಗೇಶ ಸಂಪ್ರದಾಯದಿಂದ ಪ್ರಾಚೀನ ಮೋಹಳ ಇತಿಹಾಸವಿದೆ. ನಾಗೇಶ ಶಿವ ಮೋಹಳಕ್ಕೆ ಆಗಮಿಸಿದ ನಂತರ ನಾಗೇಶ ಸಂಪ್ರದಾಯ ಹಾಗೂ ಭಕ್ತ ಹೆಗರಪ ಇತಿಹಾಸದ ಪರಿಚಯ 'ಸಂಕಟ ಹರಿಣೆ' ಎಂಬ ಗ್ರಂಥದಲ್ಲಿ ಮತ್ತು ನಾಗೇಶ ಚರಿತ್ರೆ ಎಂಬ ಗ್ರಂಥದಲ್ಲಿ ದೊರೆಯುತ್ತದೆ. ಮೋಹಳ ಹೆಸರು ಮಧ್ಯಕಾಲದ ಮರಾಠಿಯ ಇತಿಹಾಸದಲ್ಲಿ ಪರಿಚಯ 'ಸಂಕಟ ಹರಿಣೆ' ಗ್ರಂಥದಲ್ಲಿ ದೊರೆಯುತ್ತದೆ. ಮೋಹಳ ಹೆಸರು ಮಧ್ಯಕಾಲದ ಮರಾಠಿ ಇತಿಹಾಸದಲ್ಲಿ ಪದೇ ಪದೇ ದೊರೆಯುತ್ತದೆ. ವಡವಳದ ನಾಗನಾಥ ದೇವಾಲಯ ಕ್ರಿ.ಶ. ೧೭೭೦ರಲ್ಲಿ ನಿರ್ಮಿಸಲಾಯಿತು. ಔರಂಗಜೇಬ ಬ್ರಹ್ಮಪುರಿ ಎಂಬಲ್ಲಿ ವಾಸ್ತವ್ಯದ ಸಂದರ್ಭದಲ್ಲಿ ಮೋಹಳದ ರಾಜೆಭಾಸ್ಕರ ಔರಂಗಜೇಬ ಗುಪ್ತ ಸಲಹೆಗಾರನಾಗಿ ಕೆಲಸ ಮಾಡಿದರು. ಪೇಶ್ವೆಯರ ಕಾಲದಲ್ಲಿ ಈ ಪ್ರದೇಶ ಆಡಳಿತಕ್ಕೆ ಒಳಪಟ್ಟಿತ್ತು. ಚಾಲುಕ್ಯರು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದರಿಂದ ಇಲ್ಲಿ ಹಲವು ಪ್ರದೇಶದಲ್ಲಿ ಚಾಲುಕ್ಯರ ಐತಿಹಾಸಿಕ ದೇವಾಲಯ ನಿರ್ಮಿಸಿದರು.[೨೫]

ಬಾಣೇಶ್ವರ ದೇವಾಲಯ ಗರ್ಭಗೃಹ ಪೂರ್ವಮುಖವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದೊಳಗೆ ಭವ್ಯವಾದ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಇಕ್ಕೆಲಗಳಲ್ಲಿ ದ್ವಾರಪಾಲಕರು, ಲಲಾಟ ಬಿಂಬದಲ್ಲಿ ಲಕ್ಷ್ಮಿ, ಸಭಾಮಂಟಪದ ಲಲಾಟ ಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ. ದೇವಾಲಯದ ಸುತ್ತಲೂ ವಿವಿಧ ಭಂಗಿಯ ಶಿಲ್ಪಗಳಿವೆ. ಮಹಿಷಾಸುರ ಮರ್ದಿನಿ, ವೀರಗಲ್ಲು ಹಾಗೂ ದೇಗುಲದ ಹಲವು ಅವಶೇಷಗಳಿವೆ. ದೇಗುಲದ ಕಂಬ ಒಂದರಲ್ಲಿ ಲಜ್ಜಾಗೌರಿಯ ಶಿಲ್ಪವಿದೆ. ಸೊಲ್ಲಾಪುರ ಜಿಲ್ಲೆಯಲ್ಲಿ ಚಾಲುಕ್ಯರ ಹಲವು ಕನ್ನಡ ಶಾಸನಗಳಿವೆ. ಚಾಲುಕ್ಯರು ನಿರ್ಮಿಸಿದ ಐತಿಹಾಸಿಕ ಬಾಣೇಶ್ವರ ದೇವಾಲಯ ಒಂದಾಗಿದೆ.

ಸೊಲ್ಲಾಪುರ ನಗರ

೫೪. ಸಿದ್ಧರಾಮೇಶ್ವರ ದೇವಾಲಯ, ಸೊಲ್ಲಾಪುರ

ಸೊಲ್ಲಾಪುರ ನಗರದಲ್ಲಿ ಪ್ರಸಿದ್ಧ ಶ್ರೀ ಸಿದ್ಧರಾಮೇಶ್ವರ ಭವ್ಯವಾದ ದೇವಾಲಯವಿದೆ. ಹನ್ನೆರಡನೆಯ ಶತಮಾನದ ಶರಣರಲ್ಲಿ ಸೊನ್ನಲಿಗೆಯ ಸಿದ್ಧರಾಮನೂ ಒಬ್ಬ. ಸಿದ್ಧರಾಮ ಬಸವಾದಿ ಶರಣರ ಸಮಕಾಲೀನನೆಂಬುದಕ್ಕೆ ವೀರಶೈವ ಸಾಹಿತ್ಯದಲ್ಲಿ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಸಿದ್ಧರಾಮನು ಸೊನ್ನಲಿಗೆಯಲ್ಲಿ ಬೃಹತ್ ಕೆರೆಯ ಜೊತೆಗೆ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸಿದ್ದಾನೆ.[೨೬] ಇತಿಹಾಸ ಪ್ರಸಿದ್ಧವಾದ ಈ ದೇವಾಲಯಕ್ಕೆ ಅನೇಕ ರಾಜಮಹಾರಾಜರು ಸಾಮಂತ ಅರಸರು ಊರ ಪ್ರಮುಖರು ದತ್ತಿದಾನ ನೀಡಿದ ಹಲವು ಶಾಸನಗಳು ಲಭ್ಯವಾಗಿವೆ.

ಸಿದ್ಧರಾಮನ ವಚನವಿರುವ ೩೦ ಶಾಸನಗಳು 'ಕರ್ನಾಟಕ–ಮಹಾರಾಷ್ಟ್ರ' ಎರಡು ರಾಜ್ಯಗಳಲ್ಲಿ ಲಭ್ಯವಾಗಿವೆ. ನೀಲೆಗಾಂವ, ಜಾಮಗಾಂವ, ಕೆಸಗಾಂವ, ಇಟ್ಕಲ್, ಅಕ್ಕಲಕೋಟೆ, ತಡವಳ, ಗುಂಜೆಯಿಗಾವ್, ಗಂಡಕರ್ಜಗಿ, ಟಾಕಳಿ, ಕೋಳಿಸಾಲೆ, ಘಡೇಕಮಾರ, ಜಟ್ಟಗಿ, ಬುಡರಸಿಂಗಿ, ಕೊಟಗಿ, ಸಂಗೂರು, ಯಡಹಳ್ಳಿ, ಚಡಚಣ, ಕಾಮಲೆ, ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ಲಭ್ಯವಾದ ಶಾಸನಗಳಲ್ಲಿ ಸಿದ್ಧರಾಮನ

ವಚನಗಳಿವೆ.[೩೭] ಶಾಸನದ ಆರಂಭದಲ್ಲಿ 'ಓಂ ಜಯ ಪರಮೇಶ್ವರ' ಶಾಸನದ ಕೊನೆಯಲ್ಲಿ 'ಗುರುಸಿದ್ಧರಾಮನಾಥ' ಎಂಬ ಉಲ್ಲೇಖವಿದೆ.[೩೮]

"ಹಸುಳೆಯಾಗಿಯು ನಾನು ಕೆರೆ ಬಾವಿ ದೇವಾಲ್ಯವ
ರಚನೆ ಭವಕ್ಕೆ ಬಂದು ಫಲವನುಂಡು
ನರಕಕ್ಕೆ ಬೀಳುವವ ಶಿರವ ಹಿಡಿದೆತ್ತಿ
ನಿನ್ನವರ ಹೊರೆಯಾಳಗಿರಿಸಿದ ಗುರು ಬಸವಣ್ಣನೈ
ಕಪಿಲಸಿದ್ಧ ಮಲ್ಲಿಕಾರ್ಜುನ"[೩೯]

ಸಿದ್ಧರಾಮ ವೀರಶೈವ ಧರ್ಮವನ್ನು ತಾನು ಅನುಸರಿಸುತ್ತ ಅದಕ್ಕೆ ಅನುಗುಣವಾಗಿ ದೇವಾಲಯ, ಕೆರೆ, ಕಟ್ಟೆ, ಬಾವಿ, ಚೌಕಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದುದು ಮೇಲಿನ ವಚನದಲ್ಲಿ ಕಂಡುಬರುತ್ತದೆ. ಸಿದ್ಧರಾಮನು ಸೊನ್ನಲಿಗೆಯ ಸುತ್ತಮುತ್ತ ೬೮ ಶಿವಲಿಂಗಗಳನ್ನು ಸ್ಥಾಪಿಸಿದ್ದಾನೆ.[೪೦] ಸಿದ್ಧರಾಮನ ತಾಳೆಗರಿ ಗ್ರಂಥ ಉಮಾಕಾಂತ ಹಿರೆದಿಬ್ಬ ಅವರ ಮನೆಯಲ್ಲಿವೆ.[೪೧]

ಸಿದ್ಧರಾಮೇಶ್ವರ ದೇವಾಲಯದ ಮಹಾದ್ವಾರ ದಕ್ಷಿಣ ಮುಖವಾಗಿದೆ. ಅದರ ಬಲಬದಿಯಲ್ಲಿ ಪಶ್ಚಿಮ ಮುಖವಾಗಿ ಆದಿಲಿಂಗೇಶ್ವರ ದೇವಾಲಯವಿದೆ. ಆದಿಲಿಂಗೇಶ್ವರ ಗರ್ಭಗೃಹ ಉತ್ತರ ಮುಖವಾಗಿದೆ. ಲಲಾಟ ಬಿಂಬದಲ್ಲಿ ಗಣೇಶ, ಅಂತರಾಳದಲ್ಲಿ ನಂದಿ ವಿಗ್ರಹಗಳಿವೆ. ಗರ್ಭಗೃಹದಲ್ಲಿಯ ಆದಿಲಿಂಗೇಶ್ವರ ಪೂರ್ವ ಮುಖವಾಗಿದೆ. ಸಿದ್ಧರಾಮೇಶ್ವರ ದೇವಾಲಯಕ್ಕೆ ಹೋಗುವ ಮಧ್ಯದಾರಿಯಲ್ಲಿ ಶಿಖರೇಶ್ವರಲಿಂಗ ಪೂರ್ವ ಮುಖವಾಗಿದೆ.

ದೇವಾಲಯದ ಪ್ರವೇಶ ಮಾಡುವ ದಾರಿಯಲ್ಲಿ ಸೋಮೇಶ್ವರಲಿಂಗ, ಪಾಪೇಶ್ವರಲಿಂಗ, ಪರಮಲಿಂಗೇಶ್ವರ, ಸಂಗಮೇಶ್ವರ ಲಿಂಗ, ಅಮೃತಲಿಂಗ, ಗಣೇಶ ಎಲ್ಲ ದೇವಾಲಯ ಪೂರ್ವ ಮುಖವಾಗಿದೆ. ಈ ದೇವರ ದರ್ಶನವಾದ ಬಳಿಕ ಸಿದ್ಧರಾಮೇಶ್ವರ ದೇವಾಲಯದ ದ್ವಾರಬಾಗಿಲು ದೊರೆಯುತ್ತದೆ. ಇದರ ದ್ವಾರಬಾಗಿಲು ಪಶ್ಚಿಮ ಮುಖವಾಗಿದೆ.

ಸಿದ್ಧರಾಮೇಶ್ವರ ಸಮಾಧಿಯ ದ್ವಾರಬಾಗಿಲು ಉತ್ತರಮುಖವಾಗಿದೆ. ಸಮಾಧಿಯ ಶಿವಲಿಂಗ ಪೂರ್ವ ಮುಖವಾಗಿದೆ. ಸಮಾಧಿಯ ಮುಂದೆ ವಿಶ್ವೇಶ್ವರ ಮಹಾಶಿವಶರಣರ ದೇವಾಲಯ ಉತ್ತರ ಮುಖವಾಗಿದೆ. ವಿಶ್ವೇಶ್ವರ ದೇವಾಲಯದ ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥವಿದೆ. ಗರ್ಭಗೃಹದಲ್ಲಿ ವಿಶ್ವೇಶ್ವರ ಮಹಾಶಿವಶರಣರ ಶಿಲ್ಪ ಪ್ರತಿಷ್ಠಾಪಿಸಲಾಗಿದೆ. ಲಲಾಟ ಬಿಂಬದಲ್ಲಿ ಗಣೇಶ ಶಿಲ್ಪದಿಂದ ಅಲಂಕರಿಸಲಾಗಿದೆ. ದೇವಾಲಯದ ಮುಂದೆ ಸಿದ್ಧರಾಮೇಶ್ವರ ಮಹಾದಾಸೋಹವಿದೆ. ದಕ್ಷಿಣಮುಖಿ ಹನುಮಾನ, ಪಂಡರಪುರ ವಿಠಲ, ಓಂಕಾರೇಶ್ವರ ಲಿಂಗದೇವರ ದರ್ಶನವಾದ ಬಳಿಕ ನಂತರ ಸಿದ್ಧರಾಮೇಶ್ವರನ ದರ್ಶನ ದೊರೆಯುತ್ತದೆ.

ಸಿದ್ಧರಾಮೇಶ್ವರ ದೇವಾಲಯ ಪೂರ್ವಮುಖವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ, ಶಿಖರ ಹಾಗೂ ಪ್ರದಕ್ಷಿಣಾಪಥವಿದೆ. ಗರ್ಭಗೃಹದಲ್ಲಿ ಶಿವಲಿಂಗ

ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹಕ್ಕೆ ದಕ್ಷಿಣ, ಪೂರ್ವ, ಮತ್ತು ಉತ್ತರ ಮುಖವಾಗಿ ದ್ವಾರಬಾಗಿಲುಗಳಿವೆ. ಮೂರು ದ್ವಾರಬಾಗಿಲುಗಳ ಲಲಾಟ ಬಿಂಬದಲ್ಲಿ ಗಣೇಶ ಶಿಲ್ಪದಿಂದ ಅಲಂಕರಿಸಲಾಗಿದೆ. ಸದ್ಯದ ಪೂರ್ವ ಮುಖದ ದ್ವಾರಬಾಗಿಲನ್ನು ಉಪಯೋಗಿಸುತ್ತಾರೆ. ಅಂತರಾಳದ ಎರಡು ಬದಿಯಲ್ಲಿ ವಿಶ್ರಾಂತಿ ಪಡೆಯುವ ಜಗಳಿಗಳಿವೆ. ಸಭಾಮಂಟಪ ದ್ವಾರಗಳಿವೆ. ಸಭಾಮಂಟಪದ ಮಧ್ಯದಲ್ಲಿ ೪x೩ ಅಡಿಯ ನಂದಿ, ನಾಲ್ಕು ದಿಶೆಯಲ್ಲಿ ಶಿವಲಿಂಗಗಳಿವೆ. ದೇವಾಲಯದ ಮುಂದೆ ಭವ್ಯವಾದ ಕಲ್ಯಾಣ ಮಂಟಪವಿದೆ.

ಸಿದ್ಧರಾಮೇಶ್ವರ ಸಮಾಧಿಯ ಹಿಂದೆ ಬಿಲ್ಲೇಶ್ವರ ದೇವಾಲಯವಿದೆ. ಬಿಲ್ಲೇಶ್ವರ ದೇವಾಲಯ ಪೂರ್ವಮುಖವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ. ಲಲಾಟ ಬಿಂಬದಲ್ಲಿ ಗಣೇಶ, ಗರ್ಭಗೃಹದಲ್ಲಿ ಶಿವಲಿಂಗಗಳಿವೆ. ಅಂತರಾಳದಲ್ಲಿ ಎರಡು ನಂದಿ, ಗಣೇಶ ಶಿಲ್ಪಗಳಿವೆ. ಹಿಂತಿರುಗಿ ಹೋಗವ ದಾರಿಯಲ್ಲಿ ವಜ್ರೇಶ್ವರಲಿಂಗ, ಅಕಲೇಶ್ವರಲಿಂಗ, ಮಹೇಶ್ವರಲಿಂಗಗಳ ದರ್ಶನ ಪಡೆದು ಹೊರಗೆ ಬರಬೇಕಾಗುತ್ತದೆ.

ದೇವಾಲಯದಿಂದ ಹೊರಗೆ ಆಗಮಿಸಿದಾಗ ಬಲಬದಿಯಲ್ಲಿ ಸಮ್ಮತಿ ಕಟ್ಟಾ ದೊರೆಯುತ್ತದೆ. ಮಕರ ಸಕ್ರಮಣದ ಜಾತ್ರೆಯ ಸಂದರ್ಭದಲ್ಲಿ ಸಮ್ಮತಿ ಕಟ್ಟೆಯಲ್ಲಿ ಸಿದ್ಧರಾಮನ ಅಕ್ಷತೆಯ ಸಮಾರಂಭ ನಡೆಯುತ್ತದೆ. ಇದರ ಮುಂದಿನ ರಸ್ತೆಯ ಕಡೆಗೆ ಹೋದರೆ ಅಲ್ಲಮಪ್ರಭುಲಿಂಗ ದೇವಾಲಯ ದೊರೆಯುತ್ತದೆ. ಗರ್ಭಗೃಹದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಮುಂದೆ ನಂದಿ ಶಿಲ್ಪವಿದೆ. ಅದರ ಹತ್ತಿರ ಹನುಮಾನ ದೇವಾಲಯವಿದೆ.

ಸೊನ್ನಲಿಗೆಯ ಸಿದ್ಧರಾಮೇಶ್ವರ ದೇವಾಲಯದ ಅವರಣದಲ್ಲಿ ೩೨ ಶಿವಲಿಂಗ, ೧೦ ನಂದಿ, ೧೦ ನಾಗೇಶ ಹಾಗೂ ೨ ಗಣೇಶ ಮೂರ್ತಿಗಳಿವೆ. ದೇವಾಲಯದ ಸುತ್ತಲೂ ಭವ್ಯವಾದ ಕೆರೆ, ಅದರ ಪಕ್ಕದಲ್ಲಿ ಭವ್ಯವಾದ ಭುಯಿ ಕೋಟೆಯಿದೆ. ಇಂಥ ಭವ್ಯವಾದ ಸಿದ್ಧರಾಮನ ದೇವಾಲಯಕ್ಕೆ ಕನ್ನಡದ ಹಲವು ಮಹಾರಾಜರು ದಾನ ನೀಡಿದ ಉಲ್ಲೇಖ ಶಾಸನಗಳಲ್ಲಿ ದೊರೆಯುತ್ತದೆ.

೫೫. ಮಲ್ಲಿಕಾರ್ಜುನ ದೇವಾಲಯ, ಸೊಲ್ಲಾಪುರ

ಸೊಲ್ಲಾಪುರ ಭುಯಿ ಕೋಟೆಯೊಳಗೆ ಹಳೆಯ ಮಲ್ಲಿಕಾಜರ್ಯುನ, ಉತ್ತರ ಕಸಬಾ ಹತ್ತಿರ ಮತ್ತೊಂದು ಮಲ್ಲಿಕಾರ್ಜುನ ದೇವಾಲಯವಿದೆ. ಇತಿಹಾಸ ಪ್ರಸಿದ್ಧವಾದ ಈ ಎರಡು ದೇವಾಲಯಗಳಿಗೆ ಅನೇಕ ಕನ್ನಡದ ರಾಜಮಹಾರಾಜರು, ಸಾಮಂತ ಅರಸರು, ವ್ಯಾಪಾರಿಗಳು, ಊರ ಪ್ರಮುಖರು ದತ್ತಿದಾನ ನೀಡಿದ ಹಲವು ಕನ್ನಡ ಶಾಸನಗಳು ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳಲ್ಲಿ ಲಭ್ಯವಾಗಿವೆ. ಸೊನ್ನಲಿಗೆಯ ಮಲ್ಲಿಕಾರ್ಜುನನಿಗೆ ಸಂಬಂಧಪಟ್ಟ ಹಲವು ಶಾಸನಗಳಿವೆ.[೮]

ಸೊಲ್ಲಾಪುರ ಕೋಟೆಯ ಉತ್ತರಮುಖ ಪ್ರವೇಶ ದ್ವಾರದಿಂದ ಒಳಗೆ ಹಳೆಯ ಮಲ್ಲಿಕಾರ್ಜುನ ತ್ರಿಕೂಟ ದೇವಾಲಯ ಪೂರ್ವಮುಖವಾಗಿದೆ. ದೇವಾಲಯ ಅಧಿಷ್ಠಾನ, ಉಪಾನ, ಗರ್ಭಗೃಹ, ಪ್ರದಕ್ಷಿಣಾಪಥ, ಪ್ರಾಕಾರಗೋಡೆ, ಸೋಮಾನಗಳಿಂದ ಕೂಡಿದೆ. ಸಭಾಮಂಟಪ, ಕೈಪಿಡಿಗೋಡೆ ನೆಲಸಮವಾಗಿದೆ. ಶಿಥಿಲಾವಸ್ಥೆಯಲ್ಲಿರುವ ದೇವಾಲಯದ

ರಕ್ಷಣೆ ಪುರಾತತ್ವ ಇಲಾಖೆ ಮಾಡಬೇಕಾಗಿದೆ. ಕೋಟೆಯ ಉತ್ತರಮುಖ ಪ್ರವೇಶದ್ವಾರದ ಹತ್ತಿರ ಸಾಕಳಿಮ ಸೋಬಾ ದೇವರ ಅವಶೇಷಗಳಿವೆ. ಅದರ ಬದಿಯಲ್ಲಿ ವೀರಗಲ್ಲು ಇದೆ. ಸೊಲ್ಲಾಪುರದ ಜನ ಅಲ್ಲಿ ಪ್ರತಿದಿನ ದೀಪ ಹಚ್ಚುತ್ತಾರೆ.

ಉತ್ತರ ಕಸಬಾ ಹತ್ತಿರ ಮಲ್ಲಿಕಾರ್ಜುನ ದೇವಾಲಯವಿದೆ. ಅಗ್ನಿಶಿಲೆಯಲ್ಲಿ ನಿರ್ಮಾಣವಾದ ಪ್ರಸ್ತುತ ದೇವಾಲಯ ಗರ್ಭಗೃಹ, ಅಂತರಾಳ, ಸಭಾಮಂಟಪ, ಶಿಖರ ಮತ್ತು ಪ್ರದಕ್ಷಿಣಾ ಪಥವಿದೆ. ಗರ್ಭಗೃಹದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ದ್ವಾರವು ಪೂರ್ವಮುಖವಾಗಿದ್ದು, ಲಲಾಟಬಿಂಬದಲ್ಲಿ ಗಣೇಶ ಅಲಂಕರಿಸಿದ್ದಾನೆ. ದೇವಾಲಯದ ಮಹಾದ್ವಾರ ಪೂರ್ವಾಭಿಮುಖವಾಗಿದೆ. ದಕ್ಷಿಣ, ಉತ್ತರ ಮುಖವಾಗಿ ಚಿಕ್ಕದ್ವಾರಗಳಿವೆ. ಸಭಾಮಂಟಪದ ಪ್ರವೇಶ ದ್ವಾರಗಳು ದಕ್ಷಿಣ, ಪೂರ್ವ ಹಾಗೂ ಉತ್ತರ ಮುಖವಾಗಿದೆ. ಸಭಾಮಂಟಪದಲ್ಲಿ ವಿಶ್ರಾಂತಿ ಪಡೆಯುವ ಜಗಲಿಗಳಿವೆ. ಸಭಾಮಂಟಪದ ಮಧ್ಯದ ನಾಲ್ಕು ಬೃಹತ್ ಕಂಬಗಳು ಕೆಳಗೆ ಮೇಲೆ ಚೌಕ ೧೬–೦೮–೧೬ ಭಾಗದ ಪಟ್ಟಿಗೆ, ವೃತ್ತಾಕಾರದ ಮುಚ್ಚಳ, ಚೌಕಾಕಾರದ ಫಲಕ, ಬೋದಿಗೆಗಳಿಂದ ಕೂಡಿದೆ.

ದೇವಾಲಯದ ಹೊರಗೋಡೆಯ ಅದಿಷ್ಠಾನ, ಉಪಾನ, ಜಗತಿಗಳಿಂದ ಕೂಡಿದೆ. ಸಭಾಮಂಟಪದ ಮುಂದೆ ೪x೩ ಅಡಿಯ ನಂದಿ ವಿಗ್ರಹವಿದೆ. ದೇವಾಲಯದ ಬಲಬದಿಯಲ್ಲಿ ಆನಂದೇಶ್ವರ ಲಿಂಗವಿದೆ. ದೇವಾಲಯದ ಹಿಂದೆ ನವಗ್ರಹ, ೫ ಶಿವಲಿಂಗಗಳಿವೆ. ದೇವಾಲಯದ ಸುತ್ತಲೂ ಭವ್ಯವಾದ ಗೋಡೆ, ಮುಖಮಂಟಪ ದ್ವಾರವನ್ನು ವಾರದ ಮಲ್ಲಿಪ್ಪನವರು ಕಟ್ಟಿಸಿದ್ದಾರೆ. ಸಿದ್ಧರಾಮನು ಸೊನ್ನಲಿಗೆಯಲ್ಲಿ ಬೃಹತ್ ಕೆರೆಯ ಜೊತೆಗೆ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸಿದ್ದಾನೆ. ಅಂದಿನ ಸೊನ್ನಲಿಗೆಯ ೬೮ ಶಿವಲಿಂಗಗಳನ್ನು ಸ್ಥಾಪಿಸಿದನು. ವೀರಶೈವ ಸಾಹಿತ್ಯದಲ್ಲಿ ಸೊನ್ನಲಿಗೆಯ ಸಿದ್ಧರಾಮನ ಸಾಕಷ್ಟು ಪುರಾವೆಗಳು ದೊರೆಯುತ್ತವೆ.

ಅಂದು ಸೊಲ್ಲಾಪುರ ಕೋಟೆಯನ್ನು ಸ್ವಾದೀನಪಡಿಸಿಕೊಳ್ಳಲು ಹಲವಾರು ಸಲ ಅಹಮದ ನಗರ, ಬಿಜಾಪುರ, ಮುಸಲ್ಮಾನ ಅರಸರ ನಡುವೆ ಯುದ್ಧಗಳಾಗಿವೆ. ಈ ಮೂಲಕ ಸೊಲ್ಲಾಪುರ ಕೋಟೆ ಹಲವು ರಾಜರುಗಳಿಗೆ ಹಸ್ತಾಂತರಗೊಳ್ಳುತ್ತ ಹೋಯಿತು. ಇದರಿಂದ ಲಿಂಗಾಯಿತರಿಗೆ ಕೋಟೆಯೊಳಗಿರುವ ಮಲ್ಲಿಕಾರ್ಜುನನಿಗೆ ಪೂಜೆ ಮಾಡಿ ದರ್ಶನಕ್ಕೆ ತೊಂದರೆಯಾಗುತ್ತಿರುವುದರಿಂದ ಸಿದ್ಧರಾಮ ಉತ್ತರ ಕಸಬಾದಲ್ಲಿ ಮಲ್ಲಿಕಾರ್ಜುನ ದೇವಾಲಯ ಕಟ್ಟಿಸಿರಬಹುದು. ಈ ಕುರಿತು ಹಚ್ಚಿಸಿ ಸಂಶೋಧನೆ, ಅಧ್ಯಯನ ನಡೆಯಬೇಕಾಗಿದೆ.

೫೬. ಮದಲಾ ಮಾರುತಿ ದೇವಾಲಯ

ಸೊಲ್ಲಾಪುರ ಮದಲಾ ಮಾರುತಿ ದೇವಾಲಯ ದಕ್ಷಿಣಮುಖವಾಗಿದೆ. ನಗರ ಮಧ್ಯದಲ್ಲಿ ಮೆರೆಯುವ ಮಧಲಾ ಮಾರುತಿ ಅಚ್ಚ ಕನ್ನಡಿಗನೇ ! ಏಕೆಂದರೆ ಕನ್ನಡ ಶಾಸನ ಲಿಪಿಯ ಕಲ್ಲನ್ನೇ ಮಾರುತಿಯನ್ನಾಗಿ ಮಾಡಿ ನಿಲ್ಲಿಸಲಾಗಿದೆ. ಸೊಲ್ಲಾಪುರ ನಗರದ ಮಧ್ಯಭಾಗದಲ್ಲಿ ಮೂರ್ತಿ ಇರುವುದರಿಂದ ಭಕ್ತರು ಇದಕ್ಕೆ ಮದಲಾ ಮಾರುತಿ

ದೇವಾಲಯ ಎಂದು ಕರೆಯುತ್ತಾರೆ. ನಗರದಲ್ಲಿ ಸಂಚಾರ ಮಾಡುವ ವಾಹನಗಳಿಗೆ ದೇಗುಲ ಅಡೆ–ತಡೆ ಉಂಟಾಗುವುದರಿಂದ ಮಹಾರಾಷ್ಟ್ರ ಸರಕಾರದ ಆದೇಶದಂತೆ ಸೊಲ್ಲಾಪುರ ಜಿಲ್ಲಾಧಿಕಾರಿಗಳು ಮಾರುತಿ ದೇಗುಲ ಸ್ಥಳಾಂತರ ಮಾಡಿದ್ದಾರೆ.

ಮದಲಾ ಮಾರುತಿ ಮೂರ್ತಿಯ ಹಿಂದೆ ಕನ್ನಡ ಲಿಪಿಗಳಿವೆ. ಇದರ ಸಾರಾಂಶ ಹೀಗೆ ಉಲ್ಲೇಖ ಮಾಡಲಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಶಾಸನಕ್ಕೆ ವಿಶೇಷವಾದ ಸ್ಥಾನಮಾನವಿದೆ. ಈ ಶಾಸನ ಇತರ ಕನ್ನಡ ಶಾಸನಗಳಿಗಿಂತ ತೀರಾ ಭಿನ್ನವಾದುದು. ಶಾಸನವೆಂದಾಕ್ಷಣ ಅಲ್ಲಿ ಪ್ರಭುತ್ವದ ದಾಖಲೆಗಳೆ ತುಂಬಿರುತ್ತವೆ ಎಂಬ ಅಭಿಪ್ರಾಯವನ್ನು ಜಿ.ಎಸ್.ಉಪಾಧ್ಯ ಅವರು ವ್ಯಕ್ತಪಡಿಸಿದ್ದಾರೆ. ಈ ಶಾಸನ ಕಥನ ಕವನದಂತಿದ್ದು ಶಿವನ ವಿವಾಹ ಪುರಾಣವಿಲ್ಲಿ ಕಲಾತ್ಮಕವಾಗಿ ಮೂಡಿಬಂದಿದೆ. ಗದ್ಯಪದ್ಯದ ಸುಂದರ ಸಮನ್ವಯವನ್ನು ಸಾಧಿಸಿರುವ ಈ ಶಾಸನದಲ್ಲಿ ಸಾಕಷ್ಟು ಅಂಶ ಷಟ್ಪದಿಯ ಪದ್ಯಗಳಲ್ಲಿ ಬಂದಿವೆ. ವಿವಾಹ ಪುರಾಣ ಕನ್ನಡದ ಅತ್ಯಂತ ಪ್ರಾಚೀನ ಶಾಸನಸ್ಥ ಜಾನಪದ ಕೃತಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಯಾವುದೇ ದೊರೆಯ ಹೆಸರಾಗಲಿ ತೇದಿಯಾಗಲಿ ಈ ಶಾಸನದಲ್ಲಿ ಬಂದಿಲ್ಲ. ಈ ಶಾಸನದ ಕೊನೆಯ ಭಾಗ ಸಾಕಷ್ಟು ಸವೆದುಹೋಗಿದೆ. ಶಿವಪಾರ್ವತಿಯರ ವಿವಾಹದ ಕಥೆಯೇ ಈ ಶಾಸನದ ಮುಖ್ಯ ತಿರುಳು. ವಿವಾಹ ಪುರಾಣವನ್ನು ಹೊತ್ತ ಶಿಲಾಶಾಸನ ಇದೊಂದೇ ಎಂಬುದು ಗಮನಾರ್ಹ ಅಂಶವಾಗಿದೆ.[೮೩]

ಸೊಲ್ಲಾಪುರ ನಗರದ ಮಧ್ಯಭಾಗದಲ್ಲಿ ಮದಲಾ ಮಾರುತಿ ದೇವಾಲಯವಿದೆ. ಸೊಲ್ಲಾಪುರ ಜಿಲ್ಲೆಯಲ್ಲಿ ಕನ್ನಡ ಶಾಸನ, ವೀರಗಲ್ಲು ಹಾಗೂ ಐತಿಹಾಸಿಕ ದೇವಾಲಯಗಳಿವೆ. ಈ ಎಲ್ಲ ಭಗ್ನಾವಶೇಷಗಳಿಂದ ಕನ್ನಡ ನಾಡಿನ ವ್ಯಾಪ್ತಿಯನ್ನು ಗುರುತಿಸಲು ಸಾಧ್ಯವಾಗುತ್ತದೆ.

೫೭. ಮಹಾಲಕ್ಷ್ಮಿ ದೇವಾಲಯ, ಸೊಲ್ಲಾಪುರ

ಟಿಳಕ ಚೌಕ ಹತ್ತಿರವಿರುವ ಐತಿಹಾಸಿಕ ಮಹಾಲಕ್ಷ್ಮಿ ದೇವಾಲಯ ನೆಲಸಮವಾಗಿದೆ. ಅದನ್ನು ಇತ್ತೀಚೆಗೆ ನವೀಕರಣಗೊಳಿಸಲಾಗಿದೆ. ದೇವಾಲಯದಲ್ಲಿ ಎರಡು ಶಾಸನಗಳು ಲಭ್ಯವಾಗಿವೆ. ಸುಮಾರು ಕ್ರಿ.ಶ. ೧೧–೧೨ನೆಯ ಶತಮಾನದ ಶ್ರೀ ಮಹಾಲಕ್ಷ್ಮಿ ದೇವಿಯ ಉಲ್ಲೇಖ ಬಂದಿದ್ದು ಮಾಲಾಗಾರ ಮುದ್ದಯ್ಯ ದೇವಿಗೆ ದಾನ ನೀಡಿದ ವಿವರ ಈ ಶಾಸನದಲ್ಲಿ ಬಂದಿದೆ.[೮೪]

೫೮. ಅನಂತ ಲಿಂಗೇಶ್ವರ ದೇವಾಲಯ, ಸೊಲ್ಲಾಪುರ

ಸೊಲ್ಲಾಪುರ ಬಸ್‌ನಿಲ್ದಾಣ ಹತ್ತಿರವಿರುವ ಪಾಜರಾವೂಳ ಅನಂತಲಿಂಗೇಶ್ವರ ದೇವಾಲಯವಿದ್ದು, ಉತ್ತರಮುಖವಾಗಿದೆ. ಐತಿಹಾಸಿಕ ಅನಂತಲಿಂಗೇಶ್ವರ ದೇವಾಲಯ ನೆಲಸಮವಾಗಿದೆ. ಸೊನ್ನಲಿಗೆಯ ಶ್ರೀ ಸಿದ್ಧರಾಮೇಶ್ವರ ಸ್ಥಾಪಿಸಿದ ೬೮ ಲಿಂಗಗಳಲ್ಲಿ ಇದು ಒಂದಾಗಿದೆ. ಶಾಸನಗಳಲ್ಲಿ ಪಂಚರಾವೂರ ಎಂದು ಉಲ್ಲೇಖವಿದೆ.[೮೫] ಪಂಚರಾವೂರ ಕನ್ನಡ ಹೆಸರು ಬದಲಾಗಿ ಸೊಲ್ಲಾಪುರ ಪಂಚರಾವೂರದ ಮೂಲ ಹೆಸರಾದ ಪರಂಪರಗೆಯು ಅಪ್ಪಟ ಕನ್ನಡ ಹೆಸರು. ಅಲ್ಲಿನ ದೈವ ಅನಂತಲಿಂಗ. ಇಂದು ಪಾಜರಾಪೊಳಿಯೆಂದು ಪ್ರಸಿದ್ಧಿ ಪಡೆದುಕೊಂಡಿದೆ.

೫೯. ರೇವಣಸಿದ್ಧೇಶ್ವರ ದೇವಾಲಯ, ಸೊಲ್ಲಾಪುರ

ಬಿಜಾಪುರ ನಾಕಾ ಹತ್ತಿರ ಐತಿಹಾಸಿಕ ರೇವಣಸಿದ್ಧೇಶ್ವರ ದೇವಾಲಯವಿದೆ. ಆಂಧ್ರಪ್ರದೇಶದ ಕೊಲ್ಲಿಪಾಕ ಎಂಬಲ್ಲಿ ರೇವಣಸಿದ್ಧೇಶ್ವರ ಮೂಲಸ್ಥಾನವಿದೆ. ದೇಶ ಸಂಚಾರ ಮಾಡುತ್ತಾ ಕೆಲವು ದಿನಗಳವರೆಗೆ ರೇವಣಸಿದ್ಧ ಸೊಲ್ಲಾಪುರದಲ್ಲಿ ವಾಸ ಮಾಡಿದರು.[೮೬] ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ಶಿಖರಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಐದು ಪಿಂಡಗಳ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಧೂಳಿ ಮಹಾಂಕಾಳಿ ಗಣಪತಿ, ಹಲವು ಶಿವಲಿಂಗಗಳಿವೆ. ರೇವಣಸಿದ್ದಪ್ಪ ಶಿಂಗಾರ ಅವರ ವಂಶದವರು ಪೂಜೆ ಮಾಡುತ್ತಾರೆ. ಐತಿಹಾಸಿಕ ದೇವಾಲಯಗಳಲ್ಲಿ ರೇವಣಸಿದ್ಧೇಶ್ವರ ದೇವಾಲಯ ಒಂದಾಗಿದೆ.

ಅಡಿ ಟಿಪ್ಪಣಿಗಳು

೧. ಜಿ.ಎಸ್.ಉಪಾಧ್ಯ, ಮ.ಕ.ಶಾ. ಪು ೧೪೨.
೨. ಗುರುಸಿದ್ಧಯ್ಯ ಸ್ವಾಮಿ, ಕರಜಗಿಯ ವೀರಶೈವ ದೇವಾಲಯ ಅಪ್ರಕಟಿತ ಲೇಖನ.
೩. ಎಂ.ಎಂ.ಕಲಬುರ್ಗಿ, ಮ.ಕ.ಶಾ. ಪು ೪೪.
೪. ಎಂ.ಬಿ.ಪಾಟೀಲ, ಭಾರತ ಸರಕಾರ ಪು ೬೮೩.
೫. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೪೫.
೬. ಎಂ.ಎಂ.ಕಲಬುರ್ಗಿ, ಮ.ಕ.ಶಾ. ಪು ೪೪.
೭. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೨೦೫.
೮. ಅದೇ ಪುಟ ೧೯೫.
೯. ಸಂದರ್ಶನದ ದಿನಾಂಕ ೧೦-೦೭-೨೦೧೦, ವಿಜಯಬಸನೆ, ಮಹಾದೇವ ಮ್ಹೇತ್ರ, ಸುರೇಶ ಬಬಲಾದ.
೧೦. ಸಂದರ್ಶನ ದಿನಾಂಕ ೧೮-೦೭-೨೦೧೦, ಕಲ್ಲಪ್ಪ ಈರಪ್ಪ ಕಿಣಗಿ ಹೇಳಿದರು.
೧೧. ಬಸವರಾಜ ಮಸೂತಿ, ಕಕಡದ ಅಕ್ಕಲಕೋಟೆ, ಜನಪದ ಸಂಚಿಕೆ.
೧೨. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೨೦೯.
೧೩. ಎಸ್.ಎಸ್.ತಾರಾನಾಥ್, ಶತಮಾನದ ಸಂಶೋಧನೆ, ಪು ೨೧೩.
೧೪. ಅದೇ ಪುಟ ೨೩೦.
೧೫. ಸಂದರ್ಶನ ದಿನಾಂಕ ೧೧-೦೭-೨೦೧೦, ಸೈಪನ ಜೈನುದ್ದೀನ ಮುಜಾವರ ಹೇಳಿದರು.
೧೬. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೨೦೮.
೧೭. ಸಂದರ್ಶನ ದಿನಾಂಕ ೦೫-೦೭-೨೦೧೦, ಚೆನ್ನಯ್ಯಮಠ ಹೇಳಿದರು.
೧೮. ಎಸ್.ಎಸ್.ತಾರಾನಾಥ್, ಶತಮಾನದ ಸಂಶೋಧನೆ, ಪು ೨೦೨.
೧೯. ಎಂ.ವಿ.ಕೃಷ್ಣರಾವ್, ಕರ್ನಾಟಕದ ಇತಿಹಾಸ ದರ್ಶನ, ಪು ೩೦೯.
೨೦. ಅದೇ ಪುಟ ೩೧೦.
೨೧. ಶಂಕರಗೌಡ ಬಿರಾದಾರ, ದಾನಪ್ಪ ಶರಣನ ಚರಿತಾಮೃತ, ಪು xvii.
೨೨. ಬಸವರಾಜಶಾಸ್ತ್ರಿ, ಶಿವಚಲೇಶ್ವರ ಪುರಾಣ ಹಸ್ತಪ್ರತಿ.

೨೩. ಸಂದರ್ಶನ ದಿನಾಂಕ ೨೮-೦೨-೨೦೦೨, ಸೋಮಶೇಖರ ಸಾಲಿಮಠ ಹೇಳಿದರು.
೨೪. ಸಂದರ್ಶನ ದಿನಾಂಕ ೩೦-೦೩-೨೦೦೨, ಚೆನ್ನಮಲ್ಲಪ್ಪ ಗುಬ್ಬೂರ ಹೇಳಿದರು.
೨೫. ಎಂ.ಎಂ.ಕಲಬುರ್ಗಿ, ಮ.ಕ.ಶಾ. ಪು ೪೫.
೨೬. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೨೦೦.
೨೭. ಮರಾಠಿ ದೈ ಸಂಚಾರ ದಿನಪತ್ರಿಕೆಯ ಲೇಕನ, ದಿ ೧೦-೦೮-೨೦೧೧.
೨೮. ಎಂ.ಬಿ.ಪಾಟೀಲ, ಭಾರತ ಸರಕಾರ, ಪು ೬೮೩.
೨೯. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೧೮೯.
೩೦. ಅದೇ ಪುಟ ೨೧೧.
೩೧. ಅದೇ ಪುಟ ೨೦೦.
೩೨. ಮರಾಠಿ ದೈ ಸಂಚಾರ ದಿನಪತ್ರಿಕೆಯ ಲೇಖನ ದಿ ೧೦-೦೮-೨೦೧೧.
೩೩. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೨೨೯.
೩೪. ಮ.ದೈ.ಸ. ದಿನಪತ್ರಿಕೆಯ ಲೇಖನ, ದಿ ೧೦-೦೮-೨೦೧೧.
೩೫. ಮರಾಠಿ ದೈ. ಪುಢಾರಿ ಪತ್ರಿಕೆಯ ಲೇಖನದ ದಿನಾಂಕ ೩೦-೦೩-೨೦೧೦.
೩೬. ಎಂ.ಎಂ.ಕಲಬುರ್ಗಿ, ಮ.ಕ.ಶಾ. ಪು ೪೫.
೩೭. ಅದೇ ಪುಟ ೪೫.
೩೮. ಗಜಾನನ ಲಕ್ಷ್ಮಣ ಬಿಡೆ, ಶ್ರೀಕ್ಷೇತ್ರ ಕೂಡಲಸಂಗಮ.
೩೯. ಬಸವರಾಜ ಮಸೂತಿ, ಕನ್ನಡದ ಅಕ್ಕಲಕೋಟೆ, ಜನಪದ ಸಂಚಿಕೆ.
೪೦. ಗಜಾನನ ಲಕ್ಷ್ಮಣ ಬಿಡೆ, ಶ್ರೀ ಕ್ಷೇತ್ರ ಕೂಡಲಸಂಗಮ, ಪು ೩೪.
೪೧. ಬಿ.ಪಿ.ಹೂಗಾರ, ಕರ್ನಾಟಕ ಇತಿಹಾಸ, ಪು ೧೩೪.
೪೨. ಸತ್ಯವ್ರತ ನುಲಕರ, ಮಧ್ಯಯುಗ ಸಂಚಾರ ಲೇಖನ ದಿ ೧೭-೦೭-೨೦೧೧.
೪೩. ಗಜಾನನ ಲಕ್ಷ್ಮಣ ಬಿಡೆ, ಶ್ರೀಕ್ಷೇತ್ರ ಕೂಡಲಸಂಗಮ, ಪು ೮.
೪೪. ಜಿ.ಎನ್.ಉಪಾಧ್ಯ, ಗೊ.ಣ.ಕ. ಪು ೧೪೨.
೪೫. ಅದೇ ಪುಟ ೧೪೨.
೪೬. ಅದೇ ಪುಟ ೧೪೪.
೪೭. ಸಂದರ್ಶನ ದಿನಾಂಕ ೨೦-೦೪-೨೦೧೦ರಂದು ಸಚಿನ ಸುಭಾಶಚಂದ ಪೂಜಾರಿ ಹೇಳಿದರು.
೪೮. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೨೪೭.
೪೯. ಅದೇ ಪುಟ ೨೪೮.
೫೦. ಅದೇ ಪುಟ ೨೫೧.
೫೧. ಅದೇ ಪುಟ ೨೫೨.
೫೨. ಅದೇ ಪುಟ ೨೫೭.
೫೩. ಅದೇ ಪುಟ ೨೫೯.
೫೪. ಎಂ.ಎಂ.ಕಲಬುರ್ಗಿ, ಮ.ಕ.ಶಾ. ಪು ೪೫.
೫೫. ದಿನಾಂಕ ೦೭-೦೭-೨೦೧೧ ದೈಲೋಕಮತ, ಸಂಚಾರ ಪುಂಡಾರಿ ಮರಾಠಿ ಪತ್ರಿಕೆಗಳ ವರದಿ.
೫೬. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೨೫೪.
೫೬. ಅದೇ ಪುಟ ೨೬೯.

೫೮. ಅದೇ ಪುಟ ೨೬೩.

೫೯. ಸಂದರ್ಶನ ದಿನಾಂಕ ೦೪-೦೭-೨೦೧೧ರಂದು ರೇವಣಸಿದ್ಧ ಜವಳಕೋಟೆ ಅವರು ಹೇಳಿದರು.

೬೦. ಸಂದರ್ಶನ ದಿನಾಂಕ ೧೨-೦೫-೨೦೧೦ ಮಾರುತಿ ಬಾಬುಕಸ್ವಾರ ಹೇಳಿದರು.

೬೧. ಸಂದರ್ಶನ ದಿನಾಂಕ ೧೨-೦೫-೨೦೧೦ ಭೀಮಾಶಂಕರ ಚಿವಡಶೆಟ್ಟಿ ಹೇಳಿದರು.

೬೨. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೪೫.

೬೩. ಮರಾಠಿ ದೈ ಸಂಚಾರ ದಿನಪತ್ರಿಕೆಯ ಲೇಖನ ದಿ ೧೭-೦೮-೨೦೧೧.

೬೪. ಅದೇ ದಿನಾಂಕ ೨೦-೦೮-೨೦೧೧.

೬೫. ಅದೇ ದಿನಾಂಕ ೧೦-೦೮-೨೦೧೧.

೬೬. ಅದೇ ದಿನಾಂಕ ೧೦-೦೮-೨೦೧೧.

೬೭. ಜಿ.ಎನ್.ಉಪಾಧ್ಯ, ಮ.ಕ.ಶಾ. ಪು ೨೧೧.

೬೮. ಅದೇ ಪುಟ ೨೪೭.

೬೯. ಅದೇ ಪುಟ ೨೪೮.

೭೦. ಮರಾಠಿ ದೈ ಸಂಚಾರ ದಿನಪತ್ರಿಕೆಯ ಲೇಕನ ದಿ ೧೮-೦೮-೨೦೧೧.

೭೧. ಅದೇ ದಿನಾಂಕ ೧೬-೦೮-೨೦೧೧.

೭೨. ಅದೇ ದಿನಾಂಕ ೨೪-೦೮-೨೦೧೧.

೭೩. ಅದೇ ದಿನಾಂಕ ೧೯-೦೮-೨೦೧೧.

೭೪. ಅದೇ ದಿನಾಂಕ ೧೮-೦೮-೨೦೧೧.

೭೫. ಅದೇ ದಿನಾಂಕ ೧೧-೦೮-೨೦೧೧.

೭೬. ಜಿ.ಎನ್.ಉಪಾಧ್ಯ, ಗೊ.ಕ.ನಾ. ಪು ೧೫೨.

೭೭. ಅದೇ ಪುಟ ೫೨.

೭೮. ಅದೇ ಪುಟ ೬೨.

೭೯. ಎ.ಕೆ.ಉಮಾಪತಿ, ಶರಣ ಸಂಪದ, ಪು ೨೧೦.

೮೦. ಶಾಂತಾ ಮರಗೂರ, ಕಥಾ ಶ್ರೀ ಸಿದ್ಧರಾಮಾಂಚಾ (ಮರಾಠಿ) ೭೯.

೮೧. ಸಂದರ್ಶನ ದಿನಾಂಕ ೦೪-೦೫-೨೦೧೦ರಂದು ಉಮಾಕಾಂತ್ ಹಿರೆಹಟ್ಟಿ, ಸಂಜಯ ಚಿಟ್ಟೆ ಅವರು ಹೇಳಿದರು.

೮೨. ಜಿ.ಎನ್.ಉಪಾಧ್ಯ, ಸಿ.ಸೂ. ಪು ೫೨ ರಿಂದ ೧೧೦.

೮೩. ಅದೇ ಪುಟ ಮ.ಕ.ಶಾ. ಪು ೨೨೩.

೮೪. ಅದೇ ಪುಟ ೨೬೭.

೮೫. ವಿಜಯ ಕರ್ನಾಟಕ ಸಾಪ್ತಾಹಿಕ ಪುರವಣಿಯ ಲೇಖನ, ದಿ ೧೮-೦೩-೧೦೪.

೮೬. ಮರಾಠಿ ದೈ ಸಂಚಾರ ದಿನಪತ್ರಿಕೆಯ ಲೇಖನ ೧೧-೦೮-೨೦೧೧.



ಮಲ್ಲಿಕಾರ್ಜುನ ದೇವಾಲಯ, ಚಪ್ಪಳಗಾಂವ.



ಮಹದೇವ ದೇವಾಲಯ, ಬಸವನ ಸಂಗೊಳ್ಳಿ.




ಮಹದೇವ ದೇವಾಲಯ, ಮೈಂದರ್ಗಿ.



ಮಲ್ಲಿಕಾರ್ಜುನ ದೇವಾಲಯ, ಸಾತನದುದುನಿ.



ಸಂಗಮೇಶ್ವರ ದೇವಾಲಯ, ಕೂಡಲ.



ಹರಿಹರೇಶ್ವರ ದೇವಾಲಯ, ಕೂಡಲ.



ಮಹದೇವ ದೇವಾಲಯ, ನಿಂಬರಗಿ.



ಮಹದೇವ ದೇವಾಲಯ, ಭಂಡಾರಕವಟೆ.



ಮಹದೇವ ದೇವಾಲಯ, ಮಾಲಕವಟೆ.



ಮಹದೇವ ದೇವಾಲಯ, ಮಂಗಳವೇಡೆ.



ಸಿದ್ಧರಾಮೇಶ್ವರ ದೇವಾಲಯ, ಸೊಲ್ಲಾಪುರ.



ಸೊಲ್ಲಾಪುರ ಕೋಟೆಯೊಳಗಿನ ಮಲ್ಲಿಕಾರ್ಜುನ ದೇವಾಲಯ.

ಸೊಲ್ಲಾಪುರ ಜಿಲ್ಲೆಯ ವೀರಗಲ್ಲುಗಳು

ರಾಷ್ಟ್ರಕೂಟರು, ಬದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಯಾದವರು, ಶಿಲಾಹಾರರು ಹಲವು ಕನ್ನಡ ರಾಜಮಹಾರಾಜರು ಇಂದಿನ ಮಹಾರಾಷ್ಟ್ರದ ಹಲವು ಪ್ರದೇಶಗಳಲ್ಲಿ ಆಡಳಿತ ಮಾಡಿದರು. ಕೊಲ್ಹಾಪುರ, ಸಾಂಗಲಿ, ಸೊಲ್ಲಾಪುರ, ಉಸ್ಮಾನಾಬಾದ, ಲಾತೂರ, ನಾಂದೆದ ಜಿಲ್ಲೆಗಳಲ್ಲಿ ೪೦೦ ಕನ್ನಡ ಶಾಸನಗಳು ಲಭ್ಯವಾಗಿವೆ. ಶಾಸನಗಳೊಂದಿಗೆ ಹಲವು ವೀರಗಲ್ಲುಗಳಿವೆ. ಶಾಸನಗಳ ಬಗ್ಗೆ ಸಂಶೋಧಕರು ಅಧ್ಯಯನ ಮಾಡಿದ್ದಾರೆ. ಅದರೊಂದಿಗೆ ವೀರಗಲ್ಲುಗಳ ಬಗ್ಗೆ ಅಧ್ಯಯನ ಮಾಡಲಿಲ್ಲ. ಈ ಭಾಗದಲ್ಲಿ ಹಲವು ವೀರಗಲ್ಲುಗಳಿವೆ ಎನ್ನುತ್ತಾರೆ ಶಂ.ಬಾ. ಜೋಶಿ.

ಸೊಲ್ಲಾಪುರ ಜಿಲ್ಲೆಯ ದಕ್ಷಿಣ ಸೊಲ್ಲಾಪುರ, ಉತ್ತರ ಸೊಲ್ಲಾಪುರ ಹಾಗೂ ಅಕ್ಕಲಕೋಟ ತಾಲ್ಲೂಕುಗಳಲ್ಲಿ ಹಲವು ವೀರಗಲ್ಲುಗಳಿವೆ. ಇವುಗಳ ಶಿಲ್ಪವನ್ನು ಶಾಸನಸಹಿತ ಶಿಲ್ಪ ಮತ್ತು ಶಾಸನರಹಿತ ಶಿಲ್ಪವೆಂದು ಎರಡು ಭಾಗವಿದೆ. ಸೊಲ್ಲಾಪುರ ಜಿಲ್ಲೆಯ ವೀರಗಲ್ಲು ಶಿಲ್ಪ ಶಾಸನರಹಿತವಾಗಿದೆ. ಕರ್ನಾಟಕದ ವೀರಗಲ್ಲುಗಳ ಕುರಿತು ಡಾ. ಆರ್.ಶೇಷಶಾಸ್ತ್ರಿ, ಎಂ.ಚಿದಾನಂದಮೂರ್ತಿ, ಡಾ. ಡಿ.ವಿ.ಪರಶಿವಮೂತಿ ಹಲವು ವಿದ್ವಾಂಸರು ಸಂಶೋಧನೆ ಮಾಡಿದ ಹಿರಿಯರು, ವೀರಗಲ್ಲುಗಳ ಇತಿಹಾಸವನ್ನು ಗುರುತಿಸಬೇಕಾದರೆ ಶಾಸನಗಳು ಮತ್ತು ಶಾಸನಸ್ಥ ವೀರಗಲ್ಲುಗಳ ಪಾಠವನ್ನು ಗಮನಿಸಬೇಕಾಗುತ್ತದೆ. ಸೊಲ್ಲಾಪುರದ ವೀರಗಲ್ಲು ಗುರುತಿಸಬೇಕಾದರೆ ಹಲವು ಸಮಸ್ಯೆಗಳಿವೆ.

ಸೊಲ್ಲಾಪುರದ ವೀರಗಲ್ಲುಗಳು ಗುರುತಿಸಲು ಮೂರು ಸಮಸ್ಯೆಗಳು ಎದುರಾಗುತ್ತವೆ.

೧. ಸೊಲ್ಲಾಪುರದ ವೀರಗಲ್ಲುಗಳ ಮೇಲಿನ ಶಾಸನ ಪ್ರಕಟವಾಗಿಲ್ಲ.

೨. ಸೊಲ್ಲಾಪುರದ ವೀರಗಲ್ಲುಗಳ ಇತಿಹಾಸವನ್ನು ಗುರುತಿಸುವುದು ಸಾಧ್ಯವಾಗದ ಸಂಗತಿ.

೩. ಸೊಲ್ಲಾಪುರದ ವೀರಗಲ್ಲುಗಳು ಶಾಸನರಹಿತವಾಗಿವೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಶಾಸನ ಸಂಪುಟ-೬ ಮಹಾರಾಷ್ಟ್ರದ ಕನ್ನಡ ಶಾಸನಗಳು ಕೃತಿಯಿಂದ ಸೊಲ್ಲಾಪುರ ಜಿಲ್ಲೆಯ ಪ್ರಾಚೀನ ದೇವಾಲಯ ಗುರುತಿಸಲು ಸಾಧ್ಯವಾಗಿದೆ. ಆದರೆ ವೀರಗಲ್ಲುಗಳು ಗುರುತಿಸಲು ಸಾಧ್ಯವಾಗಿಲ್ಲ.

ವೀರಗಲ್ಲುಗಳು ವೀರನ ಸಂಕೇತವೆಂದು ಜನ ಭಾವಿಸಿ ಸ್ಮಾರಕವನ್ನು ನಿರ್ಲಕ್ಷ್ಯ ಮಾಡಿದರೆ ಅಥವಾ ಅಗೌರವದಿಂದ ಕಂಡರೆ ಅದರಿಂದ ತೊಂದರೆಯಾಗುತ್ತದೆ ಎಂಬ ನಂಬಿಕೆ ಅನೇಕ ಕಡೆಗಳಲ್ಲಿ ಐತಿಹ್ಯಗಳ ಮೂಲಕ ವ್ಯಕ್ತವಾಗಿದೆ. ಈ ತೆರನಾದ ಐತಿಹ್ಯಗಳನ್ನು ಭಾರತದ ಅನೇಕ ಕಡೆಗಳಲ್ಲಿ ಗಮನಿಸಬಹುದು. ಸ್ಮಾರಕಗಳ ಮತ್ತು ವೀರರ ಬಗ್ಗೆ ಇರುವ ಗೌರವವನ್ನು ಕಾಪಾಡಿಕೊಂಡು ಬರುವ ಸಲುವಾಗಿಯೇ ಹುಟ್ಟಿಕೊಂಡ ಇಂಥ

ಐತಿಹ್ಯಗಳು ಅನೇಕ ಕಡೆಗಳಲ್ಲಿ ಸ್ಥಳಪುರಾಣ ಪವಾಡ ವಿಶೇಷ ಪಡೆದು ಆರಾದನಾ ಸಂಪ್ರದಾಯಕ್ಕ ತಮ್ಮ ವಿಶಿಷ್ಟವಾದ ಪ್ರೇರಣೆಯನ್ನು ನೀಡಿದೆ ಎಂದು ಹೇಳಬಹುದು.[೧] ಸೊಲ್ಲಾಪುರ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಇಂಥ ಅನೇಕ ಐತಿಹ್ಯಗಳಿವೆ.

ಬೊಂಬಾಯಿಯಲ್ಲಿ ಬಿರುಗಾಳಿಯನ್ನು 'ಸಾತ್ ವೀರ್' ಎಂಬ ಹೆಸರಿನಿಂದ ಆರಾಧಿಸುತ್ತಾರೆ. ಇವು ರಾತ್ರಿ ವೇಳೆಯಲ್ಲಿ ಬಯಲುಗಳಲ್ಲಿ ಮತ್ತು ತೋಟಗಳಲ್ಲಿ ಇರುತ್ತವೆ ಎಂಬುದಾಗಿ ಅವರು ಭಾವಿಸುತ್ತಾರೆ. ಹಳ್ಳಿಯ ಯಜಮಾನನು ಬಾವುಟವಿರುವ ಬೋಂಬನ್ನೋ ಹಾಯಿಯಿರುವ ದೋಣಿಯನ್ನೋ ಅಥವಾ ಕೋಣವನ್ನೋ ಕಡಿಯುವುದರ ಮೂಲಕ ಪೂಜೆ ಮಾಡುತ್ತಾನೆ. ಆಗ ಆರಾಧನೆ ಮಾಡಲು ಬಂದವರಲ್ಲಿ ಒಬ್ಬರ ಮೇಲೆ ವೀರನು ಆವೇಶವಾಗಿ ಬರುತ್ತಾನೆ. ಈ ರೀತಿಯ ವೀರನ ಆರಾಧನ ತುಂಬಾ ವಿಚಿತ್ರವಾಗಿ ತೋರುತ್ತದೆ. ಬಿರುಗಾಳಿಯನ್ನು ವೀರನೆಂದು ಪರಿಗಣಿಸಿ ಅದನ್ನು ಆರಾಧಿಸುವ ಸಂಪ್ರದಾಯಕ್ಕೆ ಮುಖ್ಯ ಕಾರಣವೆಂದರೆ ಈ ಸಾತ್ ವೀರರನ್ನು ಆರಾಧಿಸುವ ಜನ ಸಾಮಾನ್ಯವಾಗಿ ಅಂಬಿಗರು ಅಥವಾ ಬೆಸ್ತರು ಇವರು ಸದಾ ನೀರಿನ ಮೇಲೆಯೇ ತಮ್ಮ ಜೀವನ ನಿರ್ವಹಣೆ ಮಾಡುತ್ತಿರುವುದರಿಂದ ಬರುವಂಥದ್ದು. ಅದು ಯಾವುದೋ ಶಕ್ತಿಯೆಂದು ಭಾವಿಸಿದ ಜನ, ಅವುಗಳಿಗೆ ಒಂದು ಮೂರ್ತರೂಪವನ್ನು ಕೊಟ್ಟು ಆರಾಧಿಸಲು ಆರಂಭಿಸಿದರು. ಇದಲ್ಲದೆ ಸಮುದ್ರದಲ್ಲಿ ಆಕಸ್ಮಿಕವಾಗಿ ಮಡಿದ ವೀರರ ಹೆಸರಿನಲ್ಲಿ ಅವರ ವಿಗ್ರಹಗಳನ್ನು ಮಾಡಿ ಆರಾಧಿಸುವುದೂ ಉಂಟು. ಇಂಥ ವೀರರನ್ನು ಆರಾಧಿಸುವುದರಿಂದ ಸಮುದ್ರದಲ್ಲಿ ತಮಗೆ ಒದಗಬಹುದಾದ ಕಷ್ಟಗಳು ಪರಿಹಾರವಾಗುವುದೆಂದೇ ಅವರ ನಂಬಿಕೆ.

ಕರ್ನಾಟಕದ ಹಲವಾರು ಪ್ರಾಂತಗಳಲ್ಲಿ ಹಾಲುಮತದವರ ಅದಿದೈವವಾದ ಬೀರಪ್ಪನ ಗುಡಿಗಳನ್ನು ಕಾಣಬಹುದು. ಮಹಾರಾಷ್ಟ್ರದಲ್ಲಿರುವ ಕುರುಬರು ವೀರನನ್ನು ಕಲ್ಲು ಇಟ್ಟೋ ಕಂಬವನ್ನು ಇಟ್ಟೋ ಪೂಜಿಸುತ್ತಾರೆ. ಕೆಲವೊಮ್ಮೆ ವೀರನ ವಿಗ್ರಹ ಅಥವಾ ಚಿತ್ರ ಇರುವ ತಾಮ್ರಪಟವನ್ನು ಅವರು ವೀರನೆಂದು ಪೂಜಿಸುವುದುಂಟು. ಇವೆಲ್ಲವುಗಳನ್ನು ಅವರು 'ವೀರ' 'ಬೀರ್' ಎಂಬುದಾಗಿ ಕರೆಯುತ್ತಾರೆ.[೨] ಸೊಲ್ಲಾಪುರ ಜಿಲ್ಲೆಯ ಶಾಸನ–ವೀರಗಲ್ಲು ಹಾಗೂ ದೇವಾಲಯದ ಭಗ್ನಾವಶೇಷಗಳು ವೀರನೆಂದೆ ತಿಳಿದು ಪೂಜಿಸಿ, ಆರಾಧಿಸಿ, ಉತ್ಸವ ಮಾಡುವ ಸಂಪ್ರದಾಯವಿದೆ. ಸೊಲ್ಲಾಪುರ ಜಿಲ್ಲೆಯ ಲಿಂಗಾಯತರು, ಕುರುಬರು, ಹರಿಜನರು, ಕಂಬಾರರು ವಿಭಿನ್ನ ಶೈಲಿಯಿಂದ ವೀರರ ಆರಾಧನೆ ಮಾಡುತ್ತಾರೆ.

ಅಕ್ಕಲಕೋಟ, ದಕ್ಷಿಣ ಸೊಲ್ಲಾಪುರ, ಉತ್ತರ ಸೊಲ್ಲಾಪುರ ಹಾಗೂ ಸೊಲ್ಲಾಪುರ ನಗರಗಳಲ್ಲಿ ಹಲವು ವೀರಗಲ್ಲುಗಳಿವೆ. ಅಕ್ಕಲಕೋಟ ತಾಲ್ಲೂಕಿನ ಮೈಂದರ್ಗಿ, ದುಧನಿ, ಮಿರಜಗಿ, ಅಕ್ಕಲಕೋಟ ಪಟ್ಟಣಗಳಲ್ಲಿ ವೀರಗಲ್ಲುಗಳಿಗೆ. ಅಕ್ಕಲಕೋಟೆಯ ಎ೧ ಚೌಕ ಹತ್ತಿರವಿರುವ ವಿಠಲ ದೇವಾಲಯದಲ್ಲಿ ಎರಡು ವೀರಗಲ್ಲುಗಳಿವೆ. ವೀರಗಲ್ಲು ಒಂದರಲ್ಲಿ ಮೊದಲನೆಯ ಹಂತದಲ್ಲಿ ವೀರರು ಆನೆಯ ಮೇಲೆ ಕುಳಿತುಕೊಂಡು ಯುದ್ಧ

ಮಾಡುತ್ತಿದ್ದಾರೆ. ಎರಡನೆ ಹಂತದಲ್ಲಿ ಅವರು ಅಪ್ಸರೆಯರೊಡನೆ ಇರುವಂತೆ, ಮೂರನೆ ಹಂತದಲ್ಲಿ ವೀರನೂ ಸ್ವರ್ಗದಲ್ಲಿರುವಂತೆಯೂ ಚಿತ್ರಿಸಲಾಗಿದೆ. ಅಕ್ಕಲಕೋಟೆಯ ಕೋಟೆ, ಅರಮನೆಗಳಲ್ಲಿ ಹಲವು ವೀರಗಲ್ಲುಗಳಿವೆ. ವೀರಗಲ್ಲುಗಳಿಗೆ ಪೂಜೆ ಮಾಡುವ ಸಂಪ್ರದಾಯ ಅಕ್ಕಲಕೋಟೆಯಲ್ಲಿದೆ.

ಅಕ್ಕಲಕೋಟೆ ತಾಲ್ಲೂಕಿನ ಮೈಂದರ್ಗಿ ಮಹಾದೇವ ದೇವಾಲಯದಲ್ಲಿ ವೀರಗಲ್ಲು ಇದೆ.[೩] ಇದು ಮೂರು ಹಂತದ ಚಿಕ್ಕ ಶಿಲ್ಪವನ್ನು ಹೊಂದಿದ್ದು, ಮೊದಲ ಹಂತದಲ್ಲಿ ವೀರರು ಹೋರಾಟವಾಗಿ ಸಾವನ್ನಪ್ಪಿದ್ದಾರೆ. ಎರಡನೇ ಹಂತದಲ್ಲಿ ವೀರರು ಹೋರಾಟ ಮಾಡುತ್ತಿದ್ದಾರೆ. ಮೂರನೇ ಹಂತದಲ್ಲಿ ವೀರರು ಅಪ್ಸರೆಯರೊಡನೆ ಸ್ವರ್ಗದಲ್ಲಿರುವಂತೆಯೂ ಚಿತ್ರಿಸಲಾಗಿದೆ. ಇಲ್ಲಿ ವೀರರ ಹೆಸರಿನಲ್ಲಿ ಒಕ್ಕಲಿಗರು ಹಾಗೂ ಹಟಗಾರ ಬಾಂಧವರು ಉತ್ಸವ ಆಚರಿಸುತ್ತಾರೆ. ತಾಲೂಕಿನ ಕರಜಗಿ, ಮಿರಜಗಿ, ಪಾನದುಧನಿ ಗ್ರಾಮಗಳಲ್ಲಿ ವೀರಗಲ್ಲುಗಳು ದೊರೆತಿವೆ.

ದಕ್ಷಿಣ ಸೊಲ್ಲಾಪುರ ತಾಲೂಕಿನ ಮಂದ್ರೂಪ ಹೊಟಗಿ, ನಿಂಬರಗಿ, ಭಂಡಾರ ಕವಟೆ, ಲಂಪಗಿ, ಮಾಳಕವಟೆ, ಬಾರೂರ, ವಾಂಗಿ, ಕೂಡಲ ಹಲವು ಗ್ರಾಮಗಳಲ್ಲಿ ವೀರಗಲ್ಲುಗಳಿಗೆ ಹೊಟಗಿ ಹನುಮಾಣ ದೇವಾಲಯದಲ್ಲಿ ವೀರಗಲ್ಲು ಒದೆ.[೪] ಇದು ಮೂರು ಹಂತದ ಶಿಲ್ಪವನ್ನು ಹೊಂದಿದ್ದು, ಮೊದಲ ಹಂತದಲ್ಲಿ ವೀರರ ಹೋರಾಟವನ್ನು, ಎರಡನೇ ಹಂತದಲ್ಲಿ ಅವರು ಅಪ್ಸರೆಯರೊಡನೆ ಇರುವಂತೆಯೂ ಚಿತ್ರಿಸಲಾಗಿದೆ. ಮೊದಲ ಹಂತದ ಶಿಲ್ಪಭಾಗವು ಬಹಳ ಪ್ರಮುಖವಾದುದು, ಈ ಹಂತದ ಮಧ್ಯೆ ವೀರನನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ವೀರನ ಹಿಂದಿನ ಭಾಗದಲ್ಲಿ ಒಬ್ಬ ಸ್ತ್ರೀಯ ಚಿತ್ರವಿದ್ದು, ಅವಳ ರಕ್ಷಣೆಯ ಸಲುವಾಗಿ ಹೋರಾಡಿದ ವೀರಗಲ್ಲಾಗಿದೆ. ಲಂಪಗಿ ಗ್ರಾಮದಲ್ಲಿ ವೀರಗಲ್ಲುಗಳಿಗೆ ಪೂಜೆ ಮಾಡುವ ವಿಶೇಷ ಸಂಪ್ರದಾಯವಿದೆ. ಗ್ರಾಮದ ಮಹಿಳೆಯರು ಪ್ರಸೂತಿ ಸಂದರ್ಭದಲ್ಲಿ ಸಂಕಟ ಪ್ರಾರಂಭವಾದರೆ ವೀರಗಲ್ಲುಗಳಿಗೆ ಪೂಜೆ ಮಾಡಿ ಅದು ಅಲುಗಾಡಿದರೆ ಅವರ ಸಂಕಟ ಪರಿಹಾರವಾಗಿ ಪ್ರಸೂತಿ ನಡೆಯುತ್ತದೆ ಎಂದು ಹಿರಿಯ ನಿವೃತ್ತ ಶಿಕ್ಷಕರಾದ ಮಾನಪ್ಪ ಸುತಾರ ಅವರು ಹೇಳುತ್ತಾರೆ. ಮಾಳಕವಟೆ ಗ್ರಾಮದಲ್ಲಿಯ ವೀರಗಲ್ಲುಗಳಿಗೆ ನೀರು ಹಾಕುವ ಸಂಪ್ರದಾಯವಿದೆ. ಮಾಳಕವಟೆ ಗ್ರಾಮಕ್ಕೆ ಮಳೆ ಬಾರದೆ ಬರಗಾಲ ಪರಿಸ್ಥಿತಿ ನಿರ್ಮಾಣವಾಗಿತ್ತು. ಗ್ರಾಮದ ಜನರು ವೀರಗಲ್ಲುಗಳಿಗೆ ನೀರು ಹಾಕಿದರೆ ಮಳೆ ಬರುತ್ತದೆ, ಇದರಿಂದ ಈಗಲೂ ಗ್ರಾಮದ ಜನರು ವೀರಗಲ್ಲುಗಳಿಗೆ ಪೂಜೆಮಾಡಿ ನೀರು ಹಾಕುತ್ತಾರೆ.

ಸೊಲ್ಲಾಪುರ ನಗರದ ಮಧ್ಯಭಾಗದಲ್ಲಿ ಭುಯಿ ಕೋಟೆಯಿದೆ. ಕೋಟೆಯ ಉತ್ತರಮುಖ ದ್ವಾರಬಾಗಿಲು ಹತ್ತಿರ ವೀರಗಲ್ಲು ಇದೆ.[೫] ಈ ಕೋಟೆಯನ್ನು ಕಟ್ಟುತ್ತಿರುವಾದ ಬುರುಜು ನಿಲ್ಲದೆ ಕುಸಿಯತೊಡಗಿತು. ಎಷ್ಟೇ ಪ್ರಯತ್ನಿಸಿದರೂ ಅದು ನಿಲ್ಲದಾಯಿತು. ಕೊನೆಗೆ ಓರ್ವ ಜ್ಯೋತಿಷಿಯು ಗರ್ಭಿಣಿಯನ್ನು (ಬಾಣಂತಿ) ಬಲಿಕೊಟ್ಟರೆ ನಿಲ್ಲುತ್ತದೆಂದು

ಹೇಳಿದ. ಆ ಬಲಿದಾನಕ್ಕೆ ಲಿಂಗಾಯತ ಸಮಾಜ ಒಂದು ಮನೆತನವು ಸಿದ್ಧವಾಯಿತು. ಆ ಮನೆತನದ ಗರ್ಭಿಣಿಗೆ ಜೀವಂತ ಸಮಾಧಿಗೊಳಿಸಿ ಮೇಲೆ ಬುರುಜು ನಿಲ್ಲಿಸಲಾಯಿತು. ಅದರಂತೆ ಮಹಾಬಲಿ ಬುರುಜು ಕುಸಿಯತೊಡಲು ದೇಶಮುಖ ಮನೆತನದ ಓರ್ವ ವಟುವನ್ನು ಜೀವಂತ ಸಮಾಧಿಗೊಳಿಸಿ ಬುರುಜು ನಿರ್ಮಿಸಲಾಯಿತು.

ಬಾದಶಹನು ಈ ಮನೆತನಗಳ ತ್ಯಾಗಕ್ಕೆ ಮೆಚ್ಚಿ ಬಾಣಂತಿ ಬಲಿಕೊಟ್ಟ ಮನೆತನಕ್ಕೆ ದುರ್ಗದ ಗೌಡಕಿಯನ್ನು ಕೊಟ್ಟ, ಆ ಮನೆತನವೇ ಇಂದಿಗೂ ದರ್ಗೊ ಪಾಟೀಲ (ದುರ್ಗದ ಪಾಟೀಲ) ಎಂದು ಪ್ರಸಿದ್ಧವಾಗಿದೆ. ಅದರಂತೆ ವಟು ಬಲಿಕೊಟ್ಟ ದೇಶಮುಖ ಮನೆತನಕ್ಕೆ ಉಂಬಳಿಯನ್ನು ಕೊಡಲಾಯಿತು.[೬] ಪ್ರತಿವರ್ಷ ಸೊಲ್ಲಾಪುರದ ಲಿಂಗಾಯತರು ಈ ಬಾಣಂತಿ ಹೆಸರಿನಲ್ಲಿ ಅವಳಿಗೆ ಹಾಗೂ ಅವಳ ಗರ್ಭದಲ್ಲಿರುವ ಮಗುವಿಗೆ ಸೀರೆ, ಕುಪ್ಪಸ, ಕುಲಾಯಿ, ಮಗುವಿನ ಬಟ್ಟೆ ಅರ್ಪಿಸಿ ಪೂಜೆ ಮಾಡುವ ಐತಿಹ್ಯವಿದೆ. ವೀರಗಲ್ಲು ಭಗ್ನಾವಶೇಷಗಳ ಹತ್ತಿರ ಪ್ರತಿದಿನ ಸೊಲ್ಲಾಪುರದ ಜನರು ದೀಪ ಹಚ್ಚುತ್ತಾರೆ.

ಉತ್ತರ ಸೊಲ್ಲಾಪುರ ತಾಲ್ಲೂಕಿನ ಧಾರಫಲ ಗ್ರಾಮದಲ್ಲಿ ಮೂರು ಮಹಾದೇವ ದೇವಾಲಯಗಳಲ್ಲಿ ವೀರರು ದನಗಳನ್ನು ರಕ್ಷಿಸಲು ಹೋರಾಟ ಮಾಡುತ್ತಿದ್ದಾರೆ. ಎರಡನೆಯ ಹಂತದಲ್ಲಿ ಅವರು ಅಪ್ಸರೆಯತರೊಡನೆ ಇರುವಂತೆ, ಮೂರನೇ ಹಂತದಲ್ಲಿ ವೀರನು ಸ್ವರ್ಗದಲ್ಲಿರುವಂತೆಯೂ ಚಿತ್ರಿಸಲಾಗಿದೆ. ಕೆಲ ವೀರಗಲ್ಲುಗಳು ಸುರಕ್ಷಿತವಾಗಿದ್ದರೆ, ಕೆಲ ವೀರಗಲ್ಲುಗಳು ನಾಶವಾಗಿವೆ.

ದಕ್ಷಿಣ ಸೊಲ್ಲಾಪುರ ತಾಲೂಕಿನ ಬಾರೂರ ಹನುಮಾನ ದೇವಾಲಯದಲ್ಲಿ ೫ ವೀರಗಲ್ಲುಗಳಿವೆ. ಮೊದಲನೆ ಹಂತದಲ್ಲಿ ವೀರರು ಕುದುರೆಯ ಮೇಲೆ ಕುಳಿತು ಹೋರಾಟ ಮಾಡುತ್ತಿದ್ದಾರೆ. ಎರಡನೆಯ ಹಂತದಲ್ಲಿ ವೀರನು ಸ್ವರ್ಗದಲ್ಲಿರುವಂತೆಯೂ ಚಿತ್ರಿಸಲಾಗಿದೆ.

ಸೊಲ್ಲಾಪುರ ಜಿಲ್ಲೆಯ ಹಲವು ಗ್ರಾಮಗಳಲ್ಲಿ ವೀರಗಲ್ಲುಗಳಿವೆ. ವೀರಗಲ್ಲುಗಳ ಕುರಿತು ಆಳವಾದ ಅಧ್ಯಯನ ನಡೆಯಬೇಕಾಗಿದೆ. ವೀರಗಲ್ಲುಗಳಿಗೆ ಅದರದೇಯಾದ ಪದ್ಧತಿಗಳಿಂದ ಪೂಜೆ ಮಾಡುವ ಐತಿಹ್ಯವಿದೆ. ವಿಭಿನ್ನ ರೀತಿಯಿಂದ ಹಬ್ಬ, ಉತ್ಸವ ಆಚರಿಸುವ ಸಂಪ್ರದಾಯವಿದೆ. ಪ್ರತಿವರ್ಷದ ಆಷಾಡಮಾಸದಲ್ಲಿ ಲಿಂಗಾಯತರು, ಕುರುಬರು, ಒಡ್ಡರು, ಗೊಂದಲಿಗರು ವೀರನ ಪ್ರತಿರೂಪವಾಗಿ ಪೂಜೆ ಮಾಡುವ ವಿಭಿನ್ನ ಸಂಪ್ರದಾಯ ಇಲ್ಲಿದೆ. ಲಿಂಗಾಯತರು 'ಹಸಿರು ದೇವರು' ಎಂಬ ಹೆಸರಿನಿಂದ ಪೂಜೆ ಮಾಡಿದರೆ ಉಳಿದ ಎಲ್ಲ ಸಮುದಾಯ 'ಥಂಡಿ' ಎಂಬ ಹೆಸರಿನಿಂದ ಪೂಜೆ ಆಚರಿಸುತ್ತಾರೆ.

ಅಡಿ ಟಿಪ್ಪಣಿಗಳು

೧. ಡಾ. ಆರ್.ಶೇಷಶಾಸ್ತ್ರಿ, ಕರ್ನಾಟಕದ ವೀರಗಲ್ಲುಗಳು, ಪು.ಸಂ. ೪೪.

೨. ಡಾ. ಆರ್.ಶೇಷಶಾಸ್ತ್ರಿ, ಕರ್ನಾಟಕದ ವೀರಗಲ್ಲುಗಳು, ಪು.ಸಂ. ೪೮.

೩. ಬಸವರಾಜ ಮಸೂತಿ, ಮೈಂದರ್ಗಿ ಮಹಾದೇವ ದೇವಾಲಯ, ಇ.ಪು. ೧೧.

೪. ಬಸವರಾಜ ಮಸೂತಿ, ಹೊಟಗಿ ಮಹಾದೇವ ದೇವಾಲಯ, ಇ.ಪು. ೨೪.

೫. ಬಸವರಾಜ ಮಸೂತಿ, ಸೊಲ್ಲಾಪುರ ಮಲ್ಲಿಕಾರ್ಜುನ ದೇವಾಲಯ, ೩೨.

೬. ಕೆ.ಬಿ.ಪೂರ್ವಾಚಾರ್ಯ, ಐತಿಹಾಸಿಕ ನಗರ ಸೊಲ್ಲಾಪುರ, ಪು.ಸಂ. ೭.



ಹೊಟಗಿಯ ವೀರಗಲ್ಲು



ಮೈಂದರ್ಗಿ ವೀರಗಲ್ಲು



ಮಾಲಕವಟೆ ವೀರಗಲ್ಲು



ಮಾಲಕವಟೆ ವೀರಗಲ್ಲು

ಅಕ್ಕಲಕೋಟೆ ಶಿಲಾಹಾರರು

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ಒಂದು ತಾಲ್ಲೂಕು ಕೇಂದ್ರವಾಗಿದೆ. ಅಕ್ಕಲಕೋಟೆ ಭೋಸಲೆ ಸಂಸ್ಥಾನಿಕರ ಪೂರ್ವದಲ್ಲಿ ಶಿಲಾಹಾರರು ಅಕ್ಕಲಕೋಟೆಯಲ್ಲಿ ಆಡಳಿತ ಮಾಡಿದರು. ಅಕ್ಕಲಕೋಟೆಯ ಕನ್ನಡ ಶಾಸನ, ವೀರಗಲ್ಲು, ದೇವಾಲಯ, ಸಂಶೋಧನೆ, ಅಧ್ಯಯನ ಹಾಗೂ ಕ್ಷೇತ್ರಾಕಾರ್ಯದಿಂದ "ಅಕ್ಕಲಕೋಟೆಯ ಶಿಲಾಹಾರರ ಇತಿಹಾಸ" ಗುರುತಿಸಲು ಸಾಧ್ಯವಾಯಿತು.

ಶಿಲಾಹಾರರು ಮಹಾಮಂಡಲೇಶ್ವರರಾಗಿ ಸ್ಥಾಪಿರತಾದುದು ರಾಷ್ಟ್ರಕೂಟ ಕಾಲದಲ್ಲಿ ಹಾಗೆ ತಲೆಯತ್ತಿದ ಶಿಲಾಹಾರರು ಕ್ರಮೇಣ ನಾನಾ ಶಾಖೆಗಳಾಗಿ ಹರಡಿಕೊಂಡು ನಾನಾ ಪ್ರದೇಶಗಳಲ್ಲಿ ಒಡೆಯರಾಗಿ ಪ್ರಸಿದ್ಧಿಗೆ ಬಂದರು. ಇವೆಲ್ಲ ಶಾಖೆಗಳ ಅರಸರಿಗೂ 'ಗರಪುರವರಾಧೀಶ್ವರ'ರೆಂಬ ಬಿರುದಿದ್ದಿತು. ಪ್ರಾಚೀನ 'ತಗರ' ಪರವು ಇವರ ಮೂಲಸ್ಥಾನವಾಗಿದ್ದರಿಬೇಕು. 'ತಗರ'ಪುರವನ್ನು ಟಾಲಮಿಯಾ ಉಲ್ಲೇಖಿಸಿದ್ದಾನೆ. ಈ ಪುರವು ಈಗಿನ ಉಸ್ಮಾನಬಾದ ಜಿಲ್ಲೆಯ 'ತೇರ'ಪಟ್ಟಣವೆಂದು ಈಗಿನ ಊಹೆ.

ಶಿಲಾಹಾರರು ಜೀವಮಾತಕೇತುವಿನ ಮಗನಾದ, ಶಂಖಚನ ಪ್ರಾಣರಕ್ಷಣೆಗಾಗಿ ಗರುಡನಿಗೆ ಪ್ರಾಣತೆತ್ತ ವಿದ್ಯಾಧರಾಧಿಪತಿ, ಜೀವಮಾತವಾಹನನ ವಂಶಜರೆಂದು ಒಂದು ಶಾಸನೋಕ್ತಿಯಿದೆ. ಶಿಲಾಹರರ 'ಸುವಣ ಗರುಡಧ್ವಜ'ರು, 'ಶ್ರೀಮಾನ್ ಮಹಾಲಕ್ಷ್ಮೀ ಲಬ್ಧವರ ಪ್ರಸಾದ'ರೆಂಬ ಬಿರುದಾಂಕಿತರು. ಮಹಾಲಕ್ಷ್ಮೀ ಅವರ ಕುಲದೇವತೆ ಅವರು ಸಾಮಾನ್ಯವಾಗಿ ವೈಧಿಕ ಮತಾನುಯಾಯಿಗಳಾಗಿದ್ದರು.

ಶಿಲಾಹಾರ ವಂಶದಲ್ಲಿ ದಕ್ಷಿಣ ಕೊಂಕಣಶಾಖೆ, ಉತ್ತರ ಕೊಂಕಣ ಶಾಖೆ, ಕೊಲ್ಹಾಪೂರ ಶಾಖೆ, ಅಕ್ಕಲಕೋಟೆ ಶಾಖೆ ಎಂದು ನಾಲ್ಕು ಮುಖ್ಯ ಶಾಖೆಗಳಿದ್ದವು.[೧]

ಶಿಲಾಹಾರರ ಬೇರೆ ಬೇರೆ ಶಾಖೆಗಳು ಬೊಂಬಾಯಿ ಕರ್ನಾಟಕ ಮತ್ತು ಸುತ್ತಣ ಪ್ರದೇಶಗಳಲ್ಲಿ ತಲೆಯೆತ್ತಿದ್ದವು. ಈಗ ಇವರಲ್ಲಿ ಕೆಲವು ಸಾಖೆಗಳು ತಿಳಿದಿವೆ. ಕೊಂಕನ ೯೦೦ (ಮೊದಲಿನ ಸಾಮಂತವಾಡಿ ಪ್ರಾಂತ ಮತ್ತು ರತ್ನಗಿರಿ ಜಿಲ್ಲೆಗೆ ಸೇರಿದ ಇಂಡಿಗೆ ನಾಡು)ರಲ್ಲಿ, ದಕ್ಷಿಣ ಕೊಂಕಣ ಶಿಲಾಹಾರರು ಅಣಂದೂರು ೩೦೦ ಅಂಕುಲಗೆ ನಾಡು (ಇಂದಿನ ಅಕ್ಕಲಕೋಟೆ ಪ್ರದೇಶ) ಎಂಬಲ್ಲಿ ಅಕ್ಕಲಕೋಟ ಶಿಲಾಹಾರರು, ಮುಂಬಯಿಂಯ ಈಗಿನ ಥಾಣ (ಸ್ಥಾನಕ)ದಲ್ಲಿ ಉತ್ತರಕೊಂಕಣ ಶಿಲಾಹಾರರು, ಕೊಲ್ಲಾಪೂರ, ಪುನಹಾಲಾದುರ್ಗ ಮತ್ತು ವಳವಾಡಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ಸಾತಾರಾ ಬೆಳಗಾಂ ಜಿಲ್ಲೆಗಳ ಕೆಲವು ಭಾಗಗಳನ್ನೊಳಗೊಂಡ ಕೊಲ್ಲಾಪೂರ ಪ್ರಾಂತರನ್ನು, ಎಂದರೆ ದಕ್ಷಿಣ ಮಹಾರಾಷ್ಟ್ರವನ್ನು, ಕರ್ಹಾಡ (ಕೊಲ್ಲಾಹಪೂರ) ಶಿಲಾಹಾರರು ಹಾಗೆ ಆಳಿದಂಥ ಶಾಖೆಗಳಲ್ಲಿ ಕೆಲವು ಎಲಮೇಲ (ಸಿಂದಗಿ ತಾಲ್ಲೂಕಿನ ಆಲಮೇಲ) ಬಿಜಾಪೂರ, ಹಾವೇರಿ, ತೇರದಾಳ (ಜಮಖಂಡಿ ತಾಲ್ಲೂಕು) ರಾಮತೀರ್ಥ

(ಅಥಣಿ ತಾಲ್ಲೂಕು) ಇಲ್ಲಿಯೂ ಶಿಲಾಹಾರ ಕೆಲವು ಸಣ್ಣಮಟ್ಟ ಶಾಖೆಗಳು ಇದ್ದವೆಂದು ತಿಳಿಯುತ್ತದೆ.[೨] ಪ್ರಸ್ತುತ ಲೇಖನ ಅಕ್ಕಲಕೋಟೆಯ ಶಿಲಾಹಾರರ ಬಗ್ಗೆ ವಿವರವಾಗಿ ಗುರುತಿಸಲು ಅನುಕೂಲವಾಗಿದೆ.

ಶಿಲಾಹಾರರ ಶಾಖೆಗಳಲ್ಲಿ ಅಕ್ಕಲಕೋಟ ಶಿಲಾಹಾರರದೇ ಪ್ರಾಚೀನತಮ ಶಾಖೆ, ಇವರ ಕುಲದೇವತೆ ಚಾಮುಂಡಿದೇವಿ. ಅನಂದೂರ ೩೦೦ ನಾಡಿನ ಅರಿಕುಳ್ಗೆನಾಡು (ಅಕ್ಕಲಕೋಟೆ ಪ್ರದೇಶವು) ಇವನ ರಾಜ್ಯ ಶಿಲಾಹಾರರ ಈ ಕವಲು 'ಸಳರ' ಶಾಖೆಯೊಂದು ಪ್ರಸಿದ್ಧವಾಗಿದೆ. ಅಕ್ಕಲಕೋಟೆಯ ಶಿಲಾಹಾರರ ಶಾಸನವೊಂದರಲ್ಲಿ ಅವರು 'ವಿಜಯಪುರವರಾಧೀಶ್ವರ'ರೆಂದು ವರ್ಣಿತರಾಗಿದ್ದಾರೆ. ಪಿಟ್ಟಮನಿಂದ (ಕ್ರಿ.ಶ. ೭೩೫) ಪ್ರಾರಂಭವಾಗುವ ಈ ಶಾಖೆಯ ಹದಿನೇಳು ಮಂದಿ ಅರಸರು ಶಾಸನೋಕ್ತರಾಗಿದ್ದಾರೆ. ಈ ವಂಶದ ಇಮ್ಮಡಿ ಇಂದರಸನ ಮೊಮ್ಮಗನಾದ ಮಹಾಮಂಡಲೇಶ್ವರ ಧನಸಂಗ್ರಹವನು ಕ್ರಿ.ಶ. ೧೦೯೯ರಲ್ಲಿ ಚಾಲುಕ್ಯ ಜಗದೇಕಮಲ್ಲ ಜಯಸಿಂಹನ ಸಾಮಂತನಾಗಿದ್ದನು. ಕೈಲಾಸರಸನ ರಾಣಿ ಚಾಂದಲದೇವಿ ಅವರ ಮಗ ಮುಮ್ಮಡಿ ಇಂದರಸ ಕ್ರಿ.ಶ. ೧೧೧೪ರಲ್ಲಿ ಮುಮ್ಮಡಿ ಇಂದರಸನು ಆರನೇಯ ವಿಕ್ರಮಾಧಿತ್ಯನ ಮಹಾಮಂಡಲೇಶ್ವರನಾಗಿದ್ದನು.[೩]

ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಅನೇಕ ರಾಜಕೀಯ ವಿಭಾಗಗಳ ಉಲ್ಲೇಖ ಬಂದಿದೆ. ಪ್ರಾಚೀನ ಅಕ್ಕಲಕೋಟೆಯ ಶಿಲಾಹಾರದ ಶಾಖೆಯ ಭೌಗೋಳಿಕ ವ್ಯಾಪ್ತಿಯನ್ನು ತಿಳಿದುಕೊಳ್ಳಲು ಈ ವಿಭಾಗಗಳು ಸಹಾಯಕವಾಗಿದೆ. ಅಣಂದೂರು ೩೦೦: ಮಹಾರಾಷ್ಟ್ರದ ಅನೇಕ ಕನ್ನಡ ಶಾಸನಗಳಲ್ಲಿ ಅಣಂದೂರು ೩೦೦ ಉಲ್ಲೇಖ ಬಂದಿದೆ. ಇಂದಿನ ಸೊಲ್ಲಾಪೂರ ಜಿಲ್ಲೆಯ ಕೆಲವು ಪ್ರದೇಶಗಳು, ಉಸ್ಮಾನಾಬಾದ್ ಜಿಲ್ಲೆಯ ಕೆಲವು ಭಾಗಗಳು ಹಾಗೂ ಕರ್ನಾಟಕ ರಾಜ್ಯದ ಗುಲ್ಬರ್ಗಾ ಜಿಲ್ಲೆಯ ಕೆಲವು ಪ್ರದೇಶಗಳು ಅಣಂದೂರು-೩೦೦ರ ವ್ಯಾಪ್ತಿಯಲ್ಲಿದ್ದವು. ಕುಂಬರಿಗಾವೆ-೬೦, ಮಂದರ್ವ-೨೦, ಅಂಕಲಗೆ-೫೦, ಮಣಿಯಾರ-೧೨, ವಂಗಿ-೩೦, ಅರವತ್ತಾರುಂಬಾಡ ಮೊದಲಾದ ಉಪವಿಭಾಗಗಳು ಅಣಂದೂರು ೩೦೦ರ ವ್ಯಾಪ್ತಿಯಲ್ಲಿ ಸಮಾವೇಶಗೊಂಡಿದ್ದವು. ಇಂದಿನ ಜಿಲ್ಲೆಯ ಅಂದೊರ ಪ್ರಾಚೀನ ಅಣಂದೂರು ಇದ್ದಿರಬೇಕು. ಅಂಕುಲಗೆ - ೪೦-೮೦: ಇದು ಅಣಂದೂರು ೩೦೦ ಉಪವಿಭಾಗಗಳಲ್ಲಿ ಒಂದು. ಇಂದಿನ ಸೊಲ್ಲಾಪೂರ ಜಿಲ್ಲೆಯ ಅಕ್ಕಲಕೋಟೆಯೇ ಪ್ರಾಚೀನ ಅಂಕುಲಗೆ ಎಂಬುದನ್ನು ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ. ಕೆಲವು ಶಾಸನಗಳಲ್ಲಿ ಅಂಕುಲಗೆ-೫೦ ಎಂದಿದ್ದರೆ ಮತ್ತೆ ಕೆಲವು ಶಾಸನಗಳಲ್ಲಿ ಅಂಕುಲಗೆ-೮೦ ಎಂದಿದೆ. ಮೊದಲು ಈ ಉಪವಿಭಾಗದಲ್ಲಿ ೫೦ ಗ್ರಾಮಗಳಿದ್ದು, ಅನಂತರ ೩೦ ಗ್ರಾಮಗಳು ಸೇರ್ಪಡೆಗೊಂಡಂತೆ ಕಾಣುತ್ತದೆ. ಅಂಕುಲಗಕೋಟೆಯ ಕಾರಣವಾಗಿ ಇದು ಅಕ್ಕಲಕೋಟೆ ಎನಿಸಿಕೊಂಡಿತು. ಇದು ಶಿಲಾಹಾರ ಮನೆತನದ ರಾಜಧಾನಿಯಾಗಿತ್ತು. ಇಂದಿನ ಮಹಾರಾಷ್ಟ್ರದ ಸೊಲ್ಲಾಪುರ ಹಾಗೂ ಉಸ್ಮಾನಾಬಾದ್ ಜಿಲ್ಲೆಯ ಕೆಲವು ಪ್ರದೇಶಗಳನ್ನು ಇದು ಒಳಗೊಂಡಿತ್ತು.[೪]

ಅಕ್ಕಲಕೋಟೆಯ ಶಿಲಾಹಾರ ಮನೆತನದವರು ಅಕ್ಕಲಕೋಟೆ ಪ್ರದೇಶವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದರು. ಶಾಸನಗಳಲ್ಲಿ 'ಅಂಕುಲಗೆ' ಎಂಬ ಉಲ್ಲೇಖವಿದ್ದು ಇದು ಇಂದಿನ ಅಕ್ಕಲಕೋಟೆಯಾಗಿದೆ. ಈ ಮನೆತನಕ್ಕೆ ಸಂಬಂಧಪಟ್ಟ ಹತ್ತಾರು ಕನ್ನಡ ಶಿಲಾಶಾಸನಗಳು ಲಭ್ಯವಾಗಿದ್ದು ಇವರ ಇತಿಹಾಸದ ಪುನಾರಚನೆಗೆ ಸಹಾಯಕವಾಗಿವೆ. ಅಕ್ಕಲಕೋಟೆಯ ಶಿಲಾಹಾರರು ತಮ್ಮನ್ನು 'ಚಾಮುಂಡಿಕಾಲಬ್ದವರಪ್ರಸಾದ'ರೆಂದೇ ಕರೆದುಕೊಂಡಿದ್ದಾರೆ. ಇವರ ಶಾಸನಗಳು ಸೊಲ್ಲಾಪೂರ ಉಸ್ಮಾನಾಬಾದ್ ಹಾಗೂ ಬಿಜಾಪೂರ ಜಿಲ್ಲೆಗಳಲ್ಲಿ ಲಭ್ಯವಾಗಿವೆ.

ಅಕ್ಕಲಕೋಟೆ ಶಿಲಾಹಾರರಿಗೆ ಸಂಬಂಧಿಸಿದಂತೆ ಉಪಲಬ್ಧವಾದ ತೇದಿ ಇರುವ ಮೊದಲು ಶಾಸನವೆಂದರೆ ಕ್ರಿ.ಶ. ೧೧೯೨ ಅಕ್ಕಲಕೋಟೆ ಶಾಸನ (ನಂ ೧೧೮) ಆರನೆಯ ವಿಕ್ರಮಾಧಿತ್ಯನ ಕೈಕೆಳಗೆ ಇವರು ಸಾಮಂತರಾಗಿ ಆಡಳಿತ ನಡೆಸುತ್ತಿದ್ದ ಅಂಶ ಈ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. ೧೧೧೪ರ ಅಕ್ಕಲಕೋಟೆಯ ಮತ್ತೊಂದು ಶಾಸನ (ನಂ ೧೧೮)ವು ಈ ಮನೆತನದ ಸುಧೀರ್ಘ ಇತಿಹಾಸವನ್ನು ಹಿಡಿದಿಟ್ಟುಕೊಂಡಿದೆ. ಈ ಶಾಸನದಲ್ಲಿ ದಾಖಲುಗೊಂಡ ವಂಶಾವಳಿಯು ಬಹು ವಿಸ್ತಾರವಾದುದು. ಅದೇ ರೀತಿ ಕ್ರಿ.ಶ. ೧೧೨೨ರ ಮತ್ತೊಂದು ಶಾಸನವು (ನಂ ೧೧೯) ಈ ಶಾಖೆಗೆ ಸಂಬಂಧಿಸಿದ ವಿವರಗಳನ್ನು ಹೊತ್ತುನಿಂತಿದೆ. ಕಲ್ಯಾಣ ಚಾಲುಕ್ಯರು ಹಾಗೂ ಸೇವುಣರ ಕೈಕೆಳಗೆ ಇವರು ರಾಜ್ಯಭಾರ ಮಾಡಿದ ಅಂಶವು ಇಲ್ಲಿ ದಾಖಲಾಗಿದೆ. ಈ ಕನ್ನಡ ಶಾಸನಗಳಲ್ಲಿ ಉಲ್ಲೇಖಗೊಂಡ ಅಕ್ಕಲಕೋಟೆಯ ಶಿಲಾಹಾರರ ವಂಶಾವಳಿಯನ್ನು ಈ ಅಧ್ಯಾಯದ ಕೊನೆಗೆ ಉಲ್ಲೇಖಿಸಲಾಗಿದೆ.

ಇಂದಿನ ಅಕ್ಕಲಕೋಟೆಯಲ್ಲಿ ಶಿಲಾಹಾರರ ಭವ್ಯವಾದ ಕೋಟೆ ಇದೆ. ಈ ಕೋಟೆಗೆ ಹಳೆಯ ರಾಜವಾಡಾ (ಅರಮನೆ) ಎಂದು ಕರೆಯುತ್ತಾರೆ. ಹೊಸ ರಾಜವಾಡಾ ಅಕ್ಕಲಕೋಟೆಯ ಸಂಸ್ಥಾನಿಕರು ಕಟ್ಟಿಸಿದ್ದಾರೆ. ಕೋಟೆಯೊಳಗೆ ಕನ್ನಡ ಶಾಸನ, ವೀರಗಲ್ಲು, ದೇವಾಲಯ, ಉಗ್ರನರಸಿಂಹ, ನಂದಿ ಹಲವು ಭಗ್ನಾವಶೇಷಗಳಿವೆ. ಕೋಟೆಯೊಳಗೆ ಶಿಲಾಹಾರರಿಗೆ ಸಂಬಂಧಪಟ್ಟ ದಾಖಲೆಗಳು ರಿರ್ಕಾಡ್ ರೂಮ್ ಬೆಂಕಿಗೆ ಆಹುತಿಯಾಗಿ ದಾಖಲೆ ನಾಶವಾಗಿವೆ ಎಂದು ಗುರುಶಾಂತಪ್ಪ ಪಾಟೀಲರು ಹೇಳಿದರು.[೫] ಅಕ್ಕಲಕೋಟೆಯ ಶಿಲಾಹಾರರಿಗೆ ಸಂಬಂಧಪಟ್ಟ ಹಲವು ಕನ್ನಡ ಶಾಸನಗಳಿವೆ. ಶಾಸನ ಸಂಶೋಧಕರು ಈ ಭಾಗದ ಕೆಲವು ಶಾಸನ ಅಧ್ಯಯನ ಮಾಡಿದ್ದಾರೆಯಾದರೂ, ಇನ್ನೂ ಕೆಲವು ಶಾಸನ ಅಧ್ಯಯನ ಮಾಡಬೇಕಾಗಿದೆ.

ಅರಮನೆ ಆವರಣದಲ್ಲಿ ಎಂಟು ಕನ್ನಡ ಶಾಸನಗಳಿವೆ. ಮೊದಲನೆಯ ಶಾಸನದಲ್ಲಿ ಸಿದ್ಧರಾಮನ ವಚನವೊಂದು ಬಂದಿರುವುದು ಕಾಣಬಹುದು. ಸೇವುಣ ದೊರೆಗಳು ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನದೇವರ ಪರಮಭಕ್ತ ರಾಗಿದ್ದರೆಂಬುದಕ್ಕೆ ಈ ಶಾಸನ ಸಾಕ್ಷಿಯಾಗಿದೆ.[೬] ಎರಡನೆಯ ಶಾಸನದಲ್ಲಿ ಆರನೆಯ ವಿಕ್ರಮಾಧಿತ್ಯನ ಸಾಮಂತದೊರೆ ಕಲಚುರಿ ವಂಶದ ಮಹಾಮಂಡಳೇಶ್ವರ ಜೋಗಮರಸನಿಗೆ

ಸಂಬಂಧಿಸಿದ ಮೊದಲ ಶಾಸನವಾಗಿದೆ. ಮಹಾಮಂಡಳೇಶ್ವರ ಜೋಗಮರಸ ಹಾಗೂ ಶಿಲಾಹಾರ ವಂಶದ ಮಹಾಮಂಡಳೇಶ್ವರ ಕವಿಲಾಸರಸ ಮತ್ತು ಹಂದೆಕ್ಕಾಡಿಯ ಪ್ರಭು ಚಂದ್ರಾದಿತ್ಯ ಮತ್ತು ಅವನ ಮಗ ಮಲ್ಲರಸ ಮೊದಲಾದವರು ಸೇರಿ ಹಂದೆಕ್ಕಾಡಿಯ ಚಂದ್ರೇಶ್ವರ ದೇವರಿಗೆ ದಾನ ನೀಡಿದ ವಿವರ ಉಲ್ಲೇಖವಾಗಿದೆ.[೭] ಮೂರನೆಯ ಶಾಸನದಲ್ಲಿ ಅಕ್ಕಲಕೋಟೆ ಶಿಲಾಹಾರ ವಂಶದ ಪಿಟ್ಟಮನಿಂದ ಇಂದರಸನ ವರೆಗಿನ ವಂಶಾವಳಿಯು ಈ ಶಾಸನದಲ್ಲಿ ದಾಖಲಾಗಿದೆ. ಅಲ್ಲದೆ ಮಹಾಮಂಡಳೇಶ್ವರ ಇಂದರಸ, ಮಹಾಮಂಡಳೇಶ್ವರ ಕುಮಾರ ತೈಲಪದೇವನ ದಾಯಿ ಮೇಲಾಳಿಕೆಯ ಭೋಗಿಯಬ್ಬರಸಿ, ದಂಡನಾಯಕ ಪ್ರಭು ಕೇಸರಿನಾಯಕ ಹಾಗೂ ಅವರ ಮಗ ನಂಬರಸರು ಸೇರಿ ಕರಂಜಿಗೆಯ ಶ್ರೀ ಸಿದ್ಧಗಜೇಶ್ವರ ದೇವರಿಗೆ ದಾನ ನೀಡಿದ ವಿವರ ಬಂದಿದೆ. ಸಿಂಗಣದೇವನ ಅಧಿಕಾರಿ ರಣಧವಳಮಯ್ಯ ಶ್ರೀ ಗಜೇಶ್ವರ ದೇವರಿಗೆ ದತ್ತಿ ನೀಡಿದ ವಿವರವೂ ದಾಖಲಾಗಿದೆ.[೮] ನಾಲ್ಕನೆಯ ಶಾಸನದಲ್ಲಿ ಇಂದರಸನ ದಂಡನಾಯಕ ಮಾಧವಭಟ್ಟ ದೈತಾಣದಲ್ಲಿ ಮಾಡಿಸಿದ ಕಂದರ್ಪೇಶ್ವರ ಹಾಗೂ ಶ್ರೀ ಕೇಶವದೇವರಿಗೆ ಮಹಾಮಂಡಳೇಶ್ವರ ಇಂದರಸ ಹಾಗೂ ಅವರ ಮಕ್ಕಳಾದ ಡಾಕರಸ ಕವಿಲಾಸರಸ, ಮಲ್ಲಿದೇವರಸ, ಅಜ್ಜರಸ ಅಲ್ಲದೇ ಇಂದರಸನ ತಮ್ಮ ರಾಜರಸನ ಮಗ ಕುಪ್ಪದೇವರಸ. ಆತನ ತಮ್ಮ ಇಂದರಸ, ಡಾಕರಸನ ಮಗ ಇಂದರಸ ಮೊದಲಾದವರು ಸೇರಿ ಅನೇಕ ರೀತಿಯ ದಾನಗಳನ್ನು ನೀಡಿದ ವಿವರಣೆ ಬಂದಿದೆ.

ದಂಡನಾಯಕ ಮಾದಿರಾಜನ ವಂಶಾವಳಿಯೂ ವಿಸ್ತಾರವಿಲ್ಲಿ ಬಂದಿದೆ. ಮಾರಿದಾಜ ಆರನೆಯ ವಿಕ್ರಮನ ಸಾಮ್ರಾಜ್ಯ ವಿಸ್ತರಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದ ದೈತಾಣದಲ್ಲಿ ಈಗ ಕಂದರ್ಪೇಶ್ವರ ಹಾಗೂ ಕೇಶವದೇವಾಲಯವನ್ನು ಕಟ್ಟಿಸಿದ್ದಲ್ಲದೇ ಅನೇಕ ರೀತಿಯ ದಾನಗಳನ್ನು ನೀಡಿದ ಅಂಶವು ಉಲ್ಲೇಖಗೊಂಡಿದೆ.[೯] ಕ್ರಿ.ಶ. ೧೧೪ರ ಅಕ್ಕಲಕೋಟೆಯ ಶಾಸನದಲ್ಲಿ ಅಕ್ಕಲಕೋಟೆ ಶಿಲಾಹಾರ ಮನೆತನದ ವಂಶಾವಳಿ ಬಂದಿದೆ. ಅದರ ಅನಂತರದ ಇತಿಹಾಸ ಈ ಶಾಸನದಲ್ಲಿ ದಾಖಲಾಗಿದೆ. ಅಕ್ಕಲಕೋಟೆಯ ಶಿಲಾಹಾರರ ಇತಿಹಾಸದ ಪುನಾರಚನೆಯಲ್ಲಿ ಈ ಶಾಸನಕ್ಕೆ ವಿಶೇಷ ಮಹತ್ವವಿದೆ. ಐದನೆಯ ಶಾಸನದಲ್ಲಿ ಶಕವರ್ಷ ೧೧೦೨ರಲ್ಲಿ ಸೋಮರಸ ಗೊಜ್ಜಿಯಕ್ಕಳ ಮಗ ಬೀಚಯ್ಯ ಅಂಕುಲಗೆ ಎಂಭತ್ತರೊಳಗಣ ತ್ರಿಭುವನ ಮಲ್ಲದೇವರ ಬ್ರಹ್ಮಪುರಿ ಹಾಗೂ ಜೀವರ್ಗಿಯ ಅಗ್ರಹಾರಕ್ಕೆ ಭೂಮಿದಾನ ನೀಡಿದ ವಿವರ ಬಂದಿದೆ. ಶಾಸನದ ಕೊನೆಯಲ್ಲಿ ಬಾಚಿರಾಜನದು ಪರೋಪಕಾರದಲ್ಲಿ ಎತ್ತಿದ ಕೈ ಎಂದು ಕೊಂಡಾಡಲಾಗಿದೆ.[೧೦] ಆರನೆಯ ಶಾಸನದಲ್ಲಿ ಸಿಂಗಣದೇವನ ಅಧಿಕಾರಿ ಮಹಾಪ್ರಧಾನ ಮಗರಮುರಾರಿ ಸಂಗಮದೇವ, ಈತನ ಭಾವ ಸೋಯಿದೇವನಾಯಕ (ಸಂಗಮದೇವನ ಹೆಂಡತಿ ಮಾಯಿದೇವಿಯ ತಮ್ಮ) ಹಿರಿಯಕ್ಕಪ್ಪರಸ, ಇಂದಯರನಾಯಕ, ಇಂದಯ ಮೊದಲಾದವರು ಸೇರಿ ಸಾಮಸ್ತನ ದುಧನಿಗೆಯ ಮೂಲಸ್ಥಾನದ ಮಲ್ಲಿಕಾರ್ಜುನದೇವರಿಗೆ ದತ್ತಿಬಿಟ್ಟ ಅಂಶದಾಖಲಾಗಿದೆ.[೧೧] ಇಂದಿನ ಅಕ್ಕಲಕೋಟೆಯ ಸಾಮಂತನ ದುಧನಿಯಾಗಿದೆ.

ಏಳನೆಯ ಶಾಸನದಲ್ಲಿ ಸಿಂಗಣದೇವನ ಅಧಿಕಾರಿ ಮಹಾಮಂಡಳೇಶ್ವರ ಮಂನ್ನೆಯ ಕುಪ್ಪರಸ ಹಾಗೂ ಕಾವುಟಗೆಯ ಮಲ್ಲಿಗಾವುಂಡ ಚಂದಗಾವುಂಡ ಮೊದಲಾದವರು ಸೇರಿ ಸಂಗಮೇಶ್ವರ ದೇವರಿಗೆ ದಾನ ನೀಡಿ ವಿವರ ಬಂದಿದೆ.[೧೨] ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಸೇವುಣರು ಕನ್ನಡಿಗರಾಗಿದ್ದರು. ಅವರ ಕೈಕೆಳಗಿನ ಅಧಿಕಾರಿಗಳೂ ಸಹ ಕನ್ನಡಿಗರಾಗಿದ್ದಾರೆಂಬ ಅಂಶ ಈ ಶಾಸನಗಳಿಂದ ತಿಳಿದು ಬರುತ್ತದೆ. ಎಂಟನೆಯ ಶಾಸನದಲ್ಲಿ ಮಹಾಪ್ರಧಾನ ಮಗರ ಮುರಾರಿ ಸಂಗಮದೇವನಾಯಕ, ಮಹಾಮಂಡಳೇಶ್ವರ ಕಪ್ಪರಸ, ಮಲ್ಲಗಾವುಂಡ ಮೊದಲಾದವರು ಸೇರಿ ಸಂಗಮೇಶ್ವರದೇವರಿಗೆ ಅಂಕುಲಗೆ-೮೦ರ ಬಳಿಯ ಚಿಕ್ಕಕವುಟಗಿಯನ್ನು ಸರ್ವಸಮಸ್ಯವಾಗಿ ದಾನ ನೀಡಿದ ಅಂಶ ದಾಖಲಾಗಿದೆ. ಮಗರ ಮುರಾರಿ ಸಂಗಮದೇವ ನಾಯಕನನ್ನು ಇಲ್ಲಿ ಯಾದವರಾಜ ಸಮುದ್ಧರಣಂ ಎಂದು ಕೊಂಡಾಡಲಾಗಿದೆ. ಈ ಶಾಸನದ ಆರಂಭದಲ್ಲಿ ಗುರು ಸರಸ್ವತಿ, ಗಣಪತಿ, ಶಿವ ಮೊದಲಾದ ದೇವತೆಗಳ ಸ್ತುತಿಯೂ ಬಂದಿದೆ.[೧೩]

ಹಿರಿಯಂದವಡಿಗೆ, ಚಿಕ್ಕಂದವಡಿಗೆ, ಗುಂಗುರಗಾವೆ, ಕೇಗಾವೆ ಮೊದಲಾದ ಊರುಗಳಲ್ಲಿ ಅಂಕುಲಗೆ-೮೦ರ ವ್ಯಾಪ್ತಿಯಲ್ಲಿ ಬರುತ್ತಿದ್ದವು ಎಂಬ ಅಂಶ ಶಾಸನದಿಂದ ಗೊತ್ತಾಗುತ್ತದೆ. ಸಂಗಮೇಶ್ವರ ದೇವಾಲಯ ಜೀರ್ಣೋದ್ಧಾರಕ್ಕೆ ಹಾಗೂ ಅದರ ಸಮಸ್ತ ಖರ್ಚು ವೆಚ್ಚಕ್ಕೂ ದಾನ ನೀಡಿದ ವಿವರವು ಬಂದಿದೆ.[೧೪] ಈ ಶಾಸನದಿಂದ ಅಕ್ಕಲಕೋಟೆಯ ಶಿಲಾಹಾರರ ಭೌಗೋಳಿಕ ವ್ಯಾಪ್ತಿ ಗುರುತಿಸಲು ಬರುತ್ತದೆ.

ಅಕ್ಕಲಕೋಟ ಪ್ರದೇಶ ಅಂದು ಕನ್ನಡದ ಹಲವು ರಾಜಮಹಾರಾಜರು ಆಳ್ವಿಕೆ ಮಾಡಿದರು. ಕಲ್ಯಾಣಚಾಲುಕ್ಯರು, ಶಿಲಾಹಾರರು ಹಾಗೂ ಸೇವಣರು ಆಡಳಿತ ನಡೆಸಿ ದೇವಾಲಯ ನಿರ್ಮಿಸಿ ದತ್ತಿದಾನ ನೀಡಿದ ಅಂಶ ಶಾಸನಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಕಲ್ಯಾಣ ಚಾಲುಕ್ಯರು, ಸೇವಣರು. ಶಿಲಾಹಾರರ ಪ್ರದೇಶ ನಂತರ ಅಕ್ಕಲಕೋಟ ಗುಲ್ಬರ್ಗಾ ಬಹುಮನಿ ಹಾಗೂ ವಿಜಾಪೂರದ ಆದಿಲ್ ಷಾಹಿಗಳ ವಶದಲ್ಲಿದ್ದಿತ್ತು. ಆದಿಲ್‌ಷಾಹಿಗಳ ಸಾಮ್ರಾಜ್ಯವನ್ನು ಪತನಗೊಳಿಸಿ ಶಿವಾಜಿ ಮಹಾರಾಜರು ಅಕ್ಕಲಕೋಟೆಯ ಭವ್ಯವಾದ ಕೋಟೆ, ದೇವಾಲಯ ಹಾಗೂ ಕನ್ನಡ ಶಾಸನಗಳು ಶಿವಾಜಿಯ ವಶದಲ್ಲಿ ಹೋದವು. ಶಿವಾಜಿ ಮಹಾರಾಜರ ನಂತರದಲ್ಲಿ ಅಕ್ಕಲಕೋಟ ಕೋಟೆಯು ಅವರ ಮೊಮ್ಮಗನಾದ ಶಾಹು ಸಂಭಾಜಿ ಭೋಸಲೆ ಅವರಿಗೆ ದೊರೆಯಿತು. ಶಾಹು ಮಹಾರಾಜರು ರಾಣೋಜಿ ಲೋಖಂಡೆ ಎಂಬ ಮಗುವನ್ನು ದತ್ತು ಸ್ವೀಕರಿಸಿದರು. ರಾಣೋಜಿಯು ವಂಶ ಪರಂಪರೆಯ ಪೀಳಿಗೆಯಿಂದ ಭೋಸಲೆ ಸಂಸ್ಥಾನಿಕರು ಎಂದು ಅಕ್ಕಲಕೋಟವನ್ನು ಆಳ್ವಿಕೆ ಮಾಡಲು ಪ್ರಾರಂಭಿಸಿದರು. ತನ್ನ ಅಕ್ಕಲಕೋಟೆಯಲ್ಲಿ ಭೋಸಲೆ ಸಂಸ್ಥಾನಿಕರು ಕ್ರಿ.ಶ. ೧೭೧೨ ರಿಂದ ಕ್ರಿ.ಶ. ೧೯೪೭ರ ವರೆಗೆ ಅಂದರೆ ಭಾರತ ಸ್ವಾತಂತ್ರ್ಯ ಸಿಗುವತನಕ ಅಕ್ಕಲಕೋಟವನ್ನು ಆಳ್ವಿಕೆ ಮಾಡಿದರು.[೧೫] ಭೋಸಲೆ

ಸಂಸ್ಥಾನಿಕರು ತಮ್ಮ ಅಧಿಕಾರಾವಧಿಯಲ್ಲಿ ನೂತನ ಭವ್ಯವಾದ ಅರಮನೆಯೊಂದನ್ನು ಕಟ್ಟಿಸಿದರು. ಅಕ್ಕಲಕೋಟೆ ಭೋಸಲೆ ಸಂಸ್ಥಾನಿಕರು ಅಕ್ಕಲಕೋಟಕ್ಕೆ "ಪ್ರಜ್ಞಾಪುರಿ" ಎಂದು ಕರೆಯುತ್ತಿದ್ದರು. ಶಿಲಾಹಾರರ ಕೋಟೆಗೆ ಹಳೆಯ ರಾಜವಾಡಾ, ಭೋಸಲೆಯವರ ಅರಮನೆಗೆ ನ್ಯೂರಾಜವಾಡ ಎಂದು ಕರೆಯುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರದಲ್ಲಿ ಭಾಷೆಗಳ ಆಧಾರದ ಮೇಲೆ ರಾಜ್ಯಗಳ ರಚನೆ ಮಾಡಲಾಯಿತು. ಭಾಷಾವಾರು ಪ್ರಾಂತಗಳ ರಚನೆಯ ಸಂದರ್ಭದಲ್ಲಿ ಕರ್ನಾಟಕ ಏಕೀಕರಣ ಹೋರಾಟದ ಸಮಿತಿಯು ಅಕ್ಕಲಕೋಟ ಅಪ್ಪಟ ಕನ್ನಡಿಗರಿಗೆ ಗುರುತಿಸಲು ವಿಫಲವಾಯಿತು. ಇತ್ತಕಡೆ ಅಕ್ಕಲಕೋಟ ಭೋಸಲೆ ಸಂಸ್ಥಾನಿಕರು ಮರಾಠರಾಗಿದ್ದರಿಂದ ಅವರು ಮುಂಬಯಿ ಭಾಷಾವಾರು ಪ್ರಾಂತದ ಸಮಿತಿಯಲ್ಲಿ ಭಾಗವಹಿಸಿದ ಕಾರಣವಾಗಿ ಅಕ್ಕಲಕೋಟ ಕನ್ನಡಿಗರು ಇಂದು ಮಹಾರಾಷ್ಟ್ರದಲ್ಲಿ ಉಳಿದುಕೊಂಡರು.

ಅಪ್ಪಟ ಕನ್ನಡ ಪ್ರೇಮಿಗಳು ನಾವು
ನಮ್ಮ ತಾಯಿಯನ್ನು ಕಳೆದುಕೊಂಡೆವು
ನಮ್ಮ ತಾಯಿಯನ್ನು ಹುಡುಕುತ್ತಿದ್ದವು
ತಂದೆ ಆಶ್ರಯದಲ್ಲಿ ಬೆಳೆದೆವು.

ಕವಿವಾಣಿಯಂತೆ ಅಕ್ಕಲಕೋಟವು ಇಂದು ಮಹಾರಾಷ್ಟ್ರದಲ್ಲಿ ಇದ್ದರೂ ಸಹಿತ ಕನ್ನಡ ಭಾಷೆಯನ್ನು ಪ್ರೀತಿಸುವ ಗಡಿ ಕನ್ನಡಿಗರಿದ್ದಾರೆ. ಅಕ್ಕಲಕೋಟ ತಾಲ್ಲೂಕಿನಲ್ಲಿ ಕನ್ನಡ ಭಾಷೆ, ಕಲೆ, ಸಾಹಿತ್ಯ, ಜೀವಂತ ಉಳಿದು ವೈಭವದಿಂದ ಬೆಳಗುತ್ತಿದ್ದಾಳೆ.

ಅಕ್ಕಲಕೋಟೆ ಶಿಲಾಹಾರರ ವಂಶಾವಳಿ

ಪಿಟ್ಟಮ I
|
ಅಜ್ಜ I
|
ನಾಗಾರ್ಜುನ
|
ಇಂದ್ರ I (ಇಂದ)
|
ಕೈಲಾಸ (ಕವಿಲಾಸ) — ಕಂಜ
|
ಬಬ್ಬಸ

ರಕ್ಕಸ

ಇಂದ II

ಸೋವಣ

ಉತ್ತಮ II

ಕೈಲಾಸ II(ಕವಿಲಾಸ)

ಧನಸಂಗ್ರ (ಕ್ರಿ.ಶ. ೧೦೧೯)

ಅಜ್ಜ II

ಕೈಲಾಸ (ಕವಿಲಾಸ)

ದಂಕ I

ಕೈಲಾಸ IV(ಕವಿಲಾಸ) (ಕ್ರಿ.ಶ. ೧೦೯೨)

ಕೈಲಾಸ IV(ಕಲಾವಿಲಾಸ) (ಕ್ರಿ.ಶ. ೧೦೯೩)

ಇಂದರಸ (ಇಂದ III) (ಕ್ರಿ.ಶ. ೧೧೧೪)

ದಾಕರಸ ಕೈಲಾಸ ಮಲ್ಲಿದೇವ ಅಜ್ಜ III

ಇಂದರಸ

ರಾಜರಸ


ಕುಪ್ಪದೇವ ಇಂದರಸIV

ಅಡಿ ಟಿಪ್ಪಣಿಗಳು

೧. ಎಂ.ವಿ. ಕೃಷ್ಣರಾವ್: ಕರ್ನಾಟಕ ಇತಹಾಸ ದರ್ಶನ, ಪು.ಸಂ. ೩೦೯
೨. ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ: ನಮ್ಮ ಕರ್ನಾಟಕ ಪು.ಸಂ. ೬೫.
೩. ಎಂ.ವಿ. ಕೃಷ್ಣರಾವ್: ಕರ್ನಾಟಕ ಇತಹಾಸ ದರ್ಶನ, ಪು.ಸಂ. ೩೧೨
೪. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು.ಸಂ. xxxvii
೫. ಸಂದರ್ಶನ ದಿನಾಂಕ: ೨೦-೦೫-೨೦೧೦ ಗುರುಶಾಂತಪ್ಪ ಪಾಟೀಲ, ಅಕ್ಕಲಕೋಟ
೬. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೧೮೭
೭. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೧೮೯
೮. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೧೯೦
೯. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೧೯೫
೧೦. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೧೯೯
೧೧. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೨೦೦
೧೨. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೨೦೨
೧೩. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೨೦೩
೧೪. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು. ಸಂ. ೨೦೩
೧೫. ಗಡಿನಾಡು ಅಕ್ಕಲಕೋಟ: ಬಸವರಾಜು ಮಸೂತಿ ಜನಪದ ಸಂಚಿಕೆ ೨೦೦೩.
೧೬. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು ಪು.ಸಂ. xxxvii




ಅಕ್ಕಲಕೋಟೆಯ ಕೋಟೆ



ಅಕ್ಕಲಕೋಟೆ ಕೋಟೆಯೊಳಗಿನ ಕನ್ನಡ ಶಾಸನಗಳು

ಹಂಚಿಹೋದ ಕರ್ನಾಟಕ



೧. ಮುಂಬಯಿ
೨. ಮದ್ರಾಸು
೩. ಕೊಡಗು
೪. ಮೈಸೂರು
೫. ಹೈದರಾಬಾದು
೬. ಕೊಲ್ಹಾಪುರ
೭. ಸಾಂಗ್ಲಿ
೮. ಮಿರ್ಜಿ (ಹಿರಿ)
೯. ಮಿರ್ಜಿ (ಕಿರಿ)
೧೦. ಕುರಂದವಾಡ (ಹಿರಿ)
೧೧. ಕುರಂದವಾಡ (ಕಿರಿ)
೧೨. ಜಮುಖಂಡಿ
೧೩. ಮುಧೋಳ
೧೪. ರಾಮದುರ್ಗ
೧೫. ಜತ್ತ
೧೬. ಅಕ್ಕಲಕೋಟೆ *
೧೭. ಔಂಧ (ಗುಣದಾಳ)
೧೮. ಸವಣೂರ
೧೯. ಸೊಂಡೂರು

ಗಡಿನಾಡ ಮೈಂದರ್ಗಿ – ಕುರುಂದವಾಡ ಜ್ಯೂನಿಯರ್ ಸ್ಟೇಟ್

ಮಹಾರಾಷ್ಟ್ರದ ಸೊಲ್ಲಾಪೂರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ಅಂತರದಲ್ಲಿ ಇರುವ ಮೈಂದರ್ಗಿ ಇಂದು ಒಂದು ಪ್ರಮುಖ ಊರು. ಅಂದು ಸಂಸ್ಥಾನಿಕರ ಆಡಳಿತದಲ್ಲಿ ವೈಭವದಿಂದ ಮೆರೆದದ್ದು ತಿಳಿದು ಬರುತ್ತದೆ. ಅಕ್ಕಲಕೋಟದಿಂದ ಮೈಂದರ್ಗಿ ಅತೀ ಸಮೀಪವಿದ್ದರೂ ಸಾಂಸ್ಕೃತಿಕವಾಗಿ ವಿಭಿನ್ನವಾಗಿದ್ದರೂ, ರಾಜಕೀಯವಾಗಿ ಭಿನ್ನತೆಯನ್ನು ಪಡೆದಿರುವುದು ನಮಗೆ ಇತಿಹಾಸದಿಂದ ಕಂಡು ಬರುತ್ತದೆ. ಸ್ವಾತಂತ್ರ್ಯದ ಪೂರ್ವದಲ್ಲಿ ಅಕ್ಕಲಕೋಟೆಯಲ್ಲಿ ಭೋಸಲೆ ಸಂಸ್ಥಾನ ಆಡಳಿತ ನಡೆಸಿದರೆ, ಮೈಂದರ್ಗಿ ಸಂಸ್ಥಾನದ ಇತಿಹಾಸದ ದಾಖಲೆಗಳು ಪ್ರತ್ಯೇಕವಾಗಿ ದೊರೆಯುತ್ತವೆ. ಅಧ್ಯಯನ, ಸಂಶೋಧನೆ ಹಾಗೂ ಕ್ಷೇತ್ರಕಾರ್ಯಗಳಿಂದ ದೊರೆತ ಮಾಹಿತಿಗಳ ಆಧಾರದಿಂದ "ಮೈಂದರ್ಗಿ ಕುರುಂದವಾಡ ಜ್ಯೂನಿಯರ್ ಸ್ಟೇಟ್"ದ ಇತಿಹಾಸವನ್ನು ಪರಿಚಯಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಇತಿಹಾಸದ ಪುಟಗಳಲ್ಲಿ ಪಟವರ್ಧನರ ಸಾಧನೆ ಅಮೋಘವಾಗಿದೆ. ಮೈಂದರ್ಗಿಯಲ್ಲಿ ಪಟವರ್ಧನರಿಗೆ ಸಂಬಂಧಪಟ್ಟ ಶಾಸನ, ದೇವಾಲಯ, ಸಂಸ್ಥಾನಿಕರ ಕಛೇರಿ ಹಾಗೂ ಹಸ್ತಪ್ರತಿಗಳು ದೊರೆಯುತ್ತವೆ. ಆಕರಗಳಿಂದ ಲಭ್ಯವಾದ ದಾಖಲೆಯಂತೆ ಪಟವರ್ಧನರ ಮೂಲವನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಮೊದಲು ಪೇಶ್ವೆ ಸಂಸ್ಥಾನಿಕರ ಆಡಳಿತದಲ್ಲಿ ಪಟವರ್ಧನರು ಸ್ವಾಮಿ ಭಕ್ತಿಯಿಂದ ಕಾರ್ಯ ನಿರ್ವಹಿಸುತ್ತ ದಿನದಿಂದ ದಿನಕ್ಕೆ ಊರ್ಜಿತಾವಸ್ಥೆಗೆ ಬಂದರು. ಹೈದರಾಲಿ ಹಾಗೂ ಪೇಶ್ವೆಯವರಿಗೆ ಯುದ್ಧ ನಡೆದಾಗ ಪಟವರ್ಧನರು ಬಹಳ ಶೌರ್ಯವನ್ನು ತೋರಿಸಿದ್ದರಿಂದ ಪೇಶ್ವೆ ಮಾಧವರಾಯ ಅರಸರು ಕ್ರಿ.ಶ. ೧೭೭೪ರಲ್ಲಿ ಸರಂಜಾಮಿನ ಸನದು ಮಾಡಿಕೊಟ್ಟರು.[೧] ಕ್ರಿ.ಶ. ೧೮೧೦ರ ಇತಚತೀಚೆಗೆ ದಕ್ಷಿಣ ಮಹಾರಾಷ್ಟ್ರದ ಜಹಾಗೀರುಗಳಲ್ಲಿ ಮಿರ್ಜಿ, ಸಾಂಗಲಿ, 'ಕುರುಂದವಾಡ' ತಾಸಗಾವಿ ಜಮಖಂಡಿ ಹಾಗೂ ಕಾಗಾವಾಡ ಈ ಪ್ರಕಾರ ಆರು ವಿಭಾಗಗಳಲ್ಲಿ ಪಟವರ್ಧನರು ಆಡಳಿತ ಕಾರ್ಯ ನಡೆಸಿದರು.

ಕುರುಂದವಾಡ ಸಂಸ್ಥಾನದಲ್ಲಿ ಹಿರಿಯ ಮನೆತನ (Government of Kurundwad, Senior State) ಕಿರಿಯ ಮನೆತನ (Government of Kurundwad, Junior State) ಎಂಬ ಎರಡು ಸಂಸ್ಥಾನಗಳಿದ್ದವು. ಕಿರಿಯ ಮನೆತನದ ಕುರುಂದವಾಡ ಸಂಸ್ಥಾನದಲ್ಲಿ ಯಳ್ಳೂರು ಬೆಳಗಾವಿ ಬಳಿಯಲ್ಲಿ, ಮೈಂದರ್ಗಿ ಅಕ್ಕಲಕೋಟೆಯ ನೆರೆಯಲ್ಲಿ ಹೀಗೆ ಎರಡು ಮಹಲುಗಳಿವೆ.[೨] ಈ ಕಾರಣದಿಂದಲೇ ಇಂದು ಸಹ ಮೈಂದರ್ಗಿ ನಾಗರಿಕರು ತಮ್ಮ ನಗರಪಾಲಿಕೆಗೆ 'ಕುರುಂದವಾಡ ಜ್ಯೂನಿಯರ್ ಸ್ಟೇಟ್' ಎಂದು ಕರೆಯುವ ವಾಡಿಕೆ ಇದೆ. ಅಂದು ಕುರುಂದವಾಡ ಜ್ಯೂನಿಯರ್ ಸ್ಟೇಟ್ ಎಂಬ ಹೆಸರಿನಿಂದ ಮೈಂದರ್ಗಿ ಪ್ರಸಿದ್ಧವಾಗಿತ್ತು ಎಂದು ಇಂದು ಕೂಡ ಊರು ಹಿರಿಯ ನಿವೃತ್ತಶಿಕ್ಷಕರಾದ ರವಣಸಿದ್ಧಸಿಂದಗಿ ಅವರು ಹೇಳುತ್ತಾರೆ.[೩]

ಸ್ವಾತಂತ್ರ್ಯದ ನಂತರ ಸಂಸ್ಥಾನಗಳ ವಿಲೀನಿಕರಣ ಸಂದರ್ಭದಲ್ಲಿ ಈ ಸಂಸ್ಥಾನಿಕರ ಪ್ರದೇಶಗಳು ಯಾವ ರಾಜ್ಯಕ್ಕೆ ಸೇರಿಸಬೇಕೆಂಬ ವಿಷಯದಲ್ಲಿ ರಾಷ್ಟ್ರದ

ನಾಯಕರು ಗಡಿಸಮಸ್ಯೆಯನ್ನು ಸೃಷ್ಟಿ ಮಾಡಿ, ಎರಡೂ ರಾಜ್ಯಗಳ ವಿವಾದಕ್ಕೆ ಕಾರಣವಾಯಿತು. ಕರ್ನಾಟಕ ಇತಿಹಾಸದ ಹಲವು ಆಕರಗಳಲ್ಲಿ 'ಕಿರಿ ಕುರುಂದವಾಡ ಸಂಸ್ಥಾನ ಅಥವಾ ವಡಗಾಂವ ಸಂಸ್ಥಾನದ' ಉಲ್ಲೇಖವಿದೆ.[೪] ಕಿರಿಕುರುಂದವಾಡ ಸಂಸ್ಥಾನ ಅಂದರೆ ಮೈಂದರ್ಗಿ ಸಂಸ್ಥಾನ ಎಂಬುದು ಈ ಮೊದಲು ವಿವರವಾಗಿ ಹೇಳಿದ್ದೇವೆ. ಇದರ ಇತಿಹಾಸದ ದಾಖಲೆ ಆಕರಗಳಲ್ಲಿ ಲಭ್ಯವಾಗುವುದಿಲ್ಲ. ಕುರುಂದವಾಡ ಜ್ಯೂನಿಯರ್ ಸ್ಟೇಟ್‌ಗೆ ಸಂಬಂಧಪಟ್ಟ ಯಳ್ಳೂರು ತಾಲ್ಲೂಕು ಕರ್ನಾಟಕದಲ್ಲಿದ್ದರೆ, ಮೈಂದರ್ಗಿ ತಾಲ್ಲೂಕು ಮಹಾರಾಷ್ಟ್ರದಲ್ಲಿ ಉಳಿದುಕೊಂಡಿದೆ. ಈ ಲೇಖನ ಮೈಂದರ್ಗಿ ಸಂಸ್ಥಾನಕ್ಕೆ ಸೀಮಿತವಾಗಿರುವುದರಿಂದ ಮೈಂದರ್ಗಿಗೆ ಸಂಬಂಧಪಟ್ಟ ದಾಖಲೆಗಳ ವಿವರ ಇಲ್ಲಿದೆ.

"ಕುರುಂದವಾಡ ಜ್ಯೂನಿಯರ್ ಸ್ಟೇಟ್‌ನ ರಾಜಧಾನಿ ವಡಗಾಂವ (ಇಂದಿನ ಬೆಳಗಾವಿಯಲ್ಲಿದೆ) ವಡಗಾಂವ ಅಧೀನದಲ್ಲಿ ಯಳ್ಳೂರು ಹಾಗೂ ಮೈಂದರ್ಗಿ ತಾಲ್ಲೂಕುಳಗಿಂದ ಆಡಳಿತ ಸುಗಮವಾಗಿ ನಡೆಸಲು ಕೆಲ ಸದಸ್ಯರನ್ನು ಪ್ರತಿ ತಿಂಗಳಿಗೊಮ್ಮೆ ವಡಗಾಂವದಲ್ಲಿ ಸಭೆ ನಡೆಯುತ್ತಿತ್ತು. ಮೈಂದರ್ಗಿ ತಾಲ್ಲೂಕಿನಿಂದ ನಾಗಪ್ಪ ಪಡಸಲಗಿ, ಶಿವಣಪ್ಪ ಕೇಸೂರ, ಈರಯ್ಯ ಬಾಜಾರಮಠ, ಸಿಂದಗಿ ವಕೀಲ, ಉದಗಾಂವಕರ ವಕೀಲ, ಬಿಲವಡಕರ್ ವಕೀಲ ಇವರೆಲ್ಲರೂ ವಡಗಾಂವಕರ ಸಭೆಗೆ ಹೋಗಿ ಜನರ ಕುಂದು–ಕೊರತೆಗಳನ್ನು ಪಟವರ್ಧನರಿಗೆ ಹೇಳುತ್ತಿದ್ದರು. "ಸ್ವಾತಂತ್ರ್ಯ ದೊರೆತ ಬಳಿಕೆ ಈ ಸಂಸ್ಥಾನದ ಯಳ್ಳೂರು ತಾಲ್ಲೂಕು ಕರ್ನಾಟಕದಲ್ಲಿ ಉಳಿದರೆ, ಮೈಂದರ್ಗಿ ತಾಲ್ಲೂಕು ಮಹಾರಾಷ್ಟ್ರದಲ್ಲಿ ಉಳಿದುಕೊಂಡಿದೆ"[೫] ಎಂದು ವಿವರವಾಗಿ ಸ್ವಾತಂತ್ರ್ಯ ಹೋರಾಟಗಾರರು, ಹಿರಿಯೂರು ಆದ ಶ್ರೀ ನಾಗಪ್ಪ ಪಡಲಸಗಿಯವರು ಸಂದರ್ಶನದ ವೇಳೆಯಲ್ಲಿ ನನಗೆ ತಿಳಿಸಿದ್ದುಂಟು. ಆಕರಗಳಲ್ಲಿಯ ಉಲ್ಲೇಖ, ಸಂದರ್ಶನದಲ್ಲಿ ಲಭ್ಯವಾದ ಮಾಹಿತಿಯಿಂದ ಮೈಂದರ್ಗಿ ಸಂಸ್ಥಾನಿಕರ ಇತಿಹಾಸ ಬಹಳಷ್ಟು ಮಹತ್ವದ್ದಾಗಿದೆ.

"ಅಂದು ಬೆಳಗಾವಿಯಲ್ಲಿ ನಮ್ಮ ಅಣ್ಣ ಎಲ್.ಎಲ್.ಬಿ. ಅಧ್ಯಯನ ಮಾಡುವ ಸಂದರ್ಭದಲ್ಲಿ ಅನವ ಬುದ್ಧಿಮತ್ತೆಯನ್ನು ಪರೀಕ್ಷಿಸಿ ಮೈಂದರ್ಗಿ ತಾಲ್ಲೂಕಿನ ಮಂತ್ರಿಗಳೆಂದು ಶಿವಣಪ್ಪ ಕೇಸೂರು ಅವರಿಗೆ ಕ್ರಿ.ಶ. ೧೯೪೬ರಲ್ಲಿ ಪಟವರ್ಧನರು ನೇಮಿಸಿದರು. ತೋರಣಿ, ಭೋಸಗಾ, ಮುಗಳಿ, ದುಧನಿ, (ಪಾನ) ಸಿನ್ನೂರ, ಬಬಲಾದ, ಬೋರೋಟ, ಹಾಲಹಳ್ಳಿ, ಬಣಜಗೋಳ ಹೀಗೆ ಹದಿನಾಲ್ಕು ಹಳ್ಳಿಗಳು ಮೈಂದರ್ಗಿ ತಾಲ್ಲೂಕಿನ ಕೇಂದ್ರಲದಲಿದ್ದವು. ಅಂದು ತಾಲ್ಲೂಕು ಕೇಂದ್ರವಾದ ಮೈಂದರ್ಗಿಯಲ್ಲಿ ಸಂಸ್ಥಾನಿಕರ ಶಾಲೆ, ದವಾಖಾನೆ, ದೇವಾಲಯ, ನೀರಿನ ಭಾವಿ, ಮೋಜದಾರ ಕಛೇರಿ, ಪೌಜದಾರ ನ್ಯಾಯಾಲಯ, ಪೋಲೀಸ್ ಠಾಣೆಗಳಿದ್ದವು. ಅಣ್ಣ ಮಂತ್ರಿಯಾಗಿ ಮೈಂದರ್ಗಿಯಲ್ಲಿ ದವಾಖಾನೆ ಕಟ್ಟಿಸಿದರು".[೬] ಎಂದು ವಿವರವಾಗಿ ಸಂಸ್ಥಾನಿಕರ ಇತಿಹಾಸವನ್ನು ಹಿರಿಯರಾದ ಮಾಜಿ ನಗರಾಧ್ಯಕ್ಷರಾದ ಬಸವಣೆಪ್ಪ ಕೇಸೂರು ಅವರೇ ಇಂದು ಸ್ವತಃ ಹೇಳುತ್ತಾರೆ. ಸೊಲ್ಲಾಪೂರ ಅಕ್ಕಲಕೋಟೆ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರಲು ಶಿವಣ್ಣಪ್ಪ ಕೇಸೂರ, ಬಸವಣಪ್ಪ ಕೇಸೂರು ಅಣ್ಣ ತಮ್ಮಂದಿರಿಬ್ಬರು ಕರ್ನಾಟಕದ ಏಕೀಕರಣದಲ್ಲಿ ಹೋರಾಡಿದರು.

"ಅದು ಅಲ್ಲದೇ ದೇಶದ ಸ್ವಾತಂತ್ರ್ಯಕ್ಕಾಗಿ ತನ್ನನ್ನು ಮತ್ತು ತನ್ನ ಬಂಧುಬಳಗವನ್ನೇ ಸಮರ್ಪಿಸಿಕೊಂಡ ಸಿಂಧೂರ ಲಕ್ಷ್ಮಣನ ಹೋರಾಟ ಅತ್ಯಂತ ರೋಮಾಂಚನಕಾರಿಯಾದುದು. ಸಿಂಧೂರ ಲಕ್ಷ್ಮಣನ ಬಲಗೈ ಬಂಟನಾದ ನರಶ್ಯಾ ಮೈಂದರ್ಗಿ ತಾಲ್ಲೂಕಿನ ಪರಿಸರಲದಲಿ ಇದ್ದನು. ಮುಗಳಿ ಪರಿಸರದಲ್ಲಿ ನರಶ್ಯಾನಿಗೆ ಮೈಂದರ್ಗಿ ಫೌಜುದಾರ ಬಂಧಿಸಿ ಕೆಲ ದಿವಸಗಳವರೆಗೆ ಮೈಂದರ್ಗಿ ಜೈಲಿನಲ್ಲಿ ಇಟ್ಟು ಬೆಳಗಾವಿಗೆ ಕಳಿಸಿದನು. ಲಕ್ಷ್ಮಣನಂತೆ ನರಶ್ಯಾ ಬಡತನದಲ್ಲಿ ನರಳುತ್ತಿರುವ ನೂರಾರು ಕುಟುಂಬಗಳಿಗೆ ಆಶ್ರಯದಾತನಾಗಿ, ಬಡವರಿಗೆ ಸಾಮಾಜಿಕ ನ್ಯಾಯ ದೊರಕಿಸಲು ಹೋರಾಡುತ್ತಿದ್ದನು. ನರಶ್ಯಾ ಬಂಧನಕ್ಕೆ ಒಳಗಾದಾಗ ಇಡೀ ಮೈಂದರ್ಗಿ ಜನರು ಕಣ್ಣೀರಿಟ್ಟರು. ನರಶ್ಯಾನ ಬಗ್ಗೆ ಮೈಂದರ್ಗಿ ಹರಿಜನರು ಜಾನಪದ, ಬೀಸುವ ಹಾಡುಗಳನ್ನು ಹಾಡುತ್ತಿದ್ದರು ಎಂದು ಹಿರಿಯರಾದ ಪುನ್ನಪ್ಪ ಶಾವರಿ ಅವರು ಹೇಳುತ್ತಾರೆ".[೭] ಅಂದು ರಜಾಕರ ಹಾವಳಿಯ ಸಂದರ್ಭದಲ್ಲಿ ಮೈಂದರ್ಗಿಯ ಹಲವು ಹಿರಿಯರು ಸ್ವಾತಂತ್ರ್ಯ ಹೋರಾಟಗಾರರಾಗಿ ಕಾರ್ಯನಿರ್ವಹಿಸಿದರು. ಸರಕಾರ ಅವರನ್ನು ಗುರುತಿಸಲಿಲ್ಲ. ಇಲ್ಲಿಯ ಹಲವು ಹಿರಿಯರನ್ನು ಸಂದರ್ಶಿಸಿದಾಗ ಅವರಿಂದ ಇತಿಹಾಸದ ಮಾಹಿತಿ ದೊರೆಯಿತಿ.

ಇಂದಿನ ಮೈಂದರ್ಗಿಯಲ್ಲಿ ಸಂಸ್ಥಾನಿಕರ ಒಂದು ಶಾಸನ ಲಭ್ಯವಾಗಿದೆ. "ಬಾವಿಯಲ್ಲಿಯ ಶಾಸನದಲ್ಲಿ ಇಂಗ್ಲೀಷ್, ಮರಾಠಿ ಹಾಗೂ ಉರ್ದು ಭಾಷೆಗಳಿವೆ. ಗಣಪತರಾವ್ ಬಾಭೂಸಾಹೇಬ್ ಪಟವರ್ಧನರು ಭಾದ್ರಪದ ಪೌರ್ಣಿಮೆ ಶಕೆ ೧೭೬೮ರಂದು ಚಂದ್ರ ಗ್ರಹಣದಂದು ಮೈಂದರ್ಗಿಯಲ್ಲಿ ಪೇಟೆವಿಹಿರಚಾ (ಇಂದಿನ ಪ್ಯಾಟಿಬಾವಿ) ಜೀರ್ಣೋದ್ಧಾರ ಮಾಡಿದ ಬಗೆಗೆ ಉಲ್ಲೇಖ ಶಾಸನದಲ್ಲಿದೆ.[೮] ಇದರ ಕೆಲಸ ಕ್ರಿ.ಶ. ೧೮೭೭ರ ವರೆಗೆ ನಡೆಯಿತು. ಆದರೆ ಬಾವಿಯಲ್ಲಿ ಶ್ರೀ ಗಣೇಶನ ದೇವಾಲಯ ಕಟ್ಟಿಸಿದ್ದಾರೆ. ಅದರಲ್ಲಿರುವ ಶ್ರೀ ಗಣೇಶ ವಿಗ್ರಹ ಹಲವು ಲಕ್ಷಣಗಳನ್ನು ಪಡೆದುಕೊಂಡಿದೆ. ಗಣೇಶನಿಗೆ ಹತ್ತು ಕೈಗಳಿವೆ ತೊಡೆಯ ಮೇಲೆ ಗೌರಿ ಅಲಂಕರಿಸಿಕೊಂಡಿದ್ದಾಳೆ. ಅವನ ವಾಹನ ಇಲಿ ಹಾಗೂ ಸೊಂಡಿಯು ಬಲಕ್ಕೆ ಇದೆ" (ಸಾಮಾನ್ಯವಾಗಿ ಶ್ರೀ ಗಣೇಶನ ಸೊಂಡಿಯು ಹಾಗೂ ವಾಹನ ಇಲಿ ಎಡಬದಿಗೆ ಇದೆ). ಮೈಂದರ್ಗಿಯ ಈ ಪ್ರಾಚೀನ ಇತಿಹಾಸದ ಬಗ್ಗೆ ಹಲವು ಪತ್ರಿಕೆಗಳಲ್ಲಿ ಲೇಖನ ಪ್ರಕಟಿಸಲಾಗಿದೆ.[೯]

"ಅಂದಿನ ಮೈಂದರ್ಗಿ ತಾಲ್ಲೂಕಿನ ಪರಿಸರದಲ್ಲಿ ಸಂಸ್ಥಾನಿಕರ ಹಸ್ತಪ್ರತಿಗಳು ದೊರೆತಿವೆ. ಈ ಹಸ್ತಪ್ರತಿಗಳು ಇದರ ಇತಿಹಾಸ ಹೇಳುವ ಪ್ರಮುಖ ಆಕಾರಗಳಾಗಿವೆ. ಈ ಪ್ರದೇಶದಲ್ಲಿರುವ ಜನರ ಹೊಲಗಳ ಮನೆಗಳ ಮಠ ಹಾಗೂ ಅಂಗಡಿಗಳ ಕಾಗದ–ಪತ್ರಗಳನ್ನು ಸಂಸ್ಥಾನಿಕರಿಗೆ ಸಂಬಂಧಪಟ್ಟಿವೆ ಸಂಸ್ಥಾನಿಕರ ಬಾವುಂಡ್ ಪೆಂಪರಗಳಲ್ಲಿ ಮೋಡಿ ಭಾಷೆಯ ಉಲ್ಲೇಖವಿದೆ. ಇದರಲ್ಲಿ 'ರಾಜಮುದ್ರೆ ಶ್ರೀ ಗಣೇಶ ಅಲಂಕರಿಸುವ ಮೂಲಕ ಕುರುಂದವಾಡ ಜ್ಯೂನಿಯರ್ ಸ್ಟೇಟ್' ಎಂಬ ಉಲ್ಲೇಖದೊಂದಿಗೆ, ಗಣೇಶನ ಭಾವಚಿತ್ರವಿದೆ.[೧೦] "ಶ್ರೀ ಗಣೇಶನು ಪಟವರ್ಧನರ ಆರಾಧ್ಯ ದೇವನಾಗಿದ್ದನು" ಇಂದು ಸಹ ಪ್ರತಿವರ್ಷ ಗಣೇಶ ಚತುರ್ಥಿಯಂದು ಮೈಂದರ್ಗಿ ನಾಗರಿಕರು ಸರಕಾರಿ ಗಣೇಶನ ಹೆಸರಿನಿಂದ ಉತ್ಸವ ಆಚರಿಸುತ್ತಾರೆ. ಸಂಸ್ಥಾನಿಕರು ನಿರ್ಮಿಸಿರುವ ರಾಮ, ವಿಠ್ಠಲ,

ದತ್ತಾತ್ರೇಯ ಹಾಗೂ ಗಣೇಶನ ಮಂದಿರಗಳಲ್ಲಿ ಪೂಜೆ ಮಾಡುವ ಬ್ರಾಹ್ಮಣರಿಗೆ ಪಟವರ್ಧನರು ಭೂಮಿಯನ್ನು ದಾನ ಮಾಡಿದ ದಾನಪತ್ರಗಳು ಮೈಂದರ್ಗಿ ಬ್ರಾಹ್ಮಣ ಸಮಾಜದವರ ಹತ್ತಿರ ಇವೆ. ಅಂದಿನ ಜನನ-ಮರಣದ ದಾಖಲೆಯ ರಿಜಿಸ್ಟರ್ ಇಂದಿನ ಮೈಂದರ್ಗಿ ನಗರಪಾಲಿಕೆಯಲ್ಲಿದೆ.

ಪಟವರ್ಧನರು ರಾಜಧಾನಿ ವಡಗಾಂವದಲ್ಲಿ ವಾಸಮಾಡಿ, ಸೆಕ್ರೆಟ್ರಿಗಳ ಮೂಲಕ ಆಡಳಿತ ಮಾಡುತ್ತಿದ್ದರು. ಅಂದು ಮೈಂದರ್ಗಿ ತಾಲ್ಲೂಕಿನಲ್ಲಿ ಕ್ರಿ.ಶ. ೧೮೮೯ರಲ್ಲಿ ಮೈಂದರ್ಗಿ ನಗರಪಾಲಿಕೆ ಹಾಗೂ ಕ್ರಿ.ಶ. ೧೯೧೦ರಲ್ಲಿ ದುಧನಿ ನಗರಪಾಲಿಕೆ ಸ್ಥಾಪಿಸಿದರು.[೧೧] ಈ ಎರಡು ನಗರಪಾಲಿಕೆಗಳಲ್ಲಿ ಸಂಸ್ಥಾನಿಕರ ಹಸ್ತಪ್ರತಿಗಳಿವೆ. ಕಿರಿ ಕುರುಂದವಾಡ ಸಂಸ್ಥಾನ ೧೧೬ ವಿಸ್ತಾರ ಚದುರ ಮೈಲು, ೧೯೩೧ರ ಜನಗಣತಿಯಂತೆ ೩೯,೫೯೩ ಜನಸಂಖ್ಯೆ ೨,೦೦,೦೦೦ ರೂಪಾಯಿ ಉತ್ಪನ್ನಗಳಲ್ಲಿ ಸಂಪೂರ್ಣ ಕನ್ನಡ ಪ್ರದೇಶವಾಗಿತ್ತು[೧೨] ಈ ಕಾರಣವಾಗಿ ಕರ್ನಾಟಕ ಏಕೀಕರಣ ಸಮಿತಿಯ ಕಿರಿ ಕುರುಂದವಾಡ ಅಪ್ಪಟ ಕನ್ನಡ ಪ್ರದೇಶವಾಗಿದ್ದರಿಂದ ಅದು ಕರ್ನಾಟಕಕ್ಕೆ ಸೇರಬೇಕೆಂಬ ವಾದಮಂಡಿಸಿತ್ತು.[೧೩] ಸಂಸ್ಥಾನಿಕರ ಒಂದು ತಾಲ್ಲೂಕು ಕರ್ನಾಟಕದಲ್ಲಿ ಉಳಿದುಕೊಂಡರೆ ಇನ್ನೊಂದು ತಾಲ್ಲೂಕು ಮಹಾರಾಷ್ಟ್ರದಲ್ಲಿದೆ.

ಈ ವಿಷಯ ಇಂದು ಸುಪ್ರೀಂ ಕೋರ್ಟ್‌ನಲ್ಲಿ ರಾರಾಜಿಸುತ್ತಿದೆ.[೧೪] ಅಂದು ೩೦ ಜನೇವರಿ ೧೯೪೮ ರಂದು ಗಾಂಧೀಜಿ ಅವರ ಹತ್ಯೆಯಾಯಿತು. ಆಗ ಅಕ್ಕಲಕೋಟ, ಕುರುಂದವಾಡ, ಭೋರ, ಜತ್ತ, ಜಮಖಂಡಿ, ಸಾಂಗಲಿ, ಮಿರಜ, ಫಲತಣ ಹಲವು ಸಂಸ್ಥಾನಗಳಲ್ಲಿ ಜನರು ಆಕ್ರೋಶಗೊಂಡ ಕಾರಣ ೮ ಮಾರ್ಚ್ ೧೯೪೮ ರಂದು ಸರಕಾರವು ಸಂಸ್ಥಾನಗಳನ್ನು ರದ್ದುಪಡಿಸಿತು.[೧೫] ಅಂದಿನ ಮೈಂದರ್ಗಿಯ ರಾಜಕೀಯ ನಾಯಕರು, ಅಕ್ಕಲಕೋಟ ಸಂಸ್ಥಾನದ ಜೊತೆಯಲ್ಲಿಯೇ ಮಹಾರಾಷ್ಟ್ರದಲ್ಲಿ ವಿಲೀನರಾದರು.

ಮೈಂದರ್ಗಿಯಲ್ಲಿರುವ ಹಲವು ಹಿರಿಯರಿಂದ ಸಂಸ್ಥಾನಿಕರ ಇತಿಹಾಸ ಲಭ್ಯವಾಯಿತು. ಇಲ್ಲಿಯ ಶಾಸನಗಳು, ದೇವಾಲಯಗಳು, ಹಸ್ತಪ್ರತಿ ಹಾಗೂ ಕ್ಷೇತ್ರ ಕಾರ್ಯಗಳಿಂದ ಮಾಹಿತಿ ದೊರೆಯಿತು. ಮೈಂದರ್ಗಿ ಸಂಸ್ಥಾನಿಕರ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯಿತು. ಸಂಶೋಧನೆ, ಅಧ್ಯಯನ ನಡೆಸಿದರೆ ಹೊಸ ವಿಷಯಗಳ ಮೇಲೆ ಬೆಳಕು ಚೆಲ್ಲಬಹುದು. ಲಭ್ಯವಾದ ದಾಖಲೆಗಳಿಂದ ಮೈಂದರ್ಗಿ ಸಂಸ್ಥಾನಿಕರ ಇತಿಹಾಸ ಒಪ್ಪಿಕೊಳ್ಳಬೇಕಾದ ಸಂಗತಿಯಾಗಿದೆ.

ಅಡಿ ಟಿಪ್ಪಣಿಗಳು

೧. ಗ್ಯಾಝೇಟಿಯರು ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಗವರ್ನಮೆಂಟ್ ಸೆಂಟ್ರಲ್ ಡಿಪೋ, ಮುಂಬಯಿ ೧೮೮೩ ಪು.ಸಂ. ೬೨೦

೨. ಗ್ಯಾಝೇಟಿಯರು ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಗವರ್ನಮೆಂಟ್ ಸೆಂಟ್ರಲ್ ಬುಕ್ಕ ಡಿಪೋ, ಮುಂಬಯಿ ೧೮೮೩ ಪು.ಸಂ. ೬೨೨

೩. ಸಂದರ್ಶನದ ದಿನಾಂಕ: ೧೩-೦೭-೨೦೦೭, ಹಿರಿಯ ನಿವೃತ್ತ ಶಿಕ್ಷಕರಾದ ಶ್ರೀ ರೇವಣಸಿದ್ಧ ಸಿಂಧಗಿ, ಮೈಂದರ್ಗಿ, ವಯಸ್ಸು ೭೭.

೪. ಫಾಲಾಕ್ಷ: ಕರ್ನಾಟಕ ಇತಿಹಾಸ ಪರಿಚಯ, ಶಶಿ ಪ್ರಕಾಶನ, ತುಮಕೂರು ೧೯೮೨, ಪು.ಸಂ. ೨೧೧

೫. ಸಂದರ್ಶನ ದಿನಾಂಕ: ೦೩-೧೧-೨೦೦೩, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ನಾಗಪ್ಪ ಪಡಸಲಗಿ, ಮೈಂದರ್ಗಿ.

೬. ಸಂದರ್ಶನ ದಿನಾಂಕ: ೨೮-೧೦-೨೦೦೭, ಹಿರಿಯರಾದ ಮಾಜಿ ನಗರಾಧ್ಯಕ್ಷರಾದ ಬಸವಣ್ಣಪ್ಪ ಕೇಸೂರ, ಮೈಂದರ್ಗಿ ವಯಸ್ಸು ೮೨.

೭. ಸಂದರ್ಶನ ದಿನಾಂಕ: ೨೮-೧೦-೨೦೦೭, ಹಿರಿಯರಾದ ಮಾಜಿ ನಗರಾಧ್ಯಕ್ಷರಾದ ಬಸವಣ್ಣಪ್ಪ ಕೇಸೂರ, ಮೈಂದರ್ಗಿ ವಯಸ್ಸು ೮೨.

೮. ಇತಿಹಾಸ ಕಾಲೀನ ಗಣಪತಿ, ೧೦೮ ಗಣೇಶ ದರ್ಶನ, ಪು.ಸಂ. ೬೫, (ಲೇಖಕರ ಮಾಹಿತಿ ಲಭ್ಯವಾಗಿಲ್ಲ)

೯. ಬಸವರಾಜ ಸಿ. ಮಸೂತಿ: ಮೈಂದರ್ಗಿ ಚಾ ಪ್ರಾಚೀನ ಇತಿಹಾಸ ಧೈನಿಕ ಸುರಾಜ್ಯ ಮರಾಠಿ ಪತ್ರಿಕೆ, ದಿನಾಂಕ: ೯-೧೧-೨೦೦೨, ಸಂಯುಕ್ತಕರ್ನಾಟಕ ಸಂಧ್ಯಾ ಕಾಲ, ಹಲವು ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

೧೦. ಸ್ನೇಹಿತರಾದ ಲಕ್ಷ್ಮೀಪುತ್ರ ದೇಸಾಯಿ ಅವರ ಮನೆಯಲ್ಲಿ ಸಂಸ್ಥಾನಿಕ ಹಸ್ತಪ್ರತಿ ಲಭ್ಯವಾಗಿದೆ. ಮೈಂದರ್ಗಿಯಲ್ಲಿ ಹಲವು ಜನರ ಹತ್ತಿರ ಸಂಸ್ಥಾನಿಕ ಹಸ್ತಪ್ರತಿಗಳಿವೆ.

೧೧. ಅನಂತಕುಮಾರ ಅಂಬುರೆ: ಮೈಂದರ್ಗಿ ಹಾಗೂ ದುಧನಿ ನಗರ ಇತಿಹಾಸ ದೈ ಸಂಚಾರಿ ದಿ: ೨೪-೦೭-೦೨


೧೨. ಸಂಪಾದಕ ಡಾ|| ಸೂರ್ಯನಾಥ ಕಾಮತ್: ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗೀತಾ ಬುಕ್ ಹೌಸ್, ಮೈಸೂರು: ೧೯೭೭ ಪು.ಸಂ.೮೩೬

೧೩. ಡಾ|| ಎಸ್.ಎಸ್. ಶಿವರುದ್ರಸ್ವಾಮಿ: ಕರ್ನಾಟಕ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ಪೌರಸ್ತ್ಯಪ್ರಕಾಶನ, ಮೈಸೂರು - ೨೦೦೦ ಪು.ಸಂ. ೪೯೦

೧೪. ದಿನಾಂಕ: ೧೨-೧೧-೨೦೦೨ ಮತ್ತು ೧೩-೦೨-೨೦೦೩ ಸಂಯುಕ್ತ ಕರ್ನಾಟಕ ದಿನಾಂಕ: ೦೮-೧೧-೦೨ ವಿಜಯ ಕರ್ನಾಟಕ ದಿನಾಂಕ: ೦೪-೧೨-೨೦೦೫ ದೈನಿಕ ಲೋಕಮತ ಪತ್ರಿಕೆಗಳ ಮುಖಪುಟ ವರದಿ

೧೫. ಮು.ವಿ.ಸವನಿ: ಮಹಾರಾಷ್ಟ್ರಚಾ ಕಾಲಮುದ್ರಾ, ನಿತೀನ ಪ್ರಕಾಶನ, ಸದಾಶಿವಪೇಠ್ - ೧೯೮೩ ಪು.ಸಂ. ೧೨೬. ಸೊಲಾಪೂರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಸಿದ್ಧಚೇತನ ಸ್ಮರಣ ಸಂಚಿಕೆ ಬರೆದ ಲೇಖನ (ಪ್ರಕಟಣೆ ೨೦೦೭) ಹಂಚಿಹೋದ ಕರ್ನಾಟಕ.


ΨΨΨΨΨ



ಮೈಂದರ್ಗಿ ಕುರುಂದವಾಡ ಸಂಸ್ಥಾನಿಕರ ಮೊಹರುಗಳು




ಶ್ರೀಗುರು ರೇವಣಸಿದ್ಧ ಪಟ್ಟದದೇವರ ಮಠದಲ್ಲಿ ಲಭ್ಯವಾದ ಕುರುಂದವಾಡ ಸಂಸ್ಥಾನಿಕರ ಕಾಗದ ಪತ್ರಗಳು



ಲಕ್ಷ್ಮೀಪುತ್ರ ದೇಸಾಯಿ ಅವರ ಮನೆಯಲ್ಲಿದೊರೆತ ಕುರುಂದವಾಡ ಸಂಸ್ಥಾನಿಕರ ಸ್ಟಾಂಪ್ ಪೇಪರ್

ಹಂಚಿಹೋದ ಕರ್ನಾಟಕ



೧. ಮುಂಬಯಿ
೨. ಮದ್ರಾಸು
೩. ಕೊಡಗು
೪. ಮೈಸೂರು
೫. ಹೈದರಾಬಾದು
೬. ಕೊಲ್ಹಾಪುರ
೭. ಸಾಂಗ್ಲಿ
೮. ಮಿರ್ಜಿ (ಹಿರಿ)
೯. ಮಿರ್ಜಿ (ಕಿರಿ)
೧೦. ಕುರಂದವಾಡ (ಹಿರಿ)
೧೧. ಕುರಂದವಾಡ (ಕಿರಿ)*
೧೨. ಜಮಖಂಡಿ
೧೩. ಮುಧೋಳ
೧೪. ರಾಮದುರ್ಗ
೧೫. ಜತ್ತ
೧೬. ಅಕ್ಕಲಕೋಟೆ
೧೭. ಔಂಧ (ಗುಣದಾಳ)
೧೮. ಸವಣೂರ
೧೯. ಸೊಂಡೂರು

ಕರ್ನಾಟಕ ಏಕೀಕರಣಕ್ಕೆ ದುಡಿದ ಸೊಲ್ಲಾಪೂರ ಜಿಲ್ಲೆಯ ಕನ್ನಡಿಗರು

ಕರ್ನಾಟಕದ ಏಕೀಕರಣದ ಪೂರ್ವದಲ್ಲಿ ಕನ್ನಡದ ಪ್ರದೇಶಗಳು ೨೦ ವಿಭಿನ್ನ ಆಡಳಿತದ ಭಾಗಗಳಲ್ಲಿ ಹರಿದು ಹಂಚಿ ಹೋಗಿದ್ದವು. ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರದೇಶವು ದೊಡ್ಡದಾದ ಕನ್ನಡ ಭಾಗವಾಗಿತ್ತು. ಕರ್ನಾಟಕದ ಕೆಲವು ಭಾಗಗಳು ಮರಾಠ, ನಿಜಾಮ ಮತ್ತುಆಂಗ್ಲರ ಆಡಳಿತಕ್ಕೆ ಒಳಪಟ್ಟಿದ್ದವು. ಕೆಲವು ಪ್ರದೇಶಗಳು ಸ್ವತಂತ್ರ ಸಂಸ್ಥಾನಿಕರ ಆಡಳಿತಕ್ಕೆ ಸೇರಿದ್ದವು. ಕರ್ನಾಟಕ ಏಕೀಕರಣದ ಸಲುವಾಗಿ ವಿಭಿನ್ನ ಹೋರಾಟಗಳು ನಡೆದವು. ಇಂತಹ ಪರಿಸ್ಥಿತಿಯಲ್ಲಿ ಏಕೀಕರಣದ ಯಶಸ್ವಿಯಾದ ಪ್ರಯತ್ನದಿಂದ ಕರ್ನಾಟಕ ಒಂದಾಯಿತು. ಆದರೆ ಕೆಲ ಕಾರಣಗಳಿಂದ ಹಲವು ಕನ್ನಡ ಪ್ರದೇಶಗಳು ನೆರೆಯ ರಾಜ್ಯದಲ್ಲಿ ಉಳಿದು ಗಡಿವಿವಾದ ಸೃಷ್ಟಿಯಾಗಲು ಕಾರಣವಾದವು. ಏಕೀಕರಣ ಸಾಧನೆಯಾಗಿ ೪೦ ವರ್ಷಗಳು ಕಳೆದ ಹೊತ್ತಿನಲ್ಲಿ ಪ್ರಕಟವಾಗಿ 'ಕರ್ನಾಟಕ ಏಕೀಕರಣ ಇತಿಹಾಸ' ಅದಕ್ಕೆ ಮೊದಲು ಯಾವ ಕಾರಣದಿಂದಲೋ ಆರ್.ಆರ್. ದಿವಾಕರ 'ಕರ್ನಾಟಕ ಏಕೀಕರಣ ಕಥೆ' ಮತ್ತು ಕೆ.ಎಫ್.ಪಾಟೀಲರ 'ಕರ್ನಾಟಕ ಏಕೀಕರಣದ ಹಾದಿಯಲ್ಲಿ' ಕೃತಿಗಳನ್ನು ಹೊರತುಪಡಿಸಿ ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಸಮಗ್ರವಾದ ಒಂದು ಕೃತಿಯೂ ಹೊರಬರಲಿಲ್ಲ.

ಡಾ॥ ಹೆಚ್.ಎಸ್.ಗೋಪಾಲರಾವ್ ಅವರು ಬರೆದ 'ಕರ್ನಾಟಕ ಏಕೀಕರಣ ಇತಿಹಾಸ' ಕೃತಿಯನ್ನು ನವಕರ್ನಾಟಕ ಪ್ರಕಾಶನ ಪ್ರಕಟಿಸಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರವು 'ಕರ್ನಾಟಕ ಏಕೀಕರಣಕ್ಕೆ ದುಡಿದ ಮಹಾನೀಯರು' ಎಂಬ ಕೃತಿಯನ್ನು ಪ್ರಕಟಿಸಿತು. ಕರ್ನಾಟಕ ಏಕೀಕರಣದಲ್ಲಿ ಸೊಲ್ಲಾಪೂರದ ಹಲವು ಕನ್ನಡಿಗರು ಹೋರಾಡಿದರು. ಸವಾತಂತ್ರ್ಯದ ನಂತರ ನಡೆದ ಭಾಷಾವಾರು ಪ್ರಾಂತ ರಚನೆಯ ಸಂದರ್ಭದಲ್ಲಿ ಹಾಗೂ ಕರ್ನಾಟಕ ಏಕೀಕರಣಕ್ಕಾಗಿಯೂ ಇಲ್ಲಿನ ಕನ್ನಡಿಗರು ಹೋರಾಟ ನಡೆಸಿದ್ದು, ಅವಿಸ್ಮರಣೀಯ. ಕರ್ನಾಟಕ ಏಕೀಕರಣದ ಹಲವು ಆಕರಗಳಿವೆಯಾದರೂ ಅವುಗಳಲ್ಲಿ 'ಸೊಲ್ಲಾಪೂರ ಕನ್ನಡ ಹೋರಾಟಗಾರರ' ಉಲ್ಲೇಖಗಳಿಲ್ಲ. ಸಂಶೋಧನೆ, ಅಧ್ಯಯನ, ಕ್ಷೇತ್ರಕಾರ್ಯ, ಸಂದರ್ಶನ ಹಾಗೂ ದಾಖಲೆಗಳಿಂದ ಈ ಲೇಖನ ಬರೆಯಲು ಪ್ರಯತ್ನಿಸಿರುವೆ. ಇದೆ ಅಂತಿಮವೆಂದು ತಿಳಿಯದೆ ಇದರ ಬಗ್ಗೆ ಆಳವಾಗಿ ಸಂಶೋಧನೆ, ಅಧ್ಯಯನ ನಡೆಯಬೇಕಾಗಿದೆ. ೧೯೭೨ರಲ್ಲಿ ಹೊರನಾಡ ಕನ್ನಡ ಸಾಹಿತ್ಯ ಸಮ್ಮೇಳನ ಶ್ರೀ ಸಿದ್ಧರಾಮೇಶ್ವರ ದೇವಾಲಯದಲ್ಲಿ ನಡೆಯಿತು. ೧೯೭೨ರ ಸಮ್ಮೇಳನ ಶ್ರೀ ಸಿದ್ಧರಾಮೇಶ್ವರ ದೇವಾಲಯದಲ್ಲಿ ನಡೆಯಿತು. ೨೦೦೭ರ ಸಮ್ಮೇಳನದ ಶ್ರೀ ಸಿದ್ಧಚೇತನ ಸ್ಮರಣ ಸಂಚಿಕೆ ಪ್ರಕಟವಾಗಿದೆ. ಸಿರಿ ಸೊನ್ನಲಿಗೆ ಸಿದ್ಧಚೇತನ ಎರಡು ಆಕರಗಳಿಂದ ಸೊಲ್ಲಾಪೂರ ಕನ್ನಡ ಹೋರಾಟಗಾರರಿಗೆ ಗುರುತಿಸಲು ಸಾಧ್ಯವಾಯಿತು.[೧] ಸೊಲ್ಲಾಪೂರ ಜಿಲ್ಲೆಯ ಕನ್ನಡ ಸ್ಥಿತಿ–ಗತಿಯ ವಿಷಯದ ಮೇಲೆ ಮುಂಬಯಿ ವಿಶ್ವವಿದ್ಯಾಲಯದಿಂದ ಎಂ.ಫಿಲ್ ಪದವಿ ಸಂಪಾದಿಸಿರು.[೨] ಕರ್ನಾಟಕ ಏಕೀಕರಣದಹ ಹೋರಾಟದಲ್ಲಿ ಹಲವು ಸೊಲ್ಲಾಪೂರ ಕನ್ನಡಿಗರು ಹೋರಾಟ ಮಾಡಿದರು. ಅವರ ಬಗ್ಗೆ ಸಂಶೋಧನೆ,

ಅಧ್ಯಯನ ನಡೆಯಲಿಲ್ಲ. ಭಿನ್ನ-ವಿಭಿನ್ನ ರೀತಿಯಲ್ಲಿ ಹೋರಾಡಿದ ಸೊಲ್ಲಾಪೂರ ಕನ್ನಡಿಗರ ಮಾಹತಿ ಸಂಗ್ರಹಿಸಲು ಪ್ರಾರಂಭಿಸಿದೆ. ಸಂಶೋಧನೆ ಅಧ್ಯಯನ ಕ್ಷೇತ್ರಕಾರ್ಯ ಸಂದರ್ಶನ ಹಾಗೂ ದಾಖಲೆಗಳಿಂದ ಇವರಿಗೆ ಗುರುತಿಸಲು ಸಾಧ್ಯವಾಗಿದೆ. ಸೊಲ್ಲಾಪೂರ ಕನ್ನಡ ಹೋರಾಟಗಾರರ ಮನೆಗೆ ಹೋಗಿ ಅವರ ಮಕ್ಕಳು, ಮೊಮ್ಮಕ್ಕಳಿಗೆ ಭೇಟಿಯಾಗಿ ಅವರ ಮನೆಯಲ್ಲಿರುವ ದಾಖಲೆ ಸಂಗ್ರಹಿಸಿ ಲೇಖನ ಬರೆದಿರುವೆ, ಇದೆ ಅಂತಿಮವಲ್ಲ ಇನ್ನೂ ಬಹಲಷ್ಟು ಕೆಲಸವಾಗಬೇಕಾಗಿದೆ.

೧. ಜಯದೇವಿತಾಯಿ ಲಿಗಾಡೆ ಸೋಲ್ಲಾಪೂರ

ಜನನ: ೧೯೧೨

ಮರಣ: ೨೬-೦೭-೧೯೮೯

> ಕನ್ನಡ ತಾಯಿ ನುಡಿ । ಮನ್ನಿಸಿ ಮಾತನಾಡು
> ಅನ್ಯಕ್ಕೆ ಮರುಳಾಗಿದರು। ಮರುಳೇ ನೀ
> ಕನ್ನಡಿಗನೆಂಬುದು ಮರೀಬೇಡ ।

ಹೀಗೆಂದು ಕನ್ನಡಿಗರಿಗೆ ಬುದ್ಧಿ ಹೇಳಿದ ತಾಯಿ ಜಯದೇವಿತಾಯಿ ಲಿಗಾಡೆ. ಈ ತಾಯಿಗೆ ಕನ್ನಡ ನಾಡು-ನುಡಿಯ ಬಗ್ಗೆ ಅದಮ್ಯ ಅಭಿಮಾನ. ಅವರ ಬದುಕು ಕನ್ನಡದ ಯಶೋಗಾಥೆ, ವೈಯಕ್ತಿಕವಾಗಿ ಆಧ್ಯಾತ್ಮದ ಶಿಖರವನ್ನೇರಿದ ಜಯದೇವಿ ತಾಯಿ ರಾಜ್ಯೋದಯದ ಹಾಡು ಹಾಡಿ ಲೋಕ ಕಲ್ಯಾಣಾರ್ಥವಾಗಿ ಸಾಹಿತ್ಯ ರಚಿಸಿದ ಮಹಾಮಾತೆ.

ಸೊಲ್ಲಾಪೂರದ ಪ್ರತಿಷ್ಠಿತ ಲಿಗಾಡೆ ಮನೆನತದನ ಚನ್ನಬಸಪ್ಪ ಮತ್ತು ಸಂಗಮ್ಮನವರ ಮಗಳಾಗಿ ಜಯದೇವಿತಾಯಿ ಜನಿಸಿದರು. ತಾಯಿಯ ಮಡಿಲಲ್ಲಿ ಕಲಿತದ್ದು ಮರಾಠಿಯಾಗಿದ್ದರೂ, ಬಾಲ್ಯದಲ್ಲಿಯೇ ಕನ್ನಡ ಹಾಗೂ ಮರಾಠಿಯ ಮಹತ್ವದ ಕೃತಿಗಳನ್ನು ಅಭ್ಯಸಿಸಿದರು. ಕನ್ನಡಕ್ಕೆ ಮನಸೋತ ಜಯದೇವಿ ತಾಯಿಯವರು ಬದುಕಿನುದ್ದಕ್ಕೂ ಕನ್ನಡವನ್ನೇ ತಮ್ಮ ತಾಯಿ ನುಡಿ ಎಂದು ಸ್ವೀಕರಿಸಿದ್ದರು. ಎರಡೂ ಭಾಷೆಗಳ ಮೇಲೆ ಸಮಾನ ಪ್ರಭುತ್ವ ಸಾಧಿಸಿದ ಖ್ಯಾತಿ ಅವರದಾಗಿತ್ತು.

ಅವರದು ತುಂಬಿದ ಮನೆ. ಪೂರ್ಣ ಸಂಸಾರ, ಶ್ರೀಮಂತಿಕೆಯ ಸುಪ್ಪತ್ತಿಗೆ, ಹಾಯಾಗಿ ಬದುಕಬಹುದಿತ್ತು ಸ್ವಂತ ಸುಖವನ್ನು ಬದಿಗಿರಿಸಿ ಕರ್ನಾಟಕದ ಕನಸು ಕಟ್ಟಿ, ಕರ್ನಾಠಕದ ಏಕೀಕರಣಕ್ಕಾಗಿ ಹಗಲಿರುಳು ಶ್ರಮಿಸಿದರು. ತನ್ನನ್ನೇ ಸುಟ್ಟುಕೊಂಡು ನಾಡಿಗೆ ಬೆಳಕು ನೀಡಿದ ಜ್ಯೋತಿ ಎನಿಸಿದರು - ಜಯದೇವಿತಾಯಿ ಲಿಗಾಡೆ.

ಜಯದೇವಿತಾಯಿಯವರು ಸಮಾಜ ಕಾರ್ಯಕರ್ತೆಯಾಗಿ, ವಾಗ್ಮಿಯಾಗಿ, ಕವಿಯಿತ್ರಿಯಾಗಿ ಬೆಳೆದ ಬಗೆ ಅನನ್ಯ. ಮಹಿಳೆಯರನ್ನು ಎಚ್ಚರಿಸಲು ಮನೆ ಮನೆಗೆ ಹೋಗಿ ಸ್ತ್ರೀಯರನ್ನು ಮಾತನಾಡಿಸಿ ಅವರಿಗೆ ವಿದ್ಯೆಯ ಪ್ರಯೋಜನವನ್ನು ಮನವರಿಕೆ ಮಾಡಿಕೊಡುತ್ತಿದ್ದರು. ಜಯದೇವಿತಾಯಿ ಧೈರ್ಯವಂತೆ, ಹೈದರಾಬಾದಿನ ನಿಜಾಮರು

ಜಹೀರಾಬಾದಿನ ಸಮ್ಮೇಳನದಲ್ಲಿ ಭಾಗವಹಿಸಬಾರದೆಂದು ಜಯದೇವಿ ತಾಯಿಯವರಿಗೆ ಆಜ್ಞೆ ಮಾಡಿದ್ದರು.

"ಕಲ್ಯಾಣದ ಭೂಮಿಯ ಸೀಮೆಯೊಳಗೆ ನಾ
ಕಾಲಿಡಕೂಡದು ಎಂದು ಕಾಯ್ದೆತೆಗೆದಾನ – ನಿಜಾಮ
ಆಲಿಸದೆ ಸೀಮೆಯ ದಾಟದೆ"

ನಿಜಾಮನ ಆಜ್ಞೆ ಲೆಕ್ಕಿಸದೆ ಸಮ್ಮೇಳನಕ್ಕೆ ಹೋಗಿ ತಮ್ಮ ವಾಕ್ ದಾಳಿ ಮಾಡಿ ರಾಷ್ಟ್ರ ಪ್ರೀತಿಯನ್ನು ಜನರಲ್ಲಿ ಜಾಗೃತಗೊಳಿಸಿದರು.[೩]

ಮುಂಬೈಯಲ್ಲಿ ಜರುಗಿದ ಮೂವತ್ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಾಗೂ ಬೀದರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿಯ ಅಧ್ಯಕ್ಷರಾಗಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಲು ಜನತೆಯನ್ನು ಹುರಿದುಂಬಿಸಿದರು. ಅಖಿಲ ಕರ್ನಾಟಕ ಏಕೀಕರಣ ಸಮಿತಿಗೆ ಉಪಾಧ್ಯಕ್ಷಿಣಿಯಾಗಿ ಏಕೀಕರಣದ ಸಾಧನೆಗಾಗಿ ಅವರು ಶ್ರಮಿಸಿದ ರೀತಿ ಶ್ಲಾಘನೀಯ.

ಸದಾ ಮರಾಠಿ ಪರಿಸರದಲ್ಲಿ ನೆಲೆಸಿದ್ದ ಜಯದೇವಿ ತಾಯಿಯವರು ಕನ್ನಡದ ಬಗ್ಗೆ ಹೊಂದಿದ್ದ ಪ್ರೀತಿ ಅಪರೂಪದ್ದಾಗಿತ್ತು. ಅದರಗುಂಚಿ ಶಂಕರಗೌಡ ಪಾಟೀಲರು ಕರ್ನಾಟಕದ ಏಕೀಕರಣಕ್ಕಾಗಿ ಆಗ್ರಹಿಸಿ ಆಮರಣ ಉಪವಾಸ ಸತ್ಯಾಗ್ರಹಕ್ಕೆ ಅಣಿಯಾದಾಗ ಜಯದೇವಿತಾಯಿಯವರು ಮುಂಬಯಿ ಆಸ್ಪತ್ರೆಯೊಂದರಲ್ಲಿ ಶುಶ್ರೂಷೆ ಪಡೆಯುತ್ತಿದ್ದರು. ಶಂಕರಗೌಡ ಪಾಟೀಲರ ಆಮರಣ ಉಪವಾಸದ ಸುದ್ದಿ ತಿಳಿಯುತ್ತಲೇ ಅದಕ್ಕೆ ಬೆಂಬಲವನ್ನು ಸೂಚಿಸುತ್ತ ರಕ್ತದಲ್ಲಿ ಸಹಿ ಮಾಡಿ ಪತ್ರ ಬರೆದರು.

ಶಂಕರಗೌಡ ಪಾಟೀಲರು ಎರಡನೆಯ ಭಾರಿ ಉಪವಾಸ ಕೈಕೊಂಡ ಸಂದರ್ಭದಲ್ಲಿ ಮನೆಯಲ್ಲಿ ಮಗಳಿಗೆ ಪ್ರಸರವವೇದನೆ ನಾಡ ಸೇವೆಗೆ ಮೊದಲ ಆಧ್ಯತೆ ನೀಡುತ್ತ ನಾಡಸೇವಕ ಶಂಕರಗೌಡರ ಜೀವವುಳಿಸುವುದು ಪ್ರಧಾನ ಹೊಣೆಗಾರಿಕೆ ಎಂದು ತಿಳಿದು ಜಯದೇವಿ ತಾಯಿಯವರು ಹಂಪಿಗೆ ಬಂದು ಉಪವಾಸ ನಿಲ್ಲಿಸಲು ಮನವೊಲಿಸಿದರು. ಹಾಗೆಯೇ ಮೈಸೂರಿನ ನಾಯಕರನ್ನು ಮನವೊಲಿಸುತ್ತಾ ಅವರನ್ನು ಏಕೀಕರಣದ ಹೋರಾಟದಲ್ಲಿ ತೊಡಗಿಸಿದರು. ಮುಂಬೈ ಕರ್ನಾಟಕದ ಗಡಿ ಪ್ರದೇಶದಲ್ಲಿ ಮರಾಠಿಗರು ಸಮಸ್ಯೆಯ ಹೊಗೆಯನ್ನು ಚೆಲ್ಲುತ್ತಿದ್ದರು. ಜಯದೇವಿ ತಾಯಿಯವರು ಸೊಲ್ಲಾಪೂರ ಅಕ್ಕಲಕೋಟ ಅಪ್ಪಟ ಕನ್ನಡಿಗರನ್ನು ಕಂಡು ವಾತಾವರಣವನ್ನು ತಿಳಿಗೊಳಿಸುತ್ತಿದ್ದರು.

ಇಂದಿರಾಗಾಂಧಿಯವರು ೧೯೫೫ರಲ್ಲಿ ಹುಬ್ಬಳ್ಳಿಗೆ ಬಂದಾಗ ಜಯದೇವಿ ತಾಯಿಯವರು ಅವರನ್ನು ಕಂಡು ಮನವಿ ಸಲ್ಲಿಸುತ್ತಾ ಬಳ್ಳಾರಿ, ಸೊಲ್ಲಾಪೂರ, ಅಕ್ಕಲಕೋಟ, ಜತ್ತಿ, ಕೊಲ್ಲಾಪೂರ, ಬೀದರ, ಮಡಕಶಿರಾ, ಗಡಹಿಂಗ್ಲಜ, ಕಾಸರಗೋಡು, ನೀಲಗಿರಿ ಮೊದಲಾದ ಕನ್ನಡ ಭಾಷಿಕರ ಪ್ರದೇಶಗಳು ಕರ್ನಾಟಕದ ವ್ಯಾಪ್ತಿಗೆ ಸೇರಬೇಕೆಂದು ಒತ್ತಾಯಿಸಿದರು.[೪] ೧೯೫೫ರಲ್ಲಿ ರಾಜ್ಯ ಪುನರ್ಘಟನಾ ಸಮಿತಿ ಫಜಲ್ ಅಲಿ ಕಮಿಷನ್ನಿನ

ಸದಸ್ಯರು ಹುಬ್ಬಳ್ಳಿಗೆ ಆಗಮಿಸಿದರು. ಸೊಲ್ಲಾಪೂರ ಕನ್ನಡ ಶಿಷ್ಯ ಮಂಡಳ ಹುಬ್ಬಳ್ಳಿಗೆ ಹೋಗಿ ರಾಜ್ಯ ಪುನರ್ಘಟನಾ ಸಮಿತಿಯ ಸದಸ್ಯರಿಗೆ 'ಸೊಲ್ಲಾಪೂರ ಅಕ್ಕಲಕೋಟ ಜತ್ತ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರಿಸಲು ಮನವಿ ಸಲ್ಲಿಸಿದರು.'[೨] ಸೊಲ್ಲಾಪೂರ ಕನ್ನಡ ಶಿಷ್ಯ ಮಂಡಳಿಯ ನಾಯಕತ್ವ ನಾಗಪ್ಪ ಕಾಡಾದಿ ವಹಿಸಿದರು. ನಾಗಪ್ಪ ಕಾಡಾದಿಯವರ ನೇತೃತ್ವದಲ್ಲಿ ಚನ್ನಬಸಪ್ಪ ವಾರದ, ಜಯದೇವಿತಾಯಿ ಲಿಗಾಡೆ, ಡಾ॥ ಸಿದ್ಧನಾಥ ಬಳ್ಳಾರಿ, ಅಬ್ದುಲ್ ಸುತಾರ, ದಾವುದ ಸಾಹೇಬ ಮಣಿಯಾರ, ಎಂ.ಎಚ್.ನಿಲೂಗಲಮಠ, ಕೆ.ಬಿ.ಪೂರ್ವಾಚಾರ್ಯ ಇನ್ನು ಹಲವು ಗಣ್ಯರು ಭಾಗವಹಿಸಿದರು.

ಗಡಿನಾಡಿನಲ್ಲಿ ಕನ್ನಡದ ಉಳಿವು, ಉತ್ಥಾನಕ್ಕಾಗಿ ದುಡಿದ ವ್ಯಕ್ತಿಗಳಲ್ಲಿ ಜಯದೇವಿತಾಯಿ ಅಗ್ರಗಣ್ಯರು. ಮರಾಠಿ ಹಾಗೂ ಕನ್ನಡದಲ್ಲಿ ಸಾಹಿತ್ಯ ಕೃಷಿ ಮಾಡಿದ ಅವರು ಅವೆರಡರ ಸ್ಥಾನಮಾನಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅವರ ಒಲವು ಕನ್ನಡ ಪರವಾಗಿರುವಲ್ಲಿ ತಾಯಿಯ ನ್ಯಾಯಗುಣವಿದೆ. ಹಿಂದಿನಿಂದಲೂ ಕನ್ನಡ ಕವಿಗಳು ಕರ್ನಾಟಕದ ಭೂ ನಕ್ಷೆಯನ್ನು ನೀಡಿದುದನ್ನು ಅವರು ಮನಗಂಡಿದ್ದರು. ಅಮತೆಯೇ ಮೇಲೆ ಹೇಳಲಾದ ಬೆಳಗಾವಿ, ಬೀದರ, ಸೊಲ್ಲಾಪೂರ, ಸಾಂಗ್ಲಿ, ಕೊಲ್ಲಾಪೂರ, ಉಸ್ಮಾನಾಬಾದ್‌ಗಳಲ್ಲಿ ಕನ್ನಡ ಪತಾಕೆಗಳನ್ನು ಎತ್ತಿಹಿಡಿದರು.

ಜಯದೇವಿತಾಯಿಯವರಲ್ಲಿದ್ದ ಕನ್ನಡದ ಕಳಿಕಳಿ ಪರವಾಗಿತ್ತು. ಸೊಲ್ಲಾಪೂರ, ಜತ್ತ ಪ್ರದೇಶಗಳಲ್ಲಿ ಕನ್ನಡ ಶಾಲೆಗಳು ಪ್ರಾರಂಭವಾದಾಗ ಶಿಕ್ಷಕರ ಸಂಭಾವನೆಯ ಹೊರೆಯನ್ನು ತಾವೇ ಹೊತ್ತಿದ್ದರು.

ದಾವಣಗೆರೆಯಲ್ಲಿ ಕನ್ನಡಿಗರ ಸರ್ವಪಕ್ಷೀಯ ಸಭೆ 'ಫಜಿಲ್ ಅಲಿ ಕಮಿಶನ್'ಗೆ ನೀಡುವ ಮನವಿ ಸಿದ್ಧಪಡಿಸುವ ಸಂದರ್ಭ ಕರ್ನಾಟಕ ನಿರ್ಮಾಣದ ಬಗೆಗಿನ ಈ ಎರಡು ಮನವಿಯಲ್ಲಿ ಸೊಲ್ಲಾಪೂರ ಪ್ರಸ್ತಾವನೆ ಇರಲಿಲ್ಲ. ಜಯದೇವಿ ತಾಯಿಯವರು ಮುಂದಾಳುಗಳನ್ನು ಕಂಡು ಮನವಿಯಲ್ಲಿ ಸೊಲ್ಲಾಪೂರವನ್ನು ಸೇರಿಸುವ ಅವಶ್ಯಕತೆಯನ್ನು ತಿಳಿಸಿಕೊಟ್ಟರು. ಅಂದು ದಾವಣಗೆರೆ ಸಭೆಯಲ್ಲಿ ಜಯದೇವಿತಾಯಿಯವರು ಮಾಡಿದ ಭಾಷಣ ಉಲ್ಲೇಖಾರ್ಹವಾದುದು:

"ನೀವು ಇಂದು ಸೊಲ್ಲಾಪೂರವನ್ನು ಬೇಡದೆ ಹೋದರೆ, ಸೊಲ್ಲಾಪೂರದಲ್ಲಿ ನಡೆಯುವ ಕನ್ನಡ ಚಳುವಳಿಯನ್ನು ಜೀವಂತವಿದಡಲು ನೆರವಾಗದೆ ಹೋದರೆ, ನಮಗೆ ಬೆಳಗಾವಿ ಉಳಿಯಲಾರದು; ಸೊಲ್ಲಾಪೂರ ಬೆಳಗಾವಿಗಳನ್ನು ಕಳೆದುಕೊಂಡ ಮೇಲೆ ಅದರ ದಾಳಿ ದಾವಣಗೆರೆಯವರೆಗೂ ಹಬ್ಬಬಹುದು. ನಾನಿಂದು ಇಲ್ಲಿ ಬಂದಿರುವುದನ್ನು ಸೊಲ್ಲಾಪೂರವನ್ನು ಉಳಿಸಿಕೊಳ್ಳಿ ಎಂದು ಹೇಳಲು ಅಲ್ಲ, ಇಂದು ಸೊಲ್ಲಾಪೂರಕ್ಕೆ ಬಂದ ದುರ್ದೆಶೆ ನಾಳೆ ದಾವಣಗೆರೆಗೂ ಬಾರದಿರುವಂತೆ ಜಾಗೃತರಾಗಿ ಇರುವಂತೆ ತಮ್ಮನ್ನು ಎಚ್ಚರಿಸಲು ಬಂದಿದ್ದೇನೆ.........."

ಸೊಲ್ಲಾಪೂರ ತಾಲ್ಲೂಕು ಅಚ್ಚಗನ್ನಡ ಪ್ರದೇಶವಾಗಿದ್ದು, ಅದು ನವಕರ್ನಾಟಕದ ಭಾಗವಾಗಲೇಬೇಕೆಂದು ಸ್ಪಷ್ಟ ನಿಲುವು ಅವರದಾಗಿತ್ತು. ಧರ್ ಆಯೋಗದ ಎದುರು

ಈ ಕುರಿತಾಗಿ ಸ್ಪಷ್ಟೀಕರಣ ನೀಡಿದರು. ಧರ್ ಆಯೋಗಕ್ಕೆ ಸಲ್ಲಿಸಿದ ವರದಿಯಲ್ಲಿ ಸೊಲ್ಲಾಪೂರ ತಾಲ್ಲೂಕು ಕರ್ನಾಟಕಕ್ಕೆ ಸೇರಬೇಕೆಂದು ಒತ್ತಾಯಿಸಿದರು. ಸೊಲ್ಲಾಪೂರ ನಗರದಲ್ಲಿ ಕನ್ನಡಿಗರು ಹಾಗೂ ಮರಾಠಿಗರು ಸಮಾನ ಸಂಖ್ಯೆಯಲ್ಲಿದ್ದರೆ, ತಾಲ್ಲೂಕಿನ ಸುಮಾರು ನೂರು ಗ್ರಾಮಗಳಲ್ಲಿ ಬಹುಸಂಖ್ಯಾತರು ಕನ್ನಡಿಗರೇ ಆಗಿದ್ದರು. ಈ ಹಿಂದೆ ಮುನ್ರೋ ಕಲೆಕ್ಟರನ ವರದಿಯಲ್ಲಿ ಕೂಡ ಈ ಪ್ರದೇಶವು ಕನ್ನಡಿಗರದೆಂದೇ ಈಸ್ಟ್ ಇಂಡಿಯಾ ಕಂಪನಿಗೆ ತಿಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಸೊಲ್ಲಾಪೂರದ ಮತ್ತು ಸುತ್ತ-ಮುತ್ತಲಿನ ಹಳ್ಳಿಗಳಲ್ಲಿ ನಾಡಹಬ್ಬ ಬಸವ ಜಯಂತಿ, ಅಕ್ಕನ ಜಯಂತಿ ಮೊದಲಾದ ಹಬ್ಬಗಳನ್ನು ಆಚರಿಸುತ್ತ ಜನತೆಯಲ್ಲಿ ಕನ್ನಡ ಹಾಗೂ ಕನ್ನಡತನವನ್ನು ಸುಭದ್ರ ಸ್ಥಿತಿಗೆ ತರುವಲ್ಲಿ ಜಯದೇವಿ ತಾಯಿಯವರು ಶ್ರಮಿಸಿದರು. ಇದರಿಂದಾಗಿ ಕನ್ನಡ ಶಾಲೆಗಳು ತಲೆ ಎತ್ತುವಂತಾಯಿತು. ಅವರಲ್ಲಿ ಸೊಲ್ಲಾಪೂರವು ಕನ್ನಡಾಂಬೆಯ ಮುಡಿಯನ್ನು ಅಲಂಕರಿಸಬೇಕೆಂಬ ಹಂಬಲ ತೀವ್ರವಾಗಿತ್ತು.' ಕನ್ನಡ ತಾಯಿಗಾಗಿ ಕಣ್ಣೀರ ಸುರಿದಾವ ಉನ್ನತ ನಾಡೊಂದುಗೂಡಿಸಲು' ಎಂದು ಹಂಬಲಿಸಿದ್ದಾರೆ.

ಕನ್ನಡ ನಾಡು ಅತ್ತಿತ್ತ ಹಂಚಿ ಹೋಗಿದ್ದ ಕಾಲದಲ್ಲಿ ಅನೇಕ ಚಿಂತಕರು, ನೇತಾರರು, ಸಾಹಿತಿಗಳು ಕರ್ನಾಟಕದ ಏಕೀಕರಣಕ್ಕಾಗಿ ಬದ್ಧರಾದರು. ಈ ಹೋರಾಟದಲ್ಲಿ ಕೆಚ್ಚದೆಯ ಮುಂದಾಳತ್ವವನ್ನು ತೋರಿಸಿಕೊಟ್ಟವರು ಜಯದೇವಿತಾಯಿ ಲಿಗಾಡೆ. ಕನ್ನಡ ನಾಡು, ನುಡಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಧೀರ ಮಹಿಳೆ ಅವರು.

೧೯೫೨ರಲ್ಲಿ ಜರುಗಿದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ (ಬೇಲೂರ)ದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಗೊತ್ತುವಳಿಯನ್ನು ಅವರು ಸಲ್ಲಿಸಿದರು. 'ನಾನಂತೂ ಏಕೀಕರಣಕ್ಕಾಗಿ ಪ್ರಾಣ ತ್ಯಜಿಸಲೂ ಸಿದ್ಧ' ಎಂದು ನುಡಿದ ನುಡಿ ಕನ್ನಡಿಗರಲ್ಲಿ ವಿದ್ಯುತ್ ಸಂಚಾರವನ್ನುಂಟು ಮಾಡಿತು. ಸೊಲ್ಲಾಪೂರದಲ್ಲಿ 'ಕನ್ನಡ ಕೋಟೆ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಕನ್ನಡಿಗರ ಸೈನ್ಯ ಕಟ್ಟುವಲ್ಲಿ ಹೆಣಗಾಡಿದರು. ೧೯೪೭ರಲ್ಲಿ ಹೈದರಾಬಾದ್ ರಜಾಕರ ಹಾವಳಿಗೆ ತುತ್ತಾದವರು ಸೊಲ್ಲಾಪೂರಕ್ಕೆ ಧಾವಿಸಿದಾಗ 'ಕನ್ನಡಕೋಟೆ' ಅವರಿಗೆ ಆಶ್ರಯ ನೀಡಿತು. ಜಯದೇವಿತಾಯಿ ಲಿಗಾಡೆಯವರ ಮಾತೃ ಹೃದಯವಿಶಾಲವಾದ ನಿರಾಶ್ರಿತರಿಗೆ ಅನ್ನ-ಬಟ್ಟೆ-ಶ್ರಯ ನೀಡಿ ಮಾನವತೆಯನ್ನು ಎತ್ತಿಹಿಡಿಯಿತು.

ಜಯದೇವಿತಾಯಿಯವರಿಗೆ ಮಹಾರಾಷ್ಟ್ರ ಮತ್ತು ಕರ್ನಾಟಕಗಳ ಬಗ್ಗೆ ಸಮಾನವಾದ ಪ್ರೀತಿ. ಮರಾಠಿ ಹಾಗೂ ಕನ್ನಡಗಳಲ್ಲಿ ಕಟಿ ಮಾಡಿದ ಸವ್ಯಸಾಚಿ. ಸೊಲ್ಲಾಪೂರ ಪ್ರದೇಶ ಕನ್ನಡದ ಪ್ರದೇಶವಾದ್ದರಿಂದ ಅದು ಕರ್ನಾಟಕಕ್ಕೆ ಸೇರಬೇಕಾದುದು ನ್ಯಾಯ ಎಂಬ ನಿಲುವು ಅವರದಾಗಿತ್ತು ಈ ನ್ಯಾಯಕ್ಕಾಗಿ ಕಟಿಬದ್ಧರಾಗಿ ನಿಂತರು. ಕನ್ನಡನಾಡನ್ನು ಕಟ್ಟುವ ಕಾಯಕದಲ್ಲಿ ತೊಡಗಿದರು. ಗಡಿ ಪ್ರದೇಶದಲ್ಲಿ ಕನ್ನಡದ ಉತ್ಥಾನಕ್ಕಾಗಿ ಈ ತಾಯಿಯ ಕವಿಹೃದಯ ಹಾಡಿದ್ದು ಹೀಗೆ;

ಗಡಿಭಾಗವೆಂದರೆ । ಕಡಿಮಿಲ್ಲ ಕನ್ನಡಕೆ
ಉಡಿಯ ತುಂಬುವೆ ಕನ್ನಡ । ತಾಯಿಗೆ
ಒಡವೆ ಇಡಿಸುವೆ ಪದಗಳ ॥

೨. ಬಾಬಾಸಾಹೇಬ ಊರ್ಫ ಚೆನಬಸಪ್ಪ ಮಲ್ಲಪ್ಪ ವಾರದ, ಸೊಲ್ಲಾಪೂರ

ಜನನ: ೧೦-೧೦-೧೯೦೯

ಮರಣ: ೨೦-೦೫-೧೯೯೧

ಸೊಲ್ಲಾಪೂರದ ಪ್ರಸಿದ್ಧ ವ್ಯಾಪಾರಿಗಳು ವಾರದ ಮಲ್ಲಪ್ಪನವರು. ವಿಕ್ಟೋರಿಯಾರಾಣಿ ಕಾಲದ ೧೨ ಜನ ಭಾರತದ ಸುಪ್ರಸಿದ್ಧ ವ್ಯಾಪಾರಸ್ಥರಲ್ಲಿ ವಾರದ ಮಲ್ಲಪ್ಪನವರು ಒಬ್ಬರು. ವಾರದ ಮಲ್ಲಪ್ಪನವರ ಏಕೈಕ ಮಗ ಚನ್ನಬಸಪ್ಪ ೧೦-೧೦-೧೯೦೯ರಲ್ಲಿ ಜನಿಸಿದರು. ವಾರದ ಮಲ್ಲಪ್ಪನವರು ಭೂಮಿಯ ಒಡಲನ್ನು ಸೇರಿದರು. ಏನು ಅರಿಯದ ಪುಟ್ಟಮಗು ವಾರದ ಕುಟುಂಬದ ವಾರಸುದಾರ ಚೆನ್ನಬಸಪ್ಪ ತಾಯಿಯ ಮಡಿಲಲ್ಲಿ ಆಡುತ್ತಿತ್ತು !

ಚೆನ್ನಬಸಪ್ಪ ಊರ್ಫ ಬಾಬಾಸಾಹೇಬ ವಾರದ ಕರ್ನಾಟಕ ಏಕೀಕರಣಕ್ಕೆ ಹೋರಾಡಿದರು. ೧೯೪೬ರಲ್ಲಿ ಸೊಲ್ಲಾಪೂರ ನಗರದ ಪಾಲಿಕೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ದಿನಾಂಕ: ೨೮ ನವೆಂಬ್ ೧೯೪೬ರಲ್ಲಿ ಅಕ್ಕಲಕೋಟ ಸಂಸ್ಥಾನ ಪ್ರಜಾ ಪರಿಷತ್‌ನ ನಾಲ್ಕನೆಯ ಅಧಿವೇಶನ ನಿಲಗಾರ ಕರಜಗಿ ಗ್ರಾಮದಲ್ಲಿ ನಡೆಯಿತು. ಬಾಬಾಸಾಹೇಬ ಊರ್ಫ ಚನ್ನಬಸಪ್ಪ ಮಲ್ಲಪ್ಪ ವಾರದ ಅವರು ಅಧಿವೇಶನದ ಸ್ವಾಗತಾಧ್ಯಕ್ಷರಾಗಿದ್ದರು. ಅಂದು ಭಾಷಣದಲ್ಲಿ "ಅಕ್ಕಲಕೋಟ ಸಂಸ್ಥಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯತರಿದ್ದಾರೆ. ಅವರ ತಾಯಿಯ ಭಾಷೆ ಕನ್ನಡವಾಗಿದೆ. ಆದರೆ ತಾಯಿ ಭಾಷೆಯಲ್ಲಿ ಶಿಕ್ಷಣ ಪಡೆಯಲು ಶಾಲೆಗಳ ವ್ಯವಸ್ಥೆ ಸಂಸ್ಥಾನಿಕರಲ್ಲಿಲ್ಲ ಇದರಿಂದ ಜನರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ನಾನು ಅನಿವಾರ್ಯವಾಗಿ ನಾನ್ ಮ್ಯಾಟ್ರಿಕ್‌ವರೆಗೆ ಮರಾಠಿಯಲ್ಲಿ ಕಲಿತೆ, ತಾವೆಲ್ಲರೂ ಒಕ್ಕಟ್ಟಾಗಿ, ಉತ್ಸಾಹದಿಂದ ಈ ಅಧಿವೇಶನದಲ್ಲಿ ಭಾಗವಹಿಸಿದ್ದೀರಿ. ನಿಮ್ಮೆಲ್ಲರಿಗೂ ಸ್ವಾಗತದೊಂದಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ" ಎಂದು ಬಾಬಾಸಾಹೇಬರು ಸ್ವಾಗತಾಧ್ಯಕ್ಷರ ಭಾಷಣದಲ್ಲಿ ಹೇಳಿದರು.[೬]

ಬಸವಕಲ್ಯಾಣ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮೀಟಿಯ ಸಂಸ್ಥಾಪಕ ಅಧ್ಯಕ್ಷರಾಗಿ ನಿರಂತರವಾಗಿ ಸೇವೆ ಸಲ್ಲಿಸಿದರು. ಕರ್ನಾಟಕ ಏಕೀಕರಣದ ಸಲುವಾಗಿ ಭಾಲ್ಕಿ ಪಟ್ಟದ ದೇವರೊಂದಿಗೆ ಬಾಬಾಸಾಹೇಬ ವಾರದ ಹಾಗೂ ಅವರ ಸ್ನೇಹಿತರು ಹೋರಾಟ ಮಾಡಿದರ.[೭] ಬಾಬಾಸಾಹೇಬ ವಾರದ ಸೊಲ್ಲಾಪೂರದ ಅಪಾರ ಭಕ್ತಸಮೂಹ ಬಸವಕಲ್ಯಾಣದ ಅಭಿವೃದ್ಧಿಯ ಸಲುವಾಗಿ ಹೋರಾಟದ ಪರಿಶ್ರಮದಿಂದ ನೂತನ ಅನುಭವ ಮಂಟಪ ತಲೆ ಎತ್ತಿ ಕಲ್ಯಾಣದ ಹಿಂದಿನ ವೈಭವವು ಮರುಕಳಿಸುವಂತಾಯಿತು.

ಸೊಲ್ಲಾಪೂರ, ಅಕ್ಕಲಕೋಟ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರಿಸಲು ಹೋರಾಡಿದರು. ಬಾಬಾಸಾಹೇಬ ವಾರದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿ ಹಲವು ಕೆಲಸ ಮಾಡಿದರು. ೨೦-೦೫-೧೯೯೧ರಂದು ಬಾಬಾಸಾಹೇಬರ ಪ್ರಾಣಪಕ್ಷಿ ಹಾರಿಹೋಯಿತು. ಬಾಬಾಸಾಹೇಬರ ಸಂಕಲ್ಪ ಹಾಗೂ ಬಸವಕಲ್ಯಾಣದ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮೀಟಿಯ ವಿಶ್ವಸ್ಥರ ಇಚ್ಛೆಯ

ಮೇರೆಗೆ ಬಸವಕಲ್ಯಾಣ ಅರವಿನ ಮನೆಯಲ್ಲಿ ಬಾಬಾಸಾಹೇಬ ವಾರದ ಅವರ ಸಮಾಧಿ ಮಾಡಲಾಯಿತು.

೩. ಅಪ್ಪಾಸಾಹೇಬ ಗುರುಶಾಂತಪ್ಪ ಪಾಟೀಲ, ಹಾಲಳ್ಳಿ (ಮೈಂದರ್ಗಿ)

ಜನನ: ೨೩-೦೪-೧೯೨೬

ಮರಣ: ೧೭-೦೪-೧೯೯೩

ಹಾಲಳ್ಳಿ ಗುರುಶಾಂತಪ್ಪ ಬಂಗಾರವ್ವ ಉದರದಿಂದ ಅಪ್ಪಾಸಾಹೇಬ ಪಾಟೀಲರು ೨೩-೦೪-೧೯೨೬ರಂದು ಜನಿಸಿದರು. ನಾನ್ ಮ್ಯಾಟ್ರಿಕ್‌ವರೆಗೆ ಶಿಕ್ಷಣ ಮುಗಿಸಿರುವ ಅಪ್ಪಾಸಾಹೇಬ ಸೊಲ್ಲಾಪೂರ, ಅಕ್ಕಲಕೋಟ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಸಲು ಹೋರಾಡಿದರು. ಮೈಂದರ್ಗಿಯ ಕೇಸೂರು ವಕೀಲ, ರೇವಣಸಿದ್ಧಪ್ಪ ಹೊಳ್ಳಿಕಟ್ಟಿಯವ ರೊಂದಿಗೆ ಅಪ್ಪಾಸಾಹೇಬ ಕನ್ನಡ ಪರವಾದ ಕೆಲಸ ಮಾಡಿದರು. ಮಹಾಜನರಿಗೆ ಈ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕೆಂದು ಮನವಿ ಮಾಡಿದರು. ಈ ಭಾಗದ ಪ್ರಬಲ ರಾಜಕೀಯ ನಾಯಕರಲ್ಲಿ ಇವರು ಒಬ್ಬರಾಗಿದ್ದರು. ಅಕ್ಕಲಕೋಟ, ಸೊಲ್ಲಾಪೂರದ ಹಲವು ಕನ್ನಡಿಗರ ನಿಗೂಢವಾದ ಸಭೆ ಹಾಲಳ್ಳಿ ಪಾಟೀಲರ ಮನೆಯಲ್ಲಿ ನಡೆಯುತ್ತಿತ್ತೆಂದು ಪ್ರತ್ಯಕ್ಷದರ್ಶಿಗಳಾದ ಗುರುಬಸಪ್ಪ ಶೀಲವಂತರು ಹೇಳುತ್ತಾರೆ.[೮]

ಮಹಾರಾಷ್ಟ್ರ ಸರಕಾರ ಅಪ್ಪಾಸಾಹೇಬ ಪಾಟೀಲರ ಮನೆಗೆ ಮುತ್ತಿಗೆ ಹಾಕಲು ಆದೇಶ ನೀಡಿತು. ಪೋಲೀಸರು ಹಾಲಳ್ಳಿ ಗ್ರಾಮಕ್ಕೆ ಬರುವಷ್ಟರಲ್ಲಿ ಎಲ್ಲ ಕನ್ನಡದ ಹೋರಾಟಗಾರರು ಮಾಯವಾಗಿದ್ದರು. ಅಕ್ಕಲಕೋಟೆಯ ಕುಲಕರ್ಣಿ ಫೌಜದಾರ ಅಪ್ಪಾಸಾಹೇಬ ಪಾಟೀಲರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟ ಘಟನೆ ನಡೆಯಿತೆಂದು ಪ್ರತ್ಯಕ್ಷದರ್ಶಿಗಳಾದ ಶಂಕರ ಶೀಲವಂತರು ಹೇಳಿದರು.

ಅಪ್ಪಾಸಾಹೇಬ ಪಾಟೀಲರು ೧೯೫೨ರಿಂದ ೧೮೭೮ರವರೆಗೆ ಹಾಲಳ್ಳಿ ಗ್ರಾಮ ಪಂಚಾಯತ್ ಸದಸ್ಯರಾಗಿ ಕೆಲಸ ಮಾಡಿದರು. ಅವರು ಕನ್ನಡ ಪರವಾಗಿ ಹೋರಾಟ ಮಾಡಿ ಜೀವನವನ್ನು ಕನ್ನಡಾಂಭೆಗೆ ಮುಡುಪಾಗಿಸಿದ್ದರು. ಅಂತಿಮವಾಗಿ ೧೭-೦೪-೧೯೯೩ರಂದು ನಿಧನರಾದರು.

೪. ರಾಮಲೀಮಗಪ್ಪ ಶೀಲವಂತ, ದುಧನಿ

ಜನನ: ೧೯೦೨

ಮರಣ: ೧೧-೦೨-೧೯೯೭

ರಾಮಲಿಂಗಪ್ಪ ರಾಚೋಟೆಪ್ಪ ಶೀಲವಂತರು ೧೯೦೨ರಲ್ಲಿ ಜನಿಸಿದರು. ಇವರು ದುಧನಿಯ ಪ್ರಸಿದ್ಧ ವ್ಯಾಪಾರಿಗಳು, ಕರ್ನಾಟಕ ಏಕೀಕರಣಕ್ಕೆ ದುಡಿ ಮಹನೀಯರಲ್ಲಿ ಇವರು ಒಬ್ಬರು. ದುಧನಿಯ ಚೆನ್ನವೀರ ಕಲ್ಯಾಣಶೆಟ್ಟಿ, ಬಸವಣ್ಣಪ್ಪ ಸೋಳಸೆ, ಕಲ್ಯಾಣಪ್ಪ ಪಾಟೀಲ, ರಾಮಲಿಂಗಪ್ಪ ಶೀಲವಂತ, ವೀರಕ್ತಮಠದ ಮಹಾಲಿಂಗಸ್ವಾಮಿಗಳು ಅಕ್ಕಲಕೋಟ, ಸೊಲ್ಲಾಪೂರ ಪ್ರದೇಶಗಳು ಕರ್ನಾಟಕಕ್ಕೆ ಸೇರಿಸಬೇಕೆಂದು ಹೋರಾಟ

ನಡೆಸಿದರು. "ಈ ಭಾಗದಲ್ಲಿ ಕನ್ನಡ ಕ್ರಾಂತಿಗಳನ್ನೂ ಪ್ರಾರಂಭವಾಗಿದ್ದು ದುಧನಿ ನಗರದಿಂದ" ಎಂದು ಹೆಮ್ಮೆಯಿಂದ ಗಡಿನಾಡ ಕನ್ನಡ ಹೋರಾಟಗಾರ ಕೆ.ಬಿ. ಪೂರ್ವಾಚಾರ್ಯ ಹೇಳುತ್ತಾರೆ.[೧೦]

ಇವರೆಲ್ಲರೂ ಮಹಾಜನರಿಗೆ ಭೇಟಿಯಾಗಿ ಕನ್ನಡಪರವಾದ ವರದಿ ಸಲ್ಲಿಸಿದ ಕಾರಣದಿಂದ ಪೋಲೀಸರು ಬಂಧನ ಬಿಡುಗಡೆ ನಾಟಕವಾಡಿದರು.[೧೧] ಅಕ್ಕಲಕೋಟ, ಸೊಲ್ಲಾಪೂರ ತಾಲ್ಲೂಕು ಜನತಾ ಪರಿಷತ್ತು ಹಮ್ಮಿಕೊಂಡು, ಅದರ ಸತ್ಕಾರ ಸಮಿತಿಯ ಅಧ್ಯಕ್ಷರಾಗಿ ರಾಮಲಿಂಗಪ್ಪ ಶೀಲವಂತ ಅವರು ಕಾರ್ಯ ನಿರ್ವಹಿಸಿದರು.

ಅಕ್ಕಲಕೋಟ ತಾಲ್ಲೂಕಿನ ದುಧನಿಯ ವಿರಕ್ತಮಠ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ- ಗದಗ, ಶ್ರೀ ನಿಜಲಿಂಗೇಶ್ವರ ಮಹಾಸ್ವಾಮಿಗಳು ಸಿದ್ಧಸಂಸ್ಥಾನ ಮಠ ನಿಡಸೋಶಿ ಹೀಗೆ ಹಲವು ವಿರಕ್ತಮಠಗಳ ಪೀಠಾಧಿಪತಿಗಳೊಂದಿಗೆ ಕನ್ನಡದ ಹೋರಾಟದ ನಿಗೂಢ ಚರ್ಚೆಗಳು ಪತ್ರಗಳ ಮೂಲಕ ನಡೆಯುತ್ತಿತ್ತು. ಸೊಲ್ಲಾಪೂರ ಶ್ರೀ ಸಿದ್ಧರಾಮೇಶ್ವರ ದೇವಾಲಯದಲ್ಲಿ ೧೧-೦೮-೧೯೮೭ರಲ್ಲಿ 'ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನ' ನಡೆಯಿತು. ರಾಮಲಿಂಗಪ್ಪ ಶೀಲವಂತರ ಅಪಾರವಾದ ಗಡಿನಾಡು ಕನ್ನಡ ಸೇವೆ ಗುರುತಿಸಿ ಸಮ್ಮೇಳನದಲ್ಲಿ ಗೌರವಿಸಲಾಯಿತು. ದುಧನಿಯ ಗುರುಬಸಪ್ಪ ಶೀಲವಂತರ ಅಂಗಡಿಯತಲ್ಲಿ 'ರಾಮಲಿಂಗಪ್ಪ ಶೀಲವಂತರ ಪೆಟ್ಟಿಗೆ'ಯಿದೆ.[೧೨] ರಾಮಲಿಂಗಪ್ಪ ಶೀಲವಂತರು ಕನ್ನಡದ ಸಲುವಾಗಿ ಹೋರಾಟದ ದಾಖಲೆಗಳನ್ನು ಪೆಟ್ಟಿಗೆಯಲ್ಲಿ ಲಭ್ಯವಾಗಿವೆ.

೫. ಶ್ರೀ ಮ.ನಿ.ಪ್ರ, ಮಹಾಲಿಂಗೇಶ್ವರ ಮಹಾಸ್ವಾಮಿಗಳು, ವಿರಕ್ತಮಠ ದುಧನಿ

ಜನನ: ಮಾಹಿತಿ ಲಭ್ಯವಾಗಿಲ್ಲ
ಮರಣ: ೨೦-೦೭-೧೯೮೯

ಪುಣೆ ಬೆಂಗಳೂರ ೪ನೇ ರಾಷ್ಟ್ರೀಯ ಹೆದ್ದಾರಿಯ ಮೇಲೆ ಬೆಳಗಾವಿಯಿಂದ ಕೊಲ್ಲಾಪೂರ ಮಾರ್ಗದಲ್ಲಿ ಹತ್ತರಕಿ ಬಸ್ ನಿಲ್ದಾಣದಿಂದ ಪೂರ್ವಕ್ಕೆ ಸುಮಾರು ಏಳು ಮೈಲಿ ಅಂತರದಲ್ಲಿ ಮಾಸ್ತಿಹೊಳಿ ಮೈಲಿನ ಎಂಬ ಗ್ರಾಮವಿದೆ. ಈ ಚಿಕ್ಕಹಳ್ಳಿಯಲ್ಲಿ ಶ್ರೀ ಶಿವಪುತ್ರಯ್ಯ ಹಾಗೂ ಗುರುತಾಯಿ ಎಂಬ ಮಾಹೇಶ್ವರ ದಂಪತಿಗಳ ಉದರಲ್ಲಿ ಮೂರು ಜನ ಗಂಡು ಮಕ್ಕಳು, ಓರ್ವಪುತ್ರಿ ಜನಿಸಿದರು. ಇವರಲ್ಲಿ ಪ್ರಥಮದಲ್ಲಿ ಜನಿಸಿದ ಮಹಾಲಿಂಗೇಶ್ವರ ಮಹಾಸ್ವಾಮಿಗಳು ಕರ್ನಾಟಕ ಏಕೀಕರಣಕ್ಕೆ ಹೋರಾಡಿದವರಲ್ಲಿ ಇವರು ಒಬ್ಬರು.

ಮಹಾಲಿಂಗೇಶ್ವರ ಸ್ವಾಮಿಗಳು ವಂಟಮೂರಿ, ಊರಬನಹಟ್ಟಿ ಮಾಸ್ತಿಹೊಳಿ, ನಿಡಸೋಸಿ, ಹುಬ್ಬಳ್ಳಿ, ಯಾದಗಿರಿಗಳಲ್ಲಿ ಶಿಕ್ಷಣ ಪಡೆದರು. ೧೯೪೫ ರಿಂದ ೧೯೫೯ರವರೆಗೆ ಅಂತರಾಷ್ಟ್ರೀಯ ಖ್ಯಾತಿಯ ಶೈಕ್ಷಣಿಕ ಕೇಂದ್ರವಾದ ವಾರಣಾಸಿಯಲ್ಲಿ ವೇದ, ಆಗಮ, ಉಪನಿಷತ್ತಿಯ ವ್ಯಾಕರಣ ಗ್ರಂಥಗಳು ಹಾಗೂ ಬಸವಾದಿ ಶಿವ ಶರಣರ ವಚನ ಸಾಹಿತ್ಯ, ಪುರಾಣಗಳು, ವೀರಶೈವರು ಆಚರಿಸುವ ಶಾಸ್ತ್ರೀಯ ವಿಧಿ ವಿಧಾನಗಳ ಅಧ್ಯಯನದಿಂದಾಗಿ ೧೯೪೮ರಲ್ಲಿ 'ಕಾವ್ಯತೀರ್ಥ' ಪದವಿ ಹಾಗೂ ೧೯೪೯ರಲ್ಲಿ 'ವೇದಾಂತಾಚಾರ್ಯ' ಪದವಿ ಸಂಪಾದಿಸಿರು.

ಸೊನ್ನಲಿಗೆ, ಸೊನ್ನಲಾಪೂರ, ಸೋಲಾಪೂರ ಇಂದಿನ ಮಹಾರಾಷ್ಟ್ರದ ಸೊಲ್ಲಾಪೂರದ ಶ್ರೀ ಸಿದ್ಧರಾಮೇಶ್ವರರಿಗೆ ಬಸವಣ್ಣನವರ ಸಮಕಾಲೀನ ಸಮಾಕಾಲೀನ ಮಹಾಪುರುಷರ ಮಾಲಿಕೆಯಲ್ಲಿ ತನ್ನದೇಯಾದ ವಿಶಿಷ್ಟ ಸ್ಥಾನವಿದೆ. ಬಸವಣ್ಣನವರ ಕ್ರಾಂತಿ ವಿಪ್ಲವದಲ್ಲಿ ಕೊನೆಗೊಂಡಾಗ ಸಿದ್ಧರಾಮ ಶಿವಯೋಗಿಗಳು ಸೊಲ್ಲಾಪೂರದಲ್ಲಿಯೇ ಶಿವಯೋಗ ಸಮಾಧಿಯಲ್ಲಿ ಲೀನರಾಗುತ್ತಾರೆ. ಕಲ್ಯಾಣ ಕ್ರಾಂತಿಯ ತರುವಾಯ ಬಸವಾದಿ ಶರಣರಿಗೆ ಬಯಲಾಗಲು ಸೊಲ್ಲಾಪೂರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕು ಶರಣರಿಗೆ ಅನುಕೂಲವಾಯಿತು. ಅಲ್ಲಲ್ಲಿ ಗುಡಿಸಲು ಕಟ್ಟಿ ವಾಸಿಸಿದ ಶರಣರ ಸಥಾನ ಇಂದು ವಿರಕ್ತಮಠಗಳಾಗಿವೆ. ಅಕ್ಕಲಕೋಟ, ನಾಗಣಸೂರ, ಕಡಬಗಾವ, ಪಾನದುಧನಿ, ಜೇವುರ, ಹತ್ತಿಕಣಬಸ, ಕರಜಗಿ, ಮೈಂದರ್ಗಿ, ಇಬ್ರಾಹಿಂಪುರ, ವಾಗ್ದರಿ ಮುಂತಾದ ಎಲ್ಲ ಸ್ಥಳಗಳಲ್ಲಿ ವಿರಕ್ತಮಠಗಳಿವೆ.

ಅಕ್ಕಲಕೋಟ ತಾಲ್ಲೂಕಿನ ೨೭ಕಿ.ಮಿ. ಅಂತರಲದಲಿ ಪಾನ ದುಧನಿ ನಗರವಿದೆ. ಸ್ವಾತಂತ್ರ್ಯ ದೊರೆಯುವ ಪೂರ್ವದಲ್ಲಿ ದುಧನಿ ನಗರ 'ಕುರುಂದವಾಡ ಜ್ಯೂನಿಯರ್ ಸ್ಟೇಟ್' ಅವರ ಆಳ್ವಿಕೆಗೆ ಒಳಪಟ್ಟಿತು. ರಜಾಕರ ಹಾವಳಿಯ ಸಂದರ್ಭದಲ್ಲಿ ಕನ್ನಡಿಗರಿಗೆ ಆಶ್ರಯ ನೀಡುವ ಶಿಬಿರಗಳು ದುಧನಿ ನಗರದಲ್ಲಿದ್ದವು. ಇಂದು ಕರ್ನಾಟಕ ಆಳಂದ, ಅಫಜಲಪುರ ಹಾಗೂ ಮಹಾರಾಷ್ಟ್ರದ ಅಕ್ಕಲಕೋಟ ಮೂರು ತಾಲ್ಲೂಕುಗಳ ರೈತರ ಜೀವನಾಡಿಯಾಗಿ 'ದುಧನಿ ಕೃಷಿ ಉತ್ಪನ್ನ ಮಾರುಕಟ್ಟೆ' ಪ್ರಸಿದ್ಧಿ ಪಡೆದುಕೊಂಡಿದೆ.

ದುಧನಿ ನಗರದಲ್ಲಿ ಶ್ರೀ ಶಾಂತಲಿಂಗೇಶ್ವರ ವಿರಕ್ತಮಠ ಪುರಾತನ ಕಾಲದಿಂದಲೂ ಜಾಗೃತಸ್ಥಾನವಾಗಿ ಪ್ರಾಚೀನ ಪರಂಪರೆಯ ಗುರುಕುಲ ತತ್ವವನ್ನು ಗರ್ಭಿಕರಿಸಿಕೊಂಡು ಭಕ್ತರಲ್ಲಿ ವೀರಶೈವ ಧರ್ಮದ ಚೈತನ್ಯ ಶಕ್ತಿಯಾಗಿ ನೆಲೆನಿಂತಿದೆ. ಶಾಂತಲಿಂಗೇಶ್ವರ ಮಹಾಸ್ವಾಮಿಗಳೇ ಪ್ರಸ್ತುತ ಮಠದ ಮೂಲ ಪುರುಷರು. ಸುಮಾರು ೫೦೦ ವರ್ಷಗಳ ಹಿಂದೆ ಭಕ್ತಿ ಜ್ಞಾನವೈರಾಗ್ಯದ ಘನಪರಂಪರೆ ಎಡೆಯೂರು ಸಿದ್ಧಲಿಂಗೇಶ್ವರರ ಸಮಕಾಲೀನರು.

ದುಧನಿ ವಿರಕ್ತ ಮಠದ ಕರ್ತೃ ಶಾಂತಲಿಂಗೇಶ್ವರರ ಶ್ರೀ ಮ.ನಿ.ಪ್ರ. ಮಹಾಲಿಂಗೇಶ್ವರ ಮಹಾಸ್ವಾಮಿಗಳು ೧೯೫೫ರಲ್ಲಿ ಪೀಠಾಧಿಪತಿಯಾಗಿ ನಿರಂಜನ ಪೀಠವನ್ನು ಬೆಳಗುತ್ತಿದ್ದರು. ಮಹಾಲಿಂಗಸ್ವಾಮಿಗಳು ದುಧನಿ ವಿರಕ್ತ ಮಠದ ಮ.ನಿ. ಪ್ರ. ಮಹಾಲಿಂಗಸ್ವಾಮಿಗಳು ದುಧನಿಗೆ ಆಗಮಿಸುವ ಪೂರ್ವದಲ್ಲಿ ಚೆನ್ನವೀರಪ್ಪ ಕಲ್ಯಾಣಶೆಟ್ಟಿ, ಬಸವಣ್ಣೆಪ್ಪ ಸೊಳಶೆ, ರಾಮಲಿಂಗಪ್ಪ ಶೀಲವಂತ, ಗುರುಶಾಂತಪ್ಪ ಹಾವಶೆಟ್ಟಿ, ಕಲ್ಯಾಣಪ್ಪ ಪಾಟೀಲ, ಶಂಕರ ಗಾಡಿ, ಶರಣಪ್ಪ ಪರಮಶೆಟ್ಟಿ ಇವರೆಲ್ಲರೂ ದುಧನಿ ನಗರದಿಂದ 'ಕನ್ನಡ ಹೋರಾಟ' ಪ್ರಾರಂಭಿಸಿದರು. ದುಧನಿ ವಿರಕ್ತಮಠದಲ್ಲಿ ಪ್ರತಿವರ್ಷ 'ನಾಡಹಬ್ಬ ಮಹೋತ್ಸವ' ವೈಭವದಿಂದ ಆಚರಿಸುತ್ತಿದ್ದರು. ದುಧನಿ ಭಕ್ತರೊಂದಿಗೆ ಮಹಾಲಿಂಗಸ್ವಾಮಿಗಳು ಕನ್ನಡಪರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಮಹಾಲಿಂಗಸ್ವಾಮಿಗಳ ಹೋರಾಟದ ದಾಖಲೆಗಳು ಲಭ್ಯವಾಗಿವೆ ಎಂದು ಈಗಿನ ಪೀಠಾಧಿಪತಿಗಳಾದ ಶ್ರೀ ಮ.ನಿ.ಪ್ರ.ಶಾಂತಲಿಂಗೇಶ್ವರ ಮಹಾಸ್ವಾಮಿಗಳು ಸಂದರ್ಶನದ ವೇಳೆಯಲ್ಲಿ ಹೇಳಿದರು.[೧೩]

೧೯೫೬ರಲ್ಲಿ ಭಷಾವಾರು ಪ್ರಾಂತರಚನೆಯಾದಾಗಿನಿಂದ ಮಹಾರಾಷ್ಟ್ರ – ಕರ್ನಾಟಕ ಗಡಿವಿವಾದ ಆಗಾಗ ಸಂಧಿಸುತ್ತಲೇ ಇದೆ. ಆಗಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ನೆನಗುದಿಗೆ ಬಿದ್ದು ಕಗ್ಗಂಟಾಗಿರುವ ಪ್ರಸ್ತುತ ಗಡಿ ತಂಟೆಗೆ ಒಂದು ಮೂರ್ತ ಸ್ವರೂಪ ಕೊಡಲು ತೀರ್ಮಾನಿಸಿ ಉಭಯ ರಾಜ್ಯಗಳ ಮುಖ್ಯಮಂತ್ರಿಗಳನ್ನು ವಿಶ್ವಾಸಲ್ಲಿ ತೆಗೆದುಕೊಂಡು ಏಕಸದಸ್ಯ ಆಯೋಗವನ್ನು ನೇಮಿಸಿದರು. ಆ ಆಯೋಗ ನೀಡುವ ತೀರ್ಮಾನಕ್ಕೆ ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಸಮ್ಮತಿಸಬೇಕೆಂದು ಒಪ್ಪಂದವಾಯಿತು. ನ್ಯಾಯಮೂರ್ತಿ ಮಹಾಜನ ಅವರನ್ನು ನೇಮಿಸಿ ಎಲ್ಲ ವಿಷಯವನ್ನು ಕೂಲಂಕುಷವಾಗಿ ಅಭ್ಯಸಿಸಿ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಮಹಾಜನ ಅವರು ಮಹಾರಾಷ್ಟ್ರ–ಕರ್ನಾಟಕ ಗಡಿಭಾಗದಲ್ಲಿ ಸಂಚರಿಸಿ, ಸಾರ್ವಜನಿಕರ ಅಭಿಪ್ರಾಯಗಳನ್ನು ಸ್ವೀಕರಿಸಿ, ಅದಕ್ಕೊಂದು ಅಂತಿಮ ಸ್ವರೂಪ ಕೊಡಲು ನಿರ್ಧರಿಸಿದರು.

ಮಹಾರಾಷ್ಟ್ರದ ಸೊಲ್ಲಾಪೂರ ಜಿಲ್ಲೆಯಲ್ಲಿ ಮಹಾಜನರು ಸಂಚಾರ ಕೈಕೊಂಡಾಗ ಅಕ್ಕಲಕೋಟೆಯಲ್ಲಿ ಉಭಯ ಭಾಷಿಕರ ಅಭಿಪ್ರಾಯಗಳನ್ನು ಕೇಳುವ ಸಂದರ್ಭದಲ್ಲಿ ಮಹಾಜನ ಅವರ ಎದುರು ಮಹಾರಾಷ್ಟ್ರದ ಕೆಲ ಭಾಗಗಳು ಕರ್ನಾಟಕಕ್ಕೆ ಏಕ ಸೇರ್ಪಡೆಯಾಗಬೇಕು ಎಂಬ ತಮ್ಮವಾದ ಮಂಡಿಸಲು ಶ್ರೀ ಮ.ನಿ.ಪ್ರ. ಮಹಾಲಿಂಗೇಶ್ವರ ಮಹಾಸ್ವಾಮಿಗಳು ಮಹಾಜನ ಅವರಿಗೆ ಸಾಕ್ಷಿ ಹೇಳಲು ಹೊರಟಾಗ ಬಂಧನ ಬಿಡಗಡೆ ಮಾಡಲಾಯಿತು. ಅಂದಿನ ಅಕ್ಕಲಕೋಟೆಯ ಕುಲಕರ್ಣಿ ಫೌಜುದಾರರು ಮಹಾಲಿಂಗೇಶ್ವರ ಮಹಾಸ್ವಾಮಿಗಳಿಗೆ ಉದ್ದೇಶಪೂರ್ವಕವಾಗಿ ಬಂಧಿಸಿದ.[೧೪] ದುಧನಿ ಸ್ವಾಮಿಗಳಿಗೆ ಬಂಧಿಸಿದ ವಿಷಯ ಮಹಾಜನರಿಗೆ ತಿಳಿಯಿತು. ಮಹಾಜನರು ಪೋನಿನಲ್ಲಿ ಫೌಜುದಾರನೊಂದಿಗೆ ಮಾತನಾಡಿ 'ದುಧನಿ ಸ್ವಾಮಿಗಳಿಗೆ ಬಿಡುಗಡೆ ಮಾಡಿ, ಇಲ್ಲವಾದರೆ ನಿನ್ನನ್ನು ಅಧಿಕಾರದಿಂದ ವಜಾ ಮಾಡುವ ಅಧಿಕಾರ ನನಗಿದೆ' ಎಂದು ಮಹಾಜನರು ಹೇಳಿದರು. ಇನ್ನೊಂದು ವಿಷಯ ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಈ ಘಟನೆ ನಡೆಯುವ ಸಂದರ್ಭದಲ್ಲಿ ಹಿರಿಯ ಕನ್ನಡ ಹೋರಾಟಗಾರರಾದ ಕೆ.ಬಿ.ಪೂರ್ವಾಚಾರ್ಯರು ಪ್ರತ್ಯಕ್ಷದರ್ಶಿಗಳಾಗಿದ್ದರು. ಮಹಾಜನರೊಂದಿಗೆ ದುಧನಿ ಮಹಾಲಿಂಗೇಶ್ವರ ಮಹಾಸ್ವಾಮಿಗಳ ಸಂವಾದ ನಡೆಯಿತೆಂದು ಕೆ.ಬಿ.ಪೂರ್ವಾಚಾರ್ಯರು ಹೇಳುತ್ತಾರೆ.[೧೫]

ಮಹಾಲಿಂಗೇಶ್ವರ ಮಹಾಸ್ವಾಮಿಗಳು ತಮ್ಮ ಅಭಿಪ್ರಾಯ ಮಂಡಿಲುಸ ಮಹಾಜನ ಅವರಿದ್ದ ನಿವಾಸಕ್ಕೆ ಆಗಮಿಸುತ್ತಲೇ ನ್ಯಾಯಮೂರ್ತಿ ಮಹಾಜನರು ಗೌರವಪೂರ್ವಕ ಬರಮಾಡಿಕೊಂಡಿರು. ಶ್ರೀಗಳು ಕಾಶಿಯಲ್ಲಿ ಅಧ್ಯಯನ ಗೈಯ್ಯುವಾಗ ಹಿಂದಿ ವಿಷಯದಲ್ಲಿ ಕಾವ್ಯತೀರ್ಥ ಪದವಿ ಸಂಪಾದಿಸಿದುದನ್ನು ಈಗಾಗಲೇ ಗಮನಿಸಲಾಗಿದೆ. ಶ್ರೀಯುತ ನ್ಯಾಯಮೂರ್ತಿ ಮಹಾಜನರು ಹಾಗೂ ಶ್ರೀ ಮ.ನಿ.ಪ್ರ. ಮಹಾಲಿಂಗೇಶ್ವರ ಮಹಾಸ್ವಾಮಿಗಳ ಸಂಭಾಷಣೆ ಹಿಂದಿ ಭಾಷೆಯಲ್ಲಿ ಜರುಗಿತು. ಶ್ರೀಗಳು ಪ್ರಸ್ತುತ ಭಾಗ ಮಹಾರಾಷ್ಟ್ರಕ್ಕೆ ಏಕೆ ಸೇರಬೇಕು? ಎಂಬ ತಮ್ಮ ವಾದವನ್ನು ಪ್ರತಿಪಾದಿಸುತ್ತ "ಸುಮಾರು ಹನ್ನೆರಡನೆಯ ಶತಮಾನದಿಂದಿಲೂ ಈ ಭಾಗದ ಕನ್ನಡ ಭಾಷೆ ವಿಜೃಂಭಿಸುತ್ತಿದೆ. ಇದಕ್ಕೆ ಕಾರಣ ಬಸವಾದಿ ಶರಣರ ಸಂದೇಶ. ಅಂದಿನಿಂದ ಇಂದಿನವರೆಗೂ ಇಲ್ಲಿ ಕನ್ನಡ ಬಳಕೆಗೆ ವಿಶೇಷ ಸ್ಥಾನವಿದೆ. ಕರ್ಮಯೋಗಿ ಸಿದ್ಧರಾಮನಂತೂ ಸೊಲ್ಲಾಪೂರದಲ್ಲಿ ನೆಲಸಿ ಸಮಗ್ರ ಮಾನವತೆಯ ಏಕತೆಗಾಗಿ

ಶ್ರಮಿಸಿದ ಅನೇಕ ಶಿವ ಬಸವಾದಿ ದಾಖಲೆಗಳು ಹಾಗೂ ಶರಣರ ಲೀಲೆಯ ಐತಿಹ್ಯಗಳು ಈ ಭಾಗದಲ್ಲಿ ಹೇರಳವಾಗಿವೆ. ಶಿವ ಶರಣರು ಬಸವ ಕಲ್ಯಾಣವನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಈ ಭಾಗದ ಸುತ್ತಮುತ್ತಲಿನ ಜನರ ಮನೆಮನಗಳಿಗೆ ಕನ್ನಡದ ಮೂಲಕ ವಚನ ಸಾಹಿತ್ಯವನ್ನು ಎರಕಹೊಯ್ದರು. ಬಸವಲಕಲ್ಯಾಣ ಈ ಭಾಗಕ್ಕೆ ಅತೀ ಸಮೀಪ, ತತ್‌ಪರಿಣಾಮವಾಗಿ ಜನರಲ್ಲಿ ಶರಣ ಸಂದೇಶ ಇಂದಿಗೂ ಅವಿಭಾಜ್ಯ ಅಂಗವಾಗಿ ಸ್ಪಂದಿಸುತ್ತಿದೆ. ಭವಿಷ್ಯತ್ತಿನಲ್ಲೂ ಸ್ಪಂಧಿಸುವುದು ಆದ್ದರಿಂದ ಐತಿಹಾಸಿಕ ದೃಷ್ಟಿಯಿಂದ, ಜನರಾಡುವ ಭಾಷೆಯ ದೃಷ್ಟಿಯಿಂದ ಈ ಭಾಗ ಶತಶತಮಾನಗಳಿಂದ ಕನ್ನಡ ಭಾಷೆಯನ್ನೇ ವಿಶೇಷವಾಗಿ ಮೈಗೂಡಿಸಿಕೊಂಡಿದೆ" ಎಂದು ತಮ್ಮ ವಾದವನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸಿದರು.

ನ್ಯಾಯಮೂರ್ತಿ ಮಹಾಜನ ಅವರು ಅತ್ಯಂತ ತಾಳ್ಮೆಯಿಂದ, ಶಾಂತಚಿತ್ತದಿಂದ ಶ್ರೀಗಳ ವಾದವನ್ನು ಆಲಿಸಿದರು. "ತಾವು ವ್ಯಕ್ತಪಡಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಾಮಶಿಶಿ ನಿರ್ಣಯ ತೆಗೆದುಕೊಳ್ಳುವೆ" ಎಂದು ಹೇಳಿ ಕುಶಲೋಪರಿ ಮಾತುಕತೆಯ ಬಳಿಕ ಬೀಳ್ಕೊಟ್ಟರು.[೧೬]

೨೩-೦೫-೧೯೬೭ರಂದು ಪ್ರಸ್ತುತ ಈ ಸನ್ನಿವೇಶದಲ್ಲಿ ಶ್ರೀಗಳು ಪೋಲೀಸರಿಂದ ಬಂಧನಕ್ಕೊಳಗಾಗಿ ಬಿಡುಗಡೆ ಹೊಂದಿದರು. ಆ ಕುರಿತು ಕಿಂಚಿತ್ ಚಿಂತಿಸಲಿಲ್ಲ. ಮಹಾಲಿಂಗೇಶ್ವರ ಮಹಾಸ್ವಾಮಿಗಳು ದುಧನಿ ವಿರಕ್ತಮಠದಲ್ಲಿ ಕನ್ನಡ, ಇಂಗ್ಲೀಷ್, ಸಂಸ್ಕೃತ, ಹಿಂದಿ ಭಾಷೆಗಳ ಉತ್ಕೃಷ್ಟ ಗ್ರಂಥಗಳ ರಾಶಿಯನ್ನೇ ಸಂಗ್ರಜಿಸಿ ನಿರಂತರ ಅಭ್ಯಾಸ ತಪಸ್ವಿಗಳಾಗಿ ಮಗ್ನವಾಗಿರುತ್ತಿದ್ದರು. ಸುಮಾರು ಹನ್ನೆರಡು ಸಾವಿರಕ್ಕೂ ಮೇಲ್ಪಟ್ಟ ಗ್ರಂಥಗಳನ್ನು ಸಂಗ್ರಹಿಸಿದರು. ಶ್ರೀಗಳು ಸ್ಥಾಪಿಸಿದ ಕನ್ನಡ ಗ್ರಂಥಾಲಯ ಮಠದಲ್ಲಿದೆ. ಹೀಗೆ ಗಡಿಭಾಗದ ಕನ್ನಡ ಪರವಾದ ಕಳಕಳಿಯಿಂದ ಶ್ರಮಿಸುತ್ತಲಿದ್ದ ಪೂಜ್ಯರು ೨೫ ಮಾರ್ಚ್ ೧೯೭೧ರಲ್ಲಿ ಬೆಳಗಾವಿ ಜಿಲ್ಲೆ ನಿಡನೋಸಿಯ ಜಗದ್ಗುರು ದುರುದುಂಡೀಶ್ವರ ಸಿದ್ಧಸಂಸ್ಥಾನ ಮಠದ ಪೀಠಾಧಿಕಾರ ವಹಿಸಿಕೊಂಡು ತಮ್ಮ ಕಾರ್ಯ ವ್ಯಾಪ್ತಿಯನ್ನು ವಿಶಾಲಗೊಳಿಸಿದರು. ಶ್ರೀಗಳು ದುಧನಿ ಮಠ ಬಿಟ್ಟುಹೋದರೂ 'ಗಡಿನಾಡಿನ ಕನ್ನಡ ಹೋರಾಟ' ಬಿಡಲಿಲ್ಲ. ನಿಡಸೋಸಿ ಮಠದಿಂದಲೇ ದುಧನಿ ಕನ್ನಡ ಹೋರಾಟಗಾರರಿಗೆ ಪತ್ರಗಳ ಮೂಲಕ ಮಾರ್ಗದರ್ಶನ ನೀಡುತ್ತಿದ್ದರು. ಕನ್ನಡ ಹೋರಾಟಗಾರರಿಗೆ ಶ್ರೀಗಳು ಬರೆದು ಹಲವು ಪತ್ರಗಳು ದುಧನಿ ನಗರದಲ್ಲಿ ಲಭ್ಯವಾಗಿವೆ. ದುಧನಿ ನಿರಂಜನ ಪೀಠ ನಿರಂತರವಾಗಿ 'ಕನ್ನಡದ ದೀಪ' ಬೆಳಗಿಸುತ್ತಿದೆ. ಶ್ರೀ ಮ.ನಿ.ಪ್ರ. ಜಡೆಯಶಾಂತಲಿಂಗೇಶ್ವರ ಮಹಾಸ್ವಾಮಿಗಳು ಗಡಿನಾಡಿನ ಕನ್ನಡಪರ ಸಾಹಿತ್ಯ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿದರು. ಇವರ ನಂತರ ಆಗಮಿಸಿದ ಶ್ರೀ ಮ.ನಿ.ಪ್ರ. ಶಾಂತಲಿಂಗೇಶ್ವರ ಮಹಾಸ್ವಾಮಿಗಳು ಮಠದಲ್ಲಿ 'ಕನ್ನಡಪರ' ಸಾಹಿತ್ಯ ಸಮ್ಮೇಳನ ಮುಂತಾದ ಚಟುವಟಿಕೆಗಳನ್ನು ಮುನ್ನಡೆಸುತ್ತಿದ್ದಾರೆ. ಶ್ರೀ ಮ.ನಿ.ಪ್ರ. ಮಹಾಲಿಂಗೇಶ್ವರ ಮಹಾಸ್ವಾಮಿಗಳು ೨೦-೦೭-೧೯೮೯ರಂದು ಲಿಂಗೈಕ್ಯರಾದರು.

ಸೊಲ್ಲಾಪೂರ ಅಕ್ಕಲಕೋಟ ಹಾಗೂ ಜತ್ ಕನ್ನಡದ ಪ್ರದೇಶದಲ್ಲಿ ಅಂದು ಹಲವು 'ಗಡಿನಾಡಿನ ಕನ್ನಡ ಹೋರಾಟಗಾರರ' ಪರಿಶ್ರಮದಿಂದ ಮಹಾಜನರಿಗೆ "ಈ

ಪ್ರದೇಶ ಅಪ್ಪಟ ಕನ್ನಡಿಗರದು" ಮನವರಿಕೆಯಾಯಿತು. ಮಹಾಜನರು ತಮ್ಮ ವರದಿಯಲ್ಲಿ ಸೊಲ್ಲಾಪೂರ ಅಕ್ಕಲಕೋಟ ಹಾಗೂ ಜತ್ ತಾಲ್ಲೂಕುಗಳ ಅಪ್ಪಟ ಕನ್ನಡ ಪ್ರದೇಶಗಳು ಮೈಸೂರು ರಾಜ್ಯಕ್ಕೆ ಹಸ್ತಾಂತರಿಸುವಂತೆ ಶಿಫಾರಸ್ಸು ಮಾಡಿದರು. ಅಂದು ಪ್ರಾರಂಭವಾದ ಮಹಾರಾಷ್ಟ್ರ-ಕರ್ನಾಟಕ ಗಡಿ ವಿವಾದ ಇಂದಿಗೂ ಸುಪ್ರೀಂ ಕೋರ್ಟಿನಲ್ಲಿ ಕಗ್ಗಂಟಾಗಿದೆ.

೬. ಕೆ.ಬಿ.ಪೂರ್ವಾಚಾರ್ಯ, ಸೊಲ್ಲಾಪೂರ

ಜನನ: ೦೪-೦೪-೧೯೨೯

ಕರ್ನಾಟಕದ ಹಾವೇರಿ ಜಿಲ್ಲೆಯ ವರದಾ ತೀರದ ಕಲಕೋಟಿ ಗ್ರಾಮದ ಶ್ರೀ ಭಾಸ್ಕರಾಚಾರ್ಯ ಭಾಗೀರಥಿ ಉದರದಿಂದ ೦೪-೦೪-೧೯೨೯ ರಂದು ಕೆ.ಬಿ. ಪೂರ್ವಾಚಾರ್ಯ ಜನಿಸಿದರು. ಹೈಸ್ಕೂಲ್ ವಿದ್ಯಾಭ್ಯಾಸ ಕಲಿಯುವ ಸಂದರ್ಭದಲ್ಲಿ ಗಾಂಧೀಜಿಯವರ ಕರೆಗೆ ಓಗೊಟ್ಟು ಚಳುವಳಿಯಲ್ಲಿ ಭಾಗವಹಿಸಿದರು. ದೇಶದ ಇತರ ಭಾಗಗಳಂತೆ, ಕನ್ನಡನಾಡಿನಲ್ಲಿಯೂ ಶ್ರೇಷ್ಠ ಗಾಂಧಿವಾದಿಗಳು, ಗಾಂಧಿವಿಶಿಷ್ಟರು ಹಲವರು ಆಗಿಹೋಗಿರಲೂ ಸಾಕು. ಆದರೆ ಎಳೆಯವರಲ್ಲಿಯೆ ಅಗಾಧ ನಿಷ್ಠೆ, ತತ್ಪರತೆ, ಅಚಲತೆ, ಧೈರ್ಯ, ಸೇವೆಗಳಿಂದ ಬಾಪು ಮನಗೆದ್ದವರು, ಆಪ್ತಸಹವಾಸ ಪಡೆದವರು, ಮೈಲಾಸ ಮಹಾದೇವ ಭಾರತದ ಅಂತಿಮ ಸ್ವಾತಂತ್ರ್ಯ ಮಹಾದೇವ ಒಂದು ಭೂಗತ ತಂಡವನ್ನು ಕಟ್ಟಿಕೊಂಡು ಹೋರಾಡಿದರು. ಮೈಲಾರ ಮಹಾದೇವರ ಭೂಗತ ತಂಡದಲ್ಲಿ ಕೆ.ಬಿ. ಪೂರ್ವಾಚಾರ್ಯರು ಒಬ್ಬರಾಗಿದ್ದರು. ಭೂಗತರಾಗಿ ಹೋರಾಟ ಮಾಡುತ್ತಿರುವ ಕೆ.ಬಿ. ಪೂರ್ವಾಚಾರ್ಯ ಧಾರಾವಾಡದಲ್ಲಿ ಕಾರಾಗ್ರಹವಾಸ ಅನುಭವಿಸಿದರು. ಆಗ ಅವರ ವಯಸ್ಸು ೧೪ ವರ್ಷಗಳು.

ಕಾರಾಗೃಹವಾಸ ಅನುಭವಿಸುವ ಸಂದರ್ಭದಲ್ಲಿ ಇವರು ಪುಸ್ತಕ ಓದುವುದು ಬರೆಯುವುದು, ಸಂಗೀತ, ಚಿತ್ರಬಿಡಿಸುವುದು ಹಾಗೂ ಛಾಯಾಚಿತ್ರ ಇವರ ಅಭಿರುಚಿಗಳು. ಕುಟುಂಬದ ಉಪಜೀವನದ ಸಲುವಾಗಿ ವಿಧಿ ಇವರಿಗೆ ಸೊಲ್ಲಾಪೂರಕ್ಕೆ ಕರೆಯಿಸಿತು. ಛಾಯಾ ಚಿತ್ರದಲ್ಲಿ ಆಸಕ್ತಿಯಿರುವ ಕೆ.ಬಿ.ಪೂರ್ವಾಚಾರ್ಯರು ಸೊಲ್ಲಾಪೂರದಲ್ಲಿ ಫೋಟೋ ಅಂಗಡಿ ಪ್ರಾರಂಭಿಸಿದರು. ಒಂದು ಕಡೆ ದೇಶದ ಸ್ವಾತಂತ್ರ್ಯ ಹೋರಾಟ ನಡೆಯಿತು. ಇನ್ನೊಂದು ಕಡೆ ಕರ್ನಾಟಕ ಏಕೀಕರಣ ಹೋರಾಟ ಪ್ರಾರಂಭವಾಯಿತು. ಕೆ.ಬಿ.ಪೂರ್ವಾಚಾರ್ಯರು ಸೊಲ್ಲಾಪೂರ ಕನ್ನಡಿಗರಿಗೆ ಕರ್ನಾಟಕದಲ್ಲಿ ಸೇರಿಸಲು ಹೋರಾಟ ಪ್ರಾರಂಭಿಸಿದರು.

ಮಹಾರಾಷ್ಟ್ರದ ಅಪ್ಪಟ ಕನ್ನಡ ಪ್ರದೇಶಗಳಾದ ಸೊಲ್ಲಾಪೂರ, ಅಕ್ಕಲಕೋಟ ಹಾಗೂ ಜತ್ ತಾಲ್ಲೂಕುಗಳು ಕರ್ನಾಟಕ ರಾಜ್ಯಕ್ಕೆ ಸೇರಿಸಲು ಜಗದೇವಿತಾಯಿ ಲಿಗಾಡೆ, ಕೆ.ಬಿ. ಪೂರ್ವಾಚಾರ್ಯ, ಎಂ.ಎಸ್.ಸರದಾರ, ಶ್ರೀಮತಿ ಪಂಚವ್ವತಾಯಿ ಸರದಾರ, ಮಹಾದೇವಪ್ಪ ರಾಂಪುರ, ಚನ್ನವೀರ ಕಲ್ಯಾಣಶೆಟ್ಟಿ, ಆರ್.ಎಚ್.ನಾಗಪ್ಪಣ್ಣ ಅಬ್ದುಲಪುರಕರ, ಅಪ್ಪಾಸಾಹೇಬ ಕಾಡಾದಿ, ಬಾಬಾಸಾಹೇಬ ವಾರದ ಹಲವಾರು ಸೊಲ್ಲಾಪೂರ ಜಿಲ್ಲೆಯ ಕನ್ನಡಿಗರು ಕನ್ನಡಕ್ಕಾಗಿ ಹೋರಾಡಿದರು. ಕರ್ನಾಟಕ ಏಕೀಕರಣಕ್ಕೆ ದುಡಿದ ಮಹಾನೀಯರ ಬಗ್ಗೆ ಅಧ್ಯಯನ, ಸಂಶೋಧನೆ ನಡೆದಿವೆ. ಆದರೆ 'ಸೊಲ್ಲಾಪೂರ ಕನ್ನಡ ಹೋರಾಟಗಾರರ' ಕುರಿತು ಅಧ್ಯಯನ, ಸಂಶೋಧನೆ ನಡೆಯಬೇಕಾಗಿದೆ.

ಕೆ.ಬಿ.ಪೂರ್ವಾಚಾರ್ಯರು ಸೊಲ್ಲಾಪೂರದಲ್ಲಿ ನಿರಂತರವಾಗಿ ಕನ್ನಡಪರ ಸಭೆ ಸಮಾರಂಭಗಳನ್ನು ನಿರ್ವಹಿಸುತ್ತಲೇ ಇದ್ದಾರೆ. ಹೊರನಾಡು, ಗಡಿನಾಡು ಕನ್ನಡ ವಿದ್ಯಾರ್ಥಿಗಳಿಗೆ ಕರ್ನಾಟಕ ಸರಕಾರದಿಂದ ಮೆಡಿಕಲ್, ಇಂಜಿನಿಯರಿಂಗ್ ಹಲವು ಪ್ರವೇಶ ಪಡೆಯಲು ಸೌಲಭ್ಯ ಕಲ್ಪಿಸಿಕೊಟ್ಟರು. ಸೊಲ್ಲಾಪೂರ ಸಿದ್ಧೇಶ್ವರ ಹೈಸ್ಕೂಲಿನಲ್ಲಿ ಕನ್ನಡ ವಿಭಾಗ ಪ್ರಾರಂಭಿಸಲು, ಅಕ್ಕಲಕೋಟ ಸಿ.ಬಿ.ಖೇಡಗಿ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗ ಪ್ರಾರಂಭಿಸಲು ಇವರು ಅಗ್ರ ಪರಿಶ್ರಮ ವಹಿಸಿದರು. ಸೊಲ್ಲಾಪೂರದ ಕನ್ನಡ ಮಿತ್ರ ಸಮಾಜ ಸ್ಥಾಪಿಸಿ ಪ್ರತಿವರ್ಷ ಸೊಲ್ಲಾಪೂರದಲ್ಲಿ 'ನಾಡಹಬ್ಬ ಮಹೋತ್ಸವ' ವೈಭದಿಂದ ಆಚರಿಸುತ್ತಾರೆ.

ಜ್ಞಾನಪೀಠ ಪ್ರಶಸ್ತಿ ವಿಜೇತರಾದ ದ.ರಾ.ಬೇಂದ್ರೆ ಅವರು ಸೊಲ್ಲಾಪೂರ ದಯಾನಂದ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುವ ಸಂದರ್ಭದಲ್ಲಿ ಬೇಂದ್ರೆಯವರೊಂದಿಗೆ ಪೂರ್ವಾಚಾರ್ಯರು ನಿಕಟ ಸಂಪರ್ಕ ಹೊಂದಿದ್ದರು. ಬೇಂದ್ರೆಯವರ ಸಾಹಿತ್ಯದ ಸಾಗರದಲ್ಲಿ ಹಲವು ಮುತ್ತು-ರತ್ನಗಳಿವೆ, ಅವುಗಳಲ್ಲಿ ಪೂರ್ವಾಚಾರ್ಯವೆಂಬ ಕನ್ನಡದ ರತ್ನ ಒಂದು ಬೇಂದ್ರೆ ಅವರ ಪ್ರಭಾವದಿಂದ ಪೂರ್ವಾಚಾರ್ಯರು ಕನ್ನಡ ನಾಡು-ನುಡಿಗೆ ಅಪಾರವಾದ ಸೇವೆ ಸಲ್ಲಿಸಿದರು. ಪೂರ್ವಾಚಾರ್ಯರು ಮುಕ್ತಜೀವ (ಕಾವ್ಯಸಂಕಲನ,) ಗಂಡಸಾದರೆ.....? (ನಾಟಕ) ಹೀಗೆ ಹಲವು ಕನ್ನಡ ಪುಸ್ತಕಗಳು ಪ್ರಕಟಿಸಿದರು. ಗಡಿನಾಡಿನ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ಇವರ ಕನ್ನಡಪರ ಚಟುವಟಿಕೆಗಳನ್ನು ಗುರುತಿಸಿ ಕಾರ್ಯಸಮಿತಿಯ ಸದಸ್ಯರಾಗಿ ನೇಮಕ ಮಾಡಿದರು. ಇವರು ಕನ್ನಡದ ಸಲುವಾಗಿ ಅಪಾರವಾದ ಸೇವೆ ಸಲ್ಲಿಸುತ್ತಿದ್ದಾರೆ.

ಹೈದ್ರಾಬಾದ್–ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಮಹಾದೇವಪ್ಪ ರಾಂಪೂರ ಅವರ ಇಂಜನೀಯರಿಂಗ್ ಮಹಾವಿದ್ಯಾಲಯದ ಪ್ರಾರಂಭೋತ್ಸವಕ್ಕೆ ಉಪರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಅವರನ್ನು ಗುಲಬರ್ಗಾಕ್ಕೆ ಕರೆಸಿದರು. ಆ ಸಂದರ್ಭದಲ್ಲಿ ಕೆ.ಬಿ. ಪೂರ್ವಾಚಾರ್ಯ, ಮಹಾದೇವಪ್ಪ ರಾಂಪೂರೆ 'ಸೊಲ್ಲಾಪೂರ ನಗರಹಿತ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರಿಸಬೇಕೆಂದು ಉಪರಾಷ್ಟ್ರಪತಿ ರಾಧಾಕೃಷ್ಣ ಅವರಿಗೆ ಮನವಿ ಸಲ್ಲಿಸಿದರು. ನಿಜಲಿಂಗಪ್ಪ, ವೀರೇಂದ್ರ ಪಾಟೀಲರಿದ್ದರೆಂದು ಕೆ.ಬಿ. ಪೂರ್ವಾಚಾರ್ಯಯರು ಸಂದರ್ಶನದ ಸಂದರ್ಭದಲ್ಲಿ ಹೇಳಿದರು.[೧೭]

ಅಂದಿನಿಂದ ಇಂದಿನವರೆಗೂ ಸೊಲ್ಲಾಪೂರ ಕನ್ನಡಿಗರ ಸಲುವಾಗಿ ಸತತವಾಗಿ ಕೆ.ಬಿ. ಪೂರ್ವಾಚಾರ್ಯರು ಕನ್ನಡದ ಸಲುವಾಗಿ ಹೋರಾಡುತ್ತಿದ್ದಾರೆ. ನಿಜಲಿಂಗಪ್ಪ, ವೀರೇಂದ್ರ ಪಾಟೀಲ, ರಾಮಕೃಷ್ಣಹೆಗಡೆ, ವೀರಪ್ಪಮೋಯ್ಲಿ, ಹಿರಿಯ ಸಾಹಿತಿಗಾಳದ ಪಾಟೀಲ ಪುಟ್ಟಪ್ಪ ಅವರೊಂದಿಗೆ ನಿಕಟ ಸಂಪರ್ಕವಿದೆ. ಇವರೆಲ್ಲರ ಸಹಕಾರದಿಂದ ಸೊಲ್ಲಾಪೂರದಲ್ಲಿ ಕನ್ನಡ ಕೆಲಸ ಮಾಡಲು ಅನುಕೂಲವಾಯಿತ್ತೆಂದು ಪೂರ್ವಾ ಚಾರ್ಯರು ಅವರೆಲ್ಲರಿಗೂ ನೆನೆಯುತ್ತಾರೆ. ಸೊಲ್ಲಾಪೂರದ ಪ್ರಮುಖ ಮಾರುಕಟ್ಟೆಯಾದ ಸವಿ ಪೀಠದಲ್ಲಿ ಹಿರಿಯ ಕನ್ನಡದ ಜೀವ 'ಗಡಿನಾಡಿನ ಕನ್ನಡ ದೀಪ ಬೆಳಗುತ್ತಿದೆ' ಯುವಕರಾದ ನಾವು ನಾಚಿಕೆ ಪಡಬೇಕು.

೨೪ ಅಕ್ಟೋಬರ್ ೨೦೧೦ರಂದು ಕೆ.ಬಿ. ಪೂರ್ವಾಚಾರ್ಯ ಅವರ ದರ್ಶನ ಪಡೆದು, ಅವರಿಂದ 'ಸೊಲ್ಲಾಪೂರದ ಕನ್ನಡ ಹೋರಾಟಗಾರ'ರ ಬಗ್ಗೆ ಸಂದರ್ಶನ ಮಾಡಿದೆ. ಸೊಲ್ಲಾಪೂರದ ಕೆ.ಬಿ. ಪೂರ್ವಾಚಾರ್ಯರ ಮನೆ ಪುಟ್ಟದಾದ ಕನ್ನಡ ಗ್ರಂಥಾಲಯದಂತಿತ್ತು. ಸ್ವಾಭಿಮಾನಿಯಾದ ಪೂರ್ವಾಚಾರ್ಯರು ನನಗೆ ಹಲವು ಪ್ರಶಸ್ತಿಗಳು ಲಭಿಸಿವೆಯೆಂದು ಹೇಳಲಿಲ್ಲ. ನಾನು ಸಂದರ್ಶನ ಮುಗಿಸಿ ಹೋಗುವಾಗ ಅವರ ಶ್ರೀಮತಿಯವರು 'ಏ ತಮ್ಮಾ ಬಾ' ಎಂದು ಕರೆದು ಅವರಿಗೆ ಲಭಿಸಿರುವ ಪ್ರಶಸ್ತಿಗಳನ್ನು ತೋರಿಸಿದರು.

ಕೆ.ಬಿ.ಪೂರ್ವಾಚಾರ್ಯ ಅವರ ಅಪಾರವಾದ ಕನ್ನಡದ ಸೇವೆ ಗುರುತಿಸಿ ಅವರ ಹೋರಾಟದ ಬದುಕಿಗೆ ಹಲವು ಗೌರವ ಸನ್ಮಾನ, ಪ್ರಶಸ್ತಿಗಳು ಲಭಿಸಿವೆ. ಭಾರತಸರಲಾರದ ತಾಮ್ರಪತ್ರ, ಮಹಾರಾಷ್ಟ್ರ ಸರಕಾರದ ಸನ್ಮಾನ ಪತ್ರ, ಸೊಲ್ಲಾಪೂರ ಮಹಾನಗರ ಪಾಲಿಕೆಯ ಗೌರವ ಪತ್ರ, ಉತ್ತರ ಕರ್ನಾಟಕ ಉತ್ಸವ ಚಾಲುಕ್ಯ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿಗಳು ದೊರೆತಿವೆ. ಧಾರಾವಾಡದ ವಿದ್ಯಾವರ್ಧಕ ಸಂಘದ ೧೨೧ನೇಯ ಸಂಸ್ಥಾಪನಾ ದಿನಾಚರಣೆಯಂದು, ರಾಜರ್ಷಿ ಪದ್ಮಭೂಷಣ ಡಾ॥ ವೀರೇಂದ್ರ ಹೆಗ್ಗಡೆ ಅವರಿಂದ ಗಡಿನಾಡಿನ ಹೋರಾಟಗಾರ ಕೆ.ಬಿ. ಪೂರ್ವಾಚಾರ್ಯರಿಗೆ ಸನ್ಮಾನಿಸಿದರು. ಸೊಲ್ಲಾಪೂರದ ಹಿರಿಯ ಗಡಿನಾಡಿನ ಹೋರಾಟಗಾರರಾದ ಕೆ.ಬಿ. ಪೂರ್ವಾಚಾರ್ಯರಿಗೆ ಕರ್ನಾಟಕ ಸರಕಾರದ 'ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಲಿ

ಎಂಬುದು ಸೊಲ್ಲಾಪೂರ ಜಿಲ್ಲೆಯ ಕನ್ನಡಿಗರ ಆಶಯವಾಗಿದೆ.

೭. ನಾಗಪ್ಪ ಕಾಡಾದಿ, ಸೊಲ್ಲಾಪೂರ

ಸೊಲ್ಲಾಪೂರ ಕಾಡಾದಿ ಮನೆತನದ ವಂಶಾವಳಿ ಸುಮಾರು ೨೦೦ ವರ್ಷಗಳಷ್ಟು ಹಿಂದಿನಿಂದ ದೊರೆಯುತ್ತಿದೆ. ಈ ಮನೆತನದ ಹಿರಿಯರು ವೀರಂತಪ್ಪ ಇವರ ಉದರದಲ್ಲಿ ನಾಗಪ್ಪ ಮತ್ತು ಮಡಿವಾಳಪ್ಪ ಎಂಬ ಇಬ್ಬರು ಉದರದಲ್ಲಿ ನಾಗಪ್ಪ ಮತ್ತು ಮಡಿವಾಳಪ್ಪ ಎಂಬ ಇಬ್ಬರು ಗಂಡುಮಕ್ಕಳು ಜನಿಸಿದರು. ಈ ಇಬ್ಬರು ಮಕ್ಕಳನ್ನು ಸದ್ಗುಣಶಾಲಿಗಳನ್ನಾಗಿ ಮಾಡಿ ಶರಣ ಸಂಸ್ಕೃತಿಯ ಸಂಸ್ಕಾರವನ್ನಿತ್ತು ಬೆಳೆಸಿದರು.

ನಾಗಪ್ಪ ಕಾಡಾದಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಸೊಲ್ಲಾಪೂರ ಕನ್ನಡ ಭಾಷೆ, ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿ ಉಳಿಸಿ ಬೆಳೆಸಲು ಇವರು ಸೇವೆ ಅಪಾರ ಅನನ್ಯ.

ವಿಜಾಪೂರ ಹಾಗೂ ಬೆಳಗಾಂವ ಜಿಲ್ಲೆಯ ಪ್ರತಿನಿಧಿಯೆಂದು ಚುನಾಯಿತರಾಗಿ ವಿಧಾನಸಭೆಯ ಸದಸ್ಯರಾಗಿ ೧೯೩೬ ರಿಂದ ೧೯೫೧ರ ವರೆಗೆ ಹನ್ನೆರಡು ವರ್ಷಗಳ ಕಾಲ ಅತ್ಯುತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿ 'ಜನಸೇವೆಯೇ ಜನಾರ್ಧನ ಸೇವೆ' ಯೆಂದು ನಡೆದು ಆಗಿನ ಶಾಸಕರಿಗೆ ಕೊಡುವ ಗೌರವಧನ ಸ್ವೀಕರಿಸಿದೆ, ಕನ್ನಡ, ಮರಾಠಿ, ಇಂಗ್ಲೀಷ ಭಾಷೆಗಳಲ್ಲಿ ಸಂದರ್ಭಕ್ಕನುಗುಣವಾಗಿ ಮೇಲ್ಮನೆಯ ವಿಧಾನ ಸಭೆಯಲ್ಲಿ ಭಾಷಣ ಮಾಡಿ ಜನಸೇವೆಯು ತಮ್ಮ ಮೂಲಕರ್ತವ್ಯವನ್ನು ಅನುಷ್ಠಾನಗೊಳಿಸಿದರು.

ಸೊಲ್ಲಾಪೂರ ನಗರದಲ್ಲಿ ಎತ್ತ ನೋಡಿದತ್ತ ಮರಾಠಿ ಶಾಲೆಗಳೇ, ಕನ್ನಡ ಶಾಲೆಗಳೇ ಇರಲಿಲ್ಲ. ಹೀಗಾಗಿ ಕನ್ನಡ ಭಾಷಾಭಿಮಾನಿಯಾದ ಇವರು ಸೊಲ್ಲಾಪುರದಲ್ಲಿ ಕನ್ನಡ ಭಾಷೆಯ ಉಳಿವಿಗೆ ತುಂಬಾ ಶ್ರಮಿಸಿದರು. ೧೯೩೪ ಪ್ರಪ್ರಥಮವಾಗಿ ಮಹಾರಾಷ್ಟ್ರದ ಸೊಲ್ಲಾಪೂರದಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದ್ದು ಅಲ್ಲದೆ ಅಲ್ಲದೇಕನ್ನಡ ಭಾಷೆ ಕೇವಲ ಪ್ರಾಥಮಿಕ ಶಾಲೆಗೆ ಮಾತ್ರ ಸೀಮಿತವಾಗಕೂಡದೆಂದು ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿ ಮುಗಿಸಿದ ವಿದ್ಯಾರ್ಥಿಗಳ ಮುಂದಿನ ಶಿಕ್ಷಣಕ್ಕಾಗಿ ಮಾಧ್ಯಮಿಕ ಶಾಲಾ ಮಟ್ಟದವರೆಗೂ ಕನ್ನಡ ಭಾಷಾಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಟ್ಟದ್ದು ಅವರ ಕನ್ನಡ ಭಾಷೆಯ ಮೇಲಿದ್ದ ಅಭಿಮಾನಕ್ಕೆ ಸಾಕ್ಷಿಯಾಗಿದೆ. ಇದಲ್ಲದೆ ಶ್ರೀ ಸಂಗಮೇಶ್ವರ ಮಹಾವಿದ್ಯಾಲಯದಲ್ಲಿ ಬಿ.ಎ.ವರಗೆ ಕನ್ನಡ ವಿಷಯವನ್ನು ಬೋಧಿಸುವ ವ್ಯವಸ್ಥೆ ಮಾಡಿದರು. ಸ್ನಾತಕೋತ್ತರ ಮಟ್ಟದಲ್ಲಿಯೂ ಕೊಲ್ಲಾಪೂರ ವಿಶ್ವವಿದ್ಯಾಲಯದಿಂದ ಕನ್ನಡ ವಿಷಯ ತೆಗೆದುಕೊಂಡವರಿಗೆ ಸಂಗಮೇಶ್ವರ ಕಾಲೇಜಿನಲ್ಲಿ ಕನ್ನಡ ಓದಲು, ಕನ್ನಡದಲ್ಲಿ ಪಿ.ಹೆಚ್‌ಡಿ ಅಧ್ಯಯನ ಕೈಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟರು. ಹೀಗೆ ಮಹಾರಾಷ್ಟ್ರದಲ್ಲಿ ಕನ್ನಡ ಭಾಷೆಯು ಒಳ್ಳೆಯ ಅಸ್ತಿತ್ವ, ಪ್ರೋತ್ಸಾಹದಲ್ಲಿ ಒದಗಿಸಿಕೊಟ್ಟ ಕನ್ನಡಾಭಿಮಾನಿಯಾದರು.

ಕನ್ನಡಕ್ಕಾಗಿ ನಾಗಪ್ಪನವರು ಮಾಡಿದ ಸೇವೆ ದೊಡ್ಡದು. ಇದು ಕನ್ನಡ ಭಾಷೆಯ ಕುರಿತು ಅವರಿಗಿದ್ದ ಆಸಕ್ತಿ ಅಭಿಮಾನ ತೋರಿಸುತ್ತದೆ. ಅಲ್ಲದೇ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರಲ್ಲಿ ಇವರಿಟ್ಟ ನಿಸ್ಸೀಮ ಭಕ್ತಿಯ ದ್ಯೋತಕವಾಗಿದೆ. ಕಾರಣ ವಚನ ಸಾಹಿತ್ಯವಿರುವುದು ಕನ್ನಡ ಭಾಷೆಯಲ್ಲಿ ಕನ್ನಡ ಭಾಷೆಯ ಮುಖಾಂತರ ವಚನ ಸಾಹಿತ್ಯ ಪ್ರತಿಯೊಬ್ಬರ ಮನೆ ಮನ ಮುಟ್ಟಲಿ ಎಂಬ ಉದ್ದೇಶದಿಂದಲೂ ಇವರು ಮಹಾರಾಷ್ಟ್ರದಲ್ಲಿ ಕನ್ನಡ ಭಾಷೆಯ ಪ್ರಸಾರಕ್ಕೆ ದುಡಿದರು. ನಾಗಪ್ಪನವರು ತಾವು ಶಿಕ್ಷಣವನ್ನು ಮರಾಠಿ ಭಾಷೆಯಲ್ಲಿ ಪಡೆದು ಕೊಂಡರೂ ಚಿಕ್ಕವರಿದ್ದಾಗಲೇ ಕನ್ನಡ ಲಿಪಿಯನ್ನು ಮನೆಯಲ್ಲಿ ನೋಡಿ ಕಲಿತು ಕನ್ನಡ ಭಾಷೆಯಲ್ಲಿ ಚತುರರಾದರು.

ನಾಗಪ್ಪನವರು ಸಾಮಾಜಿಕ, ಧಾರ್ಮಿಕ ಕಾರ್ಯಾಭಾರ ವ್ಯವಹಾರಿಕ ಕರ್ತವ್ಯ ಈ ಎಲ್ಲವುಗಳ ನಡುವೆಯೂ ನಿತ್ಯ ಲಿಂಗಾರ್ಚನೆ ತಪ್ಪಿಸಿದವರಲ್ಲ, ನಿತ್ಯವೂ ಇಷ್ಟಲಿಂಗ ಪೂಜೆ ಮಾಡದೆ ಬಾಯಲ್ಲಿ ಒಂದು ಹನಿ ನೀರನ್ನೂ ಹಾಕುತ್ತಿರಲಿಲ್ಲ. ಹೀಗಾಗಿ 'ಆಚಾರವೇ ಸ್ವರ್ಗ ಅನಾಚಾರವೇ ನರಕ' ಎಂಬ ಬಸವವಾಣಿಯನ್ನು ಅರಿತು ಸದಾಚಾರ ಸಂಪನ್ನರಾಗಿ ಬಾಳಿದ ಶರಣರೆನಿಸಿದರು.

ಕರ್ನಾಟಕ ಏಕೀಕರಣದ ಹೋರಾಟದಲ್ಲಿ ನಾಗಪ್ಪಣ್ಣ ಕಾಡಾದಿ ಭಾಗವಹಿಸಿದ್ದರು.[೧೮] ಸೊಲ್ಲಾಪೂರವನ್ನು ಕರ್ನಾಟಕಕ್ಕೆ ಸೇರಿಸಲು ದಿವಾನ ಹಬದ್ದೂರ ಲಿಮೆಯೆ ಬಾಬಾಸಾಹೇಬ ವಾರದ ಜಗದೇವಿತಾಯಿ ಲಿಗಾಡೆ, ನಾಗಪ್ಪ ಕಾಡಾದಿ ಇವರೇ ಮೊದಲಾದವರು ಹೋರಾಡಿದರು.[೧೯] ಕನ್ನಡದ ಹೊರಾಟದೊಂದಿಗೆ "ಡಾ॥ ಹಳಕಟ್ಟಿ ಸಂಶೋಧನಾ ಸಂಸ್ಥೆ"ಯನ್ನು ಸೊಲ್ಲಾಪೂರದಲ್ಲಿ ೧೯೨೪ರಲ್ಲಿ ಸ್ಥಾಪಿಸಿದರು. ಕರ್ನಾಟಕದ ಏಕೀಕರಣಕ್ಕಾಗಿ ಪ್ರಯತ್ನಪಟ್ಟವರಲ್ಲಿ ನಾಗಪ್ಪನವರೂ ಒಬ್ಬರು ಕರ್ನಾಟಕದ ಏಕೀಕರಣಕ್ಕಾಗಿ ಸತತವಾಗಿ ಪ್ರಯತ್ನಪಟ್ಟು ರಾಷ್ಟ್ರನಾಯಕರಾದ ಶ್ರೀ ನಿಜಲಿಂಗಪ್ಪ ಮೊದಲಾದ ಪ್ರಮುಖ ಮುಖಂಡರನ್ನು ಸೊಲ್ಲಾಪೂರಕ್ಕೆ ಕರೆಯಿಸಿಕೊಂಡು ಶ್ರೀಧಾರ್ ಸಮಿತಿ ಎದುರು ಸೊಲ್ಲಾಪೂರದ ಗಣ್ಯವ್ಯಕ್ತಿಗಾಳದ ಬ್ಯಾ॥ ಎಂ.ಎಸ್. ಸರದಾರ, ದಿವಾನ ಬಹಾದ್ದೂರ ಲಿಮಯೇ, ಡಾ॥ ಜಯದೇವಿತಾಯಿ ಲಿಗಾಡೆ, ಲಿಂ.ಶ್ರೀ ಕಲ್ಯಾಣಶೆಟ್ಟಿ ವಕೀಲರ ಮೊದಲಾದವರನ್ನು ಕರೆದುಕೊಂಡು ಹೋಗಿ ಗಡಿನಾಡಾದ ಶ್ರೀ ಸಿದ್ಧರಾಮೇಶ್ವರ ತಪೋಭೂಮಿಯಾದ ಸೊಲ್ಲಾಪೂರವು ಎಲ್ಲ ದೃಷ್ಟಿಯಿಂದಲೂ ಕರ್ನಾಟಕದಲ್ಲಿ ದೊಡ್ಡ ವ್ಯಾಪಾರ ಕೇಂದ್ರವೆಂದು ಉಳಿಯಲು ಯೋಗ್ಯವೆಂದು ಪ್ರತಿಪಾದಿಸಿದ ಕೀರ್ತಿ ಮೊಟ್ಟ ಮೊದಲು ನಾಗಪ್ಪನವರಿಗೆ ಸಲ್ಲುತ್ತದೆ.[೨೦]

ನಾಗಪ್ಪಣ್ಣ ಕಾಡಾದಿ ಹಲವು ಸಂಘ–ಸಂಸ್ಥೆ ಸ್ಥಾಪಿಸಿ ಅಪಾರವಾದ ಸಾಮಾಜಿಕ ಸೇವೆ ಸಲ್ಲಿಸಿದ್ದಾರೆ. ಸದಸ್ಯರು, ಚೇಂಬರ ಆಫ್ ಕಾಮರ್ಸ್, ದಿಲ್ಲಿ ಅಧ್ಯಕ್ಷರು ವ್ಯಾಪಾರಿಗಳ ಸಂಘ ಸೊಲ್ಲಾಪೂರ, ಅಧ್ಯಕ್ಷರು, ಪ್ರಾಣಿದಯಾ ಸಂಘ, ಸೊಲ್ಲಾಪೂರ, ಅಧ್ಯಕ್ಷರು ಶ್ರೀ ಸಿದ್ಧರಾಮೇಶ್ವರ ದೇವಸ್ಥಾನ ಪಂಚಕಮಿಟಿ, ಸೊಲ್ಲಾಪೂರ, ಧರ್ಮದರ್ಶಿಗಳು ಶ್ರೀ

ಕಾಡಾದಿ ವೀರಶೈವ ಧರ್ಮಾದಾಯನಿಧಿ ಸೊಲ್ಲಾಪೂರ, ಕಾರ್ಯಾಧ್ಯಕ್ಷರು, ಶ್ರೀ ಸಂಗಮೇಶ್ವರ ಕಲಾ, ವಿಜ್ಞಾನ ವಾಣಿಜ್ಯ ಮಹಾವಿದ್ಯಾಲಯ ಸೊಲ್ಲಾಪೂರ, ಮುಂಬಯಿ ರಾಜ್ಯದ ಮೇಲ್ಮನೆಯ ಪ್ರತಿನಿಧಿ ಹಲವು ಉತನ್ನತವಾದ ಸ್ಥಾನಗಳಲ್ಲಿ ನಾಗಪ್ಪಣ್ಣಕಾಡಾದಿ ಕಾರ್ಯನಿರ್ವಹಿಸಿದರು.

ಕರ್ನಾಟಕವು ಒಂದು ರಾಜ್ಯವಾಗಿ ನವೆಂಬರ್ ೧ ೧೯೫೬ ರಂದು ತಲೆಯೆತಿತ್ತು. ನೂತನ ರಾಜ್ಯವನ್ನು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಸೆಂಟ್ರಲ್ ಕಾಲೇಜಿನ ಆಟದ ಮೈದಾನದಲ್ಲಿ ಉದ್ಘಾಟಿಸಿರು. ನಿಜಲಿಂಗಪ್ಪನವರು ಮಾಡಿದ ಪ್ರಯತ್ನ ಫಲ ಫಲಿಸಿದ್ದಿತು. ಇತ್ತ ನಾಗಪ್ಪ ಕಾಡಾದಿ, ಜಗದೇವಿತಾಯಿ ಲಿಗಾಡೆ, ಬಾಬಾಸಾಹೇಬ ವಾರದ ಮೊದಲಾದ ಸೊಲ್ಲಾಪೂರ ಕನ್ನಡಿಗರ ಹೋರಾಟಕ್ಕೆ ಜಯ ಸಿಗಲಿಲ್ಲ. ಸೊಲ್ಲಾಪೂರ ಅಕ್ಕಲಕೋಟ, ಜತ್ತ ಅಪ್ಪಟ ಕನ್ನಡ ಪ್ರದೇಶಗಳು ಮಹಾರಾಷ್ಟ್ರದಲ್ಲಿ ಉಳಿದುಕೊಂಡವು. ಸೊಲ್ಲಾಪೂರ ಮಹಾರಾಷ್ಟ್ರದಲ್ಲಿ ಉಳಿದುಕೊಂಡರು. ನಾಗಪ್ಪಣ್ಣಕಾಡಾದಿ ತಮ್ಮ ಉಸಿರು ಇರುವವರೆಗೂ ಕನ್ನಡಕ್ಕಾಗಿ ದುಡಿದರು.[೨೧] ಜುಲೈ ೧೯೮೮ ಗುರುವಾರ ಮುಂಜಾನೆ ೫ ಘಂಟೆಗೆ ನಾಗಪ್ಪಣ್ಣ ಕಾಡಾದಿ ಸೆಂಟ–ಮಾರ್ಥಾಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

೮. ಚನ್ನವೀರ ಕಲ್ಯಾಣಶೆಟ್ಟಿ, ದುಧನಿ

೧ ನವೆಂಬರ್, ೧೯೫೬ರಂದು ಮೈಸೂರು ರಾಜ್ಯವು ಉದಯವಾಯಿತಾದರೂ, ಸೊಲ್ಲಾಪೂರ, ಅಕ್ಕಲಕೋಟ, ಜತ್ತ ಪ್ರದೇಶಗಳು ಮಹಾರಾಷ್ಟ್ರದಲ್ಲಿ ಉಳಿದುಕೊಂಡವು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಸೊಲ್ಲಾಪೂರ ಕನ್ನಡಿಗರ ಹೋರಾಟ ವಿಭಿನ್ನವಾದುದು. ಸೊಲ್ಲಾಪೂರ ಕನ್ನಡಿಗರ ಹೋರಾಟ ಪ್ರಾರಂಭವಾದುದು ದುಧನಿ ನಗರದಿಂದ. ದುಧನಿಯ ಚಿನ್ನವೀರ ಕಲ್ಯಾಣಶೆಟ್ಟಿ, ಬಸವಣ್ಣಪ್ಪ, ಸೋಳಸೆ, ರಾಮಲಿಂಗಪ್ಪ ಶೀಲವಂತ, ಗುರುಶಾಂತಪ್ಪ ಹಾವಶೆಟ್ಟಿ, ಕಲ್ಯಾಣಪ್ಪ ಪಾಟೀಲ, ಶಂಕರ ಗಾಡಿ, ಶರಣಪ್ಪ ಪರಮಶೆಟ್ಟಿ ವಿರಕ್ತಮಠದ ಶ್ರೀ ಮ.ನಿ.ಪ್ರ. ಮಹಾಲಿಂಗೇಶ್ವರ ಮಹಾಸ್ವಾಮಿಗಳು (ಕನ್ನಡ ಏಕೀಕರಣ) ಕರ್ನಾಟಕ ಏಕೀಕರಣದಲ್ಲಿ ಹೋರಾಟ ಮಾಡಿದ ದಾಖಲೆ ದುಧನಿಯಲ್ಲಿವೆ.[೨೧] ಸೊಲ್ಲಾಪೂರ–ಅಕ್ಕಲಕೋಟ ಜನತಾ ಪರಿಷತ್ತು ನಾಡಹಬ್ಬ, ಅಖಿಲ ಕರ್ನಾಟಕ ಅಕ್ಕನ ಬಳಗ ಸಮ್ಮೇಳನ ದುಧನಿಯಲ್ಲಿ ಯಶಸ್ವಿಯಾಗಿ ನಡೆಯಿತು. ದುಧನಿ ಕನ್ನಡ ಹೋರಾಟಗಾರರಿಗೆ ಚನ್ನವೀರ ಕಲ್ಯಾಣಶೆಟ್ಟಿ ಅವರ ಬೆಂಬಲವಿತ್ತು. ದುಧನಿ, ಮೈಂದಿರ್ಗಿ, ಅಕ್ಕಲಕೋಟ ಕನ್ನಡ ಹೋರಾಟಗಾರರು ಗುಪ್ತವಾಗಿ ಹಾಲಳ್ಳಿ ಗ್ರಾಮದ ಅಪ್ಪಾಸಾಹೇಬ ಪಾಟೀಲ ಮನೆಯಲ್ಲಿ ಸಭೆ ಕರೆಯುತ್ತಿದ್ದರು.[೨೨] ಚಿನ್ನವೀರ ಕಲ್ಯಾಣಶೆಟ್ಟಿಯವರ ಹೋರಾಟ ಪ್ರಬಲವಾಗುತ್ತಾ ಮೈಂದರ್ಗಿ, ಅಕ್ಕಲಕೋಟ, ಸೊಲ್ಲಾಪೂರಗಳಲ್ಲಿ ಸಭೆ ಕರೆದು ಕನ್ನಡ ಜಗೃತಿ ಮಾಡಿದರು.

ಪಾಟಸ್ಕರ ಹಾಗೂ ಭಟ್ ಸಮಿತಿ ಎದುರಿನಲ್ಲಿ ಸೊಲ್ಲಾಪೂರ, ಅಕ್ಕಲಕೋಟ, ಜತ್ತ ಭಾಗಗಳನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಕರ್ನಾಟಕದ ಹುಲಿ ಎಂದು

ಕರೆಯಿಸಿಕೊಂಡ ಲೋಕಸಭೆಯ ಸದಸ್ಯರಾದ ಶಿವಮೂರ್ತಿ ಸ್ವಾಮಿ ಅಳವಂಡಿಯವರಿಗೆ ಚೆನ್ನವೀರ ಕಲ್ಯಾಣ ಶೆಟ್ಟಿಯವರು ಎಲ್ಲ ದಾಖಲೆಗಳ ವಿವರ ಸಲ್ಲಿಸಿದರು.[೨೩] ಸೊಲ್ಲಾಪೂರ, ಅಕ್ಕಲಕೋಟ, ಜತ್ತ, ಮಹಾರಾಷ್ಟ್ರದಲ್ಲಿ ಉಳಿದರೂ ಕನ್ನಡ ಏಕೀಕರಣ ಚಳುವಳಿ ಬಿಡಲಿಲ್ಲ. ದುಧನಿಯಲ್ಲಿ ಕನ್ನಡ ಪ್ರಾಥಮಿಕ ಶಾಲೆ ಇವರೇ ಪ್ರಾರಂಭಿಸಿದರು.[೨೪] ೧೯೫೦ರಲ್ಲಿ ಸಿದ್ಧರಾಮೇಶ್ವರ ದೇವಾಲಯದ ಬೃಹತ್ ಮಂಟಪದಲ್ಲಿ ಜರುಗಿದ ಶ್ರೀ ಎಂ.ಆರ್.ಶ್ರೀನಿವಾಸ ಅವರ ಅಧ್ಯಕ್ಷತೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಲು ಚನ್ನವೀರ ಕಲ್ಯಾಣಶೆಟ್ಟಿಯವರೇ ಕಾರಣರು.

೧೯೫೫ರಲ್ಲಿ ರಾಜ್ಯ ಪುನರ್ಘಟನಾ ಸಮಿತಿಗೆ ಫಜಲ ಆಲಿ ಕಮಿಷನ್ನಿನ ಬೇಡಿಕೆ ಸಲ್ಲಿಸಲು ಹುಬ್ಬಳ್ಳಿಗೆ ತೆರಳಿದ ಸೊಲ್ಲಾಪೂರ ಶಿಷ್ಯ ಮಂಡಳದ ನೇತೃತ್ವವನ್ನು ವಹಿಸಿದ್ದರು. ಅದರ ಮುಂದಾಳತ್ವ ವಹಿಸಿದ್ದ ಗಣ್ಯರಲ್ಲಿ ನಾಗಪ್ಪ ಕಾಡಾದಿ, ವಾರದ ಚನ್ನಬಸಪ್ಪ, ಜಯದೇ ವಿತಾಯಿ ಲಿಗಾಡೆ, ಡಾ॥ ಸಿದ್ಧನಾಥ ಬಳ್ಳಾರಿ, ಅಬ್ದುಲ್ ಸತ್ತಾರ ದಾವುದ ಸಾಹೇಬ ಮಣಿಯಾರ, ಎಂ.ಎಚ್.ನಿಲುಗಲಮಠ ಮುಂತಾದವರು ಗಡಿ ಪ್ರದೇಶಗಳು ಕರ್ನಾಟಕದಲ್ಲಿ ಸೇರಿಸುವ ಬೇಡಿಕೆ ಸಲ್ಲಿಸಲಾಯಿತು.[೨೫]

೧೯೬೧ರಲ್ಲಿ ಗಡಿ ಕನ್ನಡದ ಸಮಸ್ಯೆಗಳ ನಿವಾರಣೆಗಾಗಿ ಕರ್ನಾಟಕದೊಳಗಿನ ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿದ ೨೦ ಜನ ಸತ್ಯಾಗ್ರಹಿಗಳ ತಂಡದ ನಾಯಕತ್ವವಹಿಸಿಕೊಂಡು ಬೆಂಗಳುರಿನ ವಿಧಾನ ಸೌಧದ ಮುಂದೆ ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾದರು. ಏಳು ದಿವಸ ಪೋಲೀಸ್ ಕಸ್ಟಡಿಯಲ್ಲಿ ಉಳಿದುಕೊಂಡು ನ್ಯಾಯಾಲಯದಲ್ಲಿ ವಿಚಾರಣೆಯಾಗಿ, ಸೆಂಟ್ರಲ್ ಜೇಲಿನಲ್ಲಿ ಸೆರೆಮನೆವಾಸ ಅನುಭವಿಸಿದರು.[೨೬] ಚೆನ್ನವೀರ ಕಲ್ಯಾಣಶೆಟ್ಟಿ ಗಡಿನಾಡ ಕನ್ನಡಿಗರಿಗೆ ನ್ಯಾಯ ದೊರಕಿಸಲು ವಿಭಿನ್ನವಾದ ಹೋರಾಟದ ದಾಖಲೆ ಧರೇಂದ್ರನಾಥ ಬೀದರಕಟೋಟೆ ಅವರ ಮನೆಯಲ್ಲಿವೆ.[೨೭]

ಮಾಜಿ ಪ್ರಧಾನಿಗಳಾದ ಪಂಡಿತ ನೆಹರೂ, ಲಾಲಬಹದ್ದೂರ ಶಾಸ್ತ್ರಿ, ಮುರಾರ್ಜಿ ದೇಸಾಯಿ, ಇಂದಿರಾಗಾಂಧಿ, ಚರಣಸಿಂಗ್, ರಾಜೀವಗಾಂಧಿ ಇವರನ್ನೆಲ್ಲ ಬೆಟ್ಟಿಯಾಗಿ ಸೊಲ್ಲಾಪೂರ ಅಕ್ಕಲಕೋಟ, ಜತ್ತ ಕನ್ನಡಿಗರಿಗೆ ನ್ಯಾಯ ದೊರಕಿಸಿಕೊಡಿ ಎಂದು ಮನವಿ ಮಾಡಿದರು. ಗೋಕಾಕ ಚಳುವಳಿಯಲ್ಲಿ ಭಾಗವಹಿಸಿ ಧಾರವಾಡದಲ್ಲಿ ಉಪವಾಸ ಸತ್ಯಾಗ್ರಹ ಮಾಡಿದರು. ಮಹಾರಾಷ್ಟ್ರದ ಮುಖ್ಯಮಂತ್ರಿ ಶರದ ಪವಾರ ಅವರ ಮುಂದೆ ಪ್ರತಿಭಟಿಸಿ ಬಂಧನಕ್ಕೊಳಗಾದರು. ಕೇಂದ್ರ ಸರಕಾರದ ಶಿಕ್ಷಣಮಂತ್ರಿಗಳಾದ ಬಿ. ಶಂಕರಾನಂದರ ಮನೆಯ ಮುಂದೆ ಸತ್ಯಾಗ್ರಹ, ಗೃಹಮಂತ್ರಿ ಬೂಟಾಸಿಂಗರ ಮನೆಯ ಮುಂದೆ ಪ್ರತಿಭಟನೆ ಮಾಡಿದರು.

೧೯೬೬ರಲ್ಲಿ ಗಡಿಸಲಹಾ ಸಮಿತಿಯ ಸದಸ್ಯರಾಗಿದ್ದರು, ಪ್ರಶಂಸನೀಯ ಕಾರ್ಯ ನಿರ್ವಹಿಸಿದ್ದಾರೆ. ಜನತಾ ಸರಕಾರದ ಕನ್ನಡ ಕಾವೇರಿ ಸಮಿತಿಯ ಸದಸ್ಯರಾಗಿ

ಮಾಡಿದ ಕಾರ್ಯವು ಅತ್ಯಂತ ಸ್ತುತ್ಯಾರ್ಹವಾಗಿದೆ. ಚಿಂದೋಡಿಲೀಲಾ ಅಧ್ಯಕ್ಷತೆಯ ನಾಟಕ ಅಕಾಡೆಮಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಗಡಿನಾಡಿನಲ್ಲಿ ಕನ್ನಡ ಜಾಗೃತಿಯ ಸೇವೆ ಸಲ್ಲಿಸಿದ್ದಾರೆ.

ಗಡಿಕನ್ನಡ ವಿದ್ಯಾರ್ಥಿಗಳಿಗಾಗಿ ಕರ್ನಾಟಕ ಸರಕಾರದಿಂದ ಅನೇಕ ಸೌಲಭ್ಯ-ಸೌಕರ್ಯಗಳು ದೊರೆಯುವಂತೆ ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಈ ಕಾರ್ಯಕ್ಕಾಗಿ ಅಕ್ಕಲಕೋಟ ಜಗಜ್ಯೋತಿ ಬಸವೇಶ್ವರ ಕನ್ನಡ ಯುವಕ ಸಂಘ, ಗಡಿನಾಡ ಯುವ ಬರಹಗಾರ ಬಳಗ ಕೇಂದ್ರ ಸಮಿತಿ, ಮಹಾರಾಷ್ಟ್ರ ಕನ್ನಡ ಶಿಕ್ಷಕ ಸಂಘ, ಕನ್ನಡ ಸೇವಾ ಸಂಘಗಳು ವಿಶೇಷ ಆಸಕ್ತಿಯಿಂದ ಅವರೊಂದಿಗೆ ಕಾರ್ಯ ಮಾಡಿದ ದಾಖಲೆಗಳಿವೆ. ಈ ಸಂಘಟನೆಗಳು ಹುಟ್ಟಿಕೊಂಡಿದ್ದು ಚನ್ನವೀರ ಕಲ್ಯಾಣಶೆಟ್ಟಿ ಅವರ ಪ್ರೇರಣೆಯಿಂದ.

ಅವರ ಅಮೂಲ್ಯ ಸೇವೆ ಪರಿಗಣಿಸಿ ಕರ್ನಾಟಕ ಸರ್ಕಾರ ಅವರಿಗೆ ತಿಂಗಳಿಗೆ ಐದನೂರು ರೂಪಾಯಿ ಮಾಶಾಸನ ನೀಡುತ್ತಿತ್ತು. ಕನ್ನಡ ಸಮಾಜ ಸೇವೆ ಪರಿಗಣಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು. ಚನ್ನವೀರ ಕಲ್ಯಾಣಶೆಟ್ಟಿವರು ಕನ್ನಡ ಹೋರಾಟ ದುಧನಿಯಿಂದ ಪ್ರಾರಂಭಿಸಿ, ಅಕ್ಕಲಕೋಟವನ್ನೇ ಕೇಂದ್ರವನ್ನಾಗಿರಿಸಿಕೊಂಡು ದುಡಿದಿದ್ದಾರೆ. ಅವರು ಕೊನೆಯುಸಿರೆಳೆದದ್ದು ಕೂಡ ಅಕ್ಕಲಕೋಟದಲ್ಲಿ. ಕನ್ನಡ ಕೆಲಸದಲ್ಲಿರುವಾಗಲೇ !! ಅದೋ....... ವಿಶ್ವಕವಿ ಕುವೆಂಪು ಅವರ ಪ್ರೇರಣೆ ಜೀವನದ ಕುರಿತು ಆಲೋಚಿಸುವಂತೆ ಕರೆನೀಡಿ ಸಮಾರಂಭದಲ್ಲಿ ಮಾತಾಡುತ್ತಲೇ; ಅಕ್ಕಲಕೋಟದ ಕಾರ್ಯಕರ್ತರನ್ನು ತಾವೆ ಸ್ವತಃ ಸನ್ಮಾನಿಸುತ್ತೇನೆಂದು ಹಟಮಾಡಿ ಭಾವತುಂದಿಲರಾಗಿ ಹೃದಯಾಘಾತದಿಂದ ನಿಧನರಾದದ್ದು ಎಂಥ ಆಕಸ್ಮಿಕ !!

ಅವರ ನಿಧನದ ನಂತರ ಅನೇಕ ಕನ್ನಡಪರ ಸಂಘಟನೆಗಳು ಶೋಕವ್ಯಕ್ತಪಡಿಸಿವೆ. ಕನಕಪುರದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಬಹಿರಂಗ ಅಧಿವೇಶನಲದಲಿ ಚನ್ನವೀರ ಕಲ್ಯಾಣಶೆಟ್ಟಿಯವರ ನಿಧನಕ್ಕೆ ಶೋಕ ವ್ಯಕ್ತಪಡಿಸಿ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

೯. ದಿ. ಬ್ಯಾ. ಎಂ.ಎಸ್.ಸರದಾರ, ಸೊಲ್ಲಾಪೂರ

ಶಿವಯೋಗಿ ಸಿದ್ಧರಾಮನ ಕಾಲದಲ್ಲಿ ಮತ್ತು ಅನಂತರ ಕೂಡ ಸೊಲ್ಲಾಪೂರ ಪ್ರದೇಶ ಅಚ್ಚ ಕನ್ನಡದ ಕೇಂದ್ರವಾಗಿತ್ತು. ಆದರೆ ವಿಜಯನಗರ ಸಾಮ್ರಾಜ್ಯದ ಪತನದ ನಂತರ ಕನ್ನಡವು ತನ್ನ ಮೊದಲಿನ ಪ್ರಭಾವ ಪ್ರಾಮುಖ್ಯತೆಯನ್ನು ಕಳೆದುಕೊಳ್ಳತೊಡಗಿದಂತೆ ಇತ್ತ ಮರಾಠರು, ಪೇಶ್ವೆಯವರು ರಾಜ್ಯಕಟ್ಟಿ, ಬೆಳೆಸಿ ತಮ್ಮ ಭಾಷೆ, ಸಂಸ್ಕೃತಿಗಳ ಪ್ರಭಾವ ವಲಯವನ್ನು ವಿಸ್ತರಿಸತೊಡಗಿದರು. ತತ್ಫಲವಾಗಿ ಕರ್ನಾಟಕದ ಉತ್ತರದ ಗಡಿ ಹಿಮ್ಮೆಟ್ಟತೊಡಗಿತು. ಹೀಗಾಗಿ ಹಿಂದೆ ಕನ್ನಡದ ಕೇಂದ್ರವಾಗಿದ್ದ ಸೊಲ್ಲಾಪೂರವು ಕ್ರಮೇಣ ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತ ಮರಾಠಿ ಪ್ರಭುತ್ವಕ್ಕೆ ಒಳಗಾಯಿತು. ಅನಂತರ ಕೂಡ ಬ್ರಿಟೀಷರ ಆಳ್ವಿಕೆಯಲ್ಲಿ ಉತ್ತರ ಕರ್ನಾಟಕದ ಒಂದು ದೊಡ್ಡ

ಪ್ರದೇಶವನ್ನು ಮರಾಠಿ ಪ್ರಭಾವದ ಮುಂಬೈ ಇಲಾಖೆಗೆ ಸೇರಿಸಿದ್ದರಿಂದಲೂ ಸೊಲ್ಲಾಪೂರ ನಗರ ಹಾಗೂ ಈ ಪ್ರದೇಶದ ಮೇಲೆ ಮರಾಠಿಯ ಹೆಚ್ಚಿನ ಒತ್ತಡ ಬಿದ್ಧ ಕನ್ನಡ ಭಾಷೆ, ಸಂಸ್ಕೃತಿಗಳು ತುಳಿಯಲ್ಪಟ್ಟವು. ಹೀಗಾಗಿ ಎಲ್ಲಿ ನೋಡಿದರೂ ಮರಾಠಿಯ ವ್ಯವಹಾರ, ಶಿಕ್ಷಣಗಳು ತಾವೇ ತಾವಾಗಿ ಮೆರೆಯತೊಡಗಿದವು.

ಇಂಥ ಸಂದಿಗ್ಧ ಸಮಯದಲ್ಲಿ ಉಜ್ವಲ ಕನ್ನಡಾಭಿಮಾನಿ ಬ್ಯಾ. ಎಂ.ಎಸ್. ಸರದಾರರ ಉ(ಆ)ಗಮವಾಯಿತು. ಮೂಲತಃ ಬೆಳಗಾಂವ ಜಿಲ್ಲೆಯವರಾದ ಸರದಾರರು ನೆಂಟಸ್ಥಿಕೆಯ ನಿಮಿತ್ತ ಸೊಲ್ಲಾಪೂರಕ್ಕೆ ಬಂದು ನಿವಾಸಿಗಳಾದರು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಧುಮುಕಿದ ಮೊದಲಿಗರಾದ ಬ್ಯಾರಿಸ್ಟರ್ ಎಂ.ಎಸ್. ಸರದಾರರು ಈ ಭಾಗದಲ್ಲಿ ಕನ್ನಡ ಶಿಕ್ಷಣ ಹುಟ್ಟು ಹಾಕಿದ ಪ್ರಥಮರು.[೨೮] ಅವರು ಪ್ರಥಮವಾಗಿ ಕೈಕೊಂಡ ಕಾರ್ಯವೆಂದರೆ ಕನ್ನಡ ಶಿಕ್ಷಣಕಾರ್ಯ ೧೯೨೭ರಲ್ಲಿ ಕರ್ನಾಟಕ ಯುನಿಫಿಕೇಶನ್ ಎಂಬ ಸಂಸ್ಥೆ ಸ್ಥಾಪಿಸಿ ಅದರ ಮುಖಾಂತರ ಅತೀ ಪ್ರಯಾಸಪಟ್ಟ ಕನ್ನಡ ಶಾಲೆಗಳನ್ನು ಪ್ರಾರಂಭಿಸಿದರು. ಅವರ ಈ ಕಾರ್ಯದಲ್ಲಿ ಅವರ ನಿಕಟವರ್ತಿಗಳಾದ ದಿ. ರಾಮಸಾಹೇಬ, ಎಸ್.ಎಂ. ಕಲ್ಯಾಣಶೆಟ್ಟಿಯವರು ಸಹಕಾರಿಗಳಾಗಿದ್ದರು. ಸೊಲ್ಲಾಪೂರ ನಗರದಲ್ಲಿ ಪ್ರಾರಂಭಿಸಲ್ಪಟ್ಟ ಕನ್ನಡ ಶಾಲೆಯ ಪ್ರಥಮ ಶಿಕ್ಷಕರೆಮದರೆ, ಶ್ರೀ ನಿಂಬರಗಿ ಮಾಸ್ತರವರು.

ಇಂದು ನಗರದಲ್ಲಿ ಸುಮಾರು ೨೦ ಕನ್ನಡ ಶಾಲೆಗಳು ಆಗಿವೆ. ಅದರಂತೆ ಸೊಲ್ಲಾಪೂರ ದಕ್ಷಿಣ ಹಾಗೂ ಅಕ್ಕಲಕೋಟ ತಾಲ್ಲೂಕುಗಳಲ್ಲಿ ನೂರಾರು ಕನ್ನಡ ಶಾಲೆಗಳಿವೆ. ಮುಂದೆ ಕನ್ನಡ ಮಾಧ್ಯಮಿಕ ಶಾಲೆಗಳು ಕಾಲೇಜು ಮಟ್ಟದ ಶಿಕ್ಷಣವೂ ಲಭ್ಯವಾಗಿ ಕನ್ನಡ ಮಕ್ಕಳಿಗೆ ಸರ್ವ ಶೈಕ್ಷಣಿಕೆ ಅನುಕೂಲತೆಯಾಗಿದೆ.

ಅದರಂತೆ ಸೊಲ್ಲಾಪೂರ ನಗರ ಸಹಿತ ಮಹಾರಾಷ್ಟ್ರದಲ್ಲಿಯ ಕನ್ನಡ ಪ್ರದೇಶವನ್ನು ಕರ್ನಾಟಕದಲ್ಲಿ ಸೇರಬೇಕೆಂಬ ಚಳುವಳಿ ಪ್ರಾರಂಭಿಸಿದರು. ಅದಕ್ಕೆ ಸೊಲ್ಲಾಪೂರ ನಗರದಲ್ಲಿ ಹಲವಾರು ಸಭೆ ಸಮ್ಮೇಳನ ಕರದದರು. ಅನೇಕ ಕನ್ನಡ ಹಿರಿಯ ಮುಂದಾಳುಗಳನ್ನು ಕರೆಯಿಸಿ ಕನ್ನಡ ಪ್ರಚಾರ ಕಾರ್ಯ ತೀವ್ರಗೊಳಿಸಿದರು. "ನಾಡಹಬ್ಬವು ಕೂಡ ಸರದಾರರ ಕಾಲದಿಂದ ಪ್ರಾರಂಭವಾಗಿ ಇಂದಿಗೂ ಅಖಂಡವಾಗಿ ನಡೆಯುತ್ತ ಬಂದಿದೆ". ಪ್ರಾಂತ ಪುನರ್ ರಚನೆಗಾಗಿ ಆಗಾಗ ನೇಮಕಗೊಂಡ ಧಾರಸಮಿತಿ ಜಿ. ವಿ.ಪಿ. ಸಮಿತಿ ಹಾಗೂ ರಾಜ್ಯ ಪುನರಚನಾ ಸಮಿತಿಗಳನ್ನು ಕಂಡು ಕನ್ನಡಿಗರ ಪಕ್ಷದಿಂದ ವಾದಿಸಿದರು. ಹಲವಾರು ಶಿಷ್ಯ ಮಂಡಳಿಗಳನ್ನು ದಿಲ್ಲಿ, ಮುಂಬೈ ಇತ್ಯಾದಿ ಸಂಬಂಧಿತ ರಾಜಧಾನಿ ನಗರಗಳಿಗೆ ಒಯ್ದರು ಅನೇಕರ ಅಭ್ಯಾಸಪೂರ್ಣ ಮನವಿಗಳನ್ನು ಸಿದ್ಧಗೊಳಿಸಿ ಅರ್ಪಿಸಿರು.[೨೯] ಹಲವು ಉತ್ಕೃಷ್ಟ ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆದು ಕನ್ನಡಿಗರ ಪಕ್ಷದ ಬಗ್ಗೆ ನಿಖರವಾದ ಅರಿವನ್ನು ಇತರರಿಗೂ ಮಾಡಿಕೊಟ್ಟರು.

ದಿ. ಸರದಾರರು ಕನ್ನಡ ಕಾರ್ಯ ಕೇವಲ ಗಡಿಭಾಗಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಸಮಗ್ರ ಕರ್ನಾಟಕದಲ್ಲಿಯೇ ವಿಸ್ತೃತಗೊಂಡಿತ್ತು. ಅವರು ಕರ್ನಾಟಕ ಐತಿಹಾಸಿಕ ಸಂಶೋಧನಾ ಕೇಂದ್ರದ ವ್ಯವಸ್ಥಾಪಕ ಸಮಿತಿಯ ಸದಸ್ಯರಾಗಿದ್ದರು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಮುಖ ಕಾರ್ಯಕರ್ತರಾಗಿದ್ದರು. ೧೯೩೭ರಲ್ಲಿ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನಾ ೬ನೇ ಶತ ಸಂಸ್ಥಾಪನಾ ಮಹೋತ್ಸವ ಸಮಿತಿಯ ಆಧಾರ ಸ್ಥಂಭರೂ ಆಗಿದ್ದರು. ಕರ್ನಾಟಕ ರಾಜಕೀಯ ಪರಿಷತ್ತು ಕರ್ನಾಟಕ ಮಹಿಳೆಯರ ರಾಜಕೀಯ ಪರಿಷತ್ತು ೧೯೪೦ ಮತ್ತು ೧೯೫೦ ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳು ಸರದಾರರ ವಿಶೇಷ ಪರಿಶ್ರಮದಿಂದ ಫಲವಾಗಿ ಸೊಲ್ಲಾಪೂರ ನಗರದಲ್ಲಿ ನಡೆದವು.

ಸೊಲ್ಲಾಪೂರದಲ್ಲಿ ಕನ್ನಡ ವಾಚನಾಲಯವನ್ನು ಕೂಡ ಸರದಾರರು ಪ್ರಾರಂಭಿಸಿದರು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ವಿಭಿನ್ನ ರೀತಿಯ ಕಾರ್ಯನಿರ್ವಹಿಸಿದರು. ಇವರ ಕಾರ್ಯವನ್ನು ಮೆಚ್ಚಿ ದಿ. ೨೧-೧೧-೧೯೪೨ ರಂದು ಆಗಿನ ಮುಂಬೈ ಗವರ್ನರ್ ಸರ್ ರೋಜರ ಲಿಮ್ಲೆ ಅವರು ಪ್ರಶಂಶಾತ್ಮಕ ಪತ್ರ ಕಳುಹಿಸಿದರು. ಅದರಂತೆ ೨೩-೦೮-೧೯೪೫ರಂದು ಅಂದಿನ ಗವರ್ನರ್ ಸರ್ ಜಾನಕಾಲವಿಲೆ ಅವರೂ ಕೂಡ ಶ್ರೀ ಸರದಾರರಿಗೆ ವೈಯಕ್ತಿಕ ಪತ್ರ ಬರೆದು ಮುಕ್ತ ಕಂಠದಿಂದ ಪ್ರಶಂಸಿದ್ದಾರೆ. ಸೊಲ್ಲಾಪೂರ ಕನ್ನಡ ಭಾಷೆ, ಕಲೆ, ಸಾಹಿತ್ಯ, ಉಳಿಸಿ, ಬೆಳೆಸಲು ಸರದಾರರು ಪರಿಶ್ರಮವಹಿಸಿದ್ದಾರೆ.

೧೦. ಶ್ರೀಮತಿ ಪಂಚವ್ವತಾಯಿ ಸರದಾರ, ಸೊಲ್ಲಾಪೂರ

ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಸೊಲ್ಲಾಪೂರ ಮಹಿಳೆಯರು ಸಹ ಇದರಲ್ಲಿ ಭಾಗವಹಿಸಿದರು. ಸೊಲ್ಲಾಪೂರದ ಜಯದೇವಿತಾಯಿ ಲಿಗಾಡೆ, ಪಂಚವ್ವತಾಯಿ ಸರದಾರ, ಗೌರಾಬಾಯಿ ವಾರದ, ಸಂಗವ್ವ ಮಡಕಿ, ಗಂಗಾಬಾಯಿ ಕಾಡಾದಿಯವರು ಕನ್ನಡದ ಸಲುವಾಗಿ ಹೋರಾಡಿದರು.[೩೦] ಪತಿ ಸಾರ್ವಜನಿಕ, ಸಾಮಾಜಿಕ ಕಾರ್ಯಗಳಲ್ಲಿ ಸಂಪೂರ್ಣ ಮಗ್ನನಾಗಿ ಮನೆಯನ್ನೇ ಮರೆತಾಗ, ತನ್ನ ಮನೆತನದವನ್ನು ಘನತೆಗೆ ಕುಂದಾಗದಂತೆ ಸಾಗಿಸಿಕೊಂಡು ಹೋಗಿ ಜೊತೆಗೆ ಪತಿಯ ಸರ್ವ ಕಾರ್ಯಗಳಿಗೆ ಬೆಂಬಲವಾಗಿ ನಿಂತು, ಮತ್ತೇನೂ ದಣಿವರಿಯದೆ ಅನೇಕ ಸಾರ್ವಜನಿಕ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದ ಪತ್ನಿಯರು ನಮ್ಮ ನಾಡಿನಲ್ಲಿ ಅದೆಷ್ಟು ಜನರಿದ್ದಾರೆ?

ಆದರೆ ಸೊಲ್ಲಾಪೂರ ನಗರದಲ್ಲಿ ಮಾತ್ರ ಒಬ್ಬರಿದ್ದರು. ಅವರೇ ಶ್ರೀಮತಿ ಪಂಚವ್ವತಾಯಿ ಸರದಾರ ದಿ. ಬ್ಯಾ. ಎಂ.ಎಸ್.ಸರದಾರರ ಧರ್ಮಪತ್ನಿ ಪಂಚವ್ವತಾಯಿ ಕನ್ನಡದ ಯಾವುದೇ ಕಾರ್ಯದಿಂದ ಶ್ರೀಮತಿಯವರು ದೂರ ಉಳಿಯುವಂತಿಲ್ಲ, ಸಿರಿವಂತ ಮನೆತನದಲ್ಲಿ ಜನಿಸಿ, ಪ್ರತಿಭಾವಂತ ಪತಿಯ ಕೈಹಿಡಿದ ಶ್ರೀಮತಿಯ

ಜೀವನ ಅತೀ ಸಾದಾ, ಯಾರಾದರೂ ಅಪರಿಚಿತರಿಗೆ ಅವರನ್ನು ತೋರಿಸಿ "ಇವರು ಬಾರಿಸ್ಟರರ ಪತ್ನಿ" ಎಂದು ಹೇಳಿದರೆ ನಂಬುತ್ತಿರಲಿಲ್ಲ. ಅಷ್ಟು ಅವರ ವೇಷಭೂಷಣ ಸಾದಾ ಅದರಂತೆ ಅವರ ನಡೆ ನುಡಿ ಕೂಡ.

ಅಕ್ಕನ ಬಳಗ, ಮಹಿಳಾ ಜ್ಞಾನಮಂದಿರ ಇತ್ಯಾದಿ ಕಾರ್ಯಗಳಲ್ಲಿ ಪ್ರಮುಖ ಪಾತ್ರ ಶ್ರೀಮತಿಯವರದು. ಶಿಕ್ಷಣ ಭಾಷೆ, ಮರಾಠಿಯಾದರು ಮುಂದೆ ಕನ್ನಡವನ್ನು ರೂಢಿಸಿಕೊಂಡು, ವಚನಶಾಸ್ತ್ರ ಅಭ್ಯಸಿಸಿ ಸಭೆ ಸಮಾರಂಭಗಳಲ್ಲಿ ಸಹಸ್ರಾರು ಜನ ನೆರೆದಾಗ ಕೂಡ ನಿರರ್ಗಳವಾಗಿ ಕನ್ನಡದಲ್ಲಿ ಮಾತನಾಡುವ ಕಲೆ ಕರಗತ ಮಾಡಿಕೊಂಡರು.

೧೧. ನಾಗಪ್ಪಣ್ಣ ಅಬ್ದುಲಪುರಕರ, ಸೊಲ್ಲಾಪೂರ

ಜನನ: ೩೦-೧೧-೧೮೮೬

ಮರಣ: ೨೫-೦೭-೧೯೫೬

ನಾಗಪ್ಪಣ್ಣ ಅಬ್ದುಲಪುರಕರ ೩೦ ನವಂಬರ್ ೧೮೮೬ರಲ್ಲಿ ಸೊಲ್ಲಾಪೂರದಲ್ಲಿ ಜನಿಸಿದರು. ಪ್ರಾಮಾಣಿಕ, ಸಚ್ಚಾರಿತ್ರ್ಯ, ಧೀರೋದಾತ್ತತೆ, ಪರೋಪಕಾರದಂಥ ಎಲ್ಲ ಗುಣಗಳು ಇವರಲ್ಲಿ ಬಾಲ್ಯದಿಂದಲೇ ರಕ್ತಗತವಾಗಿ ಬಂದದ್ದರಿಂದಲೇ ಅವರು ಮುಂದೆ ಆದರ್ಶ ವ್ಯಕ್ತಿಗಳೆಂದು ಜನರ ಕಣ್ಮಣಿಗಳಾಗಿ ಬಾಳಲು ಸಾಧ್ಯವಾಯಿತು. ಸೊಲ್ಲಾಪೂರ ಮಹಾನಗರವಾಸಿಗಳಿಗೆ ಮತ್ತು ಸಿದ್ಧೇಶ್ವರ ದೇವಸ್ಥಾನಕ್ಕೆ ಇವರು ಸಲ್ಲಿಸಿದ ಸೇವೆ ಬಹುರೂಪಿಯಾದಂತೆ ಅಮರವೂ ಆಗಿದೆ.

ಶ್ರೀ ಸಿದ್ಧೇಶ್ವರ ದೇವಸ್ಥಾನದ ಸರ್ವಾಂಗೀಣ ಪ್ರಗತಿಯ ಶ್ರೇಯಸ್ಸು ನಾಗಪ್ಪಣ್ಣನವರಿಗೆ ಸಲ್ಲುತ್ತದೆ. ಸಿದ್ಧೇಶ್ವರ ಕನ್ನಡ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆಯನ್ನು ಇವರು (ಸ್ಥಾಪಿಸಿದರು) ಪ್ರಾರಂಭಿಸಿದರು.[೩೧] ೧೯೨೪ ರಿಂದ ೧೯೨೭ರ ವರೆಗೆ ಮುಂಬಯಿ ಪ್ರಾಂತದ ವಿಧಾನ ಪರಿಷತ್ತಿನ ಸದಸ್ಯ (ಎಂ.ಎಲ್.ಸಿ.) ರಾಗಿದ್ದರು. ಕರ್ನಾಟಕ ಚೆಂಬರ್ ಆಫ್ ಕಾಮರ್ಸ್‌ದ ಅಧ್ಯಕ್ಷರಾಗಿ ಹತ್ತು ವರ್ಷ ಸೇವೆ ಸಲ್ಲಿಸಿದ್ದರು. ೧೯೩೫ರಂದು ಸೊಲ್ಲಾಪೂರ ನಗರವಾಸಿಗಳು ನಗರಾಧ್ಯಕ್ಷರೆಂದು ಆಯ್ಕೆ ಮಾಡಿ "ಪ್ರಮುಖ ಲೋಕ ಪ್ರತಿನಿಧಿ" ಎಂದು ಅನೇಕಸಲ ನಗರಾಧ್ಯಕ್ಷ ಸ್ಥಾನ ಅಲಂಕರಿಸಿ ಸೊಲ್ಲಾಪೂರಕ್ಕಾಗಿ ಅಮೂಲ್ಯ ಸೇವೆ ಸಲ್ಲಿಸಿ ಜನರ ಪ್ರೀತ್ಯಾಧರಗಳನ್ನು ಗಳಿಸಿ ಕೀರ್ತಿಶಾಲಿಗಳಾದರು.

ಬ್ಯಾರಿಸ್ಟರ ಎಂ.ಎಸ್. ಸರದಾರೊಡನೆ ಕನ್ನಡದ ಹೋರಾಟ ಮಾಡಿದವರೆಂದರೆ –ನಾಗಪ್ಪಣ್ಣ ಕಾಡಾದಿ, ನಾಗಪ್ಪಣ್ಣ ಅಬ್ದುಲಪೂರಕರ, ಬಾಬಾ ಸಾಹೇಬ ವಾರದ, ರಾಮಸಾಹೇಬ ಕಲ್ಯಾಣಶೆಟ್ಟಿ ವಕೀಲರು ಹಲವು ಗಣ್ಯರು ಭಾಗವಹಿಸಿದರು.[೩೨] ಕಲಬುರ್ಗಿಯ ಶ್ರೀ ಶರಣಬಸವೇಶ್ವರ ದೇವಾಲಯದ ಮೇಲೆ ಸುವರ್ಣಕಳಸ ಏರಿಸಲು ನಿಜಾಮ ಸರಕಾರದ ವಿರೋಧವನ್ನು ಲೆಕ್ಕಿಸದೆ "ಬಂದದ್ದು ಬರಲಿ ಶ್ರೀ ಗುರುವಿನ

ಕೃಪೆಯೊಂದಿರಲಿ" ಎಂದು ದಿಟ್ಟತನದಿಂದ ಕಾರ್ಯತತ್ಪರರಾಗಿ ಕೊನೆಗೆ ಯಶಸ್ಸನ್ನು ಸಂಪಾದಿಸಿರು. ಇದು ಇವರ ಜೀವನದಲ್ಲಿಯೇ ಅತ್ಯಂತ ಉಲ್ಲೇಖನೀಯ ಕಾರ್ಯವೆಂದು ಹೇಳಬಹುದು. ಧ್ಯೇಯ ಶುದ್ಧವಾದರೆ ದೈವದ ಲೋಕದ ಸಹಾಯ ದೊರಕುವದೆಂಬುದಕ್ಕೆ ಅಣ್ಣನವರ ಜೀವನವೇ ಸಾಕ್ಷಿ. ಇಂಥಹ ಪುಣ್ಯಾತ್ಮರು ೨೫ ಜುಲೈ ೧೯೫೬ರಂದು ಶಿವಾಧೀನರಾದರು.

೧೨. ದಿ.ಎಸ್.ಎಂ. ಕಲ್ಯಾಣಶೆಟ್ಟಿ, ಸೊಲ್ಲಾಪೂರ

ಸೊಲ್ಲಾಪೂರ ಕನ್ನಡಿಗರಿಗೆ ಜಾಗ್ರತಗೊಳಿಸುವಲ್ಲಿ ದಿ. ಎಸ್.ಎಂ.ಕಲ್ಯಾಣಶೆಟ್ಟಿ ಪ್ರಮುಖರು. ಚಿನ್ನದ ಮೊಟ್ಟೆ ಇಡುವ ವಕೀಲಿ ವೃತ್ತಿ ನಿರ್ಲಕ್ಷಿಸಿ, ಸಮಾಜ ಜಾಗೃತಿಯ ಕಾರ್ಯ ಕೈಗೊಂಡು ಬರಿ ನಿಷ್ಠುರತೆಯನ್ನು ಪ್ರತಿಯಾಗಿ ಪಡೆದುರ. ಹೀಗಾಗಿ ಅನೇಕ ಕರ್ಮಠರು ಇವರಿಗೆ ವೈರಿಯೇ ಆದರು. ಶ್ರೀ ಕಲ್ಯಾಣಶೆಟ್ಟಿಯವರು ಜಗ್ಗಲಿಲ್ಲ. ತಮ್ಮ ಮಾರ್ಗದಿಂದ ಕಿಂಚಿತ್ ಕೂಡ ವಿಚಲಿತರಾಗಲಿಲ್ಲ.

ಅದರಂತೆ ಇವರು ಗಡಿನಾಡಿನ ಕಟ್ಟಾ ಕರ್ನಾಟಕ ವಾದಿಗಳಾಗಿದ್ದರು. ದಿ. ಬ್ಯಾ. ಸರದಾರರೊಂದಿಗೆ ಸೇರಿ, ಅವಿರತವಾಗಿ ಕನ್ನಡ ಭಾಷೆ, ಸಂಸ್ಕೃತಿಗಳ ಬಗ್ಗೆ ದುಡಿದಿದ್ದಾರೆ. ೧೯೪೦ರಿಂದ ಕರ್ನಾಟಕದ ಏಕೀಕರಣಕ್ಕಾಗಿ ದುಡಿದಿದ್ದಾರೆ.[೩೩]

ಧಾರ್ಮಿಕ ಕ್ಷೇತ್ರಗಳಲ್ಲಿಯೂ ಇವರು ದುಡಿದರು. ೧೯೪೫ರಿಂದ ೧೯೫೨ರ ವರೆಗೆ ಅಖಿಲ ಭಾರತ ವೀರಶೈವ ಮಹಾಸಭೆಯ ಪ್ರಧಾನ ಕಾರ್ಯದರ್ಶಿಗಳಾಗಿ ಕಾರ್ಯ ಮಾಡಿದ್ದಾರೆ. ಅಂದಿನ ಭಾರತೀಯ ಸೈನ್ಯದಲ್ಲಿ "ಲಿಂಗಾಯತ ಬಟಾಲಿಯನ್ ಮೂರ್ತ ಸ್ವರೂಪಕ್ಕೆ ಬಂದುದು ಅವರ ಪರಿಶ್ರಮ ಫಲವೇ ಅಂತನೇ ಅವರನ್ನು ಆಗ "ರಿಕ್ರುಟಿಂಗ್ ಆಫೀಸರ್" ಅಂತಾ ನೇಮಿಸಲಾಯಿತು. ಮುಂದೆ ಅವರಿಗೆ "ರಾವಸಾಹೇಬ" ಎಂಬ ಗೌರವ ಪದವಿ ಕೊಡಲಾಯಿತು"

ಶಿಕ್ಷಣ ಪ್ರೇಮಿಗಳಾದ ಕಲ್ಯಾಣಶೆಟ್ಟಿಯವರು ನಗರದಲ್ಲಿ ಅನೇಕ ಕನ್ನಡ ಶಾಲೆಗಳನ್ನು ಸ್ಥಾಪಿಸಲು ಸಹಕರಿಸಿದರಲ್ಲದೆ, ಹಲವು ವರ್ಷ ಪುಣೆ ವಿಶ್ವವಿದ್ಯಾಲಯದ ಸಿನೆಟ ಸದಸ್ಯರು ಕೂಡ ಆಗಿದ್ದರು.

ಅವರ ಹರಿತವಾದ ಲೇಖನಿಯ ಅನುಭವ ಸೊಲ್ಲಾಪೂರ ನಾಗರೀಕರಿಗೆ ಸಾಕಷ್ಟು ಸ್ವತಃ ಸಾಹಿತಿಗಳಾದ ಅವರು "ಮಾನಾಪಮಾನ, ಪುಣ್ಯಪ್ರಭಾ" ನಾಟಕಗಳನ್ನು ರಚಿಸಿದರು. ಅದರಂತೆ ಬಸವಣ್ಣನವರ ದಿವ್ಯ ಜೀವನ, ಶ್ರೀ ಸಿದ್ಧರಾಮೇಶ್ವರ ಚರಿತ್ರೆ, ಶ್ರೀ ಅಕ್ಕಮಹಾದೇವಿಯ ಚರಿತ್ರೆ, ಬಸವಭೋಧ ಇತ್ಯಾದಿ ಗ್ರಂಥಗಳನ್ನು ಮರಾಠಿಯಲ್ಲಿ ಬರೆದು ಪ್ರಸಿದ್ಧಿಸಿದರು. ಹೀಗೆ ನೂರು ಬಗೆಯ ಸಮಾಜ ಸೇವೆ, ಹೋರಾಟ ಮಾಡಿ ದಿ.ಎಸ್.ಕಲ್ಯಾಣಶೆಟ್ಟಿಯವರು ವೈಭವ ಜೀವನಕ್ಕೆ ತಿಲಾಂಜಲಿ ಇತ್ತು ದಾರಿದ್ರ್ಯವನ್ನೇ ಅಪ್ಪಿಕೊಂಡರು.

೧೩. ಆರ್. ಎಚ್. ಭಾರದ್ವಾಜ, ಸೊಲ್ಲಾಪೂರ

ಜನನ: ೧೧-೦೭-೧೯೦೯

ಮರಣ: ಮಾಹಿತಿ ಲಭ್ಯವಿಲ್ಲ

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಧುಮುಕಿದ ಮೊದಲಿಗರಾದ ಬ್ಯಾರಿಸ್ಟರ ಎಂ.ಎಸ್.ಸರದಾರರೊಂದಿಗೆ ಆರ್.ಎಚ್.ಭಾರದ್ವಾಜ, ಬಿ.ಅನ್ನಪೂರ್ಣ, ಬಸವರಾಜ ಭೇಮದೆ ಮೊದಲಾದವರು ಹೋರಾಡಿದರು.[೩೪] ಮಹಾರಾಷ್ಟ್ರದ ಮಧುರವಾದ "ಕನ್ನಡ" ಶಬ್ದಕ್ಕೆ ಹಾಗೂ ಕನ್ನಡಿಗರಿಗೆ ಉಪೇಕ್ಷದ ಪರಮಾವಧಿ ಭಾವನೆಯಿಂದ "ಕಾನಡಿ" ಎನ್ನಲಾಗುತ್ತಿದೆ. ಭಾರತೀಯ ರಾಜ್ಯಘಟನೆ ಕೂಡ ಅಧಿಕೃತವೆಂದು ಒಪ್ಪಿದ ಹದಿನಾಲ್ಕು ಭಾಷೆಗಳಲ್ಲಿ ಒಂದಾದ ಕನ್ನಡ ಭಾಷೆಗೆ ಶುದ್ಧವಾಗಿ "ಕನ್ನಡ"ವೆಂದೇ ಉಲ್ಲೇಖಿಸಿದೆ. ಆದರೆ ಅದೇ ರಾಜ್ಯ ಘಟನೆಯ ಅಧೀನಕ್ಕೊಳಪಟ್ಟ ಮಹಾರಾಷ್ಟ್ರ ಶಾಸನ ಮರಾಠಿ ವೃತ್ತಪತ್ರ ಹಾಗೂ ಮರಾಠಿ ನಾಗರೀಕರು ಮಾತ್ರ ಈ ಪೂರ್ವದಂತೆಯೇ ಉಪೇಕ್ಷೆಯಿಂದ "ಕಾನಡಿ ಎಂದೆ ನುಡಿಯುತ್ತ ಬಂದರು ಆದರೆ ಈ ಅವಹೇಳನ ನುಡಿಯ ವಿರುದ್ಧ ಅದೇಕೋ ಕನ್ನಡಿಗರು ನಿರ್ಲಕ್ಕವಾಗುಳಿದರು.

ಸೊಲ್ಲಾಪೂರ ಕರ್ನಾಟಕದಲ್ಲಿ ಸೇರಿಸಲು ಹೋರಾಡಿದರು. ಏಕೀಕರಣ ಸಮಿತಿಗೆ ಸೊಲ್ಲಾಪೂರ ಉಳಿಸಿಕೊಳ್ಳಲು ಆಗಲಿಲ್ಲ. ಸೊಲ್ಲಾಪೂರ ಕನ್ನಡಿಗರು ಮಹಾರಾಷ್ಟ್ರದಲ್ಲಿ ಉಳಿದರು ಕನ್ನಡ ಹೋರಾಟ ಬಿಡಲಿಲ್ಲವೆಂಬುದಕ್ಕೆ ಶ್ರೀ ಆರ್.ಹೆಚ್. ಭಾರದ್ವಾಜರೇ ಸಾಕ್ಷಿ. ಸೊಲ್ಲಾಪೂರ ನಗರವಾಸಿ ವಯೋವೃದ್ಧ ಶ್ರೀ ರಾಘವೇಂದ್ರ ಭಾರದ್ವಾಜ ಅವರು ಕೆಚ್ಚಿನಿಂದ ಹೋರಾಟ ಪ್ರಾರಂಭಿಸಿದರು.

ಅವರು ಈಗ ಕೆಲವು ವರ್ಷಗಳಿಂದ ಮಹಾರಾಷ್ಟ್ರ ಶಾಸನದೊಂದಿಗೆ ಉಗ್ರ ಪ್ರತಿಭಟನೆ, ಪತ್ರವ್ಯವಹಾರ ಪ್ರಾರಂಭಿಸಿದರು. ಮಹಾರಾಷ್ಟ್ರ ಶಾಸನದ ವಿವಿಧ ಅಂಗಗಳಾದ ಶಿಕ್ಷಣ ಸಚಿವಾಲಯ ಮುಂಬೈ ಡೈರೆಕ್ಟರ ಶಿಕ್ಷಣ ಖಾತೆ ಪುಣೆ, ಭಾಷಾ ಸಂಚಾಲಕ ಮಹಾರಾಷ್ಟ್ರ ರಾಜ್ಯ, ಡೈರೆಕ್ಟರ್ ಶಿಕ್ಷಣ ಖಾತೆ ಪುಣೆ, ಭಾಷಾ ಸಂಚಾಲಕ ಮಹಾರಾಷ್ಟ್ರ ರಾಜ್ಯ, ಡೈರೆಕ್ಟರ್ ಲೆಂಗವೇಜಿಸ್ ಮುಂಬೈ, ಮಹಾರಾಷ್ಟ್ರ ಸಾಮಾನ್ಯ ಶಾಸನ, ಪ್ರಶಾಸನ ಖಾತೆ ಮುಂಬೈ, ಮಹಾರಾಷ್ಟ್ರದ ವಿಶ್ವವಿದ್ಯಾಲಯಗಳು, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಅದರಂತೆ ಅಲಹಾಬಾದಿನ ಕಮಿಶನರ್ ಫೋರ್ ಲಿಂಗ್ವೇಷ್ಟಿಸ್ ಮೈನಾರಿಟಿ ಅವರೊಂದಿಗೂ ೨-೩ ವರ್ಷಗಳ ದೀರ್ಘ ಪತ್ರ ಮುಖಿ ಹೋರಾಟ ಪ್ರಾರಂಭಿಸಿದರು. ಅಲ್ಲದೇ ಇನ್ನೂ ಅನೇಕ ಮೇಲೆ ಕೆಳಗಿನ ಸಂಬಂಧಿತ ಆಫೀಸುಗಳಿಗೂ ಹಲವಾರು ಪತ್ರ ಕಳಿಸಿದರು.

ಕೊನೆಗೆ ಶ್ರೀ ಭಾರದ್ವಾಜರ ಈ ತೀವ್ರ ಹೋರಾಟಕ್ಕೆ ಯಶಸ್ಸು ದೊರೆಯಿತು. ಮಹಾರಾಷ್ಟ್ರ ಶಾಸನವು ಎರಡು ವರ್ಷಗಳ ಹಿಂದೆ ಇನ್ನು ಮುಂದೆ "ಕಾನಡಿ" ಎಂದು

ಉಲ್ಲೇಖಿಸದೆ, ಶುದ್ಧವಾಗಿ "ಕನ್ನಡ" ವೆಂದೇ ಕರೆಯಲು ಗೆಝೆಟಿಯರ್‌ನಲ್ಲಿ ಪ್ರಸಿದ್ಧಿಸಿ ಆದೇಶವಿತ್ತರು ಮತ್ತು ಈ ಸಂಗತಿಯನ್ನು ೧೯೮೯ರಲ್ಲಿ ಶ್ರೀ ಭಾರದ್ವಾಜರಿಗೆ ಪತ್ರದೆಂದು ತಿಳಿಸಿದರು.[೩೫]

ಶ್ರೀ ಭಾರದ್ವಾಜರು ಸರಕಾರಿ ಆಜ್ಞೆ ಹೋರಾಟದ ನಂತರ ಕೂಡ, ಸ್ವಸ್ಥ ಕೊಡದೇ ಆಗಾಗ ಅಪ್ಪಿತಪ್ಪಿ "ಕಾನಡಿ" ಎಂದು ಎಲ್ಲಿಯಾದರೂ ಉಲ್ಲೇಖಿತವಾದರೆ ಅದರ ವಿರುದ್ಧ ಕೂಡಲೇ ಪ್ರತಿಭಟನೆ ಸ್ವತಃ ನಡೆಸುತ್ತಿದ್ದಾರೆ. ಇಂಥ ಉಜ್ವಲ ಕನ್ನಡಾಭಿಮಾನಿಗಳಾದ ಶ್ರೀ ರಾಘವೇಂದ್ರ ಹಯವದನ ಭಾರದ್ವಾಜ ಅವರು ಮೂಲ ಧಾರವಾಡದವರು. ೧೯೦೯ ಜುಲೈ ೧೧ ರಂದು ಅವರ ಜನ್ಮ, ಶಿಕ್ಷಣ, ಉಚ್ಚ ಶಿಕ್ಷಣಗಳು, ಧಾರವಾಡ, ಬೆಳಗಾಂವ, ವಿಜಾಪೂರಗಳಲ್ಲಾಗಿದೆ. ಮುಂದೆ ಬ್ಯಾಂಕಿನ ವ್ಯವಸಾಯ ನಿಮಿತ್ತ ೧೯೪೨ರಲ್ಲಿ ಸೊಲ್ಲಾಪೂರಕ್ಕೆ ಬಂದು ಇಲ್ಲಿಯೇ ಸ್ಥಾಯಿಕರಾಗಿದ್ದಾರೆ. ನೌಕರಿಯಿಂದ ನಿವೃತ್ತರಾಗಿದ್ದರೂ ಕನ್ನಡಪರ ಕೆಲಸಗಳಲ್ಲಿ ತೊಡಗಿದ್ದಾರೆ.

೧೪. ಡಾ॥ ಸಿದ್ಧನಾಥ ಬಳ್ಳಾರಿ, ಸೊಲ್ಲಾಪೂರ

ಡಾ॥ ಸಿದ್ಧನಾಥ ಬಳ್ಳಾರಿ ಗಡಿನಾಡ ಕನ್ನಡಿಗರಲ್ಲಿಯ ಮೇರು ಸದೃಶ ವ್ಯಕ್ತಿತ್ವ ಹೊದಿದ್ದರು. ತಮ್ಮ ನರನಾಡಿಗಳಲ್ಲಿ ಕನ್ನಡ ಮತ್ತು ಕರ್ನಾಟಕಾಭಿಮಾನವನ್ನು ತುಂಬಿಕೊಂಡವರು ಸೊಲ್ಲಾಪೂರ, ಅಕ್ಕಲಕೋಟವನ್ನು ಮತ್ತು ಜತ್ತ ಮೊದಲಾದ ಅಪ್ಪಟ ಕನ್ನಡ ಭಾಗಗಳು ಕರ್ನಾಟಕಕ್ಕೆ ಸೇರಲೇಬೇಕೆಂದು ಅಜೀವ ಹೋರಾಟ ನಡೆಸಿದರು.[೩೬] ಬ್ಯಾರಿಸ್ಟರ ಎಂ.ಎಸ್. ಸರದಾರರೊಡನೆ ಇದ್ದುಕೊಂಡು ಹೋರಾಟ ಮಾಡಿದವರೆಂದರೆ ನಾಗಪ್ಪಣ್ಣಕಾಡಾದಿ. ಬಾಬಾ ಸಾಹೇಬ ವಾರದ, ಕುಂಭಾರಿಯ ಮಹಾದೇವಪ್ಪ ರಾಮಪುರೆ, ಡಾ॥ ಸಿದ್ಧನಾಥ ಬಳ್ಳಾರಿ, ಕೆ.ಎಂ.ಲಂಬಿ ಇವರೆಲ್ಲರು ಕನ್ನಡಕ್ಕೆ ಪೋಷಕ ವಾತಾವರಣ ಕಲ್ಪಿಸಿದ ಹಿರಿಯರು.[೩೭] ಮಹಾರಾಷ್ಟ್ರ ಸರಕಾರ ಮತ್ತು ಮರಾಠಿ ಧುರೀಣರು ಕೊಟ್ಟ ಕಿರುಕುಳ ಧೈರ್ಯದಿಂದ ಕೆಚ್ಚೆದೆಯಿಂದ ಎದುರಿಸಿದರು. ಕನ್ನಡದ ಕವಿಯತ್ರಿ ಜಯದೇವಿ ತಾಯಿಯವರ ಬಲಗೈ ಬಂಟರಾಗಿ ಸದಾಕಾಲ ಕನ್ನಡ; ಕರ್ನಾಟಕ; ಸೊಲ್ಲಾಪೂರವು ಕರ್ನಾಟಕದ ಹೃದಯ ನಗರಿ ಎನ್ನುತ್ತಲೇ ಅನೇಕ ಹೋರಾಟಗಳ ಮುಂಚೂಣಿಯಲ್ಲಿ ನಿಂತರು. ಇವರಿಗೆ ಜಯದೇವಿತಾಯಿ ಲಿಗಾಡೆಯವರ ಪ್ರೋತ್ಸಾಹ ನಿರಂತರವಾಗಿತ್ತು. 'ಕನ್ನಡ ಕೋಟೆ' ಎಂಬ ಹೆಸರಿನ ಸಂಘಟನೆಯಲ್ಲಿ ಸೊಲ್ಲಾಪೂರ ಮತ್ತು ಸುತ್ತಮುತ್ತಲ ಕನ್ನಡಿಗರನ್ನು ಒಂದೆಡೆ ಸೇರಿಸಿದರು. ಗಟ್ಟಿಮುಟ್ಟಾದ ದೇಹದಾಢ್ಯ ಪಡೆದಿದ್ದ ಡಾ॥ ಸಿದ್ಧನಾಥ ಬಳ್ಳಾರಿಯವರು ಕನ್ನಡದ ಕಲರವ ಸೊಲ್ಲಾಪೂರದಲ್ಲಿ ಕೇಳಿ ಬರುವಂತೆ ಮಾಡಿದರು.

ನಾಡಹಬ್ಬ, ಕರ್ನಾಟಕ ಏಕೀಕರಣ ಹೀಗೆ ಹಲವು ಉತ್ಸಗಳನ್ನು ಅಣಿಗೊಳಿಸಿ ಕನ್ನಡ ನಾಡಿನ ಖ್ಯಾತನಾಮರವನ್ನು ಕರೆಯಿಸಿ ಸೊಲ್ಲಾಪೂರವನ್ನು ಕನ್ನಡಮಯವಾಗಿಸಲು ಅಹರ್ನಿಶ ಶ್ರಮಿಸಿದರು. ಕನ್ನಡಿಗರ ಆರಾಧ್ಯ ದೈವವೆನಿಸಿದ ಸೊಲ್ಲಾಪೂರದ ಶಿವಯೋಗಿ

ಸಿದ್ಧರಾಮೇಶ್ವರರ ವಿಶಾಲ ದೇವಸ್ಥಾನದ ಆವರಣವನ್ನು ಕನ್ನಡ ಮತ್ತು ಕರ್ನಾಟಕ ಕನ್ನಡಿಗರೊಂದಿಗೆ ತೆಲಗು ಭಾಷಿಕರ ಸಹಯೋಗ ಪಡೆದರು. ಸೊಲ್ಲಾಪೂರದಲ್ಲಿ ಕನ್ನಡಿಗರು ಮತ್ತು ಭಾಷಿಕರು ಸಂಖ್ಯೆಯಲ್ಲಿದ್ದಾರೆ. ಮರಾಠಿ ಭಾಷಿಕರು ಅತ್ಯಲ್ಪ ಸಂಖ್ಯೆಯಲ್ಲಿದ್ದಾರೆ. ಸೊಲ್ಲಾಪೂರ ನಗರವು ಕರ್ನಾಟಕದ ಅವಿಭಾಜ್ಯ ಅಂಗವೆಂಬ ಹೋರಾಟದ ಮುಂಚೂಣಿಯಲ್ಲಿದ್ದರೂ ಮರಾಠಿ ಭಾಷಿಕರೊಂದಿಗೂ ಮಿತ್ರತ್ವ ಹೊಂದಿದ್ದರು. ನಾಡು ನುಡಿ ಬಗೆಗೆ ಮಾತನಾಡುವಾಗ ಕೆಚ್ಚು ತೋರುತ್ತಿದ್ದರು ಆದರೆ ಯಾರೊಂದಿಗೂ ದ್ವೇಷ ಸಾಧಿಸದೆ ಎಲ್ಲರ ಪ್ರೀತಿ ಸಂಪಾದಿಸಿದ ಅಪರೂಪದ ವ್ಯಕ್ತಿತ್ವ ಡಾ॥ ಸಿದ್ಧನಾಥ ಬಳ್ಳಾರಿಯವರದು.

ವೈ.ಬಿ.ಚವ್ಹಾಣ, ವಿ.ಪಿ.ನಾಯಕ, ವಸಂತದಾದಾ ಪಾಟೀಲ, ಎಸ್.ಬಿ.ಚವ್ಹಾಣ ಹೀಗೆ ಅನೇಕ ಮುಖ್ಯ ಮಂತ್ರಿಗಳೆದುರು ಸೊಲ್ಲಾಪೂರ ಕರ್ನಾಟಕದ ಅವಿಭಾಜ್ಯ ಅಂಗವೆಂದು ದಿಟ್ಟತನದಿಂದ ಪ್ರತಿಪಾದಿಸಿ ಹಲವು ಸಲ ಮನವಿ ಸಲ್ಲಿಸಿದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೂ ಕನ್ನಡ ಹೋರಾಟಗಾರ ಎಂಬ ಕಾರಣದಿಂದ ಸ್ವಾತಂತ್ರ್ಯ ಸೇನಾನಿ ಗೌರವ ಮತ್ತು ಮಾಸಿಕಧನ ಸಿಗದೇ ಹೋಯಿತು.

ಮೂಲತಃ ಬಳ್ಳಾರಿಯವರಾಗಿದ್ದ ಡಾ॥ ಸಿದ್ಧನಾಥ ಅವರು ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಸೊಲ್ಲಾಪೂರದಲ್ಲಿ ನೆಲೆಯೂರಿದರು. ವೃತ್ತಿಯಿಂದ ವೈದ್ಯರು. ಸೊಲ್ಲಾಪೂರ ಮಹಾನಗರ ಪಾಲಿಕೆ ಹಿಂದಿನಿಂದ ಮತ್ತು ಇಂದಿಗೂ ಕನ್ನಡ ಹಾಗೂ ತೆಲುಗು ಭಾಷಿಕ ಕಾರ್ಪೊರೇಟರರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಗೊಳ್ಳುತ್ತಾರೆ. ಡಾ॥ ಸಿದ್ಧನಾಥ ಬಳ್ಳಾರಿಯವರು ಸೊಲ್ಲಾಪೂರ ಮಹಾನಗರ ಪಾಲಿಕೆಯ ವೈದ್ಯಾಧಿಕಾರಿ ವೃತ್ತಿಯಲ್ಲಿದ್ದರು. ಮಹಾನಗರ ಪಾಲಿಕೆ ಸೇವೆಯಲ್ಲಿದ್ದೂ ಕನ್ನಡ ಹೋರಾಟ ನಡೆಸುತ್ತಿದ್ದ ಡಾ॥ ಸಿದ್ಧನಾಥ ಮೇಲೆ ಮಹಾರಾಷ್ಟ್ರ ಸರಕಾರ ಕೆಂಗಣ್ಣು ಬೀರುತ್ತಿತ್ತು. ಆದರೆ ಮಹಾನಗರ ಪಾಲಿಕೆಯ ಮಹಾಪೌರರಾದಿಯಾಗಿ ಕಾರ್ಪೊರೇಟರರು ಡಾ॥ ಸಿದ್ಧನಾಥರ ರಕ್ಷಣೆಗಿದ್ದರು. ಹೀಗಾಗಿ ಮಹಾರಾಷ್ಟ್ರ ಸರಕಾರ ಡಾ॥ ಸಿದ್ಧನಾಥರನ್ನು ಪದಚ್ಯುತಿಗೊಳಿಸಲು ಸಾಧ್ಯವಾಗದಾಯಿತು.

ಎಸ್.ನಿಜಲಿಂಗಪ್ಪ, ಬಿ.ಡಿ.ಜತ್ತಿ, ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆ, ದೇವರಾಜ ಅರಸು ಈ ಎಲ್ಲ ಮುಖ್ಯಮಂತ್ರಿಗಳೊಂದಿಗೆ ಡಾ॥ ಸಿದ್ಧನಾಥರು ನಿಕಟ ಸಂಪರ್ಕ ಸಾಧಿಸಿದ್ದರು. ಸೊಲ್ಲಾಪೂರದ ಕನ್ನಡಿಗರನ್ನು ತಾಯಿಯ ಉಡಿ ತುಂಬಿಕೊಳ್ಳಿರಿ ಎಂಬ ಒಂದೇ ಒಂದು ಬೇಡಿಕೆ ಅವರದಾಗಿತ್ತು. ಆರ್ಥಿಕ ದುಸ್ಥಿತಿಯಲ್ಲಿದ್ದರೂ ಕರ್ನಾಟಕದಿಂದ ಯಾವುದೇ ಕನ್ನಡಿಗ ಸ್ನೇಹಿತರು ಸೊಲ್ಲಾಪೂರಕ್ಕೆ ಹೋದರೆ ಆದರಾತಿಥ್ಯ ಪುಷ್ಕಳವಾಗಿ ನೀಡುತ್ತಿದ್ದರು. ವಿಶಾಲ ಮನೋಭಾವದ ಇವರು ಸದಾ ಹಸನ್ಮುಖಿಗಳಾಗಿರುತ್ತಿದ್ದರು. ಅವರಿಗೆ ಸಿಟ್ಟು ಬಂದಿದ್ದು ಒಮ್ಮೆಯೂ ನೋಡಿಲ್ಲ, ಎಂತಹದೇ ಸಂದರ್ಭದಲ್ಲಿಯೂ ಹಸನ್ಮುಖಿಗಳಾಗಿಯೇ ಹೋರಾಟ ಮಾಡುತ್ತಿದ್ದರು. ಡಾ॥ ಸಿದ್ಧನಾಥರದು ಅಪರೂಪದ ವ್ಯಕ್ತಿತ್ವವಾಗಿತ್ತು.

ನನ್ನೊಂದಿಗೆ ಹಲವು ವರ್ಷಗಳ ಕಾಲ ನಿಕಟ ಸಂಪರ್ಕದಲ್ಲಿದ್ದ ಇವರು ನಾನು ಸೊಲ್ಲಾಪೂರಕ್ಕೆ ಹೋದಾಗಲೆಲ್ಲ ಕನ್ನಡಪರ ಸಭೆಗಳನ್ನು ಏರ್ಪಡಿಸುತ್ತಿದ್ದರು. ನಾಡಹಬ್ಬದ ಕಾರ್ಯಕ್ರಮಗಳಿಗೂ ಆಮಂತ್ರಿಸಿದ್ದಾರೆ. ೧೯೭೪ರಲ್ಲಿ ರಾಷ್ಟ್ರೀಯ ಭಾವೈಕ್ಯತಾ ಪರಿಷತ್ ಒಂಬತ್ತು ದಿನಗಳ ಕಾಲ ನಾನು ಏರ್ಪಡಿಸುವಂತಾಗಲು ಡಾ॥ ಬಳ್ಳಾರಿಯವರ ಸಕಲ ಸಹಾಯ, ಸಂಪರ್ಕ ನೀಡಿದರು. ಸಿರಿಗೆರೆ ಲಿಂ. ಹಿರಿಯ ಗುರುಗಳಾದ ಶಿವಕುಮಾರ ಸ್ವಾಮೀಜಿಯವರ ನೇತೃತ್ವದಲ್ಲಿ ಕಾರ್ಯಕ್ರಮಗಳು ಜರುಗಿ ಸೊಲ್ಲಾಪೂರದಲ್ಲಿ ಕನ್ನಡ ಡಿಂಡಿಮ ಭಾರಿಸಿತು. ಇದು ಸೊಲ್ಲಾಪೂರ ನಗರದ ಚರಿತ್ರೆಯಲ್ಲಿ ಇಂದಿಗೂ ದಾಖಲೆಯಾಗಿ ಉಳಿದಿದೆ. ಇಂತಹ ಕನ್ನಡಪರ ಅದ್ಭುತ ಕಾರ್ಯಗಳ ಯಶಸ್ವಿಗೆ ಡಾ॥ ಸಿದ್ಧನಾಥ ಬಳ್ಳಾರಿಯವರೇ ಕಾರಣಕರ್ತರಾಗಿದ್ದರು.

ಸೊಲ್ಲಾಪೂರದಲ್ಲಿ ಕನ್ನಡ ಶಾಳೆಗಳ ಸಂಖ್ಯೆ ಹೆಚ್ಚಿ ಅವುಗಳನ್ನು ಶಾಶ್ವತವಾಗಿ ಮುನ್ನಡೆಸಿಕೊಂಡು ಹೋಗುವಂತೆ ಮಹಾರಾಷ್ಟ್ರ ಸರಕಾರದೊಂದಿಗೆ ಹೋರಾಟಕ್ಕಿಳಿದರು. ಕನ್ನಡ ಪಠ್ಯ ಪುಸ್ತಕಗಳು ಎಲ್ಲ ಕನ್ನಡ ಶಾಲೆಗಳಿಗೆ ಲಭ್ಯವಾಗುವಂತೆ ಮಾಡಲು ನಿರಂತರ ಶ್ರಮವಹಿಸಿದರು. ಇವರ ಹೋರಾಟದ ಫಲವಾಗಿ ಸೊಲ್ಲಾಪೂರದಲ್ಲಿ ಕನ್ನಡ ಗಟ್ಟಿಗೊಂಡಿತು. ಎಲ್ಲ ಕನ್ನಡ ದಿನಪತ್ರಿಕೆಗಳ ವರದಿಗಾರರಾಗಿ ಗಡಿಭಾಗದಲ್ಲಿ ಕನ್ನಡ ವೃತ್ತಪತ್ರಿಕೆಗಳ ಪ್ರಸಾರ ಹೆಚ್ಚಿಸಿದ ಶ್ರೇಯಸ್ಸು ಡಾ॥ ಸಿದ್ಧನಾಥರಿಗೆ ಸಲ್ಲುತ್ತದೆ ಇದನ್ನು ಸಮಸ್ತ ಕನ್ನಡಿಗರು ಮರೆಯುವಂತಿಲ್ಲ.

ಜೀವನದ ಕೊನೆಯ ಉಸಿರಿನವರೆಗೂ ಸೊಲ್ಲಾಪೂರವನ್ನು ಕರ್ನಾಟಕಕ್ಕೆ ಸೇರಿಸಲು ಡಾ॥ ಸಿದ್ಧಾನಾಥರು ಹೋರಾಟ ನಡೆಸಿದರು. ಅವರು ಗತಿಸಿದ ಮೇಲೆ ಸೊಲ್ಲಾಪೂರ ಕರ್ನಾಟಕಕ್ಕೆ ಸೇರ್ಪಡೆಯ ಹೋರಾಟ ಸ್ಥಬ್ದಗೊಂಡಿದೆ. ಆದರೆ ಡಾ॥ ಸಿದ್ಧನಾಥರ ಹೋರಾಟದ ಧ್ವನಿ ಅಶರೀರವಾಗಿ ಸೊಲ್ಲಾಪೂರ, ಕರ್ನಾಟಕ ಎಂದು ಮಾರ್ದನಿಗೊಳ್ಳುತ್ತಲೆಯಿದೆ.

ಇಂತಹ ಗಡಿಭಾಗದ ಅಪ್ಪಟ ಕನ್ನಡಿಗರ ಕರ್ನಾಟಕಪರ ಹೋರಾಟಗಾರರನ್ನು ಕನ್ನಡ ನಾಡಿನ ಎಲ್ಲ ಸರಕಾರಗಳು ಹಾಗೂ ಕನ್ನಡಾಭಿಮಾನಿ ಮುಖಂಡುರ ಮರೆತುಬಿಟ್ಟಿದ್ದಾರೆ. ಈಗಲಾದರೂ ಕರ್ನಾಟಕ ಸರಕಾರ ದಿ. ಡಾ॥ ಸಿದ್ಧನಾಥ ಬಳ್ಳಾರಿಯವರ ಜೀವ ಪರ್ಯಂತದ ಕನ್ನಡ, ಕರ್ನಾಟಕ ಹೋರಾಟದ ಶಾಶ್ವತ ಸ್ಮರಣೆ ಉಳಿಯುವ ರೀತಿಯಲ್ಲಿ ಸೊಲ್ಲಾಪೂರ ಕನ್ನಡ ಗಡಿಭಾಗದಲ್ಲಿ ಶಾಶ್ವತ ಕಾರ್ಯ ಮಾಡಬೇಕು.

೧೫. ಶಿವಣಪ್ಪ ಕೇಸೂರ, ಮೈಂದರ್ಗಿ

ಮೈಂದರ್ಗಿಯ ಶಿವಣ್ಣಪ್ಪ ಕೇಸೂರ ಹಾಲಹಳ್ಳಿಯ ಅಪ್ಪಾಸಾಹೇಬ, ದುಧನಿಯ ರಾಮಲಿಂಗಪ್ಪ ಶೀಲವಂತ ಮೊದಲಾದವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಧುಮುಕಿದರು.[೩೮] ಮೈಂದರ್ಗಿ ತಾಲ್ಲೂಕಿನ ಮಂತ್ರಿಗಳೆಂದು ಶಿವಣ್ಣಪ್ಪ ಕೇಸರೂರ

ಅವರಿಗೆ ಕ್ರಿ.ಶ. ೧೯೪೬ರಲ್ಲಿ ಪಟವರ್ಧನರು ನೇಮಿಸಿದರು.[೫೯] ಹೋರಾಟಗಾರ ಶಿವಣ್ಣಪ್ಪ ಕೇಸೂರ ಅವರು ತಮ್ಮ ಬಸವಣ್ಣಪ್ಪ ಕೇಸರೂ ಅವರು ಕರ್ನಾಟಕದ ಪರವಾಗಿದ್ದರು.

ಬಸವಣ್ಣಪ್ಪ ಕೇಸೂರು ಮೈಂದರ್ಗಿ ನಗರಾಧ್ಯಕ್ಷರಾಗಿ ಕೆಲವರ್ಷ ಸೇವೆ ಸಲ್ಲಿಸಿದರು. ಸಿ.ಎಫ್.ಶಾವರಿ ಮೈಂದರ್ಗಿ ನಗರಾಧ್ಯಕ್ಷರಾಗಿ ಸೇವೆ ಸಲ್ಲಿಸುವ ಸಂದರ್ಭದಲ್ಲಿ ಅಕ್ಕಲಕೋಟೆಯ ಪೌಜದಾರ ಆರ್.ಕೆ.ಕುಲಕರ್ಣಿ, ತಹಶೀಲ್ದಾರ ವನಪಾಲ ಮೈಂದರ್ಗಿಯ ರಾಜಕೀಯ ನಾಯಕರಿಗೆ ಉದ್ದೇಶಪೂರ್ವಕವಾಗಿ ತೊಂದರೆ ನೀಡಲು ಪ್ರಾರಂಭಿಸಿದರು. ಇದಕ್ಕೆ ಕಾರಣವೇನೆಂದರೆ ಅಂದು ನಗರಪಾಲಿಕೆಯ ೧೬ ನಗರ ಸೇವಕರು ಸವಾನುಮತದಿಂದ ಕರ್ನಾಟಕದ ಪರವಾಗಿ ಠರಾವು ಪಾಸುಮಾಡಿದರು. ೧೭ ಜುಲೈ ೨೦೧೧ ರಂದು ನಾಗಣಸೂರಿನ ಕನ್ನಡ ಕಾರ್ಯಾಗಾರ ಉದ್ಘಾಟನಾ ಸಮಾರಂಭಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಗೋವಿಂದ ಕಾರಜೋಳ ಆಗಮಿಸಿ ಗಡಿಕನ್ನಡಿಗ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಅದೆ ವೇದಿಕೆಯ ಶಾಸನ ಸಿದ್ರಾಮಪ್ಪ ಪಾಟೀಲ ಮಾತನಾಡಿ "ಮಹಾಜನ ನಮ್ಮ ಭಾಗಕ್ಕೆ ಆಗಮಿಸಿದಾಗ ಬಸವಣ್ಣಪ್ಪ ಕೇಸೂರ, ಪತ್ರಕರ್ತ ನಾಗಯ್ಯ ಹಿರೇಮಠ ಅವರು ಕನ್ನಡ ಪರವಾದ ವರದಿ ನೀಡಿದರು." ಈ ಭಾಗದ ಹಲವು ಹೋರಾಟಗಾರರು ಕರ್ನಾಟಕ ಸೇರಿಸಲು ಪ್ರಯತ್ನಪಟ್ಟವರೆಂದು ಪ್ರತ್ಯಕ್ಷದರ್ಶಿಗಳಾದ ಇಂದಿನ ಅಕ್ಕಲಕೋಟೆಯ ಶಾಸಕ ಸಿದ್ರಾಮಪ್ಪ ಪಾಟೀಲ ಹೇಳಿದರು.

ಮೈಂದರ್ಗಿಯ ರಾಜಕೀಯ ನಾಯಕರಿಗೆ ಫೌಜದಾರ ಹಾಗೂ ತಹಶೀಲ್ದಾರ ಬಹಳ ತೊಂದರೆ ನೀಡುತ್ತಿರುವುದರಿಂದ ನಗರ ಸೇವಕರು ಅನಿವಾರ್ಯವಾಗಿ ಮಹಾರಾಷ್ಟ್ರದ ಪರವಾಗಿ ಠರಾವು ಪಾಸು ಮಾಡಿದರು. ಶಿವಣ್ಣಪ್ಪ ಕೇಸೂರ ಅವರನ್ನು ಪೋಲೀಸರು ಬಂಧಿಸಿದರು.

ಅಂದು ನ್ಯಾಯಮೂರ್ತಿ ಮಹಾಜನ ಈ ಭಾಗಕ್ಕೆ ಆಮಿಸಿದ ಸಂದರ್ಭದಲ್ಲಿ ಅವರ ಮುಂದೆ ಬಸವಣ್ಣಪ್ಪ ಕೇಸೂರ ಹಾಜರಾಗಿದ್ದರು. ಮಹಾಜನರು ಮೈಂದರ್ಗಿ ರಾಜಕೀಯ ನಾಯಕರೊಂದಿಗೆ ಸಮಾಲೋಚಿಸಿದಾಗ "ಮೈಂದರ್ಗಿ ನಗರಪಾಲಿಕೆಯ ಠರಾವು ಕರ್ನಾಟಕ ಪರವಾಗಿ ಅಕ್ಕಲಕೋಟೆಯ ಫೌಜದಾರ, ತಹಶೀಲ್ದಾರರು ನಮಗೆ ಉದ್ದೇಶಪೂರ್ವಕವಾಗಿ ತೊಂದರೆ ನೀಡಿ ಠರಾವು ಮಹಾರಾಷ್ಟ್ರದ ಪರವಾಗಿ ಪಾಸು ಮಾಡಿದ್ದಾರೆ" ಎಂದು ಪ್ರತ್ಯಕ್ಷದರ್ಶಿಗಳಾದ ಬಸವಣ್ಣಪ್ಪ ಕೇಸೂರ ಅವರ ಮನದಾಳದ ಮೌನರಾಗದ ಮಾತುಗಳು ಹೊರಬಂದವು. ಪತ್ರಕರ್ತ ನಾಗಣ್ಣ ಹಿರೇಮಠ ಅವರ ಹೋರಾಟ ಅನನ್ಯವಾದುದು ಎನ್ನುತ್ತಾರೆ ಬಸವಣ್ಣಪ್ಪ ಕೇಸೂರ. ಶಾಸಕ ಸಿದ್ರಾಮಪ್ಪ ಪಾಟೀಲ ನಂತರ ಶಿವಣ್ಣಪ್ಪ ಕೇಸೂರ ಅವರಿಗೆ ಬಿಡುಗಡೆ ಮಾಡಿದರು. ಕನ್ನಡದ ಹೋರಾಟಗಾರ ಶಿವಣ್ಣಪ್ಪ ಕೇಸೂರ ೧೯೯೫ರಲ್ಲಿ ನಿಧನ ಹೊಂದಿದರು. ಬಸವಣ್ಣಪ್ಪ

ಕೇಸೂರ ಇಂದಿನ ಪ್ರಭಲ ರಾಜಕೀಯ ನಾಯಕರಲ್ಲಿ ಒಬ್ಬರಾಗಿದ್ದಾರೆ.

೧೯೫೫ ರಿಂ ೧೯೫೯ ರವರೆಗೆ ಶಿವಣ್ಣಪ್ಪ ಕೇಸೂರ
೧೯೫೯ ರಿಂದ ೧೯೬೫ ರವರೆಗೆ ಬಸವಣ್ಣಪ್ಪ ಕೇಸೂರ
೧೯೬೪ ರಿಂದ ೧೯೬೭ರ ವರೆಗೆ ಸಿ.ಎಫ್.ಶಾವರಿ

ಅಂದಿನಿಂದ ಇಂದಿನವರೆಗೆ ಮೈಂದರ್ಗಿ ನಗರಪಾಲಿಕೆಯ ವ್ಯವಹಾರದ ದಾಖಲೆ ಮರಾಠಿ ಭಾಷೆಯಾದರೆ, ಅಲ್ಲಿ ನಡೆಯುವ ಸಭೆ, ಜನ ಚಟುವಟಿಕೆಗಳೆಲ್ಲವು ಕನ್ನಡ ಭಾಷೆಯಲ್ಲಿವೆ.

೧೬. ಮಹಾದೇವಪ್ಪ ರಾಂಪುರೆ

ಸೊಲ್ಲಾಪೂರ ಹತ್ತಿರವಿರುವ ಕುಂಬಾರಿಯಲ್ಲಿ ಶ್ರಾವಣ ಮಾಸದ ಪೂರ್ಣಿಮೆಯ ಶುಭ ದಿನಾಂಕ: ೧೧-೦೮-೧೯೨೨ ರಂದು ಮಹಾದೇವಪ್ಪನವರು ಯಶವಂತಪ್ಪ ಮತ್ತು ಗುರುದೇವಿಯ ಪುಣ್ಯ ದಂಪತಿಗಳ ಜೇಷ್ಠಪುತ್ರನಾಗಿ ಜನಿಸಿದರು. ಮಹಾದೇವಪ್ಪನವರ ಪ್ರಾಥಮಿಕ ಅಭ್ಯಾಸ ಕುಂಬಾರಿಯಲ್ಲಿ ಮುಗಿಸಿ, ಹರಿಬಾಯಿ ದೇವಕರಣ ಮರಾಠಿ ಶಾಲೆಯಲ್ಲಿ ಮಾಧ್ಯಮಿಕ ಅಭ್ಯಾಸ ಮಾಡಬೇಕಾಯಿತು. ಮನೆಮಾತು ಕನ್ನಡವಾದರೂ ಮರಾಠಿಯ ತಮ್ಮ ಅಭ್ಯಾಸದ ಜೊತೆಗೆ ಕನ್ನಡವನ್ನು ಉಳಿಸಿಕೊಳ್ಳುವ ಸಾಹಸ ಮಾಡಿದರು. "ಬೆಳೆಯುವ ಸಿರಿ ಮೊಳಕೆಯಲ್ಲಿ" ಎಂಬಂತೆ ತಮ್ಮ ಬೆಳವಣಿಗೆಯ ಕುರುಹನ್ನು ಈಗಲೇ ತೋರುತ್ತಾರೆ. ಶಾಲೆಯಲ್ಲಿ ಕನ್ನಡ ಬಳಗವೊಂದನ್ನು ಕಟ್ಟಿ ಕೊಂಡು ತಾವೇ ಅದರ ಅಧ್ಯಕ್ಷರಾಗುತ್ತಾರೆ.[೪೦] ಕಿರಿಯ ವಯಸ್ಸಿನಲ್ಲಿ ತಮ್ಮ ಸಂಘಟನಾಚಾತುರ್ಯ, ಸಾಹಸಬುದ್ಧಿಯನ್ನು ಪ್ರದರ್ಶಿಸಿದರು.

ಕನ್ನಡ ಬಳಗವೊಂದನ್ನು ಕಟ್ಟಿಕೊಂಡು ಊರೂರು ಅಲೆಯುತ್ತಾರೆ. ದೇಶದಲ್ಲಿ ಚಲೇಜಾವ್ ಚಳುವಳಿ ಪ್ರಖರಗೊಳ್ಳುತ್ತದೆ. ಆಗ ಇವರು ಸೊಲ್ಲಾಪೂರ, ಅಕ್ಕಲಕೋಟ ಮುಂತಾದೆಡೆ ಜನಜಾಗೃತಿಯಲ್ಲಿ ತೊಡಗುತ್ತಾರೆ. ಚಳುವಳಿ ಇನ್ನೂ ತೀವ್ರಗೊಂಡು ಅನೇಕ ಅಂಚೆ ಕಛೇರಿಗಳನ್ನು ಸುಟ್ಟುಬಿಡುತ್ತಾರೆ. ಸೊಲ್ಲಾಪೂರ, ಅಕ್ಕಲಕೋಟ ಮಧ್ಯದ ರೈಲ್ವೆ ಸೇತುವೆ ನಾಶಪಡಿಸುವ ಸಂಚಿನಲ್ಲಿ ಇವರ ಬಳಗ ಮುಂದುವರೆಯುತ್ತದೆ. ಬ್ರಿಟೀಷ್ ಸರಕಾರಕ್ಕೆ ಇದು ತಿಳಿದು ಇವರನ್ನು ಬಂಧಿಸಲು ೧೯೪೨ರಲ್ಲಿ ವಾರಂಟ ಹೊರಡಿಸುತ್ತದೆ. ಆಗ ಪರಿಸ್ಥಿತಿ ಇನ್ನೂ ಭೀಕರವಾಗಬಹುದೆಂದು ಭಾವಿಸಿ ಗುಪ್ತಸ್ಥಳದಲ್ಲಿದ್ದು ಕಾರ್ಯ ನಡೆಸುತ್ತಾರೆ. ಬ್ರಿಟೀಷ್ ಸರಕಾರಕ್ಕೆ ಅಂದು ಮಹಾದೇವಪ್ಪ ಸಿಂಹಸ್ವಪ್ನರಾಗಿದ್ದರು. ಇದರಿಂದಾಗಿ ಸುಮಾರು ಎರಡು ವರ್ಷಗಳ ಕಾಲ ತಲೆಮರಿಸಿಕೊಂಡಿರಬೇಕಾಗುತ್ತದೆ. ಮಹಾದೇವಪ್ಪನವರ ಇಂತಹ ವಿಧ್ವಂಸಕ ಕೃತ್ಯಗಳನ್ನೆಲ್ಲ ಗಮನಿಸಿದ ತಂದೆ – ತಾತ ಕಲಬುರ್ಗಿಯ ಹಳೆಯ ಸಂಬಂಧಿಕರಾದ ಶಿವಪ್ಪ ಬಂಡಕ ಅವರ ಭದ್ರಕೋಟೆಯಲ್ಲಿ ಬಿಡುತ್ತಾರೆ.

ಶಿವಪ್ಪ ಬಂಡಕ ಅವರದು ಕಲಬುರ್ಗಿಯ ಶಹಬಜಾರದಲ್ಲಿನ ಬಹುದೊಡ್ಡ ಮನೆತನ. ಆಗರ್ಭ ಶ್ರೀಮಂತರು, ಶಿವಪ್ಪ ಬಂಡಕ ಅವರ ಒಬ್ಬಳೇ ಮಗಳಾದ ತಾರಾಬಾಯಿಯೊಂದಿಗೆ ಮಹಾದೇವಪ್ಪನವರ ವಿವಾಹವಾಯಿತು. ಆದರೆ ಮಹಾದೇವಪ್ಪ ತಮ್ಮ ಚಟುವಟಿಕೆಗಳಿಗೆ ವಿರಾಮ ನೀಡಲಿಲ್ಲ. ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ ಮಹಾದೇವಪ್ಪ ರಾಂಪೂರೆ ಕಾರ್ಯನಿರ್ವಹಿಸಿದರು. ಸೋಲಿಲ್ಲದ ಸರದಾರರಾಗಿ ರಾಜಕೀಯ ಪ್ರವೇಶಿಸಿದರು. ಗುಲಬರ್ಗಾ ಲೋಕಸಭಾಕ್ಷೇತ್ರದಿಂದ ಸತತವಾಗಿ ಮೂರು ಭಾರಿ ಆಯ್ಕೆಯಾದರು. ಈ ಭಾಗದಲ್ಲಿ ಶಿಕ್ಷಣದ ಕ್ರಾಂತಿ ಮೂಡಿಸಿದ ಪ್ರಬಲ ರಾಜಕೀಯ ನಾಯಕರಾದರು.

ಮಹಾದೇವಪ್ಪ ರಾಂಪೂರೆ ಬ್ರಿಟೀಷರ ವಿರುದ್ಧ ಹೋರಾಡಿದರು. ತಾತನ ಕುತಂತ್ರದಿಂದ ಗುಲಬರ್ಗಾಕ್ಕೆ ಆಗಮಿಸಿ, ಇಲ್ಲಿಯೇ ವಾಸವಾಗಿ ಹೈದ್ರಾಬಾದ – ಕರ್ನಾಟಕ ಪರವಾಗಿ ಹೋರಾಡಿ ಯಶಸ್ವಿಯಾದರು. ಇವರ ಹೋರಾಟ ನಿಲ್ಲದೆ ಮತ್ತೆ ಜನ್ಮಭೂಮಿ ಕುಂಬಾರಿ, ಸೊಲ್ಲಾಪೂರ, ಅಕ್ಕಲಕೋಟ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರಿಸಲು ಹೋರಾಟ ಪ್ರಾರಂಭಿಸಿದರು. ಮಹಾದೇವಪ್ಪ ಚಿಕ್ಕವಯಸ್ಸಿನಲ್ಲಿಯೇ ಕನ್ನಡ ಬಳಗ ಕಟ್ಟಿದರು. ಅವರು ತಮ್ಮ ಆತ್ಮೀಯ ಸ್ನೇಹಿತರೊಂದಿಗೆ ಕನ್ನಡ ಹೋರಾಟ ಪ್ರಾರಂಭಿಸಿದರು.

ಬ್ಯಾರಿಸ್ಟರ ಎಂ.ಎಸ್. ಸರದಾರರೊಡನೆ ನಾಗಪ್ಪಣ್ಣ ಕಾಡಾದಿ, ಬಾಬಾ ಸಾಹೇಬ ವಾರದ, ಕುಂಬಾರಿಯ ಮಹಾದೇವಪ್ಪ ರಾಂಪೂರೆ, ಡಾ॥ ಸಿದ್ಧನಾಥ ಬಳ್ಳಾರಿ, ಕೆ.ಎಮ್. ಲಂಬಿ ಹಲವರು ಹೋರಾಡಿದರು.[೪೧] ಕನ್ನಡ ನಾಡು–ನುಡಿ ಸಂಸ್ಕೃತಿಯ ವಿಚಾರದಲ್ಲೂ ರಾಂಪೂರೆಯವರು ಒಳ್ಳೆಯ ಆದರ್ಶವನ್ನಿಟ್ಟುಕೊಂಡಿದ್ದರು. ಮಹಾರಾಷ್ಟ್ರ – ಕರ್ನಾಟಕ ಎರಡೂ ಸರಕಾರ ಇವರಿಗೆ 'ಗಡಿನಾಡು ಮಹಾಸಮಿತಿಯ ಅಧ್ಯಕ್ಷ'ರೆಂದು ನೇಮಕ ಮಾಡಿದರು.

ಡಾ॥ ಬಸವರಾಜ ಲಿಗಾಡೆ ಅವರ ಕೋರಿಕೆಯ ಮೇರೆಗೆ ೧೯೬೮ ಸೊಲ್ಲಾಪೂರದ ಕನ್ನಡ ಶಿಕ್ಷಣ ಸಮಿತಿಯ ಹತ್ತನೇ ನಾಡಹಬ್ಬ ಕಾರ್ಯಕ್ರಮ ಉದ್ಘಾಟನೆ ಮಹಾದೇವಪ್ಪ ರಾಂಪೂರೆ ನೆರವೇರಿಸಿದರು. ಕನ್ನಡ ಬಳಗ, ಸೊಲ್ಲಾಪೂರದ ಕನ್ನಡ ಮಿತ್ರ ಸಮಾಜದವರು ಇವರನ್ನು ಪ್ರತಿವರ್ಷ ತಪ್ಪದೇ ನಾಡಹಬ್ಬದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳನ್ನಾಗಿ ಬರಮಾಡಿಕೊಳ್ಳುತ್ತಿದ್ದರು. ದಿನಾಂಕ: ೦೬–೦೨–೧೯೭೩ರಂದು ರಾಂಪೂರೆಯವರು ಬೆಂಗಳೂರಿನ ಸದಾಶಿವನಗರಲದಲಿನ ತಮ್ಮ ಸ್ವಂತ ಮನೆ 'ಸ್ನೇಹ'ದಲ್ಲಿ ಹೃದಯಗಾತದಿಂದ ನಿಧನರಾದರು.

ಹೈದ್ರಾಬಾದ ಕರ್ನಾಟಕ ಶಿಕ್ಷಣ ಕ್ಷೇತ್ರದ ಪಿತಾಮಹಾ
ಹೈದ್ರಾಬಾದ ಕರ್ನಾಟಕ ಮಾಳವೀಯ ರಾಂಪೂರೆ
ಹೈದ್ರಾಬಾದ ಕರ್ನಾಟಕ ಶಿಕ್ಷಣ ಕ್ಷೇತ್ರದ ಕಣ್ಮಣಿ

ಸೋಲರಿಯದ ಜೀವಿ ದಕ್ಷ ಆಡಳಿತಗಾರ
ಕುಂಭಾರಿಯ ದೀಪ
ಕಲಬುರ್ಗಿಗೆ ದೀಪ
ಕಲಬುರ್ಗಿಗೆ ಬೆಳಕು ನೀಡಿ
ಬೆಂಗಳೂರಿನಲ್ಲಿಯೇ ದೀಪ ಶಾಂತವಾಯಿತು.

ಅಡಿ ಟಿಪ್ಪಣಿಗಳು

೧. ಅ) ಸಿರಿ ಸೊನ್ನಲಿಗೆ: ಕೆ.ಬಿ. ಪೂರ್ವಾಚಾರ್ಯ, ೧೯೭೨
ಬ) ಸಿದ್ಧಚೇತನ: ಡಾ॥ ಶಕುಂತಲಾ ಹೆಗಡೆ, ೨೦೦೭
೨. ಸೊಲ್ಲಾಪೂರ ಜಿಲ್ಲೆಯ ಸ್ಥಿತಿ-ಗತಿ : ಅರವಿಂದ ಬಿರಾಜದಾರ ಮುಂಬಯಿ ವಿಶ್ವವಿದ್ಯಾಲಯದ ಎಂ.ಫಿಲ್ ಪ್ರಬಂಧ
೩. ಪದ್ಮಶಿವರುದ್ರಪ್ಪ: ಜಯದೇವಿತಾಯಿ ಲಿಗಾಡೆ: ಪು.ಸ. ೯
೪. ಸಂಪಾದಕರು ಡಾ॥ ಎಚ್.ಎಸ್. ಗೋಪಾಲರಾವ್, ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು ಪು.ಸ. ೩೦೫
೫. ಸಂಪಾದಕರು: ಡಾ॥ ಶಕುಂತಲಾ ಹೆಗಡೆ: ಸಿದ್ಧಚೇತನ ಪು.ಸ. ೪೫
೬. ಅಕ್ಕಲಕೋಟ ಸಂಸ್ಥಾನ ಪ್ರಜಾ ಪರಿಷತ್‌ದ ೪ನೇ ಅಧಿವೇಶನ ನೀಲಗಾರ ಕರಜಗಿ, ಶ್ರೀ ಬಸವಪ್ರತಾಪ ಮುದ್ರಣಾಲಯ, ಸೊಲ್ಲಾಪೂರ ೧೯೪೬೭.
ಡಾ॥ ಎಚ್.ಎನ್. ಗೋಪಾಲರಾವ್: ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು,ಪು.ಸ. ೧೨೦
೮. ಸಂದರ್ಶನ ದಿನಾಂಕ: ೦೬-೦೭-೨೦೧೦ರಂದು ಗುರುಬಸಪ್ಪ ಶೀಲವಂತ
೯. ಸಂದರ್ಶನ ದಿನಾಂಕ: ೦೭-೦೭-೨೦೧೦ ರಂದು ಶಂಕರ ಶೀಲವಂತ
೧೦. ಸಂದರ್ಶನ ದಿನಾಂಕ: ೦೫-೧೦-೨೦೧೦ ರಂದು ಕೆ.ಬಿ. ಪೂರ್ವಾಚಾರ್ಯ.
೧೧. ಅ) ಡಾ॥ ಡಿ.ವಿ. ಪುರಾಣಿಕ: ನಿಜಲಿಂಗದೀಪ್ತಿ ಪು.ಸಂ. ೫೦
ಬ) ದಿನಾಂಕ: ೨೫-೦೫-೧೯೪೭ ರಂದು ಸಂಯುಕ್ತ ಕರ್ನಾಟಕ ಪತ್ರಿಕೆಯ ವರದಿ.
೧೨. ಸಂದರ್ಶನ ದಿನಾಂಕ: ಗುರುಬಸಪ್ಪ ಶೀಲವಂತ ಇವರ ಅಂಗಡಿಯಲ್ಲಿ ರಾಮಲಿಂಗಪ್ಪ ಅವರ ಪೆಟ್ಟಿಗೆ ಇದೆ. ಇದರಲ್ಲಿ ಹಲವು ಕನ್ನಡ ದಾಖಲೆಗಳು ಲಭ್ಯವಾಗಿದೆ.
೧೩. ಸಂದರ್ಶನ ದಿನಾಂಕ: ೨೪-೧೦-೨೦೧೦ ಶ್ರೀ ಮ.ನಿ.ಪ್ರ, ಶಾಂತಲಿಂಗೇಶ್ವರ ಮಹಾಸ್ವಾಮಿಗಳವರು. ವಿರಕ್ತಮಠ, ದುಧನಿ, ಪೂಜ್ಯ ಶ್ರೀ ಡಾ॥ ಶರಣಬಸವ ಸ್ವಾಮಿಗಳವರು, ಶಾಂತೇಶ್ವರಮಠ ಟೆಂಗಳಿ.
೧೪. ಅ) ದಿನಾಂಕ: ೨೩-೦೫-೧೯೬೭ರ ಸಂಯುಕ್ತ ಕರ್ನಾಟಕ ಪತ್ರಿಕೆ ವರದಿ
ಬ) ಡಾ॥ ಡಿ.ವ್ಹಿ. ಪುರಾಣಿಕ: ನಿಜಲಿಂಗದೀಪ್ತಿ, ಪು.ಸಂ. ೫೦
೧೫. ಸಂದರ್ಶನ ದಿನಾಂಕ: ೦೫-೧೦-೨೦೧೦ ಕೆ.ಬಿ. ಪೂರ್ವಾಚಾರ್ಯರು.
೧೬. ಡಾ॥ ಡಿ.ವ್ಹಿ. ಪುರಾಣಿಕ: ನಿಜಲಿಂಗದೀಪ್ತಿ, ಪು.ಸಂ. ೫೧
೧೭. ಸಂದರ್ಶನ ದಿನಾಂಕ: ೧೯-೦೫-೨೦೧೦ ಕೆ.ಬಿ. ಪೂರ್ವಾಚಾರ್ಯರು.
೧೮. ಗಡಿನಾಡ ಕನ್ನಡ ಹೋರಾಟಗಾರರು: ಧರೇಂದ್ರನಾಥ ಬೀದರಕೋಟೆ ೨೦೦೭
೧೯. ಕರ್ನಾಟಕ ಏಕೀಕರಣದ ಕಥೆ: ಡಾ॥ ಪಾಟೀಲ ಪುಟ್ಟಪ್ಪ ಲೋಕದರ್ಶನ.

೨೦. ಕಾಡಾದಿ ನಾಗಪ್ಪನವರು: ಬಸವಣ್ಣೆಪ್ಪ ಕಲ್ಯಾಣಿ ಪು.ಸ. ೩೧
೨೧. ಸಂದರ್ಶನ ದಿನಾಂಕ: ೦೬–೦೭–೨೦೧೧ ದುಧನಿ ರಾಮಲಿಂಗಪ್ಪ ಶೀಲವಂತರ ಪೆಟ್ಟಿಗೆ
೨೨. ಸಂದರ್ಶನ ದಿನಾಂಕ: ೦೬–೦೭–೨೦೧೧ ಗುರುಬಸಪ್ಪ ಶೀಲವಂತರು ಹೇಳಿದರು
೨೩. ಗಡಿನಾಡ ಕನ್ನಡ ಹೋರಾಟಗಾರರು: ಧರೇಂದ್ರನಾಥ ಬೀದರಕೋಟೆ ಪು.ಸ. ೪೬
೨೪. ಸಂದರ್ಶನ ದಿನಾಂಕ: ೦೨–೧೦–೨೦೧೦ ಎಸ್.ಕೆ. ಬಾಗೇವಾಡಿ ಸರ್ ಹೇಳಿದರು
೨೫. ಗಡಿನಾಡ ಕನ್ನಡ ಹೋರಾಟಗಾರರು: ಧರೇಂದ್ರನಾಥ ಬೀದರಕೋಟೆ ಪು.ಸ. ೪೫
೨೬. ಗಡಿನಾಡ ಕನ್ನಡ ಹೋರಾಟಗಾರರು: ಧರೇಂದ್ರನಾಥ ಬೀದರಕೋಟೆ ಪು.ಸ. ೪೬
೨೭. ಸಂದರ್ಶನ ದಿನಾಂಕ: ೨೦–೦೬–೨೦೧೧ ಗುರುಸಿದ್ಧಯ್ಯಸ್ವಾಮಿ ಹೇಳಿದರು
೨೮. ಗಡಿನಾಡ ಕನ್ನಡ ಹೋರಾಟಗಾರರ: ಧರೇಂದ್ರನಾಥ ಬೀದರಕೋಟೆ ಪು.ಸಂ. ೪೪
೨೯. ಸಿರಿಸೊನ್ನಲಿಗೆ : ಕೆ.ಬಿ. ಪೂರ್ವಾಚಾರ್ಯ, ಪು.ಸಂ. ೩೬.
೩೦. ಗಡಿನಾಡ ಕನ್ನಡ ಹೋರಾಟಗಾರರು: ಧರೇಂದ್ರನಾಥ ಬೀದರಕೋಟೆ ಪು.ಸಂ. ೪೪
೩೧. ಕಾಯಕಯೋಗಿ ರಾವಬಹದ್ದೂರ ನಾಗಪ್ಪಣ್ಣ ಆಬ್ಬುಲಪುರಕರ: ಲ.ಸಿ. ಹನಗಂಡಿ.
೩೨. ಸಿರಿ ಸೊನ್ನಾಲಿಗೆ: ಕೆ.ಬಿ. ಪೂರ್ವಾಚಾರ್ಯ, ಪು.ಸ. ೪೭
೩೩. ಗಡಿನಾಡ ಕನ್ನಡ ಹೋರಾಟಗಾರರು: ಧರೇಂದ್ರನಾಥ ಬೀದರಕೋಟೆ ಪು.ಸಂ. ೪೪
೩೪. ಗಡಿನಾಡ ಕನ್ನಡ ಹೋರಾಟಗಾರರು: ಧರೇಂದ್ರನಾಥ ಬೀದರಕೋಟೆ ಪು.ಸಂ. ೪೪
೩೫. ಸಿರಿ ಸೊನ್ನಾಲಿಗೆ: ಕೆ.ಬಿ. ಪೂರ್ವಾಚಾರ್ಯ, ಪು.ಸ. ೫೧
೩೬. ಸಂಪಾದಕರ: ಆರ್.ಟಿ. ಮಜ್ಜಗಿ: ಗ. ಕ. ಹೂ. ಡಾ॥ ಸಿದ್ಧನಾಥ ಬಳ್ಳಾರಿ ಲೇಖನ
೩೭. ಧರೇಂದ್ರನಾಥ ಬೀದರಕೋಟೆ: ಗಡಿನಾಡು ಕನ್ನಡ ಹೋರಾಟಗಾರರು, ಪು.ಸ. ೪೪
೩೮. ಧರೇಂದ್ರನಾಥ ಬೀದರಕೋಟೆ: ಗಡಿನಾಡು ಕನ್ನಡ ಹೋರಾಟಗಾರರು, ಪು.ಸ. ೪೪
೩೯. ಬಸವರಾಜ ಮಸೂತಿ: ಮೈಂದರ್ಗಿಯ ಕುರುಂಡವಾಡ ಸಂಸ್ಥಾನ ಪು.ಸಂ. ೫೨
೪೦. ಡಾ॥ ಬಸವರಾಜ ಪೋಲಿಸ ಪಾಟೀಲ: ಮಹದೇವಪ್ಪ ರಾಂಪೂರ ಪು.ಸಂ. ೧೬.
೪೧. ಧರೇಂದ್ರನಾಥ ಬೀದರಕೋಟೆ: ಗಡಿನಾಡು ಕನ್ನಡ ಹೋರಾಟಗಾರರು: ಪು.ಸಂ. ೪೪

❦❦❦❦❦



ಜಯದೇವಿ ತಾಯಿ ಲಿಗಾಡೆ, ಸೊಲ್ಲಾಪುರ.



ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಸೊಲ್ಲಾಪುರ ಜಿಲ್ಲೆಯ ಕನ್ನಡಿಗರು



ಶ್ರೀ ಮ.ನಿ.ಪ್ರ ಮಹಾಲಿಂಗೇಶ್ವರ ಮಹಾಸ್ವಾಮಿಗಳು
ವಿರಕ್ತ ಮಠ, ದುಧನಿ.



ಉಪ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಅವರೊಂದಿಗೆ
ಮಧ್ಯದಲ್ಲಿರುವವರು ಕೆ.ಬಿ.ಪೂರ್ವಾಚಾರ್



ಪ್ರಧಾನಮಂತ್ರಿ ಇಂದಿರಾಗಾಂಧಿಯವರೊಂದಿಗೆ ಅನ್ನಪೂರ್ಣಾದೇವಿ
ಹಾಗೂ ಡಾ. ಸಿದ್ಧನಾಥ ಬಳ್ಳಾರಿ.



ಉಪ ರಾಷ್ಟ್ರಪತಿ ಬಿ.ಡಿ.ಜತ್ತಿಯವರಿಗೆ ಡಾ. ಸಿದ್ಧನಾಥ ಬಳ್ಳಾರಿಯವರು
ಸನ್ಮಾನಿಸುತ್ತಿರುವುದು.

ಅಕ್ಕಲಕೋಟ ತಾಲ್ಲೂಕಿನ ಇಂದಿನ ಸ್ಥಿತಿಗತಿ

ಮಹಾರಾಷ್ಟ್ರದ ಸೋಲಾಪೂರ ಜಿಲ್ಲೆಯ ಅಕ್ಕಲಕೋಟ ಒಂದು ತಾಲ್ಲೂಕು ಕೇಂದ್ರವಾಗಿದೆ. ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಐತಿಹಾಸಿಕ ಹಾಗೂ ರಾಜಕೀಯದ ಹಲವು ದಾಖಲೆಗಳನ್ನು ಈ ತಾಲ್ಲೂಕು ಪಡೆದುಕೊಂಡಿದೆ. ಸ್ವಾತಂತ್ರ್ಯ ದೊರೆಯುವ ಪೂರ್ವದಲ್ಲಿ ಶಿಲಾಹಾರ, ಭೋಸಲೆ ಹಾಗೂ ಕಿರಿ ಕುರುಂದವಾಡ ರಾಜಮನೆಗಳು "ಅಕ್ಕಲಕೋಟ ತಾಲ್ಲೂಕಿನ ಪ್ರದೇಶದಲ್ಲಿ' ಆಡಳಿತ ಮಾಡಿದ ದಾಖಲೆಗಳಿವೆ. ಸ್ವಾತಂತ್ರ್ಯ ದೊರೆತ ನಂತರ ಶಿಲಾಹಾರ ರಾಜಮನೆತನದ ಕೆಲ ಪ್ರದೇಶಗಳು, ಅಕ್ಕಲಕೋಟ ಭೋಸಲೆ ರಾಜ ಮನೆತನದ ೧೦೧ ಹಳ್ಳಿಗಳು, ಕಿರಿ ಕುರುಂದವಡ ರಾಜಮನೆತನದ ೧೫ ಹಳ್ಳಿಗಳು, ದಕ್ಷಿಣ ಸೊಲ್ಲಾಪೂರ ಜಿಲ್ಲೆಯ ೫ ಹಳ್ಳಿಗಳನ್ನು ಕೊಡಿಸಿ ಅಕ್ಕಲಕೋಟ ತಾಲ್ಲೂಕು ರಚನೆ ಮಾಡಲಾಯಿತು.[1] ಇಂದಿನ ಅಕ್ಕಲಕೋಟ ತಾಲ್ಲೂಕಿನ ಭೌಗೋಳಿಕೆ ಕ್ಷೇತ್ರ ೧,೪೧,೮೯೬ ಹೆಕ್ಟರ್ ಪಕ್ಷೇತ್ರವಾಗಿದೆ. ತಾಲ್ಲೂಕಿನ ಪೂರ್ವಕ್ಕೆ ಆಳಂದ, ದಕ್ಷಿಣಕ್ಕೆ ಅಫಜಲಪೂರ, ಇಂಡಿ ತಾಲ್ಲೂಕಿನ ಗಡಿಗಳಿವೆ. ಕರ್ನಾಟಕದ ಸೀಮೆ ಅಕ್ಕಲಕೋಟ ತಾಲ್ಲೂಕಿಗೆ ಬೇಲಿಯಂತೆ ಆವರಿಸಿವೆ. ಮಹಾರಾಷ್ಟ್ರ-ಕರ್ನಾಟಕ ಎರಡು ರಾಜ್ಯಗಳ ಗಡಿವಿವಾದದಲ್ಲಿ ಅಕ್ಕಲಕೋಟ ತಾಲ್ಲೂಕು ಒಂದಾಗಿದೆ.

ಶಿಲಾಹಾರ ಮನೆತನದವರು ಅಕ್ಕಲಕೋಟೆ ಪ್ರದೇಶವನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡು ಆಡಳಿತ ನಡೆಸಿದರು. ಶಾಸನಗಳಲ್ಲಿ 'ಅಂಕುಲಗೆ' ಎಂಬ ಉಲ್ಲೇಖವಿದ್ದು ಇದು ಇಂದಿನ ಅಕ್ಕಲಕೋಟೆಯಾಗಿದೆ. ಈ ಮನೆತನಕ್ಕೆ ಸಂಬಂಧಪಟ್ಟ ಹತ್ತಾರು ಕನ್ನಡ ಶಿಲಾಶಾಸನಗಳು ಲಭ್ಯವಾಗಿದ್ದು ಇವರ ಇತಿಹಾಸದ ಪುನರ್ ರಚನೆಗೆ ಸಹಾಯಕವಾಗಿವೆ. ಅಕ್ಕಲಕೋಟೆಯ ಶಿಲಾಹಾರರು ತಮ್ಮನ್ನು 'ಚಾಮುಂಡಿಕಾಲಬ್ಧ ವರಪ್ರಸಾದ'ರೆಂದೇ ಕರೆದುಕೊಂಡಿದ್ದಾರೆ. ಇವರ ಶಾಸನಗಳು ಸೊಲ್ಲಾಪೂರ, ಉಸ್ಮಾನಾಬಾದ್ ಹಾಗೂ ಬಿಜಾಪೂರ ಜಿಲ್ಲೆಗಳಲ್ಲಿ ಲಭ್ಯವಾಗಿವೆ. ಕಲ್ಯಾಣ ಚಾಲುಕ್ಯರು ಹಾಗೂ ಸೇವುಣರ ಕೈಕೆಳಗೆ ಇವರು ರಾಜ್ಯಭಾರ ಮಾಡಿದ ಅಂಶವೂ ಶಾಸನಗಳಲ್ಲಿ ಉಲ್ಲೇಖವಿದೆ.[2] ಇವರ ನಂತರ ಅಕ್ಕಲಕೋಟ ಭೋಸಲೆ ಸಂಸ್ಥಾನಿಕರು ಆಡಳಿತ ಪ್ರಾರಂಭಿಸಿದರು.

ಆದಿಲ್‌ಷಾಹಿಗಳ ಸಾಮ್ರಾಜ್ಯವನ್ನು ಪತನಗೊಳಿಸಿ ಶಿವಾಜಿ ಮಹಾರಾಜರು ಅಕ್ಕಲಕೋಟ ಭೂಮಿಯ ಪ್ರದೇಶ ತಮ್ಮ ವಶದಲ್ಲಿ ತೆಗೆದುಕೊಂಡರು. ಶಿವಾಜಿ ಮಹಾರಾಜರು ನಂತರದಲ್ಲಿ ಅಕ್ಕಲಕೋಟ ಅವರ ಮೊಮ್ಮಗನಾದ ಶಾಹು ಸಂಭಾಜಿ ಭೋಸಲೆ ಅವರಿಗೆ ದೊರೆಯಿತು. ಶಾಹು ಮಹಾರಾಜರು ರಾಣೂಜಿ ಲೋಖಂಡೆ ಎಂಬ ಮಗುವನ್ನು ದತ್ತು ಸ್ವೀಕರಿಸಿದರು. ರಾಣೂಜಿಯ ವಂಶಪರಂಪರೆಯ ಪೀಳಿಗೆಯಿಂದ ಭೋಸಲೆ ಸಂಸ್ಥಾನಿಕರು ಎಂದು ಪ್ರಸಿದ್ಧಿ ಪಡೆದುಕೊಂಡರು. ಭೋಸಲೇ ಸಂಸ್ಥಾನಿಕರು ಕ್ರಿ.ಶ. ೧೭೧೨ರಿಂದ ಕ್ರಿ.ಶ. ೧೯೪೮ರವರೆಗೆ ಆಡಳಿತ ನಡೆಸಿದರು.[3] ಭೋಸಲೆ ಸಂಸ್ಥಾನಿಕರ ಇತಿಹಾಸದ ದಾಖಲೆಗಳು ಇಂದಿನ ಅಕ್ಕಲಕೋಟೆಯ ಅರಮನೆಯಲ್ಲಿವೆ.

ಅಕ್ಕಲಕೋಟ ಭೋಸಲೆ ಸಂಸ್ಥಾನ ೪೯೮ ವಿಸ್ತಾರ ಚದರ ಮೈಲು ೧೯೩೧ರ ಜನಗಣತಿಯಂತೆ ೯೨,೬೦೫ ಜನಸಂಖ್ಯೆ ೬,೩೭,೦೦೦ ರೂಪಾಯಿ ಉತ್ಪನ್ನಗಳಲ್ಲಿ ಸಂಪೂರ್ಣ ಕನ್ನಡ ಪ್ರದೇಶವಾಗಿತ್ತು.[೪] ಅಕ್ಕಲಕೋಟ ಕುರುಂದವಾಡ, ಭೋರೆ, ಜತ್, ಜಮಖಂಡಿ, ಸಾಂಗಲಿ, ಮಿರಜ, ಫಲತಣ ಹಲವು ಸಂಸ್ಥಾನಗಳಲ್ಲಿ ಜನರು ಆಕ್ರೋಶಗೊಂಡ ಕಾರಣ ೮ ಮಾರ್ಚ್ ೧೯೪೮ರಂದು ಸರ್ಕಾರವು ಸಂಸ್ಥಾನಗಳನ್ನು ರದ್ದುಪಡಿಸಿತು.[೫]

ಅಕ್ಕಲಕೋಟ ಭೋಸಲೆ ಸಂಸ್ಥಾನದಿಂದ ೧೩ ಕಿ.ಮೀ. ಅಂತರದಲ್ಲಿ ಕಿರಿ ಕುರುಮದವಾಡ ಸಂಸ್ಥಾನವಿದೆ. ಕಿರಿ ಕುರುಂದವಾಡ ಸಂಸ್ಥಾನ ೧೧೬ ವಿಸ್ತಾರ ಚದರ ಮೈಲು, ೧೯೩೧ರ ಜನಗಣತಿಯಂತೆ ೪೯,೫೯೩ ಜನಸಂಖ್ಯೆ, ೨,೦೦,೦೦೦ ರೂಪಾಯಿ ಉತ್ಪನ್ನಗಳಲ್ಲಿ ಸಂಪೂರ್ಣ ಕನ್ನಡ ಪ್ರದೇಶವಾಗಿತ್ತು.[೬] ಕುರುಂದವಾಡ ಜ್ಯೂನಿಯರ್ ಸ್ಟೇಟ್‌ದ ಇತಿಹಾಸದ ಲೇಖನ ಪ್ರಕಟಿಸಲಾಗಿದೆ. (ಅಧ್ಯಾಯ–೪) ೮ ಮಾರ್ಚ್ ೧೯೪೮ರಂದು ಅಕ್ಕಲಕೋಟ ಸಂಸ್ಥಾನ ಹಾಗೂ ಕಿರಿ ಕುರುಂದವಾಡ ಸಂಸ್ಥಾನ ಮಹಾರಾಷ್ಟ್ರದಲ್ಲಿ ವಿಲೀನವಾದವು.

೧೯೫೬ರಲ್ಲಿ ರಾಷ್ಟ್ರೀಯ ಪುನರ್ ರಚನಾ ಆಯೋಗದ ಅನ್ವಯದಂತೆ ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳು ಉದಯವಾಯಿತು.

ಕರ್ನಾಟಕ ರಾಜ್ಯಕ್ಕೆ ಸೇರಬೇಕಾದ ಸೊಲ್ಲಾಪೂರ, ಅಕ್ಕಲಕೋಟ, ಜತ್ತ ಹಲವು ಕನ್ನಡದ ಪ್ರದೇಶಗಳು ಮಹಾರಾಷ್ಟ್ರದಲ್ಲಿ ಉಳಿದರೆ, ಮಹಾರಾಷ್ಟ್ರದಕ್ಕೆ ಸೇರಬೇಕಾದ ಬೆಳಗಾವಿ, ನಿಪ್ಪಾಣಿ, ಅಥಣಿ ಹಲವು ಮರಾಠಿ ಪ್ರದೇಶಗಳು ಕರ್ನಾಟಕದಲ್ಲಿ ಉಳಿದುಕೊಂಡಿವೆ. ಇದರಿಂದ ಮಹಾರಾಷ್ಟ್ರ–ಕರ್ನಾಟಕ ಎರಡು ರಾಜ್ಯಗಳ ಗಡಿವಿವಾದಕ್ಕೆ ನಾಂದಿಯಾಯಿತು. ಈ ಲೇಖನ ಅಕ್ಕಲಕೋಟ ತಾಲ್ಲೂಕಿಗೆ ಸೀಮಿತವಾಗಿರುವುದರಿಂದ ಇದಕ್ಕೆ ಸಂಬಂಧಪಟ್ಟ ದಾಖಲೆಗಳು ವಿವರವಿಲ್ಲಿದೆ. ಮಹಾರಾಷ್ಟ್ರ–ಕರ್ನಾಟಕ ಎರಡು ರಾಜ್ಯಗಳು ಗಡಿವಿವಾದ ವ್ಯಾಪಕವಾಗಿ ಪ್ರಾರಂಭವಾಯಿತು.

ಮುಂಬಯಿ ಸರ್ಕಾರ ೧೯೫೭ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಮನವಿ ಪತ್ರದಲ್ಲಿ ಅಕ್ಕಲಕೋಟ ತಾಲ್ಲೂಕಿನ ೯೯ ಹಳ್ಳಿಗಳು ೧,೦೬,೪೦೩ ಜನಸಂಖ್ಯೆ ೬೮% ಕನ್ನಡ ಭಾಷಿಕರ ಪ್ರದೇಶವನ್ನು ಮೈಸೂರು ರಾಜ್ಯಕ್ಕೆ ಬಿಟ್ಟುಕೊಡಲು ತಾನು ಸಿದ್ಧವಿರುವುದಾಗಿ ಹೇಳಿತು. ಇದಕ್ಕೆ ಪ್ರತಿಕ್ರಿಯಿಸಿದ ಮೈಸೂರು ಸರ್ಕಾರ ಅಕ್ಕಲಕೋಟ ತಾಲ್ಲೂಕಿನಲ್ಲಿ ಕನ್ನಡ ಪ್ರಾಬಲ್ಯವಿರುವುದರಿಂದ ಇಡೀ ತಾಲ್ಲೂಕನ್ನು ಮೈಸೂರು ರಾಜ್ಯಕ್ಕೆ ಹಸ್ತಾಂತರಿಸಬೇಕು ಎಂದು ಬೇಡಿಕೆ ಮಂಡಿಸಿತು. ಇದಕ್ಕೆ ಉತ್ತರವಾಗಿ ಮಹಾರಾಷ್ಟ್ರ ಸರ್ಕಾರ ಅಕ್ಕಲಕೋಟ ತಾಲ್ಲೂಕಿನ ೧೦೧ ಹಳ್ಳಿಗಳನ್ನು ಮೈಂದರ್ಗಿ ಹಾಗೂ ದುಧನಿ ಪಟ್ಟಣಗಳನ್ನು ಮೈಸೂರು ರಾಜ್ಯಕ್ಕೆ ಹಸ್ತಾಂತರಿಸಲು ಸಿದ್ಧವಾಗಿರುವುದಾಗಿ ಮಹಾರಾಷ್ಟ್ರ ಸರ್ಕಾರ ಮಹಾಜನ ಆಯೋಗಕ್ಕೆ ತಿಳಿಸಿತು.[೭] ಹೀಗೆ ಎರಡು ಸರ್ಕಾರಗಳ ವಾದ–ವಿವಾದ ನಡೆಯುತ್ತಲೇ ಮುಂದುವರೆಯಿತು.

ಕರ್ನಾಟಕ–ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ಗಡಿವಿವಾದ ಕುರಿತು ವ್ಯಾಪಕ ಪ್ರವಾಸ ಮಾಡಿ ಹಲವಾರು ಜನರನ್ನು ಸಂದರ್ಶಿಸಿ ಈ ಕುರಿತು ಸಮಗ್ರವಾಗಿ ಅಧ್ಯಯನ ಮಾಡಿದ ನ್ಯಾಯಮೂರ್ತಿ ಮಹಾಜನ ಅವರು ತಮ್ಮ ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ೧೯೬೭ ಆಗಸ್ಟ್ ೨೫ರಂದು ಕೇಂದ್ರದ ಗೃಹಖಾತೆಗೆ ಸಲ್ಲಿಸಿದರು. ಮಹಾಜನ ವರದಿಯ ಅಕ್ಕಲಕೋಟ ತಾಲ್ಲೂಕಿನ ಸಾರಾಂಶ ಈ ರೀತಿ ಇದೆ.

‘ಅಕ್ಕಲಕೋಟ ಇಡೀ ತಾಲ್ಲೂಕಿನಲ್ಲಿ ಕನ್ನಡದ ಪ್ರಾಬಲ್ಯವಿದೆ. ಹೀಗಾಗಿ ಮಹಾರಾಷ್ಟ್ರ ರಾಜ್ಯದಿಂದ ಮೈಸೂರು ರಾಜ್ಯಕ್ಕೆ ಹಸ್ತಾಂತರಿಸಲು ಎಲ್ಲ ಅರ್ಹತೆಗಳನ್ನು ಹೊಂದಿದೆ.’ ಎಂಬುದು ನನ್ನ ತೀರ್ಪು. ೧೯೬೧ರ ಜನಗಣತಿ ಪ್ರಕಾರ ಅಕ್ಕಲಕೋಟ, ದಧನಿ ಮತ್ತು ಮೈಂದರ್ಗಿ ಪಟ್ಟಣ ಸೇರಿದಂತೆ ತಾಲ್ಲೂಕಿನ ಒಟ್ಟು ಜನಸಂಖ್ಯೆ ೧,೭೫,೩೩೩ ಈ ಪೈಕಿ ೯೯,೮೭೨ ಕನ್ನಡಿಗರು ೪೯,೫೨೫ ಮರಾಠಿ ಭಾಷಿಕರು ಮತ್ತು ೨೭,೮೭೨ ಉರ್ದು, ತೆಲುಗು ಮತ್ತಿತರ ಭಾಷಿಕರು ಇದರಲ್ಲಿ ಕನ್ನಡಿಗರ ಸಂಖ್ಯೆ ಶೇ. ೬೪.೯ ಆಡಳಿತಾತ್ಮಕ ದೃಷ್ಟಿಯಿಂದ ಒಂದು ತಾಲ್ಲೂಕಿನ ಬಹುಭಾಗವನ್ನು ಹಸ್ತಾಂತರಿಸಿ ಸ್ವಲ್ಪ ಭಾಗವನ್ನು ಉಳಿಸುವುದರಿಂದ ಹೆಚ್ಚಿನ ಪ್ರಯೋಜನವೇನೂ ಆಗುವುದಿಲ್ಲ. ಆದ್ದರಿಂದ ಕನ್ನಡದ ಹಳ್ಳಿಗಳಿಂದ ಸುತ್ತವರೆದಿರುವ ಮರಾಠಿ ಹಳ್ಳಿಗಳೂ ಸೇರಿದಂತೆ ಇಡೀ ಅಕ್ಕಲಕೋಟ ತಾಲ್ಲೂಕನ್ನು ಮೈಸೂರು ರಾಜ್ಯಕ್ಕೆ ಹಸ್ತಾಂತರಿಸುವಂತೆ ಶಿಫಾರಸ್ಸು ಮಾಡಲಾಗಿದೆ.[೮] ಮಹಾಜನ ವರದಿಯಂತೆ ಗಡಿವಿವಾದ ಬಗೆಹರಿಯದೆ ಹಾಗೆಯೇ ಉಳಿಯಿತು. ಮಹಾಜನ ವರದಿ ಕಾರ್ಯರೂಪಕ್ಕೆ ಬರುವುದು ಯಾವಾಗ?

ಗಡಿವಿವಾದದಿಂದ ಅಕ್ಕಲಕೋಟ ತಾಲ್ಲೂಕು ಅಭಿವರದ್ಧಿಯಿಂದ ವಂಚಿತವಾಯಿತು. ಸರ್.ಎಂ.ವಿಶ್ವೇಶ್ವರಯ್ಯನವರ ಮುಂಬಯಿ ಸರ್ಕಾರದ ಎಂಜಿನಿಯರ್ ಹುದ್ದೆಯಲ್ಲಿದ್ದಾಗ ಯೋಜಿತಗೊಂಡಿದ್ದಂತಹ ಅಕ್ಕಲಕೋಟೆ ತಾಲ್ಲೂಕಿನ ಬೋರಿ ನದಿಗೆ ಅಣೆಕಟ್ಟು ಕಟ್ಟುವುದನ್ನು ನಳದುರ್ಗಕ್ಕೆ ವರ್ಗಾಯಿಸಿದರು.[೯] ಬಸಲಿಂಗಪ್ಪ ನಾಗೂರ ಅವರು ಸಲಗರ ಪಾಟಾ ಹತ್ತಿರ ಹತ್ತಿ ಗಿರಣಿಯನ್ನು ಸ್ಥಾಪಿಸುವ ಯೋಜನೆಗಳನ್ನು ವಳಸಂಗಕ್ಕೆ ವರ್ಗಾಯಿಸಿದರು. ಮಾಜಿ ಶಿಕ್ಷಣ ಮಂತ್ರಿಗಳಾದ ಪಾರ್ವತಿಬಾಯಿ ಮಲಗೊಂಡಾ ಅವರು ಸಲಗರ ಪಾಟಾ ಹತ್ತಿರ ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಯೋಜನೆಯನ್ನು ದೈಹಿತಣಕ್ಕೆ ವರ್ಗಾಯಿಸಿದರೆಂದು ಸಂದರ್ಶನ ವೇಳೆಯಲ್ಲಿ ಸುಭಾಶ ನಾಗೂರ ಅವರು ಹೇಳಿದರು.[೧೦] ಅಪ್ಪಟ ಕನ್ನಡ ಪ್ರದೇಶವಿರುವ ಅಕ್ಕಲಕೋಟ ತಾಲ್ಲೂಕು ಹಲವು ಯೋಜನೆಯಿಂದ ಅಭಿವೃದ್ಧಿಯಾಗುತ್ತದೆ. ಅಕ್ಕಲಕೋಟ ತಾಲ್ಲೂಕು ಸಂಪೂರ್ಣವಾಗಿ ನೀರುಂಡ ಸಮೃದ್ಧವಾಗಿ ಕರ್ನಾಟಕಕ್ಕೆ ಸೇರಬಹುದೆಂಬ ಭಯದಿಂದ ಮಹಾರಾಷ್ಟ್ರ ಸರ್ಕಾರ ಯೋಜನೆಗಳನ್ನು ವರ್ಗಾಯಿಸುತ್ತ ಬರುತ್ತಿದ್ದಾರೆ. ಅಕ್ಕಲಕೋಟ ತಾಲ್ಲೂಕಿನ ಗಡಿವಿವಾದ ಇಂದು ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದೆ.[೧೧]

ಇಂದಿನ ಅಕ್ಕಲಕೋಟ ತಾಲ್ಲೂಕಿನ ಶಾಲೆ, ಕಾಲೇಜು, ಮನೆ, ಮಹಾವಿದ್ಯಾಲಯ, ಮಠ ಹಾಗೂ ಕಛೇರಿಗಳಲ್ಲಿ ಕನ್ನಡ ಭಾಷೆ, ಕಲೆ, ಸಾಹಿತ್ಯ, ಜೀವಂತವಾಗಿ ಉಳಿದುಕೊಂಡಿವೆ. ಸಂಶೋಧನೆ, ಅಧ್ಯಯನ, ಕ್ಷೇತ್ರ ಕಾರ್ಯ ಹಾಗೂ

ಸಂದರ್ಶನದಿಂದ 'ಅಕ್ಕಲಕೋಟ ತಾಲ್ಲೂಕಿನ ಸ್ಥಿತಿಗತಿಯ' ಬಗ್ಗೆ ಪ್ರಸ್ತಾಪಿಸಿದ್ದೇನೆ. ಇದರ ಬಗ್ಗೆ ಆಳವಾದ ಅಧ್ಯಯನ ನಡೆದು ಇತಿಹಾಸ ಪುಟಗಳಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಬೇಕಾಗಿದೆ.

ಅಡಿ ಟಿಪ್ಪಣಿಗಳು

೧. ಡಾ॥ ಓಂಕಾರ ಕಾಕಡೆ: ಮಹಾಜನ ವರದಿಯ ಅವಲೋಕ ಪು.ಸಂ. ೮೧.
೨. ಡಾ॥ ಜಿ.ಎನ್. ಉಪಾಧ್ಯ: ಮಹಾರಾಷ್ಟ್ರದ ಕನ್ನಡ ಶಾಸನಗಳು. ಪು.ಸಂ. xxxiv
೩. ಬಸವರಾಜ ಸಿ. ಮಸೂತಿ: ಕನ್ನಡದ ಕಂಪುಸೂಸುವ ಗಡಿನಾಡ ಅಕ್ಕಲಕೋಟ ಜನಪದ, ಸಂಚಿಕೆ, ನವ್ಹೆಂಬರ್ ೨೦೦೩ರಲ್ಲಿ ಪ್ರಕಟಿಸಲಾಗಿದೆ.
೪. ಡಾ॥ ಸೂರ್ಯನಾಥ ಕಾಮತ್: ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಪು.ಸಂ. ೯೩೬
೫. ಮು.ವಿ. ಸೋವನಿ: ಮಹಾರಾಷ್ಟ್ರದ ಕಾಲಮುದ್ರಾ (ಮರಾಠಿಕೃತಿ) ಪು.ಸಂ. ೧೨೬
೬. ಡಾ॥ ಸೂರ್ಯನಾಥ ಕಾಮತ್: ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಪು.ಸಂ. ೯೩೬
೭. ಡಾ॥ ಓಂಕಾರ ಕಾಕಡೆ: ಮಹಾಜನ ವರದಿಯ ಅವಲೋಕ ಪು.ಸಂ. ೭೭.
೮. ಡಾ॥ ಓಂಕಾರ ಕಾಕಡೆ: ಮಹಾಜನ ವರದಿಯ ಅವಲೋಕ ಪು.ಸಂ. ೧೧೭
೯. ಡಾ॥ ಎನ್. ಚನ್ನಸ್ವಾಮಿಸೋಸಲೆ: ಕರ್ನಾಟಕದ ಗಡಿ ಚಳುವಳಿ ಪು.ಸಂ. ೧೦೦೮
೧೦. ಸಂದರ್ಶನ ದಿನಾಂಕ: ೦೩-೧೧-೨೦೦೩ ಮಾಜಿ ನಗರಸೇವಕರಾದ ಸುಭಾಷ ನಾಗೂರ,
೧೧. ದಿನಾಂಕ: ೧೨-೧೧-೨೦೦೨ ಮತ್ತು ೧೩-೦೨-೨೦೦೩ ಸಂಯುಕ್ತ ಕರ್ನಾಟಕ

❦❦❦❦❦

ಸೊಲ್ಲಾಪುರ ಕನ್ನಡ ರಂಗಭೂಮಿ

ಸೊಲ್ಲಾಪೂರ ಜಿಲ್ಲೆಯ ಹಳ್ಳಿ–ಹಳ್ಳಿಯ ಗ್ರಾಮ ದೇವರ ಜಾತ್ರೆ–ಉತ್ಸವಗಳಲ್ಲಿ ಕನ್ನಡ ಸಾಮಾಜಿಕ ನಾಟಕ ಅಭಿನಯಿಸುತ್ತಾರೆ. ಶಾಲಾ–ಕಾಲೇಜಿನಲ್ಲಿ ರಂಗಚಟುವಟಿಕೆಗಳು ನಡೆಯುತ್ತವೆ. ಸೊಲ್ಲಾಪೂರ ನಗರದಲ್ಲಿ ಹಲವು ಸುಸಜ್ಜಿತವಾದ ರಂಗಮಂದಿರಗಳಿವೆ. ಪ್ರತಿ ತಿಂಗಳ ಒಂದು ಕನ್ನಡ ಸಾಮಾಜಿಕ ನಾಟಕ ರಂಗಮಂದಿರಗಳಲ್ಲಿ ಪ್ರದರ್ಶಿಸುತ್ತಾರೆ. ವೃತ್ತಿರಂಗಭೂಮಿ ಹಾಗೂ ಹವ್ಯಾಸಿರಂಗಭೂಮಿಗೆ ಸೊಲ್ಲಾಪೂರ ಕನ್ನಡ ರಂಗಭೂಮಿ ಅಪರಾವಾದ ಸೇವೆ ಸಲ್ಲಿಸಿದೆ. ಸೊಲ್ಲಾಪೂರ ಜಿಲ್ಲೆಯ ಮೈಂದರ್ಗಿ ವೃತ್ತಿರಂಗಭೂಮಿಯ ತವರೂರು. ಹಳ್ಳಿ–ಹಳ್ಳಿಯ ಗ್ರಾಮಗಳಲ್ಲಿ ಕಲಾವಿದರು ಗುಂಪುಕಟ್ಟಿ ಹವ್ಯಾಸಿ ನಾಟ್ಯ ಸಂಘ ಸ್ಥಾಪಿಸಿ ನಾಟಕ ಪ್ರದರ್ಶಿಸುತ್ತಾರೆ. ಕನ್ನಡದಿಂದ ಮರಾಠಿಯಲ್ಲಿ ಸಂಗೀತ ತಯಾರಿಸಿಕೊಂಡು ನಾಟಕ ಅಭಿನಯಿಸುವುದು ಇವರ ವಿಶೇಷತೆ. ರಂಗಭೂಮಿ ಕಲಾವಿದರು, ನಾಟಕಕಾರರು, ನಿರ್ದೇಶಕರು, ಹಾರ್ಮೋನಿಯಂ, ತಬಲಾವಾದಕರು ಹಾಗೂ ಕಂಪನಿಯ ಮಾಲೀಕರು ಹಲವು ಸಂಖ್ಯೆಯಲ್ಲಿದ್ದಾರೆ. ಇವರಿಗೆ ಗುರುತಿಸಿ ಗೌರವಿಸುವ ಕೆಲಸ 'ಕರ್ನಾಟಕ ನಾಟಕ ಅಕಾಡೆಮಿ' ಯಿಂದ ನಡೆಯಬೇಕಾಗಿದೆ.

೧. ಮೈಂದರ್ಗಿ ರಂಗಭೂಮಿ

ಸೊಲ್ಲಾಪೂರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ಕೇಂದ್ರದಿಂದ ೧೩ ಕಿ.ಮೀ. ಅಂತರದಲ್ಲಿ ಮೈಂದರ್ಗಿ ನಗರವಿದೆ. ನಾಟಕ, ಬಯಲಾಟ ಹಾಗೂ ತೊಗಲು ಗೊಂಬೆಯಾಟ ಹಲವು ಜಾನಪದ ಕಲೆ ಮೈಂದರ್ಗಿ ನಗರದಲ್ಲಿ ಜೀವಂತವಾಗಿವೆ. ಮೈಂದರ್ಗಿ ನಗರ ಕಲಾವಿದರ ತವರೂರು. ಮಹಾರಾಷ್ಟ್ರ–ಕರ್ನಾಟಕ ಹಾಗೂ ಆಂಧ್ರಪ್ರದೇಶ ರಾಜ್ಯಗಳಲ್ಲಿ ನಾಟಕ ವಿಷಯದಲ್ಲಿ ಹೆಸರು ಮೈಂದರ್ಗಿ. ಮೈಂದರ್ಗಿಯ ಹೆಸರು ಕೇಳಿದೊಡನೆ ನಾಟಕ ವೇದಿಕೆ ಕಣ್ಣು ಕಟ್ಟುತ್ತದೆ. ಧಾರವಾಡವು ಸಾಹಿತಿಗಳ ಹಾಗೂ ಇಲಕಲ್ ಕಲಾವಿದರಿಗಾಗಿ ಹೆಸರು ವಾಸಿಯಾದಂತೆ ಮೈಂದರ್ಗಿ ನಾಟ್ಯಕಲೆ ಹಾಗೂ ಸರ್ಕಸ್‌ಗಳಿಗಾಗಿ ಹೆಸರು ಗಳಿಸಿವೆ.

ಸೊಲ್ಲಾಪೂರ ಜಿಲ್ಲೆಯಲ್ಲಿ ಮೊದಲ ಭಾರಿಗೆ ಕನ್ನಡ ನಾಟಕಗಳಿಗೆ ನಾಂದಿ ಹಾಡಿದ ಶ್ರೇಯಸ್ಸು ಮೈಂದರ್ಗಿ ಗ್ರಾಮದ ಶ್ರೀ ಘನ್ನಿಂಗ್ ಮಾಸ್ತರರ ಬಳಗಕ್ಕೆ ಸಲ್ಲುತ್ತದೆ. ಅದು ನಡೆದದ್ದು ೧೯೩೩/೩೪ ರಲ್ಲಿ (ನಾಟಕ ವಿಜಯನಗರ ಪತನ) ಸುಮಾರು ೫೦ ವರ್ಷಗಳು ಹಿಂದೆ ಸ್ಥಾಪನೆಗೊಂಡು ಮಹಾರಾಷ್ಟ್ರ ಸರಕಾರದಿಂದ ಮಾನ್ಯತೆ ಪಡೆದ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘವು ಇಂದಿನ ಯಾಂತ್ರಿಕ ಸ್ಪರ್ಧಾತ್ಮಕ ಯುಗದಲ್ಲಿ ಆರ್ಥಿಕವಾಗಿ ಪೆಟ್ಟುತಿಂದು ಬಂದ್ ಆಗಿದ್ದರೂ, ಅನುಕೂಲಕರವಾದ ಗಾಳಿ ಬೀಸೀತು ಎಂದು ನಂಬಿ ಇನ್ನೂ ಜೀವ ಹಿಡಿದುಕೊಂಡು ಬದುಕಿದೆ. ಮೈಂದರ್ಗಿ ನಾಟ್ಯ ಕಲಾವಿದರ ಬೀಡು ಇಲ್ಲಿ ಸುಮಾರು ಒಂದು ನೂರರಷ್ಟು ನಾಟ್ಯ ಕಲಾವಿದರು, ಕಲಾ ಪೋಷಕರು ಸಿಗುತ್ತಾರೆ.[೧]

ಶ್ರೀ ಬಸವೇಶ್ವರ ನಾಟ್ಯ ಸಂಘ, ಶ್ರೀ ಶಿವಚಲೇಶ್ವರ ನಾಟ್ಯ ಸಂಘ, ಶ್ರೀ ಚೌಡೇಶ್ವರ ನಾಟ್ಯ ಸಂಘ, ಶ್ರೀ ರೇಣುಕಾಚಾರ್ಯ ನಾಟ್ಯ ಸಂಘ, ಶ್ರೀ ರೇವಣಸಿದ್ಧ

ನಾಟ್ಯ ಸಂಘ, ಶ್ರೀ ಮಹಾಂತೇಶ್ವರ ನಾಟ್ಯ ಸಂಘ, ಶ್ರೀ ವೀರಭದ್ರೇಶ್ವರ ನಾಟ್ಯಸಂಘ ಹಲವು ನಾಟ್ಯ ಸಂಘಗಳು ಮೈಂದರ್ಗಿಯಲ್ಲಿವೆ. ಮೈಂದರ್ಗಿಯ ರಂಗ ಕಲೆ ಅರಳಿ ಮುಂದೆ ವೃತ್ತಿರಂಗಭೂಮಿ ಸೇವೆ ಸಲ್ಲಿಸಲು ಪ್ರಾರಂಭಿಸಿದವು.

ಉತ್ತರ ಕರ್ನಾಟಕದಲ್ಲಿ ಮಧ್ಯಮ ವರ್ಗದ ಶಿಕ್ಷಿತ ಸಮುದಾಯ ನಾಟಕ ಕಂಪನಿಗಳನ್ನು ಸ್ಥಾಪಿಸಿದರೆ, ಹಳೇ ಮೈಸೂರು ಪ್ರದೇಶಗಳಲ್ಲಿ ಮೈಸೂರು ಅರಸರುಗಳೇ ನಾಟಕ ಕಂಪನಿಗಳನ್ನು ಸ್ಥಾಪಿಸಿ ಕೆಲಕಾಲ ಪೋಕ್ಷಿಸಿದಂತೆ, ಇತ್ತ ಗಡಿನಾಡ ಮೈಂದರ್ಗಿಯ ಪೋಷಕರ ಸಹಕಾರದಿಂದ ಮೈಂದರ್ಗಿ ನಾಟ್ಯ ಸಂಘಗಳು ವೃತ್ತಿರಂಗಭೂಮಿಯಲ್ಲಿ ಪ್ರವೇಶ ಮಾಡಿ ಹೆಸರುಗಳಿಸಿವೆ.

ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ, ಶ್ರೀ ಗುರುರೇವಣಸಿದ್ಧ ಹಾಗೂ ಶ್ರೀ ವಿಜಯ ಮಹಾಂತೇಶ್ವರ ಮೂರು ನಾಟ್ಯ ಸಂಘಗಳು ನಾಡಿನ ವೃತ್ತಿರಂಗಭೂಮಿ ಕಂಪನಿಗಳ ಸರಿಸಮಾನವಾಗಿ ನಾಡಿನಾದ್ಯಂತ ವೃತ್ತಿರಂಗಭೂಮಿಯ ಅಪಾರವಾದ ಸೇವೆ ಸಲ್ಲಿಸಿವೆ. ನಾಡಿನ ಹಿರಿಯ ರಂಗಭೂಮಿ ಕಲಾವಿದರಾದ ಗುಬ್ಬಿ ವೀರಣ್ಣ ಬಸವರಾಜ ಗುಡಗೇರಿ, ಚಿತ್ರನಟ ಸುಧೀರ ಅವರು 'ಮೈಂದರ್ಗಿ ರಂಗ ಕಲೆ' ಅಭಿನಯ ಮೆಚ್ಚಿ ಪ್ರಶಂಸಿಸಿದ್ದಾರೆ.[೨]

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ಹಾಗೂ ಪ್ರಸಿದ್ಧ ಚಲನಚಿತ್ರ ನಿರ್ದೇಶಕರಾದ ಬಿ. ಸುರೇಶ ಅವರು 'ಸೋಲಾಪೂರ ಗಡಿನಾಡ ಕನ್ನಡಿಗರ ಉತ್ಸವಕ್ಕೆ' ಆಗಮಿಸಿ 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ'ದ ಉದ್ಘಾಟನೆ ಮಾಡಿದರು. ಇಂದಿಗೂ ಸಹ ಮೈಂದರ್ಗಿ ರಂಗಭೂಮಿ ಕಲೆ ಜೀವಂತವಾಗಿ ಉಳಿದು, ಹಲವು ಏಳುಬೀಳುಗಳು ಅನುಭವಿಸುತ್ತಾ ರಂಗಭೂಮಿ ಸಾಗರದಲ್ಲಿ ಮೈಂದರ್ಗಿಯ ಕಲೆಯ ದೋಣಿ ಸಾಗುತ್ತಿದೆ.

ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ, ಮೈಂದರ್ಗಿ

ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಮೈಂದರ್ಗಿಯಲ್ಲಿ ಉದಯವಾಗಿ, ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯಗಳಲ್ಲಿ ಜಯಭೇರಿ ಪಡೆಯಿತು. ಸಾವಿರಾರು ಕಲಾವಿದರು ಈ ಕಂಪನಿಯಲ್ಲಿ ಬೆಳಕಿಗೆ ಬಂದರು. ಹಲವು ಕಲಾವಿದರ ಆಶ್ರಯತಾಣವಾಯಿತು. ಕರ್ನಾಟಕ ಏಕೀಕರಣ ಹೋರಾಟಗಾರ ಹಾಗೂ ಮೈಂದರ್ಗಿ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಶ್ರೀ ಷ.ಬ್ರ. ವೀರಸಂಗಶಿವಾಚಾರ್ಯರ ಬೆಂಬಲದಿಂದ ೧೯೫೮ರಲ್ಲಿ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಸ್ಥಾಪನೆಯಾಯಿತು. ಮೈಂದರ್ಗಿಯ ಮಾಜಿ ನಗರಾಧ್ಯಕ್ಷರಾದ ಮಹಾದೇವ ಹಿರಸ್ಕರ, ನಾಗಣ್ಣ ಗೊಬ್ಬೂರ ಇಪ್ಪತ್ತು ವರ್ಷ ಈ ಕಂಪನಿ ನಡೆಸಿದರು.

ರೇಣುಕಾಚಾರ್ಯ ಕಂಪನಿ ಹಲವು ನಗರ, ಪಟ್ಟಣ, ಗ್ರಾಮಗಳಲ್ಲಿ ಕ್ಯಾಪ್ ಹಾಕುತ್ತಾ ೧೩ ವರ್ಷಗಳವರೆಗೆ ಕಂಪನಿ ತವರೂರಿಗೆ ಆಗಮಿಸಲಿಲ್ಲ. ಬೀದರ, ಹುಮನಾಬಾದ, ರಾಜೆಸೂರ, ಬಾಲ್ಕಿ, ಔರಾದ, ಆಳಂದ, ನಾಲವಾರ, ಅಫಜಲಪೂರ, ಶಹಬಾದ, ಬಿಜಾಪೂರ, ಸಿಂಧಗಿ, ಆಲಮೇಲ್, ಅಕ್ಕಲಕೋಟ, ದುಧನಿ, ಸೊಲ್ಲಾಪೂರ

ಹಲವು ನಗರ ಪಟ್ಟಣ ಗ್ರಾಮಗಳಲ್ಲಿ ಕಂಪನಿ ಕ್ಯಾಂಪ್ ಹಾಕಿದೆ. ಅಫಜಲಪೂರ ಕ್ಯಾಂಪಿಗೆ ಪಂಚಪೀಠದ ಐದು ಜನ ಜಗದ್ಗುರುಗಳು ನಾಟಕ ನೋಡಿ ಆಶೀರ್ವಾದ ನೀಡಿದರು. ಒಂದು ಊರಿನಿಂದ ಇನ್ನೊಂದು ಊರಿಗೆ ಕ್ಯಾಂಪ್ ಹಾಕುತ್ತಾ ಸಾಗುತ್ತಿರುವ ಕಂಪನಿ ತನ್ನದೇಯಾದ ವೈಭವದಿಂದ ಮೆರೆಯುತ್ತಿತ್ತು.

ಹಸಿರು ಬಳೆ, ರೈತನ ಮಕ್ಕಳು, ಜಗಜ್ಯೋತಿ ಬಸವೇಶ್ವರ, ರಾಜಾ ಸತ್ಯಹರಿಶ್ಚಂದ್ರ, ಗೌಡರ ಗದ್ದಲ, ಕೊಂಡು ತಂದ ಗಂಡ, ರತ್ನ, ಮಾಂಗಲ್ಯ, ಸಿಂಧೂರ ಲಕ್ಷಣ, ದೇವರಿಗೆ ನೆನಪಿಲ್ಲ, ವರನೋಡಿ ಹೆಣ್ಣುಕೊಡು, ಮುಂಡರ ಗಂಡ, ಬಸ್ ಕಂಡಕ್ಟರ್ ಹಲವು ಸಾಮಾಜಿಕ ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳನ್ನು ಇವರು ಅಭಿನಯಿಸುತ್ತಿದ್ದರು.

ರಾಜಾ ಸತ್ಯ ಹರಿಶ್ಚಂದ್ರ ನಾಟಕದ ಪ್ರಯೋಗ ಒಂದರಲ್ಲಿ ೧೦೦ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಕಲಾವಿದರು ನಾಟಕ ಅಭಿನಯಿಸಿರುವುದು ವಿಶೇಷ.[೩] ನಾಡಿನ ಹಿರಿಯ ವೃತ್ತಿರಂಗಭೂಮಿ ನಾಟಕ ಕಂಪನಿಗಳಾದ ಗುಬ್ಬಿವೀರಣ್ಣ, ಬಸವರಾಜ ಗುಡಗೇರಿ ಅವರೊಂದಿಗೆ ಸರಿಸಮಾನವಾಗಿ ಮೈಂದರ್ಗಿ ನಾಟಕ ಕಂಪನಿಗಳು ಹೆಸರು ಗಳಿಸಿವೆ.

ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ ನಾಟಕ ಅಭಿನಯಿಸಲು ಬೇಕಾದ ಎಲ್ಲ ಪ್ರಕಾರದ ಪರಿಕರಗಳಿದ್ದವು. ಬೆಳ್ಳಿಯ ತೆರೆಯ ಕಡೆಗೆ ಜನರು ದಾವಿಸ ತೊಡಗಿದ್ದರಿಂದ ರಂಗಭೂಮಿ ಹಾಗೂ ರಂಗ ಕಲೆ ಮಾಯವಾಗುತ್ತಾ ಸೊರಗತೊಡಗಿತು. ಆಧುನಿಕತೆ, ಅಶ್ಲೀಲತೆಗೆ ಹಾಗೂ ಕೆಳಮಟ್ಟದ ಸಾಹಿತ್ಯವನ್ನು ಬಳಸದ್ದರಿಂದಲೇ ಈ ಸಂಸ್ಥೆ ಸೊರಗಲು ಪ್ರಮುಖ ಕಾರಣವಾಯಿತು. ಇನ್ನೊಂದು ಕಡೆ ಕಲಾವಿದರು ಕೆಲವು ಚಟಗಳಿಗೆ ಬಲಿಯಾಗಿ, ರಂಗಕಲೆ ಆರೋಪ ಬರಲು ಕಾರಣವಾಯಿತು. ರೇಣುಕಾಚಾರ್ಯ ನಾಟ್ಯ ಸಂಘ ಸಾಲದ ಸುಳಿಗೆ ಸಿಲುಕಿ ತನ್ನ ಸಾಹಿತ್ಯಗಳಾದ ರಂಗ ಪರಿಕರಗಳು, ಪತರಾ, ಕಟ್ಟಿಗೆಯ ಕಂಬ, ಹಾರ್ಮೋನಿಯಂ ಇವೆಲ್ಲವುಗಳನ್ನು ಬೇರೆ ಕಂಪನಿಗಳಿಗೆ ಮಾರಾಟ ಮಾಡಿ ಸಾಲಮಾಡಿಕೊಂಡು ಕಂಪನಿ ಮುಚ್ಚಬೇಕಾಯಿತು. ೧೯೮೨ರಲ್ಲಿ ಕಂಪನಿ ತವರೂರಿಗೆ ಆಗಮಿಸಿತು.

ಕಲಾವಿದರ ಅಂತರ ಕಲಹ, ಸಾಲ ಹಾಗೂ ಹಲವು ಕಾರಣಗಳಿಂದ ರೇಣುಕಾಚಾರ್ಯ ನಾಟ್ಯ ಸಂಘ ಪುನಾಃ ಪ್ರಾರಂಭಿಸುವುದು ಅಸಾಧ್ಯವಾಯಿತು. ಕಂಪನಿ ಮೊದಲಿಗೆ ಹಾಗೆಯೇ ಚೇತರಿಸಿಕೊಳ್ಳಲು ಮಲ್ಲಕಿಕಾರ್ಜುನ ಮಡ್ಡೆ ಅವರು ಪ್ರಯತ್ನಪಟ್ಟರು. ೧೯೯೫ರಲ್ಲಿ ಕಂಪನಿಯ ಮಾಲೀಕರಾಗಿ ಮಲ್ಲಿಕಾರ್ಜುನ ಮೆಡ್ಡೆ ಅವರು ಕಾರ್ಯನಿರ್ವಹಿಸಿದರು. ೧೯೯೫ರಿಂದ ೨೦೧೧ ಇಲ್ಲಿಯವರೆಗೆ ಕಂಪನಿ ಹಲವು ಏಳು ಬೀಳುಗಳನ್ನು ಅನುಭವಿಸುತ್ತಾ ಜೀವಂತವಾಗಿ ಉಳಿದಿದೆ. ಕರ್ನಾಟಕ

ನಾಟಕ ಅಕಾಡೆಮಿಯ 'ನಾಟಕ ಕಂಪನಿಗಳ ಧನಸಹಾಯ ಯೋಜನೆಯಲ್ಲಿ' ಈ ಕಂಪನಿಗೆ ೧೯೯೮ರಿಂದ ಧನಸಹಾಯ ದೊರೆಯುತ್ತಿದೆ. ರೇಣುಕಾಚಾರ್ಯ ಕಂಪನಿ ಚೇತರಿಸಿ ಕೊಳ್ಳಲು ಅನುಕೂಲವಾಯಿತು. ಪ್ರತಿ ವರ್ಷದಲ್ಲಿ ಕಂಪನಿ ಎರಡು ಅಥವಾ ಮೂರು ಕ್ಯಾಂಪ್ ಮಾಡಿಕೊಂಡು ತವರೂರಿಗೆ ಆಗಮಿಸುತ್ತದೆ. ನಾಟಕ ಪರಿಕರಗಳು, ಬಾಡಿಗೆ ರೂಪದಲ್ಲಿ ಹಳ್ಳಿ-ಹಳ್ಳಿಯ ನಾಟಕಗಳಿಗೆ ಹೋಗುತ್ತವೆ. ಆರ್ಥಿಕ ವ್ಯವಹಾರಗಳಿಗಾಗಿ ಕಂಪನಿ ಜೀವ ಹಿಡಿದಿದೆ. ಕಂಪನಿಯ ಮಾಲೀಕರಾದ ಮಲ್ಲಿಕಾರ್ಜುನ ಮಡ್ಡೆ ಅವರಿಗೆ ಹಲವು ಸಂಘ-ಸಂಸ್ಥೆಗಳು ಗೌರವಿಸಿವೆ. ೨೦-೮-೧೧ ರಂದು ಕರ್ನಾಟಕ ನಾಟಕ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿದೆ.

ಶ್ರೀ ಗುರು ರೇವಣಸಿದ್ಧ ನಾಟ್ಯ ಸಂಘ, ಮೈಂದರ್ಗಿ

ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಪ್ರಸಿದ್ಧ ವೃತ್ತಿರಂಗಭೂಮಿ ಕಂಪನಿ ವೈಭವದಿಂದ ಮೆರೆಯಿತು. ರೇಣುಕಾಚಾರ್ಯ ಕಂಪನಿಯ ಕಲಾವಿದರಲ್ಲಿ ಅಂತಃಕಲಹ ನಿರ್ಮಾಣವಾಗಿ ಕಲಾವಿದರಾಗಿ ಸಿದ್ಧರಾಜ ಚಡವಣರು ೧೯೭೨ರಲ್ಲಿ ಶ್ರೀ ಗುರು ರೇವಣಸಿದ್ಧ ನಾಟ್ಯ ಸಂಘ, ಮೈಂದರ್ಗಿಯಲ್ಲಿ ಸ್ಥಾಪಿಸಿದರು. ಸಿದ್ಧರಾಜ ಚಡಚಣರ 'ಶ್ರೀ ಗುರು ರೇವಣಸಿದ್ಧೇಶ್ವರ ನಾಟ್ಯ ಸಂಘ' ಬೀದರ, ಹುಮನಾಬಾದ, ಚಿಟಗುಪ್ತ, ಜಾರಾದ್, ಬಿಲಗುಂದಿ, ಶಹಬಾದ, ಮೈಂದರ್ಗಿ, ಅಕ್ಕಲಕೋಟ, ಸೊಲ್ಲಾಪೂರ ಹಲವು ನಗರ ಪಟ್ಟಣಗಳಲ್ಲಿ ಕ್ಯಾಂಪ್ ಹಾಕಿದರು.

ಜಗಜ್ಯೋತಿ ಬಸವೇಶ್ವರ, ರತ್ನಮಾಂಗಲ್ಯ, ಮಲಮಗಳು, ಗೌಡರಗದ್ದಲ, ಸಿಂಧರ ಲಕ್ಷ್ಮಣ, ಹಸಿರು ಬಳೆ, ರೈತನ ಮಕ್ಕಳು ಹಲವು ಪೌರಾಣಿಕ, ಐತಿಹಾಸಿಕ ಸಾಮಾಜಿಕ ನಾಟಕ ಪ್ರದರ್ಶಿಸುತ್ತಿದ್ದರು. ಗೌಡರ ಗದ್ದಲ ನಾಟಕ ಅಭಿನಯಿಸಲು ಚಿತ್ರನಟ ಸುಧೀರ ಹಲವು ಸಲ ಆಗಮಿಸಿದರು. ೧೯೯೮ರಲ್ಲಿ 'ಕರ್ನಾಟಕ ಕಲಾ ವೈಭವ ಸಂಘ' ಸ್ಥಾಪಿಸಿದರು.[೪] ಸುಧೀರ್ ಅವರೊಂದಿಗೆ ಸಿದ್ಧರಾಜ ಬೆಂಗಳೂರಿಗೆ ಹೋದರು. ಇತ್ತ ರೇವಣಸಿದ್ಧ ಕಂಪನಿಯ ಜವಾಬ್ದಾರಿ ಭೀಮಶಾ ಹುಲಮನಿ ಅವರು ಸ್ವೀಕರಿಸಿದರು. ಜನರು ನಾಟಕ ನೋಡಲು ಬರುವುದು ಕಡಿಮೆಯಾಗಿರುವುದರಿಂದ ಕಂಪನಿ ನಡೆಸುವುದು ಅಸಾಧ್ಯವಾಯಿತು. ಆಗಿನ ಕಾಲದ ಪ್ರಸಿದ್ಧ ಚಲನಚಿತ್ರ, ನಟ ಸುದರ್ಶನ, ನಟಿ ಶೈಲಶ್ರೀ ಅವರಿಗೆ ಭೀಮಶಾ ಹುಲುಮನಿ ಬೀದರ ಕ್ಯಾಂಪಿಗೆ 'ರತ್ನಮಾಂಗಲ್ಯ' ನಾಟಕ ಅಭಿನಯಿಸಲು ಕರೆಯಿಸಿದರು.

ರೇವಣಸಿದ್ಧ ಕಂಪನಿ ಸಾಲದ ಸುಳಿಗೆ ಸಿಲುಕಿ ಮೈಂದರ್ಗಿಗೆ ಹಿಂತಿರುಗಿತು. ೨೨-೦೨-೨೦೦೨ರಂದು ಭೀಮಶಾ ಹುಲಮನಿ ನಿಧನ ಹೊಂದಿದರು. ರಂಗಭೂಮಿ ಕಲಾವಿದ ಅಶೋಕ ಪಾಟೀಲ ರೇವಣಸಿದ್ಧ ಕಂಪನಿಯ ಪುನಶ್ಚೇತನಕ್ಕಾಗಿ ಮುಂದೆ

ಬಂದರು. ರೇವಣಸಿದ್ಧ ಕಂಪನಿಯ ಮಾಲೀಕರಾಗಿ ಅಶೋಕ ಪಾಟೀಲ ಮುಂದೆ ಬಂದರು. ಅಶೋಕ ಪಾಟೀಲ ಮೈಂದರ್ಗಿ ಕ್ಯಾಂಪ್ ಮುಗಿಸಿ, ಶಹಾಬಾದ ನಗರದಲ್ಲಿ ಕ್ಯಾಂಪ್ ಹಾಕಿದರು. ೧೧ ಜನವರಿ ೨೦೦೮ರಂದು ರೇವಣಸಿದ್ಧ ಕಂಪನಿಯ ರಂಗವೇದಿಕೆಯಲ್ಲಿ 'ವೃತ್ತಿರಂಗಭೂಮಿ ನಾಟಕ ಕಂಪನಿಗಳ ಸ್ಥಿತಿ-ಗತಿ' ವಿಷಯಗಳ ವಿಚಾರ ಸಂಕಿರಣ ಆಯೋಜನ ಮಾಡಲಾಯಿತು. ಗುಲ್ಬರ್ಗಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾದ ಬಲವಂತರಾವ್ ಪಾಟೀಲರು ವಿಚಾರ ಸಂಕೀರ್ಣಕ್ಕೆ ಆಗಮಿಸಿ ವೃತ್ತಿರಂಗಭೂಮಿ ಕಲೆ ಉಳಿಸಿಕೊಳ್ಳಲು ಕರೆ ನೀಡಿದರು. ವೃತ್ತಿರಂಗಭೂಮಿಗಳಿಗೆ ಧನಸಹಾಯ ನೀಡುವ ಭರವಸೆ ಕೊಟ್ಟರು. ವರದಿಗಾರ ಬಸವರಾಜ ಮಸೂತಿ ಅವರು 'ಮೈಂದರ್ಗಿ ರಂಗಭೂಮಿ ಕಲೆ' ಕುರಿತು ಮಾತನಾಡಿದರು. 'ನಾಟಕ ಕಲೆ ನಮ್ಮ ಉಸಿರು, ಕಲೆಯೇ ನಮ್ಮ ಬದುಕು, ಕಲೆ ಬೆಳೆಯಬೇಕೆಂಬುದು ನನ್ನ ಆಶಯವಾಗಿದೆ ಎಂದು ಕಂಪನಿಯ ಮಾಲೀಕರಾದ ಅಶೋಕ ಪಾಟೀಲರು ಅಭಿಪ್ರಾಯ ವ್ಯಕ್ತಪಡಿಸಿದರು. ಶಹಾಬಾದ ಕ್ಯಾಂಪನಲ್ಲಿ ನಾಟಕ ನಡೆಯದೆ ಹಾನಿವುಂಟಾಗಿ ಮತ್ತೆ ಕಂಪನಿ ಮೈಂದರ್ಗಿಗೆ ಹಿಂತಿರುಗಿ ಆಗಮಿಸಿತು.

ಬೆಂಗಳೂರಿನ ಗುಬ್ಬಿ ವೀರಣ್ಣ ರಂಗಮಂದಿರಕ್ಕೆ ನಾನು ಹೋಗಿದ್ದೆ. ಕರ್ನಾಟಕ ಕಲಾ ವೈಭವ ಸಂಘದ 'ಎಚ್ಚರ ತಂಗಿ ಎಚ್ಚರ' ನಾಟಕದ ಶತಮಾನೋತ್ಸವ ನಡೆಯುತ್ತಿತ್ತು. ಎಚ್ಚರ ತಂಗಿ ಎಚ್ಚರ ನಾಟಕದಲ್ಲಿ ರೇವಣಸಿದ್ಧ ನಾಟಕ ಕಂಪನಿಯ ಮಾಲೀಕರಾದ ಸಿದ್ಧರಾಜ ಚಡಚಣ (ಮೈಂದರ್ಗಿಯ ಸಿದ್ಧಣ್ಣ ಅಪ್ಪಾಜಿ) ಅವರ ರಂಗಕಲೆ ಬೆಂಗಳೂರಿನಲ್ಲಿ ಬೆಳಗುತ್ತಿದೆಯಾದರೂ, ಅವರು ಸ್ಥಾಪಿಸಿದ ಶ್ರೀ ಗುರುರೇವಣಸಿದ್ಧ ನಾಟ್ಯ ಸಂಘ ಮೈಂದರ್ಗಿಯಲ್ಲಿ ಮೌನವಾಗಿದೆ.

ವಿಜಯ ಮಹಾಂತೇಶ್ವರ ನಾಟ್ಯ ಸಂಘ

ಚೊಳಪ್ಪ ಶಾಂತರೇವ ಉದರದಿಂದ ವಿಜಯಕುಮಾರ ಜನಿಸಿದರು. ವಿಜಯಕುಮಾರ ಹಲಕಟ್ಟಿ ತಮ್ಮ ಉಪಜೀವನದ ಸಲುವಾಗಿ ಮೈಂದರ್ಗಿ ಬಿಟ್ಟು ಸೊಲ್ಲಾಪೂರಕ್ಕೆ ಹೋಗಿ ಹೋಟೆಲ್ ಉದ್ಯೋಗ ಪ್ರಾರಂಭಿಸಿದರು. ವಿಜಯಕುಮಾರ 'ಭಲೆ ಮಗಳೆ' ನಾಟಕದಿಂದ ರಂಗಪ್ರವೇಶ ಮಾಡಿದರು. ಸೊಲ್ಲಾಪೂರ ಹುತಾತ್ಮಸ್ಮೃತಿ ರಂಗಮಂದಿರದಲ್ಲಿ ಉತ್ತಮ ಅಭಿನಯದಿಂದ ವಿಜಯ ಪ್ರಸಿದ್ಧಿ ಪಡೆದರು. ವಿಜಯಕುಮಾರ ಅವರ ತಂದೆ ಚೋಳಪ್ಪ ವೃತ್ತಿರಂಗಭೂಮಿ ಕಲಾವಿದ, ವಿಜಯಕುಮಾರ ವೃತ್ತಿರಂಗಭೂಮಿಗಳ ಕಡೆಗೆ ಧಾವಿಸಿದರು. ಮೈಂದರ್ಗಿಯ ರೇಣುಕಾಚಾರ್ಯ, ರೇವಣಸಿದ್ಧ ವೃತ್ತಿರಂಗಭೂಮಿಗಳಲ್ಲಿ ವಿಜಯಕುಮಾರ ಅಭಿನಯಿಸಿ, ತರಬೇತಿ ಪಡೆದುಕೊಂಡು ಸ್ವತಃ ಕಂಪನಿ ಸ್ಥಾಪಿಸಲು ಮುಂದಾದರು.

ವಿಜಯಕುಮಾರ ಹಲಕಟ್ಟಿ ಅವರು ೧೯೮೩ರಲ್ಲಿ 'ವಿಜಯ ಮಹಾಂತೇಶ್ವರ ನಾಟ್ಯ ಸಂಘ' ಸ್ಥಾಪಿಸಿದರು. ಕಾಳಿಂಗಸರ್ಪ, ರೈತನ ಮಕ್ಕಳು, ಚೆನ್ನಪ್ಪ ಚನ್ನಗೌಡ, ಮಂಗಲಾ ನನ್ನ ಅತ್ತಿಗೆ, ಗೌಡರ ಗದ್ದಲ ಹಲವು ಸಾಮಾಜಿಕ ನಾಟಕಗಳನ್ನು ಇವರು ಅಭಿನಯಿಸಿದರು. 'ಕಾಳಿಂಗ ಸರ್ಪ' ನಾಟಕ ಒಂದು ಅಭೂತಪೂರ್ವ ಪ್ರಯೋಗ, ಜಯವೀರ ಪಾತ್ರದಲ್ಲಿ ವಿಜಯಕುಮಾರ ಉತ್ತಮವಾಗಿ ಅಭಿನಯಿಸುತ್ತಿದ್ದರು. ಈ ನಾಟಕದ ಸಲುವಾಗಿ ಇವರು ಕಡೆ ವಿಶೇಷವಾದ ನಾಟಕ ಪರಿಕರಗಳಿದ್ದವು. ರಾಕ್ಷಸನ ಬಾಯಿಂದ ಖಳನಾಯಕ ರಂಗದ ಮೇಲೆ ಆಗಮಿಸುತ್ತಿರುವ ದೃಷ್ಯ ವಿಸ್ಮಯವಾಗಿತ್ತು. ಪ್ರೇಕ್ಷಕವರ್ಗ ದುಗಡ-ದುಮ್ಮಾನದಿಂದ ನೋಡುತ್ತಿತ್ತು. ನಾಡಿನಾದ್ಯಂತ ವಿಜಯಕುಮಾರ ಅವರ 'ಕಾಳಿಂಗ ಸರ್ಪ' ನಾಟಕ ಹುಚ್ಚನೇ ಹೆಚ್ಚಿಬಿಟ್ಟಿತು. ನಾನು ವಿದ್ಯಾರ್ಥಿಯಾಗಿದ್ದಾಗ ಅವರ ನಾಟಕ ನೋಡಿ ನನಗೂ ನಾಟಕದ ಹುಚ್ಚು ಹತ್ತಿದೆ.

ಬೆಳ್ಳಿಯ ತೆರೆಯ ಕಡೆಗೆ ಜನರು ಧಾವಿಸುತ್ತಿದ್ದರು. ರಂಗಭೂಮಿ ಕಲೆ ಮಾಯವಾಗುತ್ತಿರುವ ಸಂದರ್ಭದಲ್ಲಿ ವಿಜಯಕುಮಾರ ಪ್ರೇಕ್ಷಕರನ್ನು ಸೆಳೆಯಲು ರಂಗದ ಮೇಲೆ ವಿವಿಧ ಪ್ರಯೋಗ ಮಾಡಿದರು. 'ರೈತನ ಮಕ್ಕಳು' ನಾಟಕದಲ್ಲಿ ರಂಗದ ಮೇಲೆ ವಿಜಯಕುಮಾರ ಎತ್ತಿನ ಬಂಡೆಯನ್ನೇ ತಂದರು. ವಿಜಯಕುಮಾರ ತಮ್ಮ ನಟನಾ ಕೌಶಲ್ಯದಿಂದ ಶಿಸ್ತುಬದ್ಧವಾಗಿ ಕಂಪನಿ ನಡೆಸುವ ಚಾಕಚಕ್ಯತೆ, ಕಲಾವಿದರಿಗೆ ಸೂಕ್ತ ಅವಕಾಶ ನೀಡುವ ನಾಯಕತ್ವಗುಣ, ರಂಗಸಂಗೀತದಲ್ಲಿ ಔಚಿತ್ಯ, ನಾಟಕದ ಪರದೆಗಳನ್ನು ಬರೆಸುವ ಚಾತುರ್ಯವನ್ನು ಅವರು ಕರಗತ ಮಾಡಿಕೊಂಡರು. ಪಾತ್ರಕ್ಕೆ ಬೇಕಾದ ಅಂಗಕೌಷ್ಠವ, ಗಾಂಭೀರ್ಯ ವಿಜಯಕುಮಾರ ಅವರಿಗೆ ಒಲಿದಿತ್ತು.

೧೯೮೮ರಲ್ಲಿ ಹುಮನಾಬಾದ ಶ್ರೀ ವೀರಭದ್ರೇಶ್ವರ ಜಾತ್ರೆಯಲ್ಲಿ ಒಂದು ಕಡೆ ವಿಜಯಕುಮಾರ ಹಲಕಟ್ಟಿ ಅವರು ಕ್ಯಾಂಪ್ ಹಾಕಿದರೇ, ಇನ್ನೊಂದು ಕಡೆ ಚಿತ್ರನಟ ಸುಧೀರ ಅವರು ಕ್ಯಾಂಪ್ ಹಾಕಿದರು. ವೃತ್ತಿರಂಗಭೂಮಿ ಎರಡು ಕಂಪನಿಗಳ ವೈಭವದಿಂದ ನಾಟಕ ಅಭಿನಯಿಸಿರುವುದು ಇಂದು ಇತಿಹಾಸವಾಗಿದೆ. ವಿಜಯಕುಮಾರ ಒಂದೂರಿನ ಕ್ಯಾಂಪ್ ಮುಗಿಸಿದ ತಕ್ಷಣ ಮತ್ತೊಂದು ಊರಿಗೆ ಲೈಸನ್ಸ್ ಪಡೆದು ಅಲ್ಲಿಗೆ ತಮ್ಮೆಲ್ಲ ಪರಿಕರ ಹಾಗೂ ತಂಡದೊಂದಿಗೆ ಹೋಗಿ ಗೇಣಿ ತೆಗೆದು ಟೆಂಟ ರಂಗ ಮಂದಿರ ನಿರ್ಮಿಸಿಕೊಂಡು ನಾಟಕ ಪ್ರಾರಂಭ ಮಾಡಿ ಒಳ್ಳೆಯ ಕಲೆಕ್ಷನ್ ಆದರೆ ತುಸು ಹೆಚ್ಚುಕಾಲ ಅಲ್ಲೇ ನೆಲೆ ನಿಲ್ಲುತ್ತಿದ್ದರು.

ಕಲಬುರ್ಗಿ, ವಿಜಾಪೂರ, ಸಿಂಧಗಿ, ಹುಮನಾಬಾದ, ನಾಲವಾರ, ಹಾರಕೂರ, ಶಹಾಬಾದ, ರಾಜೆಸೂರ, ಸೊಲ್ಲಾಪೂರ, ಅಕ್ಕಲಕೋಟ ಹಲವು ನಗರ ಪಟ್ಟಣಗಳಲ್ಲಿ ವಿಜಯಕುಮಾರ ಕ್ಯಾಂಪ್ ಹಾಕಿದರು. ನಾಡಿನ ಉದ್ದಗಲಕ್ಕೂ ವೃತ್ತಿರಂಗಭೂಮಿಗೆ

ವಿಜಯ ಕುಮಾರ ಅಪಾರವಾದ ಸೇವೆ ಸಲ್ಲಿಸಿದರು. ವಿಜಯಕುಮಾರ ಕಂಪನಿ ಸಹ ಸಾಲಮಾಡಿಕೊಂಡು ತವರೂರಿಗೆ ಆಗಮಿಸಿದರೆ ಅವರ ಮನೆ–ಮಠ ಮಾರಿ ಸಾಲ ತೀರಿಸಿದರು. ಮಗಳ ಮದುವೆಯ ಸಲುವಾಗಿ ವಿಜಯಕುಮಾರ 'ಗೌಡ ಮೆಚ್ಚಿದ ಹುಡುಗಿ' ಸಹಾಯಾರ್ಥವಾಗಿ ನಾಟಕ ಅಭಿನಯಿಸಿದರು. ಮಗಳ ಮದುವೆಯ ಕೆಲವೆ ದಿನಗಳಲ್ಲಿ ವಿಜಯಕುಮಾರ ನಿಧನ ಹೊಂದಿದರು.

ಮೈಂದರ್ಗಿಯ ಶ್ರೀ ಸಿದ್ಧರಾಮೇಶ್ವರ ಕನ್ನಡ ಬಳಗ ವಿಜಯಕುಮಾರ ಅವರ ಅಪಾರವಾದ ವೃತ್ತಿರಂಗಭೂಮಿಯ ಸೇವೆ ಗುರುತಿಸಿ, 'ಮರಣೋತ್ತರ ರಂಗಭೂಮಿ ಪ್ರಶಸ್ತಿ' ನೀಡಿ ಗೌರವಿಸಿದರು. ಮೈಂದರ್ಗಿಯ ರಂಗಕಲೆ ಶತಶತಮಾನಗಳಿಂದ ಬೆಳೆದು ಬಂದಿದೆ.

೨. ದುಧನಿ ರಂಗಭೂಮಿ

ಸೊಲ್ಲಾಪೂರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ೨೭ ಕಿ.ಮೀ. ಅಂತರದಲ್ಲಿ ದುಧನಿ ನಗರವಿದೆ. ಬೆಂಗಳೂರಿನಿಂದ ಮುಂಬಯಿಗೆ ಹೋಗುವ ರೈಲು ಮಾರ್ಗದಲ್ಲಿ ಕರ್ನಾಟಕದ ಗಡಿ ಮುಗಿದ ನಂತರ ಮಹಾರಾಷ್ಟ್ರದ ಮೊದಲು ರೈಲು ನಿಲ್ದಾಣ ದುಧನಿ ಸ್ಟೇಷನ್ ದೊರೆಯುತ್ತದೆ. ದುಧನಿ ಗ್ರಾಮದೇವರಾದ ಶ್ರೀ ಸಿದ್ಧರಾಮೇಶ್ವರ ಮಕರ ಸಂಕ್ರಮಣ ಜಾತ್ರೆ ವೈಭವದಿಂದ ಆಚರಿಸುತ್ತಾರೆ. ದುಧನಿಯು ಪ್ರಸಿದ್ಧ ವ್ಯಾಪಾರಿಗಳ ನಗರವಾಗಿದೆ. ಶ್ರೀ ಸಿದ್ಧರಾಮೇಶ್ವರ ಜಾತ್ರೆಯಲ್ಲಿ 'ಶ್ರೀ ಬಾಲಾಜಿ ನಾಟ್ಯ ಸಂಘ'ದಿಂದ ಕನ್ನಡ ಸಾಮಾಜಿಕ ನಾಟಕ ಪ್ರದರ್ಶಿಸುತ್ತಾರೆ. ದುಧನಿ ನಗರದಲ್ಲಿ ೫೩ ಕನ್ನಡ ಸಾಮಾಜಿಕ ನಾಟಕ ಅಭಿನಯಿಸಲಾಗಿದೆ. ೨೦೦೪ರ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದ ಪ್ರೇಮಾ ಬದಾಮಿ ಬೆಳೆದಿರುವುದು ದುಧನಿ ಕಂಪನಿಯಲ್ಲಿ.

ಮಹಾರಾಷ್ಟ್ರದ ಪ್ರಬಲ ರಾಜಕೀಯ ನಾಯಕರಲ್ಲಿ ಸಾತಲಿಂಗಪ್ಪ ಮೇತ್ರೆ ಅವರು ಒಬ್ಬರು ಶ್ರೀ ಬಾಲಾಜಿ ನಾಟ್ಯ ಸಂಘವನ್ನು ದುಧನಿಯಲ್ಲಿ ೧೯೫೫ರಲ್ಲಿ ಸ್ಥಾಪಿಸಿದರು. ಬಾಲಾಜಿ ನಾಟ್ಯಸಂಘ ಪ್ರತಿವರ್ಷ ನಾಟಕ ಅಭಿನಯಿಸುತ್ತಾ ಹಂತ ಹಂತವಾಗಿ ಪ್ರಬಲ ಹವ್ಯಾಸಿ ಕಂಪನಿಯಾಗಿ ಬೆಳೆಯಿತು. ಸಾತಲಿಂಗಪ್ಪ ಮೇತ್ರೆ ಅವರ ಮಕ್ಕಳಾದ ಕಾಶೀನಾಥ ಮೇತ್ರೆ, ಸಿದ್ಧರಾಮ ಮೇತ್ರೆ (ಮಹಾರಾಷ್ಟ್ರದ ಮಾಜಿ ಗೃಹರಾಜ್ಯಮಂತ್ರಿ) ಶಂಕರ ಮೇತ್ರೆ (ಅಧ್ಯಕ್ಷರು ಅಕ್ಕಲಕೋಟ ತಾಲ್ಲೂಕು ಕಾಂಗ್ರೆಸ್ ಕಮಿಟಿ) ಇವರು ಮಾಲೀಕರಾಗಿ ಹವ್ಯಾಸಿ ರಂಗಭೂಮಿ ಸದ್ದಿಲ್ಲದೆ ದುಧನಿ ಗರದಲ್ಲಿ ಅರಳುವ ಹೂವಿನಂತೆ ತನ್ನನ್ನು ಗುರುತಿಸಿಕೊಂಡು ಬದ್ಧತೆಯನ್ನು ಮೆರೆದಿದೆ. ದುಧನಿ ರಂಗಭೂಮಿ ಕಲೆ ಉಳಿಸಿ ಬೆಳೆಸಿದ ಕೀರ್ತಿ ಸಾತಲಿಂಗಪ್ಪ ಮೇತ್ರೆ ಅವರ ಪರಿವಾರಕ್ಕೆ ಸಲ್ಲುತ್ತದೆ. ಪುತ್ಥಳಿ, ಸಂಸಾರ ಸಮರ, ಸ್ತ್ರೀರತ್ನ, ರಕ್ತರಾತ್ರಿ, ಕುರುಕ್ಷೇತ್ರ, ಸಿಂಧೂರ

ಲಕ್ಷಣ, ಅರಿಸಿಣ–ಕುಂಕು, ಪತಿಭಕ್ತಿ ಮನೆಗೆ ತಕ್ಕ ಮಗ, ಗೌಡರ ಗದ್ದಲ, ತಾಳಿಯಿಲ್ಲದ ತಾಯಿಯಾದೆ, ಸಾಕುಮಗನ ಸವಾಲು, ಯಾಕವ್ವಾ ಗರತಿ, ನನ್ಯಾಕ ಮರೆತಿ, ರಕ್ತಸಂಬಂಧ, ಮಾತುಕೊಟ್ಟ ಮುತ್ತೈಧಿ, ಇಂದಿನ ಭಾರತ, ದುರಂತ ನಾಯಕಿ, ಕೌರವರಿನ್ನು ಸತ್ತಿಲ್ಲ, ಪ್ರಾಣದ ಪ್ರತಿಕಾರ, ಮುಡಿಯೇರದ ಮಲ್ಲಿಗೆ, ಗಂಗಿ ಹಿಡಶ್ಯಾಳ ಗುಂಗ, ಮಾಂಗಲ್ಯ ಯಾರು ಮಡಿದ ನೀಯಾರಿಗೆ? ಕುಂಕುಮ ತಂದ ಕೈಲಾಸ ಹಲವು ಸಾಮಾಜಿಕ ನಾಟಕ ಇವರು ಅಭಿನಯಿಸಿದರು.

ಬಾಲಾಜಿ ನಾಟ್ಯ ಸಂಘದ ನಿರ್ದೇಶಕರಾಗಿ ಮೈಂದರ್ಗಿಯ ಈರಣ್ಣ ನಾಗಾ, ದುಧನಿಯ ಲಕ್ಷ್ಮೀಪುತ್ರ ಖುಬಾ, ನಿಂಬಾಳದ ಪರಮೇಶ್ವರ ಲೆಂಡ ಸೇವೆ ಸಲ್ಲಿಸಿದ್ದಾರೆ. ಆಮಲಪ್ಪ ಪಾಟೀಲ, ಶಿವಬಾಳ ಗೌಂಡಿ, ಶಿವರಾಯ ಅಂಕಲಗಿ, ನಬಿಸಾಬ, ಚೆಂದಣ್ಣ ಕೊತಲಿ, ಮಳಸಿದ್ಧ ತೂಳನೂರ, ಕಾಂತು ಯರಗಲ್ಲ, ಶರಣ ಸಾವಳಗಿ, ಅಪ್ಪು ಪಂಡಿತ, ಮಹಾಂತೇಶ ಅಂಕಲಗಿ, ವಾಗೀಶ್ ಪಾಟೀಲ, ಗುರುಶಾಂತಿ ಹಳೆಮನಿ, ಮಲ್ಲಿನಾಥ ಸೊಳಶೆ, ಗುರುಶಾಂತ ಪರಮಶೆಟ್ಟಿ, ರಾಮಚಂದ್ರ ಚವ್ಹಾಣ, ಶಾಂತಪ್ಪ ಹಳಿಮನಿ, ಅಮೋಘ ಜಕಾಪೂರ ಹಲವು ಕಲಾವಿದರು ಈ ಸಂಘದ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರೇಮಾ ಬಾದಾಮಿ ಹಾಗೂ ವಾಗೀಶ ಪಾಟೀಲ ಇವರಿಬ್ಬರೂ ಟಿ.ಎಸ್. ರಂಗಾ ನಿರ್ದೇಶನದ 'ಮೌನಕ್ರಾಂತಿ' ಧಾರಾವಾಹಿಯಲ್ಲಿ ಅಭಿನಯಿಸುತ್ತಿದ್ದಾರೆ. ನಟರಾಜ ಏಣಗಿ ಅವರ ನಿರ್ದೇಶನದ 'ಕಿನ್ನರಿ' ಧಾರಾವಾಹಿಯಲ್ಲಿ ವಾಗೀಶ ಪಾಟೀಲ ಅಭಿನಯಿಸಿದ್ದಾರೆ.

ರಂಗಭೂಮಿಯ ಭವಿಷ್ಯದ ಕುರಿತಾದ ಚಿಂತನೆ ನಡೆಯುವ ಕಾಲ ಘಟ್ಟದಲ್ಲಿ ಶಂಕರ ಮೇತ್ರೆಯವರು ರಂಗಭೂಮಿಗೆ ಜೀವ ತುಂಬಿದರು. ಬೆಳ್ಳಿಯ ತೆರೆಯಂತೆ ನಾಟಕ ಪ್ರಯೋಗ ಮಾಡಲು ನಿರ್ದೇಶಕರಿಗೆ, ಕಲಾವಿದರಿಗೆ ಸಹಕರಿಸಿ ಯಶಸ್ವಿಯಾದರು. "ಇಂದಿನ ಭಾರತ" ನಾಟಕದಲ್ಲಿ ಜೀಪ್, ಕಾರ್, ವ್ಯಾನ್, ಕುದುರೆ, ನಾಯಿ ಹಲವು ಜೀವಂತ ಪ್ರಾಣಿಗಳು ರಂಗದ ಮೇಲೆ ತಂದರು. ನಾಟಕ ಯಶಸ್ವಿಯಾಗಲು ಶಂಕರ ಮೇತ್ರಿ ಅವರ ಇನ್ನೊಂದು ರಹಸ್ಯವಾದ ಗುಟ್ಟು ಇಲ್ಲಿದೆ. ಪ್ರತಿವರ್ಷ ಎಲ್ಲ ಕಲಾವಿದರಿಗೆ ಅವರ ಪಾತ್ರಗಳಿಗೆ ಬೇಕಾದ ಹೊಸ ಬಟ್ಟೆ ತರುವುದು, ಚಲನಚಿತ್ರಗಳಲ್ಲಿರುವಂತೆ ಡಾನ್ಸ್ ನೃತ್ಯಗಳು ರಂಗದ ಮೇಲೆ ತರುವ ಮೂಲಕ ನಾಟಕ ಕಂಪನಿ ಪ್ರಸಿದ್ಧಿ ಪಡೆಯಿತಿ. ದುಧುನಿಯ ಹವ್ಯಾಸಿ ಬಾಲಾಜಿ ನಾಟ್ಯ ಸಂಘ ಬೆಳೆಸಿರುವ ಕೀರ್ತಿ ಶಂಕರ ಮೇತ್ರೆ ಸಾವಲಿಂಗಪ್ಪ ಮೇತ್ತ ಅವರಿಗೆ ಸಲ್ಲುತ್ತದೆ.

೩. ಸೋಲಾಪೂರ ಗ್ರಾಮೀಣ ರಂಗಕಲೆ

ಸೊಲ್ಲಾಪೂರ ಜಿಲ್ಲೆಯ ಗ್ರಾಮೀಣ ರಂಗಕಲೆಗಳು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಪ್ರಧಾನವಾಗಿದ್ದು, ಇದು ಅಚ್ಚ ಕನ್ನಡಿಗರ ನಾಡೆಂಬುದಕ್ಕೆ ಮಹತ್ವದ ದಾಖಲೆಗಳಾಗಿವೆ. ಗ್ರಾಮದೇವರ ಜಾತ್ರೆ–ಉತ್ಸವ ವೈಭವದಿಂದ ಆಚರಿಸುತ್ತಾರೆ. ಗ್ರಾಮೀಣ ಜನರು ದೈವಿಶಕ್ತಿಯನ್ನು ಮೊದಲಿನಿಂದಲೂ ಆರಾಧಿಸಿಕೊಂಡು ಬಂದಿದ್ದಾರೆ. ದೇವರ ಪೂಜೆ ಅಥವಾ ಸೇವೆ ಅವರ ನಿತ್ಯ ಕೆಲಸದ ಒಂದು ಅಂಗವಾಯಿತು. ದೇವರನ್ನು ಸಂತೃಪ್ತಿಪಡಿಸಲು ಜಾತ್ರೆ–ಉತ್ಸವ ಆಚರಿಸುತ್ತಾರೆ. ಗ್ರಾಮೀಣ ಜನರು ತಮ್ಮ ಗ್ರಾಮದೇವರ ಉತ್ಸವದಲ್ಲಿ ನಾಟಕ, ಗಿಗಿಪದ, ಡೊಳ್ಳುಕುಣಿತ, ಪುರವಂತರ ಕುಣಿತ, ಹಲವು ಜಾನಪದ ಕಲೆಗಳನ್ನು ಪ್ರದರ್ಶಿಸುತ್ತಾರೆ. ಗ್ರಾಮೀಣ ಜನರು ತಮ್ಮದೆಯಾದ ಗುಂಪುಕಟ್ಟಿ ನಾಟಕ ಗ್ರಾಮೀಣ ಪ್ರದೇಶಗಳಲ್ಲಿ ಕಾಣುತ್ತವೆ. ಸೊಲ್ಲಾಪೂರ ಜಿಲ್ಲೆಯ ಮಂದ್ರೂಪ, ಕುಂಭಾರಿ, ವಳಸಂಗ, ತೀರ್ಥ, ವಾಗದರಿ, ಶಿರವಳ, ಕರಜಕಿ ಜೇವೂರ, ನಾಗಣಸೂರ, ತೊಳಣಾರ, ಮಿರಜಗಿ, ಕಳ್ಳಸಲಗರ, ಬಸವ ಸಂಗೊಳ್ಳಿಗಿ, ನಾಗೂರು, ಇಬ್ರಾ ಹಿಂಪೂರ ಹಲವು ಗ್ರಾಮಗಳ ಗ್ರಾಮದೇವರ ಜಾತ್ರೆ–ಉತ್ಸವಗಳಲ್ಲಿ ಕನ್ನಡ ಸಾಮಾಜಿಕ ನಾಟಕ ಅಭಿನಯಿಸುವ ರೂಢಿ–ಸಂಪ್ರದಯ ಬೆಳಸಿಕೊಂಡು ಬಂದಿದ್ದಾರೆ. ಗ್ರಾಮೀಣ ಪ್ರದೇಶ ನಾಟಕಗಳಿಗೆ ಬದಾಮಿ, ವಿಜಾಪೂರ, ಹುಬ್ಬಳ್ಳಿ, ಇಲಿಕಲ್ಲಿನಿಂದ ನಟಿಯರಿಗೆ ಕರೆಯಿಸಿ ನಾಟಕವಾಡುವ ಪದ್ಧತಿ ಬೆಳೆದಿದೆ. ಸೊಲ್ಲಾಪೂರ ಜಿಲ್ಲೆಯ ಜಾನಪದ ಸಾಹಿತ್ಯ ಕಲೆ, ಗಾಯನ ಹಾಗೂ ಕುಣಿತಗಳ ಕುರಿತು ಸಂಶೋಧನೆ, ಅಧ್ಯಯನ ನಡೆಯಬೇಕಾಗಿದೆ.

೪. ಶಾಲಾ–ಕಾಲೇಜಿನಲ್ಲಿ ರಂಗಚಟುವಟಿಕೆ

ಸೊಲ್ಲಾಪೂರ ಸಂಗಮೇಶ್ವರ ಮಹಾವಿದ್ಯಾಲಯದಲ್ಲಿ ೧೯೭೬ ದೇವರಿಗೆ ನೆನಪಿಲ್ಲ, ೧೯೭೭ ಮಗಳ ಮಾರಾಟ, ೭೭–೭೬ ಅಳಿಯದೇವರು, ಮಾಮೂಲ, ೧೯೨೮ ಶಂಖವಾದ್ಯ ಹಲವು ನಾಟಕ ಅಭಿನಯಿಸಿದರು. ಸಂಗಮೇಶ್ವರ ಮಹಾವಿದ್ಯಾಲಯದಲ್ಲಿ ೧೯೨೬ರಲ್ಲಿ ಕನ್ನಡ ನಾಟಕಗಳಿಗೆ ಪ್ರಶಸ್ತಿ ಲಭಿಸಿವೆ.[೫] ಸೊಲ್ಲಾಪೂರ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಮಕ್ಕಳು ಕನ್ನಡ ನಾಟಕ ಅಭಿನಯಿಸುತ್ತಾರೆ. ಮೈಂದರ್ಗಿಯ ಜಿ.ಪಿ. ಪ್ರಾಥಮಿಕ ಗಂಡು ಮಕ್ಕಳ ಶಾಲೆಯ ಮಕ್ಕಳು ೧೯೮೭ರಲ್ಲಿ ಕಳ್ಳ ಕಟ್ಟಿದ ತಾಳಿ ನಾಟಕ ಅಭಿನಯಿಸಿದರು.

ಅಡಿ ಟಿಪ್ಪಣಿಗಳು

೧. ಗಡಿನಾಡ ಕನ್ನಡ ನಾಟಕಗಳು: ಬಿ.ಬಿ. ಜೇವು, ೧೯೯೬
೨. ಮೈಂದರ್ಗಿ ರಂಗಭೂಮಿ ಇತಿಹಾಸ: ಬಸವರಾಜ ಮಸೂತಿ. ಸ.ಕ.
೩. ಬಸವರಾಜ ಮಸೂತಿ ಮೈಂದರ್ಗಿ ರಂಗಭೂಮಿ ಇತಿಹಾಸ ಸ.ಕ.
೪. ರಂಗಕಲಾವಿದ ಬಸವರಾಜ ಪಂಚಗಲ್ : ಬಸವರಾಜ ಮಸೂತಿ ಸಂಯುಕ್ತ ಕರ್ನಾಟಕ
೫. ೧೯೭೬–೧೯೭೭ ಶ್ರೀ ಸಂಗಮೇಶ್ವರ ಮಹಾವಿದ್ಯಾಲಯ ಸೊಲ್ಲಾಪೂರ ಸ್ಮರಣ ಸಂಚಿಕೆ.

¥¥¥¥¥



ಸೊಲ್ಲಾಪುರ ಸಂಗಮೇಶ್ವರ ಮಹಾವಿದ್ಯಾಲಯದಲ್ಲಿ ನಡೆದ
ದೇವರಿಗೆ ನೆನಪಿಲ್ಲ ನಾಟಕದ ಒಂದು ದೃಶ್ಯ



ಮೈಂದರ್ಗಿಯ ಯುವ ರಂಗಕಲಾವಿದರು ಅಭಿನಯಿಸಿದ
ಎಚ್ಚರ ತಂಗಿ ಎಚ್ಚರ ನಾಟಕದ ಒಂದು ದೃಶ್ಯ



ಬಸವರಾಜ ಗುಡಿಗೇರಿಯವರಿಗೆ ರಂಗಭೀಷ್ಮ ಪ್ರಶಸ್ತಿ ನೀಡಿ ಸನ್ಮಾನಿಸುತ್ತಿರುವ
ಡಾ. ಬಿ.ಎಂ.ಇಕ್ಕಳಕಿ, ಬಸವರಾಜ ಮಸೂತಿ



ಶ್ರೀ ೧೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯಸಂಘದ ಮಾಲೀಕರಾದ
ಮಲ್ಲಿಕಾರ್ಜುನ ಮಡ್ಡೆ ಅವರು ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಸ್ವೀಕರಿಸುತ್ತಿರುವುದು.

ಸೊಲ್ಲಾಪುರ ಜಿಲ್ಲೆಯ ಜನಪದ ಕವಿಗಳು

ಜನದದ ಸಾಹಿತ್ಯ ಮನುಷ್ಯನು ಎಂದು ಮಾತು ಕಲಿತನೋ ಅಂದಿನಿಂದ ಹುಟ್ಟಿಕೊಂಡು ಬಂದದ್ದು ಎನ್ನುವಷ್ಟು ಪ್ರಾಚೀನವಾದುದಾಗಿದೆ. ಈ ಸಾಹಿತ್ಯವನ್ನು ಕಂಠಸ್ಥ ಸಾಹಿತ್ಯವೆಂದೂ ಕರೆಯುವರು. ಇದಕ್ಕಾಗಿ ಹಲಗೆ, ಬಳಪ ಹಿಡಿಯುವ ಅವಶ್ಯಕತೆ ಆಗದೆ ಇದ್ದಿರಲಿಲ್ಲ. ಮೌಖಿಕ ಸಂಪ್ರದಾಯದಲ್ಲಿ ಬದುಕಿಕೊಂಡು ಬಂದ ಗ್ರಂಥಸ್ಥ ಸಾಹಿತ್ಯಕ್ಕೆ ಪ್ರೇರಣೆ ನೀಡಿದೆ. ಕಥೆ, ಹಾಡು, ಒಗಟು, ಗಾದೆ ಇವು ಜನಪದ ಸಾಹಿತ್ಯ ಹಚ್ಚಿಕೊಂಡು ಬಂದಿದೆ. ಹಬ್ಬ–ಹುಣ್ಣಿಮೆ, ತಿಥಿ–ಮಿತಿ, ಜಾತ್ರೆ–ಉತ್ಸವಗಳಲ್ಲಿ ಹಾಡು ಹಾಡುತ್ತಾರೆ. ಜನಪದ ಹಾಡುಗಳು ಬಾಯಿಂದ ಬಾಯಿಗೆ, ತವರು ಮನೆಯಿಂದ ಗಂಡನ ಮನೆಗೆ, ಗಂಡನ ಮನೆಯಿಂದ ತವರು ಮನೆಗೆ, ಅಲ್ಲಿಂದ ಇಲ್ಲಿ ಇಲ್ಲಿಂದ ಅಲ್ಲಿ ಹೀಗೆ ಸಂಚರಿಸುತ್ತವೆ. ಶ್ರೀಸಾಮಾನ್ಯರಿಂದ ಶ್ರೀಸಾಮಾನ್ಯರಿಗಾಗಿ ಹುಟ್ಟಿಕೊಂಡು ಬಂದ ಈ ಸಾಹಿತ್ಯ ತೋಂಡೀ ಸಂಪ್ರದಾಯದ ಸಂಪತ್ತಾಗಿದೆ. ಸೊಲ್ಲಾಪುರದ ಜನಪದ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿ ವೈಭವದಿಂದ ಮೆರೆಯುತ್ತದೆ. ಸೊಲ್ಲಾಪುರ ಜಿಲ್ಲೆಯಲ್ಲಿ ಹಲವು ಜನಪದ ಕವಿಗಳಿದ್ದಾರೆ.

೧. ಅಕ್ಕಲಕೋಟೆ ಗುಂಬೀಶಂ

ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಗುಂಡಕನಾಳ ಗ್ರಾಮದ ಶಂಕರಗೌಡ ಮಲಕಪ್ಪಗೌಡ ಬಿರಾದಾರ ಇವರು ಬಡಕುಟುಂಬದಲ್ಲಿ ಜನಿಸಿದರು. ೧೯೮೦ರಿಂದ ಅಕ್ಕಲಕೋಟ ಶ್ರೀ ಸಿ.ಬಿ.ಖೇಡಗಿ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಈಗ ನಿವೃತ್ತಿ ಹೊಂದಿದ್ದಾರೆ. ವಿದ್ಯಾಗುರುಗಳಾದ ಶಂಕರಗೌಡ ಇವರ ಕಾವ್ಯನಾಮ ಗುಂಬೀಶಂ. ಈ ಕವಿ ಹುಟ್ಟಿನಿಂದಲೂ ಜಾನಪದ ಸೊಗಡಿನಲ್ಲಿ ಬೆಳೆದು ಬಂದವರು. ಅಂತೆಯೇ ಜಾನಪದ ಸಾಹಿತ್ಯದಲ್ಲಿ ಅತ್ಯಂತ ಆಸಕ್ತಿ. ತಮ್ಮ ಸ್ನಾತಕೋತ್ತರ ಪದವಿಯಲ್ಲಿ ಜಾನಪದವನ್ನು ಪ್ರಮುಖ ವಿಷಯವನ್ನಾಗಿ ಆಯ್ದುಕೊಂಡವರು. ಜಾನಪದ ಇವರ ಜೀವಾಳವಾದರೆ ಶರಣ ಸಾಹಿತ್ಯ ಇವರ ಆತ್ಮಶಕ್ತಿಯಾಗಿದೆ.

ಅಕ್ಕಲಕೋಟದಲ್ಲಿ ಪ್ರಪ್ರಥಮವಾಗಿ "ಕನ್ನಡ ಬರಹಗಾರರ ಬಳಗ" ಸಂಘವನ್ನು ಕಟ್ಟಿ, ಅದರ ಅಧ್ಯಕ್ಷರಾಗಿ ಈ ಭಾಗದ ಅನೇಕ ಬರಹಗಾರರನ್ನು, ಕವಿಗಳನ್ನು ರೂಪಿಸಿದ ಶಿಲ್ಪಿಗಳಾಗಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯಾಭಿವೃದ್ಧಿಗೂ ಕ್ರಿಯಾಶೀಲರಾಗಿ ಗಡಿನಾಡಿನಲ್ಲಿ ಕನ್ನಡಿಗರನ್ನು ಎಚ್ಚರಿಸಿದ್ದಾರೆ. ಅಖಿಲ ಕರ್ನಾಟಕ ಜಾನಪದ ಕಲಾಮೇಳವನ್ನು ಸುಮಾರು ೪೦೦ ಕಲಾಮೇಳದವರನ್ನು ಭಾಗವಹಿಸುವಂತೆ ಮಾಡಿ ೧೯೮೭ರಲ್ಲಿ ಸೊಲ್ಲಾಪುರದಲ್ಲಿ ಕಲಾಮೇಳವನ್ನು ಯಶಸ್ವಿಯಾಗಿಸಿದ್ದಾರೆ.

ವಿಜಾಪುರ ಜಿಲ್ಲೆಯ ಲಾವಣಿ ಇತಿಹಾಸ, ಜನಪದ ಸಾಹಿತ್ಯದಲ್ಲಿ ಶಿವಯೋಗಿ ಸಿದ್ಧರಾಮೇಶ್ವರ, ಜನಪದ ಸಾಹಿತ್ಯದಲ್ಲಿ ಬಸವಣ್ಣನವರು, ಪ್ರೀತಿ ಜಾನಪದ ರೂಪಕ, ಹೆಣಬಾರ (ಜಾನಪದ ರೂಪಕ), ಜನಪದರ ಲೈಂಗಿಕ ನೆಲೆ, ಜನಪದರ ಜೀವಾಳ ಇತ್ಯಾದಿ ಜಾನಪದ ಸಾಹಿತ್ಯದ ಕೃತಿಗಳಲ್ಲದೆ ರುದ್ರಾಕ್ಷಿ, ಬಿಲ್ವದಮಹತ್ವ, ಹಸನು ಬದುಕಿಗೆ

ಹಾದಿ, ಮಹಾಮನೆಯ ಮಣಿಹ ಇತ್ಯಾದಿ ೩೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಹಲವು ಕೃತಿಗಳನ್ನು ಪ್ರಕಟಮಾಡಿದ್ದಾರೆ. ಇವರ ಉಪನ್ಯಾಸ, ಪ್ರವಚನ ಹಾಗೂ ಹಾಡುಗಳು ನಾನು ಕೇಳಿರುವೆ. ಅವರಲ್ಲಿರುವ ಕನ್ನಡ ಸಾಹಿತ್ಯದ ರಸವನ್ನೀರಲು ಪ್ರಯತ್ನಿಸಿದೆ.

"ಎಚ್ಚರಿಟ್ಟು ನಡೆಯುವರಿಗೆ ಎಲ್ಲಾ ಐತಿ
ಮುತ್ತು ರತ್ನದ ಗುಣಕ್ಕೆ ಬೆಲಿ ಐತಿ
ಹತ್ತುಮಂದಿ ಗುಪ್ತರನ ನೇಸಿಸೈತಿ
ಚಿತ್ತಚೋರ ಜನರಿಗೆ ಗಲ್ಲ ಐತಿ"[೧]

ಗಣಪಗೆ ಶರಣು

ಸುರವಿಗಿ ಮಾಡ್ತೇವಿ ಶರಣು
ಗಣಪನ ಪಾದಕ ನಮ್ಮ ಶರಣು
ಕರಕಿ ಪತ್ತರಿ ಹೂವ ಚಂದ
ಕರಿಕಣ್ಣಿನ ಟೆಂಗಿನಕಾಯಿ ತಂದ
ಗೊನಿ ಗೊನಿ ಬಾಳಿಕಾಯಿ ಮುಂದ
ಬುಟ್ಟಿ ತುಂಬ ಕರಿಗಡಬ ತುಂಬಿ ತಂದ
ನಾವು ಮಾಡ್ತೇವಿ ಬಾಲಕರು ಇಂದ
ಗಣಪನ ಪೂಜೆ ಒಳ್ಳೆ ಪಸಂದ
ಸಂಕಟ ಬರಬಾರದು ನಮಗೆಂದೆಂದ

ಜಾನಪದ ಕವಿ ಗುಂಬೀಶಂ ಹಲವು ಹಾಡುಗಳನ್ನು ಬರೆದಿದ್ದಾರೆ. ಅವರ ಹಲವು ಕೃತಿಗಳು ಪ್ರಕಟವಾಗಿವೆ.

೨. ಗೈಬೀಸಾ ರಾಜೇಶ ಮಕಾದಾರ, ಅಂದೇವಾಡಿ

ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ಅಂದೇವಾಡಿ ಗ್ರಾಮದ ಗೈಬೀಸಾ ಪ್ರಸಿದ್ಧ ಗೀಗೀಪದ ಹಾಡುಗಾರ. ಮುಸಲ್ಮಾನ ರಾಜೇಶ ಕುಲಸುಮ ಇವ ಮಗನಾಗಿ ಗೈಬೀಸಾ ಜನಿಸಿದರು. ಗೈಬೀಸಾ ಗುರು ಡಾ. ಗುರುಮಲ್ಲೇಶಪ್ಪ ೧೭,೦೦೦ ಗೀಗೀಪದ ಹಾಡುಗಳು, ೧೦೦೦ ವಚನ ತ್ರಿಪದಿಗಳನ್ನು ರಚನೆ ಮಾಡಿದ್ದಾರೆ.[೨] ಅವರು ಕರ್ನಾಟಕ, ಮಹಾರಾಷ್ಟ್ರ, ಹಳ್ಳಿ-ಹಳ್ಳಿಯ ಜಾತ್ರೆ-ಉತ್ಸವಗಳಲ್ಲಿ ಗೀಗೀಪದ ಹಾಡುಗಳಿಂದ ಪ್ರಸಿದ್ಧಿ ಪಡೆದುಕೊಂಡಿದ್ದಾರೆ. ಶ್ರೀ ಶಿವಚಲೇಶ್ವರ ಜಾತ್ರೆಯಲ್ಲಿ ಇವರ ಹಾಡುಗಳನ್ನು ಕೇಳಿ ನಾನು ಆನಂದಪಟ್ಟಿದ್ದೇನೆ. ಗೈಬೀಸಾ ಅವರಿಗೆ ಹಲವು ಸಂಘ-ಸಂಸ್ಥೆಗಳಿಂದ ಪ್ರಶಸ್ತಿ-ಸನ್ಮಾನ ದೊರೆತಿವೆ.

೩. ಶ್ರೀ ಶಾಂತಲಿಂಗೇಶ್ವರ ಜಾನಪದ ಸಂಘ, ದುಧನಿ

ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆ ತಾಲ್ಲೂಕಿನ ದುಧನಿ ನಗರದ ಶ್ರೀ ಶಾಂತಲಿಂಗೇಶ್ವರ ಜಾನಪದ ಸಂಘವಿದೆ. ಶ್ರೀ ಮ.ನಿ.ಪ್ರ. ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು ಈ ಸಂಘ ಸ್ಥಾಪಿಸಿದರು. ದುಧನಿಯ ಗುರುಶಾಂತಪ್ಪ ನಿಂಗಪ್ಪ

ಕಲ್ಲೂರ, ಲಕ್ಷ್ಮೀಪುತ್ರ ಸಾತಲಿಂಗಪ್ಪ ಬುಬಾ, ನಿಂಗಣ್ಣ ಬಸವತ್ರಪ್ಪ ವಾಡಿ, ನಿಂಗಣ್ಣ ಸಿದ್ರಾಮಪ್ಪ ಕಲ್ಲೂರ, ವಿಠ್ಠಲ ಸಿದ್ರಾಮಪ್ಪ ಠಕ್ಕಳಕಿ, ಶಂಕರ ಸಾತಲಿಂಗಪ್ಪ ಜಿವಾಜಿ, ಉಸ್ಮಾನಸಾಬ ಮೈಲಾರ ಸಾಹೇಬ ನದಾಫ, ಹಣಮಂತ ಸೈದಪ್ಪಾ ಮಲಾರಿ, ನಾಗಣ್ಣ ಶಾಂತಪ್ಪ ಮಲಾರಿ ಇವರು ಕನ್ನಡ ಹಂತ್ತಿಯ ಜಾನಪದ ಪದಗಳನ್ನು ಹಾಡುತ್ತಾರೆ. ಶ್ರೀ ಶಾಂತಲಿಂಗೇಶ್ವರ ಚರಿತ್ರೆ, ಶ್ರೀ ಗುರುಶಾಂತಲಿಂಗೇಶ್ವರ ಚರಿತ್ರೆ, ಸಿಂಧೂರ ನರಸಣ್ಣ, ಜಗಜ್ಯೋತಿ ಬಸವೇಶ್ವರ, ಹಂತ್ತಿಯ ಪದ ಹಲವು ಕನ್ನಡ ಜಾನಪದ ಹಾಡುಗಳನ್ನು ಈ ಸಂಘದ ಮೂಲಕ ಹಾಡುತ್ತಾರೆ. ಇವರಿಗೆ ಕಾಣಿಕೆಯ ರೂಪದಲ್ಲಿ ಆಗಮಿಸಿದ ಹಣ ದುಧನಿಯ ವಿರಕ್ತಮಠಕ್ಕೆ ಅರ್ಪಿಸಿದ್ದಾರೆ. ದುಧನಿಯ ಜಾನಪದ ಕವಿಗಳ ಗುರು ದುಧನಿಯ ಶ್ರೀ ಶಾಂತಲಿಂಗೇಶ್ವರ.

ದೈವ ನೀವು ಕುಂತರಿ ನೆರದೂ,
ಶಾಂತಲಿಂಗೇಶ್ವರನು ಬಂದೋ
ದುಧನಿಯ ಗ್ರಾಮದಲ್ಲಿ
ಅವರು ನೆನದಿದಾರಂದೂ
ಶಾಂತೇಶ್ವರ ಕೈಲಾಸದಂಗ
ದುಧನಿಯ ಗ್ರಾಮ ಹೊಳೆಯಿತಾದಂದೊ.[೩]

೪. ಮೈಂದರ್ಗಿಯ ಮಲ್ಲಿನಾಥ ಪಟೇಲ

ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ಮೈಂದರ್ಗಿ ನಗರದ ಮಲ್ಲಿನಾಥ ಪಟೇಲ ೧೯೫೪ರಲ್ಲಿ ಮುಸಲ್ಮಾನ ದಂಪತಿಗಳಾದ ಮಹ್ಮದಲಿ ಕಾಸೀಮ ಮತ್ತು ಶರೀಫಾ ಇವರಿಗೆ ಮಗನಾಗಿ ಜನಿಸಿದರು. ಮೂಲತಃ ಜನಪದ ಕವಿಯಾಗಿದ್ದಾನೆ. ಪ್ರಸಿದ್ಧ ಹಾಡುಗಾರ ಎನಿಸಿದ್ದಾನೆ.

ಈತನ ವಯಸ್ಸು ೬೦ ದಾಟಿದ್ದು, ಈ ಇಳಿವಯಸ್ಸಿನಲ್ಲೂ ಅದ್ಭುತವಾಗಿ ಹಾಡುತ್ತಾನೆ. ನೆಹರು ಗಾಂಧಿ, ಪಟೇಲ, ಅಂಬೇಡ್ಕರ್, ವಿಠ್ಠಲ, ಮಾಳಪ್ಪ ಹೀಗೆ ಇನ್ನೂ ಅನೇಕ ಗಣ್ಯವ್ಯಕ್ತಿಗಳನ್ನು ಕುರಿತು ಹಾಡುಕಟ್ಟಿ ಹಾಡುತ್ತಾರೆ. ಮಲ್ಲಿನಾಥ ಪಟೇಲ ಪ್ರಸಿದ್ಧ ತತ್ವಪದಕರಾನೂ ಹೌದು. ಹುಣ್ಣಿಮೆ, ಅಮಾವಾಸ್ಯೆಯಂದು ಮೈಂದರ್ಗಿ ನಗರದ ಎಲ್ಲಾ ದೇವಾಲಯಗಳಲ್ಲಿ ಈತನ ಗಾಯನ ಇದ್ದೇ ಇರುತ್ತದೆ. ನಗರದಲ್ಲಿ ಯಾರೇ ನಿಧನರಾದರೂ ಅಲ್ಲಿ ಮಲ್ಲಿನಾಥ ಪಟೇಲರ ಗಾಯನ ಇರಲೇಬೇಕು. ಇವರ ಗುರು ಮೈಂದರ್ಗಿಯ ಶಿವಚಲೇಶ್ವರರು. ಮುಂಬಯಿ, ಸೊಲ್ಲಾಪುರ, ಅಕ್ಕಲಕೋಟ, ಬೆಂಗಳೂರು ಹೀಗೆ ಹಲವು ನಗರಗಳಲ್ಲಿ ಈ ಜನಪದ ತತ್ವಪದಕಾರ ಹಾಡಿ ಬಂದಿದ್ದಾನೆ.

ಕೈಯ ಕೈಯ ಇದು ಎಂಥಾ ಕೈಯ
ದೇವರ ಕೊಟ್ಟ ಕೈಯ
ಸದನಕಾಲ ಪರ ಉಪಕಾರ ಮಾಡಿದ ಕೈಯ
ಸುಭಾಷಚಂದ್ರ ತೊಟಲಾಗ ಹಾಡುವಾಗ ತೂಗಿದ ಕೈಯ[೪]

೫. ಮೈಂದರ್ಗಿಯ ದಲಿತ ಜನಪದ ಕವಿಯತ್ರಿಯರು

ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ಮೈಂದರ್ಗಿಯ ದಲಿತ ಜನಪದ ಕವಯತ್ರಿಯರಿದ್ದಾರೆ. ಕುಬುಸ, ತೊಟ್ಟಿಲು, ಮದುವೆ, ಮೈಸೂರು ಹಲವು ಜನಪದ ಹಾಡುಗಳನ್ನು ಹಾಡುತ್ತಾರೆ. ಅರೆನವರು, ದಾದಾನವರು, ಮನಿಕಡೆ, ಪ್ರಧಾನ ಹಲವು ಕುಟುಂಬದ ಮಹಿಳೆಯರು ವಂಶಪರಂಪರೆಯಂತೆ ಜಾನಪದ ಹಾಡುಗಳನ್ನು ಹಾಡುತ್ತಾರೆ.[೫] ಮೈಂದರ್ಗಿ ನಗರದಲ್ಲಿ ನಡೆಯುವ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಇದವರಿಗೆ ಹಾಡಲು ಕರೆಯುತ್ತಾರೆ.

೬. ಸೊಲ್ಲಾಪುರ ಚೆನ್ನಯ್ಯ

ಶಿವಯೋಗಿ ಸಿದ್ಧರಾಮರ ಸೊಲ್ಲಾಪುರ ದಾನಿಗಳೂ, ದರ್ಮನಿಷ್ಠರೂ, ಗುರು–ಲಿಂಗ–ಜಂಗಮ ಪ್ರೇಮಿಗಳೂ ಆದ ನಿಲಂಗಿ ಮನೆತನದ ಅಡವಯ್ಯ ಸ್ವಾಮಿಗಳ ಮಗನೇ ಚೆನ್ನಯ್ಯಕವಿ. ಅಜ್ಜನ ಊರು ಡಿಕ್ಸಂಗಿಯಾದರೆ ತಾಯಿಯ ತವರುಮನೆ ಕಲಬುರ್ಗಿ. ಕನ್ನಡವೆಂದರೆ ಕುಣಿದಾಡುವ ಚೆನ್ನಯ್ಯನ ಮನ ಕಲೆಗೆ ವಾಲಿದುದು ಸಂಗೀತ ಚಿತ್ರಕಲೆಗಳನ್ನು ಬಲ್ಲ ಈ ಕವಿ ಜನಪದ ಹಾಡುಗಾರಿಕೆಯನ್ನು ಅಳವಡಿಸಿಕೊಂಡಿದ್ದಾನೆ. ಸುಸಂಸ್ಕೃತ ಮನೆತನದ ಚೆನ್ನಯ್ಯನ ಪರಿವಾರದಲ್ಲಿ ಹಲವಾರು ಜನರು ಸುಶ್ರಾವ್ಯವಾಗಿ ಹಾಡುತ್ತಾರೆ. ತಾಯಿಯ ಸೋಬಾನಪದ, ಗರಡಿ ಹಾಡುಗಳನ್ನು ಚಿಕ್ಕಂದಿನಿಂದಲೂ ಲಾಲಿಸಿದ ಚೆನ್ನಯ್ಯ ಜನಪದ ಕವಿಯಾಗಿ ಮೆರೆದಿದ್ದಾನೆ.[೬] ತಂಗಿ ಜಯದೇವಿ ಸುಶ್ರಾವ್ಯವಾಗಿ ಹಾಡುವುದನ್ನು ಕೇಲಿ ಸಂತೋಷಪಟ್ಟಿದ್ದಾನೆ.

ವ್ಯಾಪಾರಿ ಮನೆತನದ ಚೆನ್ನಯ್ಯ ಇತ್ತೀಚೆಗೆ ಒಕ್ಕಲುತನದ ವ್ಯವಹಾರ ನೋಡಿಕೊಳ್ಳುತ್ತಾನೆ. ನಾಲ್ವತ್ವಾಡದ ಶಿವಶರಣರ ಕೃಪಾಬಲ ತನಗಾದುದೆಂದು ಹೆಮ್ಮೆಯಿಂದ ಕವಿ ಹೇಳಿಕೊಳ್ಳುತ್ತಾನೆ. ಚನ್ನಕವಿ ಎಂಬ ಮುದ್ರಿಕೆ ಈತನ ಹಾಡುಗಳಲ್ಲಿ ಬರುತ್ತದೆ. ೧೯೧೮ರಲ್ಲಿ ಜನಿಸಿದ ಕವಿಗೀಗ ಅರವತ್ತು ವಯಸ್ಸು, ತಾಯಿ ರತ್ನಮ್ಮನನ್ನು ಕುರಿತು ಹೃದಯ ತುಂಬಿ ಹಾಡಿದ್ದಾನೆ.

> ನಿಮ್ಮ ಮರೆಯಲಾರೆ ತಾಯಿ ಶತಜನ್ಮದಿ ಉಪಕಾರಾ ।
> ಜನ್ಮನಿನ್ನ ಒಡಲೊಳು ಕೊಡು ಬೇಡವೆ ಪ್ರಭುವರಾ ।
> ಮನ್ನಿಸೆನ್ನ ಪ್ರೀತಿ ಸ್ಮರಣೆ ಭಕ್ತಿಗೀತೆ ಉದ್ಧಾರಾ ।
> ಚೆನ್ನ ಸೇವಾರ್ಪಿಸುವೆ ಮಾತೆ ನಿನ್ನ ಪದಕೆ ಕಿಂಕರಾ ।
> ಭೋ ದೇವಾ ಬಸವಾ ಬಾರಯ್ಯಾ ।
> ಜಗದೊಡೆಯಾ ನೀ ಭಕ್ತಿಮಯಾ ಬಸವಾಶಿವ ಓಂ...

ಚೆನ್ನಯ್ಯ ಕವಿ ನೀರೂರ ನಿಂಬೆಕ್ಕ, ಅಕ್ಕಮಹಾದೇವಿ ಮೊದಲಾದವರನ್ನು ಕುರಿತು ಕೀರ್ತನೆಗಳನ್ನು ಬರೆದಿದ್ದಾನೆ. ಜೋಗಳಪದ, ಭಜನೆ ಹಾಡು, ಮಂಗಳಾರತಿ, ನಾಮಾವಳಿ, ಸುಪ್ರಭಾತ ಮೊದಲಾದ ಹಾಡುಗಳನ್ನು ಬರೆದಿದ್ದಾನೆ.

೭. ಸೊಲ್ಲಾಪುರದ ಗಂಗಾಂಬಿಕಾ

ಸೊಲ್ಲಾಪುರದ ಸುಸಂಸ್ಕೃತ ಮನೆತನದ ತಂಬಾಕೆ ಲಿಂಗರಾಜರ ಸತಿ ಗಂಗಾಂಬಿಕೆ ಜಾನಪದ ಹಾಡುಗಳನ್ನು ಬರೆಯುತ್ತಾಳೆ. ಹಲವಾರು ಅನುಭವ ಪದ, ಸೋಬಾನೆಪದ, ಎಣ್ಣೆಹಚ್ಚುವ ಹಾಡು, ಮಂಗಳಾರತಿ ಹಾಗೂ ವಚನಗಳನ್ನು ಬರೆದಿದ್ದಾರೆ.

ಸಿದ್ಧರಾಮೇಶ್ವರರ ಪರಮ ಭಕ್ತಳಾಗಿ, ಶರಣೆಯಾಗಿ ನೂರಾರು ಹಾಡುಗಳನ್ನು ರಚಿಸಿದ ಶ್ರೇಯಸ್ಸು ಇವಳಿಗಿದೆ. ಸುಮಾರು ಅರವತ್ತು ವಯಸ್ಸಿನ ಈ ತಾಯಿ ಇನ್ನೂ ಬರೆಯುತ್ತಾರೆ. ಹಾಡುಗಳಲ್ಲಿ ಸಿದ್ಧರಾಮೇಶ್ವರ ಎಂಭ ಅಂಕಿತ ಬರುತ್ತದೆ.[೭]

ಅಡಿ ಟಿಪ್ಪಣಿಗಳು

೧. ಗುಂಬೀಶಂ, ಪ್ರೀತಿ ಜಾನಪದ ರೂಪಕ, ತುಮಕೂರು ೨೦೧೦.

೨. ಸಂದರ್ಶನ ದಿನಾಂಕ, ೦೬–೦೫–೨೦೧೧, ಆಂದೆವಾಡಿ ಗೈಬೀಶ ಹೇಳಿದರು.

೩. ಸಂದರ್ಶನ ದಿನಾಂಕ, ೧೦–೦೯–೨೦೧೧, ದುಧನಿಯ ಶ್ರೀ ಶಾಂತಲಿಂಗೇಶ್ವರ ಜಾನಪದ ಸಂಘ ಇವರು ಹಾಡಿದ ಪದ.

೪. ಸಂದರ್ಶನ ದಿನಾಂಕ, ೦೪–೦೫–೨೦೧೧, ಮಲ್ಲಿನಾಥ ಪಟೇಲ ಹಾಡಿದರು.

೫. ಸಂದರ್ಶನ ದಿನಾಂಕ, ೦೪–೦೫–೨೦೧೧, ಅಪ್ಪು ಪ್ರಧಾನ ಹೇಳಿದರು.

೬. ಡಾ. ಮಲ್ಲಿಕಾರ್ಜುನ ಲತೆ, ಜನಪದ ಕವಿ ಚರಿತೆ, ಪು.ಸಂ. ೨೩೨.

೭. ಡಾ. ಮಲ್ಲಿಕಾರ್ಜುನ ಲತೆ, ಜನಪದ ಕವಿ ಚರಿತೆ, ಪು.ಸಂ. ೨೩೫.



ಜಾನಪದ ಉಪನ್ಯಾಸ ನೀಡುತ್ತಿರುವ ಶಂಕರಗೌಡ ಮ. ಬಿರಾದಾರ ಅವರು



ಶ್ರೀ ಶಾಂತಲಿಂಗೇಶ್ವರ ಜಾನಪದ ಸಂಘ, ದುಧನಿ.



ರಾಜ್ಯಮಟ್ಟದ ತತ್ವಪದಕಾರರ ಪ್ರಥಮ ಸಮ್ಮೇಳನದಲ್ಲಿ ಮೈಂದರ್ಗಿಯ
ಮಲ್ಲನಾಥ್ ಪಟೇಲ್ ಮತ್ತು ತಂಡದವರಿಂದ ಪ್ರದರ್ಶನ

ಅಬಂಧಗಳು

ದೇವಾಲಯ ಪದಕೋಶ

ಅಂತರಾಳ – ಗರ್ಭಗೃಹ ಮುಂದಿನ ಅರ್ಧಮಂಟಪ, ಇದನ್ನು ಸುಕನಾಸಿಯೆಂದು ಕರೆಯಲಾಗಿದೆ.
ಅಧಿಷ್ಠಾನ – ತಳಹದಿ, ನೆಲಗಟ್ಟು, ದೇವಾಲಯದ ಕೆಳಭಾಗ.
ಅಮ್ಮನವರ ಗುಡಿ – ಪುರುಷ ದೇಗುಲದ ಎಡಬದಿಯ ಸಣ್ಣ ಸ್ತ್ರೀ ದೇಗುಲ.
ಅಮಲಕ – ನಾಗರಶೈಲಿಯ ಶಿಖರದ ಮೇಲ್ಭಾಗದಲ್ಲಿರುವ ನೆಲ್ಲಿಕಾಯಿ ಆಕಾರದ ರಚನೆ.
ಉತ್ತರಿಯ – ಮೇಲು ಹೊದಿಕೆ, ಪಂಚೆ.
ಉದ್ಭವಲಿಂಗ – ಒಡಮೂಡಿದ ಲಿಂಗ.
ಉಪಾನ – ದೇಗುಲದ ತಳಭಾಗ.
ಏಕಕೂಟ – ಒಂದು ಗರ್ಭಗೃಹದವಿರುವ ದೇವಾಲಯ.
ಕಕ್ಷಾಸನ – ಕಟಾಂಜನ, ಕಟಕಟೆ, ಕುಳಿತುಕೊಳ್ಳಲು ಅನುವಾಗುವ ಕಟ್ಟೆ.
ಕಪೋತ – ದೇವಾಲಯದ ಮೇಲ್ಛಾವಣಿಯ ನೀರು ಗೋಡೆಗೆ ತಾಗದಿರಲು ಮಾಡಿದ ಮುಂಚಾಚಿದ ರಚನೆ.
ಕರಂಡಮುಕುಟ – ಭರಣಿಯಾಕಾರದ ಕಿರೀಟ.
ಕಲ್ಯಾಣ ಮಂಟಪ – ಶುಭಕಾರ್ಯಗಳಿಗೆ ಕಟ್ಟಲಾದ ಮಂಟಪ.
ಕಳಸ – ದೇವಾಲಯದ ಗೋಪುರಕ್ಕೆ ಹಾಕುವ ಕಂಚು ಅಥವಾ ಹಿತ್ತಾಳೆಯ ವಸ್ತು.
ಕೀರ್ತಿಮುಖ – ಶಿಖರದಲ್ಲಿ ಅಳವಡಿಸಲಾದ ಸಿಂಹದ ಮುಖ.
ಕುಂಡಲ – ಕಿವಿಯ ಆಭರಣ, ಕಿವಿಯೋಲೆ.
ಕುಂಭ – ಗಡಿಕೆ, ಕುಂಭದ ಆಕಾರದ ಕಲಸ.
ಕೆಯೂರ – ತೋಳಬಂದಿ
ಕೈಪಿಡಿಗೋಡೆ – ಮೊಗಸಾಲೆ ಅಥವಾ ಮಾಳಿಗೆಯ ಸುತ್ತಲೂ ಅಲಂಕೃತ ತುಂಡುಗೋಡೆ. ಕೋಷ್ಠಕ – ಶಿಲ್ಪಗಳನ್ನಿಡಲು ಗೋಡೆಯಲ್ಲಿ ರಚಿಸಿದ ಭಾಗ.
ಗರ್ಭಗೃಹ – ಮೂಲ ವಿಗ್ರಹವನ್ನು ಪ್ರತಿಷ್ಠ ಮಾಡಿರುವ ಭಾಗ.
ಗ್ರೀವ – ಶಿರೋಭಾಗ, ಶಿಖರದ ಕತ್ತಿನ ಭಾಗ.
ಗೂಡು – ಶಿಲ್ಪಗಳನ್ನಿಡಲು ಗೋಡೆಯಲ್ಲಿ ರಚಿಸಿದ ಭಾಗ.
ಗೋಪುರ – ಪ್ರವೇಶದ್ವಾರದ ಮೇಲೆ ಕಟ್ಟಲಾದ ಅಂತಸ್ತುಗಳ ರಚನೆ.
ಚತುಷ್ಕೂಟ – ನಾಲ್ಕು ಗರ್ಭಗೃಹಗಳನ್ನು ಹೊಂದಿದ ದೇವಾಲಯ.
ಚಾಚುಪೀಠ – ಕಂಬದ ಮೇಲ್ಭಾಗ ಮುಂಚಾಚಿದ ರಚನೆ.
ಜಗತಿ – ವೇದಿಕೆಯ ಕಟ್ಟೆ, ತಳಪಾಯ.
ಜಗಲಿ – ವೇದಿಕೆಯ ಕಟ್ಟೆ.
ಜಟಾಮುಕುಟ – ಜಟೆಗಳ ಕಟ್ಟಿನಂತೆ ಕಾಣುವ ಕಿರೀಟ, ಜಡೆಮುಡಿ.
ತ್ರಿಕೂಟ – ಮೂರು ಗಭ್ಯಗೃಹಗಳನ್ನು ಹೊಂದಿದ ದೇವಾಲಯ.
ದ್ರಾವಿಡಶೈಲಿ – ದಕ್ಷಿಣ ಭಾರತೀಯ ದೇವಾಲಯಗಳ ವಾಸ್ತುಶಿಲ್ಪ ರಚನೆ.

ದ್ವಾರಪಾಲಕ – ದೇವಾಲಯದ ದ್ವಾರದ ಎರಡೂ ಮಗ್ಗುಲಲ್ಲಿರುವ ಶಿಲ್ಪ.
ದ್ವಾರಬಂಧ – ಬಾಗಿಲ ಚೌಕಟ್ಟು, ಬಾಗಿಲಿನ ನಿಲುವು.
ದ್ವಿಕೂಟ – ಎರಡು ಗರ್ಭಗೃಹಗಳನ್ನು ಹೊಂದಿದ ದೇವಾಲಯ.
ದೀಪಸ್ತಂಭ – ವಿಶೇಷ ಸಂದರ್ಭದಲ್ಲಿ ದೀಪ ಹಚ್ಚಲು ನಿಲ್ಲಿಸಿದ ಕಂಬ.
ನವರಂಗ – ಗರ್ಭಗುಡಿಯ ಎದುರಿನ ಸುಕನಾಸಿ ಅಥವಾ ಅಂತರಾಳದ ಮುಮಭಾಗದಲ್ಲಿ ನೃತ್ಯಗೀತಾದಿ ರಂಗಭೋಗಕ್ಕಾಗಿ ಕಟ್ಟುವ ಒಂಭತ್ತು ಅಂಕಣದ ಮಂಟಪ.
ನಾಗರಶೈಲಿ – ಉತ್ತರಭಾರತದ ದೇವಾಲಯಗಳ ವಸ್ತುಶಿಲ್ಪ ಮಾದರಿ.
ಪಂಚಕೂಟ – ಐದು ಗರ್ಭಗೃಹಗಳನ್ನು ಹೊಂದಿದ ದೇವಾಲಯ.
ಪ್ರದಕ್ಷಿಣಾ ಪಥ – ಭಕ್ತರು ಪ್ರದಕ್ಷಿಣೆ ಹಾಕಲೆಂದು ಗರ್ಭಗೃಹದ ಸುತ್ತಲೂ ಬಿಟ್ಟಿರುವ ಸ್ಥಳ
ಪ್ರಭಾವಳಿ – ವಿಗ್ರಹಗಳ ಹಿಂಬದಿಯಲ್ಲಿ ಅಲಂಕರಣೆಯಿಂದ ಕೂಡಿದ ಕಮಾನಿನಾಕಾರದ ರಚನೆ.
ಪಾದಗಟ್ಟೆ ಅಥವಾ ಉತ್ಸವ ಮಂಟಪ – ರಥೋತ್ಸವ, ಉತ್ಸವಗಳ ದೇವಾಲಯದಿಂದ ಹೊರಟು ತಲುಪಬೇಕಾದ ನಿರ್ಧಿಷ್ಟ ಸ್ಥಳ.
ಪ್ರಾಕಾರಗೋಡೆ – ದೇವಾಲಯದ ಸುತ್ತ ಕಟ್ಟಲಾದ ರಕ್ಷಣಾತ್ಮಕ ಗೋಡೆ.
ಬಲಿಪೀಠ – ಬಲಿ ಕೊಡುವ ಸ್ಥಲ
ಬಾಗಿಲುವಾಡ – ಬಾಗಿಲಿನ ಚೌಕಟ್ಟು
ಬೋದಿಗೆ – ಕಂಬದ ಮೇಲೆ ತೊಲೆಯನ್ನು ಕೂಡಿಸಲು ಸಿದ್ಧಪಡಿಸಿದ ಭಾಗ.
ಭುವನೇಶ್ವರಿ – ಮೇಲ್ಚಾವಣಿಯ ಮಧ್ಯ ಒಳಸರಿದ ಭಾಗ.
ಮಕರತೋರಣ – ಬಾಗಿಲುವಾಡ ಅಥವಾ ಪ್ರವೇಶದಲ್ಲಿ ಮೊಸಳೆ, ಆನೆ, ಮೀನು ಶಿಲ್ಪ ಮೊದಲಾದ ಅಲಂಕರಣೆಗಳಿಂದ ಕೂಡಿದ ಆಕೃತಿ.
ಮಹಾದ್ವಾರ – ಹೆಬ್ಬಾಗಿಲು, ಮುಖ್ಯ ಪ್ರವೇಶದ್ವಾರ
ಮಹಾಮಂಟಪ – ನವರಂಗ ಅಥವಾ ಸಭಾಮಂಟಪದ ಮುಂಭಾಗದಲ್ಲಿರುವ ಮಂಟಪ.
ಮುಖಮಂಟಪ – ದೇವಾಲಯದ ಪ್ರವೇಶ ಮಂಟಪ
ಯಾಳಿ – ಸಿಂಹಮುಖ, ಆನೆಯಕೋರೆ ಹಾಗೂ ಸೊಂಡಿಲುಗಳಿಂದ ಕೂಡಿದ ಕಾಲ್ಪನಿಕ ಪ್ರಾಣಿ
ರಂಗಮಂಟಪ – ಸಂಗೀತ, ನೃತ್ಯ, ನಾಟಕ ಮುಂತಾದವುಗಳ ಪ್ರದರ್ಶನ ಸ್ಥಳ
ಲಲಾಟ ಬಿಂಬ – ಬಾಗಿ ಚೌಕಟ್ಟಿನ ಮಧ್ಯಭಾಗ
ವಿಮಾನ – ಗರ್ಭಗೃಹದ ಮೇಲಿನ ಶಿಖರ
ವೇಸರಶೈಲಿ – ನಾಗರ ಮತ್ತು ದ್ರಾವಿಡ ವಾಸ್ತುಶೈಲಿಯ ಸಮ್ಮಿಳನ
ಶಿಖರ – ದೇವಾಲಯದ ಗರ್ಭಗೃಹದ ಮೇಲಿನ ರಚನೆ
ಸಪ್ತಮಾತೃಕೆಯರು – ಏಳು ದೇವತೆಗಳನ್ನೊಳಗೊಂಡ ಫಲಕ
ಸಭಾಮಂಟಪ – ಅಂತರಾಳ ಮುಂಬದಿಯ ಒಂಭತ್ತು ಅಥವಾ ಅದಕ್ಕಿಂತ ಹೆಚ್ಚು ಅಂಕಣಗಳಿಂದ ಕೂಡಿದ ಮಂಟಪ
ಸಮಭಂಗಿ – ಸಮಕೋನದಲ್ಲಿ ನಿಂತ ಭಂಗಿ
ಸುಕನಾಸಿ – ಗಿಣಿಯ ಕೊಕ್ಕಿನಂತೆ ಶಿಖರದ ಮುಂಭಾಗದಲ್ಲಿ ಮುಂಚಾಚಿರುವ ರಚನೆ
ಸೋಪಾನ – ಮೆಟ್ಟಿಲು, ಪಾವಟಿಗೆ

ಆಕರ ಗ್ರಂಥಗಳು

೧. ಜಿ.ಎನ್.ಉಪಾಧ್ಯ, ಮಹಾರಾಷ್ಟ್ರದ ಕನ್ನಡ ಶಾಸನಗಳು, ಹಂಪೆ ೨೦೦೧.
೨. ಜಿ.ಎನ್.ಉಪಾಧ್ಯ, ಗೋದಾವರಿವರಂ ಇರ್ದ ಕನ್ನಡ ನಾಡು, ಮುಂಬಯಿ ೨೦೦೨.
೩. ಜಿ.ಎನ್.ಉಪಾಧ್ಯ, ಸಿದ್ಧರಾಮನ ಸೊನ್ನಲಿಗೆ, ಮುಂಬಯಿ.
೪. ಎಂ.ಎಂ.ಕಲಬುರ್ಗಿ, ಮಹಾರಾಷ್ಟ್ರದ ಕನ್ನಡ ಶಾಸನಗಳು, ಮುಂಬಯಿ.
೫. ಬಸವಣೆಪ್ಪ ಕಲ್ಯಾಣಿ, ಕಾಡಾದಿ ನಾಗಪ್ಪನವರು, ವೀರಶೈವ ಅಧ್ಯಯನ ಸಂಸ್ಥೆ, ಡಂಬಳ-ಗದಗ ೧೯೯೬.
೬. ಓಂಕಾರ ಕಾಕಡೆ, ಮಹಾಜನ ವರದಿಯ ಅವಲೋಕನ, ಬೆಳಗಾವಿ ೨೦೦೩.
೭. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಮೈಸೂರು.
೮. ಗುಂಬೀಶಂ, ಪ್ರೀತಿ ಜಾನಪದ ರೂಪಕ, ತುಮಕೂರು ೨೦೧೦.
೯. ಎಚ್.ಎಸ್.ಗೋಪಾಲರಾವ್, ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು, ಬೆಂಗಳೂರು ೨೦೦೮.
೧೦. ಎನ್.ಎಸ್.ತಾರಾನಾಥ, ಶತಮಾನದ ಸಂಶೋಧನೆ ಬೆಂಗಳೂರು ೨೦೦೧.
೧೧. ಎನ್.ಎಸ್.ನುಲಕರ, ಮಧ್ಯಯುಗ ಮರಾಠಿ ಲೇಖನ.
೧೨. ಪದ್ಮ ಶಿವರುದ್ರಪ್ಪ, ಜಯದೇವಿ ತಾಯಿ ಲಿಗಾಡೆ, ಬೆಂಗಳೂರು.
೧೩. ಎಂ.ಬಿ.ಪಾಟೀಲ, ಭಾರತ ಸರಕಾರ, ಬೆಂಗಳೂರು ೧೯೯೭.
೧೪. ಪಾಟೀಲ ಪುಟ್ಟಪ್ಪ, ಕರ್ನಾಟಕ ಏಕೀಕರಣದ ಕಥೆ, ಲೋಕದರ್ಶನ.
೧೫. ಬಸವರಾಜ ಪೋಲಿಸ್ ಪಾಟೀಲ, ಶಿಕ್ಷಣ ಶಿಲ್ಪಿ ಮಹಾದೇವಪ್ಪ ರಾಂಪೂರೆ, ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ, ಗುಲಬರ್ಗಾ ೧೯೯೭.
೧೬. ಚೆನ್ನಸ್ವಾಮಿ ಸೋಸಲೆ, ಕರ್ನಾಟಕದ ಗಡಿ ಚಳುವಳಿ, ಹಂಪಿ ೨೦೦೭.
೧೭. ಡಿ.ವಿ.ಪುರಾಣಿ, ನಿಜಲಿಂಗದೀಪ್ತಿ, ನಿಡಸೋಗಿ ೧೯೬೮.
೧೮. ಪಾಲಾಕ್ಷ, ಕರ್ನಾಟಕ ಐತಿಹಾಸಿಕ ಪರಿಚಯ, ತುಮಕೂರು ೧೯೮೨.
೧೯. ಗಜಾನನ ಲಕ್ಷ್ಮಣ ಭಿಡೆ, ಶ್ರೀಕ್ಷೇತ್ರ ಕೂಡಲಸಂಗಮ, ಕೂಡಲ ೨೦೦೦.
೨೦. ಅರವಿಂದ ಬಿರಾಜದಾರ, ಸೊಲ್ಲಾಪುರ ಜಿಲ್ಲೆಯ ಕನ್ನಡ ಸ್ಥಿತಿ-ಗತಿ ಮುಂಬಯಿ ವಿಶ್ವವಿದ್ಯಾಲಯದ ಎಂ.ಫಿಲ್. ಪ್ರಬಂಧ.
೨೧. ಶಂಕರಗೌಡ ಬಿರಾಜದಾರ, ದಾನಪ್ಪಾ ಶರಣನ ಚರಿತಾಮೃತ, ಮೈಂದರ್ಗಿ ೨೦೦೮.
೨೨. ಶ್ರೀಮತಿ ಇಂದುಮತಿ ಶಂಕರಗೌಡ ಬಿರಾಜದಾರ, ಗುಂಬೀಶಂ ಪ್ರವಚನದ ತುಣುಕುಗಳು, ತುಮಕೂರು ೨೦೧೧.
೨೩. ಬಸವರಾಜ ಮಸೂತಿ, ಕನ್ನಡ ಕಂಪುಸೂಸುವ ಗಡಿನಾಡಿನ ಅಕ್ಕಲಕೋಟೆ ೨೦೦೩.
೨೪. ಮಲ್ಲಿಕಾರ್ಜುನ ಲಠ್ಠೆ, ಉತ್ತರ ಕರ್ನಾಟಕ ಜನಪದ ಕವಿಚರಿತೆ, ಕಲಬುರ್ಗಿ ೧೯೭೯.
೨೫. ಎಸ್.ಎಸ್.ಶಿವರುದ್ರಸ್ವಾಮಿ, ಕರ್ನಾಟಕ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ಮೈಸೂರು.
೨೬. ಗುರುಸಿದ್ಧಯ್ಯ ಸ್ವಾಮಿ, ಕರಜಗಿಯ ವೀರಶೈವ ದೇವಾಲಯ, ಅಪ್ರಕಟಿತ ಲೇಕನ.

೨೭. ಲ.ಸಿ.ಹನಗುಂಡಿ, ನಾಗಪ್ಪಣ್ಣ ಅಬ್ದುಲಪುರಕರ ಅವರ ಲೇಖನ.
೨೮. ಶಕುಂತಲಾ ಹೆಗಡೆ, ಸಿದ್ಧಚೇತನ ಸ್ಮರಣ ಸಂಚಿಕೆ, ಸೊಲ್ಲಾಪುರ ೨೦೦೭.
೨೯. ಕೆ.ಬಿ.ಪೂರ್ವಾಚಾರ್ಯ, ಸಿರಿ ಸೊನ್ನಲಿಗೆ, ಸ್ಮರಣ ಸಂಚಿಕೆ, ಸೊಲ್ಲಾಪುರ ೧೯೭೨.
೩೦. ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ : ನಮ್ಮ ಕರ್ನಾಟಕ, ಬೆಂಗಳೂರು.
೩೧. ಕನ್ನಡ–ಮರಾಠಿ ದಿನಪತ್ರಿಕೆಗಳು.
ಕನ್ನಡ–ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ ಪ್ರಜಾವಾಣಿ, ಗುಲಬರ್ಗ ಸಂಧ್ಯಾಕಾಲ, ಕನ್ನಡ ಪ್ರಭ.
ಮರಾಠಿ–ಲೋಕಮತ, ಸಂಚಾರ, ಪುಂಡಾರಿ, ತರಣಭಾರತ, ಪಣ್ಯಾನಗರಿ.



ಸೊನ್ನಲಿಗೆಯ ಮಹಾಶಿವಯೋಗಿ ಶ್ರೀ ಸಿದ್ಧರಾಮೇಶ್ವರರು

ಸೊಲ್ಲಾಪುರ ಜಿಲ್ಲೆ ನಕಾಶೆ

ಮಹಾರಾಷ್ಟ್ರ ರಾಜ್ಯ





ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೬ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ - ಕನ್ನಡಿಗ - ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಕೊಪ್ಪಳ ಜಿಲ್ಲೆ, ಗಂಗಾವತಿಯಲ್ಲಿ ನಡೆಯುತ್ತಿರುವ ೭೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ರಾಜ್ಯಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು- ೫೬೦ ೦೧೮.